ಕಸ್ತೂರಿ

ಸಪ್ಟೆಂಬರ್ ೧೯೮೨




ಸಂತಸದ ನಾಳೆಗೆ ಹಬ್ಬ-ಹಾರೈಕೆ
ಇಂದು ಏನು ತಂದಿರುವೆ ?
ನನ್ನ ಹುಟ್ಟು ಹಬ್ಬಕ್ಕಾಗಿಯೇ?
ನೆನಪಿಗಾಗಿ ಮತ್ತು ನಾಳೆಯ ಸುಂದರ ಭವಿಷ್ಯಕ್ಕಾಗಿ
ಅದೇನೆಂದು ನಾನು ಹೇಳಲಿ ?
ಸರಿ ಹೇಳು ಮಗೂ
ಅಪ್ಪಾ ಕೇವಲ ಒಂದು ಕವರು
ಅದು ಸರಿ, ಆದರೆ ಕೇವಲ ಕವರು ಮಾತ್ರವಲ್ಲ ಮಗೂ ರೂ. 5000 ದ ಉಡುಗೊರೆ ಇದರಲ್ಲಿದೆ.
ಅಬ್ಬಾ! ರೂ.5000 ದ್ದೆ!
ಹೌದು. ಆದರೆ ಅದೇನು ಹೇಳು ನೋಡುವಾ ?
ತುಂಬ ಚಿಕ್ಕದಿದೆ ನಾನು ನೋಡಲೇನು ?
ನೋಡು ಇಲ್ಲಿ, ವಿಕಾಸ್ ಕ್ಯಾಶ್ ಸರ್ಟಿಫಿಕೇಟ್
ವಿಕಾಸ್ ಕ್ಯಾಶ್ ಸರ್ಟಿಫಿಕೇಟ್, ಹಾಗೆಂದರೇನು ?
ಇದು ಸಿಂಡಿಕೇಟ್ ಬ್ಯಾಂಕ್‌ನ ವಿಶೇಷ ಉಳಿತಾಯ ಯೋಜನೆ. ಮುಂದೆ ಏಳು ವರ್ಷಗಳಲ್ಲಿ ಸಾಧಾರಣ ಹತ್ತು ಸಾವಿರದಷ್ಟಾಗುತ್ತದೆ.
ಅಬ್ಬಾ ! ಹಾಗೇನು?
ನನ್ನ ಮುಂದಿನ ಹುಟ್ಟು ಹಬ್ಬಕ್ಕೂ ಇದೇ ರೀತಿಯ ಉಡುಗೊರೆಯನ್ನು ಕೊಡುತ್ತೀಯಾ ?
ಹೌದು. ಮುಂದಿನ ಬಾರಿ ನಿನ್ನ ತಂಗಿಗೆ
ನಿಮ್ಮ ಉಳಿತಾಯವನ್ನು ವಿಕಾಸ್ ಯೋಜನೆಯಲ್ಲಿ ವಿನಿಯೋಗಿಸಿ
ಸಿಂಡಿಕೇಟ್ ಬ್ಯಾಂಕ್
ಉಳಿತಾಯ ಯುಗದ ಪ್ರವರ್ತಕ

ಕಸ್ತೂರಿ

ಕನ್ನಡ ಡೈಜೆಸ್ಟ್

ಸಂಪಾದಕ :

ಬಿ. ಎಸ್. ಗೋಪಾಲಕೃಷ್ಣ

ಸಹಾಯಕ ಸಂಪಾದಕ :

ಮಾಧವ ನಾ. ಮಹಿಷಿ

ಕಲೆ :

ಕೆ. ಬಿ. ಕುಲಕರ್ಣಿ

ಮುಖಪುಟ :

ಚಿಮ್ಮಾವ ಚೇತನ

ಛಾಯಾ ಚಿತ್ರ :

ಎಂ. ವಿಶ್ವನಾಥ್

ಜನೆವರಿ ೧೯೮೨ ರಿಂದ ಜಾರಿಯಲ್ಲಿ ಬಂದಿರುವ ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI September 1982

ಬೆಳಕಿಂಡಿ

ಸೋಲುಗಳನ್ನು ಮಣ್ಣಿನಲ್ಲಿ, ಗೆಲುವನ್ನು ಕಲ್ಲಿನಲ್ಲಿ ಬರೆದಿಡಿ.

— ಬೆಂಜಾಮಿನ್ ಫ್ರ್ಯಾಂಕ್ಲಿನ್

*

ನಿಮಗೆ 'ಎಷ್ಟು' ವಯಸ್ಸಾಯಿತೆಂಬುದು ಮುಖ್ಯವಲ್ಲ, ನೀವು 'ಹೇಗೆ' ಇಷ್ಟು ವಯಸ್ಸಿನವರಾದಿರಿ ಎಂಬುದು ಮುಖ್ಯ.

— ಮಾರೀ ಡ್ರೆಸ್ಲರ್

*

"ಆಡದೆ ಮಾಡುವುದು ರೂಢಿಯೊಳಗುತ್ತಮವು."

"ಹಾಗಾದರೆ ಬೊಗಳದೆಯೆ ಕಚ್ಚುವ ನಾಯಿ?"

— ವೃಷಭೇಂದ್ರಯ್ಯ

*

"ನೀವು ನಿಮ್ಮಾಕೆಗೆ ವಿಧವೆಯಾದ ನಂತರ ಮಾಡಬೇಕಾದ ಕರ್ತವ್ಯಗಳ ಅರಿವು ಮಾಡಿಕೊಟ್ಟಿದ್ದೀರಾ? ಇಲ್ಲವಾದರೆ ನಾವು ಪ್ರಕಟಿಸಿರುವ ಪುಸ್ತಿಕೆಯನ್ನಾಕೆಗೆ ಕಳಿಸುತ್ತೇವೆ..." ಎನ್ನುತ್ತದೆ ಜೀವವಿಮಾ ಸಂಸ್ಥೆ.

ಕ್ಷಮಿಸಿ, ಇದು ಭಾರತದ್ದಲ್ಲ, ಅಮೇರಿಕದ್ದು.

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಹಚಿಂತನ

ಶ್ರೀ ಅಸುಂಡಿಯವರು

ಡಾ. ಅಸುಂಡಿ ರಂಗರಾಯರ ಬಗ್ಗೆ ನಾನು ಅವರ ವಿದ್ಯಾರ್ಥಿಗಳಾಗಿದ್ದ ಹಲವರ ಮುಖದಿಂದ ಅನೇಕ ಸಂಗತಿಗಳನ್ನು ಕೇಳಿ ತಿಳಿದಿದ್ದೆ. ಕನ್ನಡದ, ಕರ್ನಾಟಕದ ಸೇವೆ ಮಾಡಬೇಕೆಂದು ಉಜ್ವಲ ಭವಿಷ್ಯವನ್ನು ಬದಿಗೊತ್ತಿ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲೂ ಕಟ್ಟಿ ಕಾಲೇಜಿನಲ್ಲೂ ದುಡಿಯಲು ಬಂದಿದ್ದ ಅವರ ಆಸೆ ಕೈಗೂಡದಿದ್ದುದು ಒಂದು ದೃಷ್ಟಿಯಿಂದ ದೇಶಕ್ಕೆ ಹಾಗೂ ವಿಜ್ಞಾನ ಕ್ಷೇತ್ರಕ್ಕೆ ಲಾಭವೇ ಅನ್ನಬೇಕು. ಇಂಗ್ಲೆಂಡಿಗೆ ಹೋಗಿ ಉಚ್ಚ ವಿದ್ಯಾವ್ಯಾಸಂಗ ಮಾಡದೇ ಅವರು ಧಾರವಾಡದಲ್ಲೇ ವಿದ್ಯಾರ್ಥಿಗಳಿಗೆ ಭೌತಶಾಸ್ತ್ರ ಕಲಿಸುತ್ತ ಕುಳಿತಿದ್ದರೆ ನೂರಾರು ಸಾಮಾನ್ಯ ಶಿಕ್ಷಕರಲ್ಲಿ ಅವರೂ ಒಬ್ಬರಾಗಿಬಿಡಬಹುದಿತ್ತು.

ಮಿರಜ — ವಿ.ಕೃ. ಮಿಟ್ಟಿಮನಿ.

ಒಂದು ಬಿನ್ನಹ

ಶ್ರೀ ಬಿ. ಪಿ. ಬಾಯಿರಿಯವರು ಪಾವ್ಲ್ ಸೆಜಾನ್‌ನ ಜೀವನದ ಕಿರುಪರಿಚಯವನ್ನು ಅಗಸ್ಟ್ ೮೨ರ ಕಸ್ತೂರಿಯಲ್ಲಿ ಮಾಡಿಕೊಟ್ಟದ್ದಕ್ಕೆ ಧನ್ಯವಾದಗಳು. ಅದನ್ನು ಓದುತ್ತಾ ಸುಮಾರು ಅವನ ಕಾಲದವನೇ ಆದ ಶ್ರೇಷ್ಠ ಡಚ್ ಕಲಾವಿದ ವಿನ್‌ಸೆಂಟ್ ವಾನ್‌ಗೋನ ನೆನಪು ಬಂದಿತು. ಸೆಜಾನನು ಧನವಂತನಾದರೂ ಆಗಿದ್ದ. ವಾನ್‌ಗೋ ಕಡು ಬಡತನದಲ್ಲಿ ತೊಳಲುತ್ತಿದ್ದ. ಸೆಜಾನನಿಗೆ ಕೊನೆಗಾಲದಲ್ಲಾದರೂ ತನ್ನ ಕೃತಿಗಳಿಗೆ ಮಾನ್ಯತೆ ದೊರಕಿತು ಎಂಬ ಸಮಾಧಾನ ಸಿಕ್ಕರೆ, ವಾನ್‌ಗೋ ಕೇವಲ ೩೭ನೇ ವಯಸ್ಸಿಗೇ ಬಡತನ, ಭಗ್ನ ಪ್ರೇಮ, ನಿರಾಸೆಗಳಿಂದ ಹುಚ್ಚನಾಗಿ ಆತ್ಮಹತ್ಯೆ ಮಾಡಿಕೊಂಡ. ಇಂದು ಆತನ ಕೃತಿಗಳಿಗೆ ಒಂದೊಂದಕ್ಕೂ, ಒಂದು ಕೋಟಿ ರೂಪಾಯಿಗಳಷ್ಟು ಬೆಲೆ ಇದೆಯಂತೆ. ಆತನಿಗೇನು ಪ್ರಯೋಜನ, ಸಮಾಧಾನ ಸಿಕ್ಕೀತು? ಇಂಥ [illegible]. ಅನೇಕ ಭಾಷೆಗಳ ಉತ್ತಮ ಕಥೆಗಳನ್ನು ಪ್ರಕಟಿಸುವ ಕಸ್ತೂರಿಗೆ ವಂದನೆಗಳು. ಇಲ್ಲದಿದ್ದಲ್ಲಿ ನಾವು ಆ ಕಥೆಗಳನ್ನು ಓದಲು ಸಾಧ್ಯವಾಗುತ್ತಿತ್ತೋ ಇಲ್ಲವೋ. ಉತ್ತಮ ಕನ್ನಡ ಕಥೆ ಲೇಖನಗಳ ಜೊತೆಯಲ್ಲಿ ಅಂಥ ಉತ್ತಮವಾದ ಇತರ ಭಾಷೆಯ ಒಂದು ಕಥೆ ಇದ್ದಲ್ಲಿ ತಪ್ಪೇನೂ ಆಗುವುದಿಲ್ಲ.

ಮತ್ತೊಂದು ಬಿನ್ನಹ. ದಯವಿಟ್ಟು ಕಸ್ತೂರಿಯಲ್ಲಿ ಮೋಸದ ಜಾಹೀರಾತುಗಳನ್ನು ಪ್ರಕಟಿಸಬೇಡಿ. ದಿಲ್ಲಿ, ಅಲೀಗಡ, ಜಲಂದರ್ ಮುಂತಾದ ಕಡೆಗಳಿಂದ ಬರುವ ಈ ಜಾಹೀರಾತುಗಳು ಕಸ್ತೂರಿಯ ಘನತೆಗೊಪ್ಪುವಲ್ಲ.

ತುಮಕೂರು — ಸುಮನಾ.

ದಪ್ಪ ರಕ್ತನಾಳಗಳು

ನನಗೆ ಮೊದಲಿನಿಂದಲೂ ದಪ್ಪ ರಕ್ತನಾಳಗಳ ಬಗ್ಗೆ ಕುತೂಹಲವಿತ್ತು. ಅವು ಮಾನವನಿಗೆ ತಾರಕವೇ, ಮಾರಕವೇ? ಎಂಬ ಸಂದೇಹ ನನ್ನನ್ನು ಕಾಡುತ್ತಿತ್ತು. ಅಗಸ್ಟ್ 'ಕಸ್ತೂರಿ'ಯಲ್ಲಿ ಪ್ರಕಟವಾದ 'ದಪ್ಪ ರಕ್ತನಾಳಗಳು' ಲೇಖನವನ್ನೋದಿ ನನ್ನೆಲ್ಲ ಸಂದೇಹಗಳಿಗೆ ಸರಿಯಾದ ಸಮಾಧಾನವನ್ನು ಪಡೆದೆ. ಲೇಖಕರಿಗೆ, ಧನ್ಯವಾದಗಳು.

ದಪ್ಪ ರಕ್ತನಾಳಗಳು ಮಾನವನಿಗೆ ಗಂಡಾಂತರಕಾರಿಯೇನಲ್ಲವೆಂಬ ನನ್ನ ನಂಬಿಕೆಯನ್ನು ಬುಡಮೇಲು ಗೊಳಿಸಿದ ಈ ಲೇಖನ ಅವುಗಳ ಬಗ್ಗೆ ಸೂಕ್ತ ಮಾಹಿತಿ ನೀಡುವಲ್ಲಿ ಯಶಸ್ವಿಯಾಗಿದೆ. ದಪ್ಪ ರಕ್ತನಾಳಗಳ ಚಿತ್ರಗಳೂ ಲೇಖನದೊಂದಿಗಿದ್ದುದು, ಓದುಗರಿಗೆ ತುಂಬ ಪ್ರಯೋಜನವಾಯಿತು.

ಧಾರವಾಡ — ಅಶೋಕ ಬಾವೂರ,

ಅಗಸ್ಟ್ ೮೨ರ 'ಕಸ್ತೂರಿ'ಯ ಡಾ. ಎ. ಚಂದ್ರಶೇಖರ ಉಡುಪರ 'ಅಪಾಯದ ಸೋಗಿನಲ್ಲಿರುವ ದಪ್ಪ ರಕ್ತನಾಳಗಳು' ನಿಜಕ್ಕೂ ಅಮೂಲ್ಯವಾದ ಲೇಖನ. ಸಚಿತ್ರ ಲೇಖನ ಚೆನ್ನಾಗಿ ಬಂದಿದೆ. ದಪ್ಪ ರಕ್ತನಾಳಗಳ ಭಯದಿಂದ ನರಳುತ್ತಿರುವವರಿಗೆ ಮಾರ್ಗದರ್ಶಕವಾಗಬಲ್ಲಂಥ ಉತ್ತಮ ಲೇಖನ. ಇಂಥ ಲೇಖನ 'ಕಸ್ತೂರಿ'ಯಲ್ಲಿ ಹೆಚ್ಚಲಿ.

ಡಾ. ವಿ.ಎಂ. ಕೋರವಾರರ 'ರೋಹಿತ ಶಾಸ್ತ್ರಜ್ಞ ಅಸುಂಡಿಯವರು' ಶ್ರೇಯಾಂತರ ಪರಿಚಯವನ್ನು ಸಾಧ್ಯವಾದಷ್ಟು ಚೆನ್ನಾಗಿ ಮಾಡಿಕೊಡುತ್ತದೆ.

ಚಾಮರಾಜನಗರ ಎಸ್. ಲಕ್ಷ್ಮೀನರಸಿಂಹ.

ಮತ್ತೆ ಪ್ರಕಟಿಸಿ

ಕಸ್ತೂರಿಯಲ್ಲಿ ಈಗೀಗ ಹಳೆಯ ಸಂಚಿಕೆಯಲ್ಲಿಯ ಕೆಲವು ಆಯ್ದ ಲೇಖನಗಳನ್ನು ಪ್ರಕಟಿಸುತ್ತಿರುವುದು ಸಂತೋಷದ ವಿಷಯ. ಇನ್ನು ಮುಂದಿನ ಕಸ್ತೂರಿಯಲ್ಲಿ ಹಳೆಯ ಕಸ್ತೂರಿಯಲ್ಲಿಯ ೧) ಮುಂಧ್ರಾ ಪ್ರಕರಣ ೨) ಗೋಲಕನಾಥ ಪ್ರಕರಣ ೩) ಕೇಶವಾನಂದ ಭಾರತೀ ಪ್ರಕರಣ ಇಂತಹ ಕೆಲವು ಸುಪ್ರೀಮ್ ಕೋರ್ಟಿನ ಐತಿಹಾಸಿಕ ತೀರ್ಪುಗಳನ್ನು ಕಾಲಾವಕಾಶದಂತೆ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಶಿರ್ಶಿ. ಗ.ಸು.

ಸಂಗ್ರಾಹ್ಯ ಸಂಚಿಕೆ

ಆಗಸ್ಟ್ ೧೯೮೨ ರ ಸಂಚಿಕೆಯಲ್ಲಿ ರೋಹಿತಶಾಸ್ತ್ರಜ್ಞ ಅಸುಂಡಿಯವರ ಪರಿಚಯ ಲೇಖನ ಓದಿದೆ. ವಿಪಿನಚಂದ್ರ ಶಾಹರ 'ರೂಪಕುಂಡದ ಯಾತ್ರೆ' ಹೃದಯ ಸ್ಪರ್ಶಿಯಾಗಿತ್ತು, ಓದುಗರ ಸಹ ಹೃದಯ ಬಿಗಿ ಹಿಡಿಯುತ್ತ. ಕೊನೆಗೆ ಅವರು ನಿಶ್ಚಿತ ಸ್ಥಳಕ್ಕೆ ತಲುಪಿದಾಗ ಹೃದಯ ಹಗುರವಾಗುತ್ತದೆ. ಟ್ರೋಜನ್ ಕುದುರೆ, ಮತ್ತು ದಪ್ಪ ರಕ್ತನಾಳಗಳು ಲೇಖನಗಳು ಚೆನ್ನಾಗಿವೆ. ಶುದ್ಧ ಅವಿವೇಕ ಬರವಣಿಗೆ ತುಂಬ ಬೇಸರ ಬರಿಸಿತು. ನಮ್ಮ ನೆಚ್ಚಿನ 'ಕಸ್ತೂರಿ' ಸದಾ ಜ್ಞಾನಗಂಗೆಯನ್ನು ಪರಿಶುದ್ಧ ಲೇಖನ ಇವುಗಳೊಂದಿಗೆ ತನ್ನ ಕಂಪನ್ನು ಸೂಸುತ್ತಿದೆ.

ತಿರ್ಥಹಳ್ಳಿ ನಾಗರಾಜ ಗೋಕರ್ಣಕರ

ಶುದ್ಧ ಅವಿವೇಕ

ಪುಸ್ತಕ ವಿಭಾಗದಲ್ಲಿ ಬಂದ 'ಶುದ್ಧ ಅವಿವೇಕ' ತುಸು ದೀರ್ಘವಾಗಿರುವುದರಿಂದ, ಬೇಸರ ತರಿಸುವ ಕ್ಷಣಗಳೂ ಇವೆ. ಆದರೆ ಕಥೆಗೆ ಪ್ರಾಸ್ತಾವಿಕವಾಗಿ ನೀವು ಬರೆದ ಎರಡು ವಾಕ್ಯಗಳನ್ನು ಮನದಂದು ಕಥೆಯನ್ನು ಎರಡನೆಯ ಬಾರಿ ಪೂರ್ತಿ ಓದಿದೆ. ಆಗಲೇ ನನಗೆ 'ಅಶ್ವತ್ಥ'ರ ಕಲೆಗಾರಿಕೆಯ ಅರಿವುಂಟಾದುದು. ಈ ಮುಂಚೆ ಕೂಡ ಅವರ ಅನೇಕ ಕಥೆಗಳನ್ನು ಓದಿದ್ದೇನೆ. ಆದರೆ ಅವೆಲ್ಲವುಗಳಿಗಿಂತ ಭಿನ್ನವೂ ಮನುಷ್ಯನ ಅಂತರ್ದೃಷ್ಟಿಗೆ ಕನ್ನಡಿ ಹಿಡಿಯುವಂಥದೂ ಆದ ಈ ಪ್ರಯತ್ನ ಖಂಡಿತ ಶ್ಲಾಘನೀಯ.

ಶಿವಮೊಗ್ಗ ಎಚ್. ಸೂರ್ಯನಾರಾಯಣ

ನಾಲ್ವತ್ತೇಳು ಗಂಟೆಗಳು

'ನಾಲ್ವತ್ತೇಳು ಗಂಟೆಗಳು' ಈ ಕಥೆಯ ನಾಯಕನಿಗೆ ಡಾ. ರಾವ್ ತಾವು ಆಸ್ಪತ್ರೆಗೆ ತಿಳಿಸುವೆನೆಂದು ಹೇಳಿರುವದರಿಂದ ತನ್ನ ರಕ್ತವನ್ನು ರೋಗಿಗೆ ನೀಡಬಹುದೆಂಬ ಚಿಂತೆ ಎಳ್ಳಷ್ಟೂ ಇರುವದಿಲ್ಲ. ಶಸ್ತ್ರಚಿಕಿತ್ಸೆ ನಡೆಯುತ್ತಿರುವಾಗ ಕೊರತೆ ಬೀಳಬಾರದೆಂಬ ಮುಂಜಾಗರೂಕತೆಯಿಂದ ಡಾ. ರಾವ್ ಇನ್ನೊಬ್ಬ ರಕ್ತದಾನಿಗಾಗಿ ವ್ಯವಸ್ಥೆ ಮಾಡಲು ಹೇಳಿರುತ್ತಾರೆ. 'ಕ್ರಾಸ್ ಮ್ಯಾಚ್' ಇತ್ಯಾದಿ ಮಾಡಿದ ನಂತರವೇ tran-fuse ಮಾಡುವರೆಂಬುದನ್ನು ತಿಳಿದವರಾದ ರಾವ್ ಇದನ್ನು ಆಸ್ಪತ್ರೆಗೆ ತಿಳಿಸುವ ಗೋಜಿಗೇ ಹೋಗಿರುವದಿಲ್ಲ.

ಒಂದು ಕಣ್ಣಿನಲ್ಲಿ ಟ್ಯೂಮರ್ ಬೆಳೆದಾಗ ಇನ್ನೊಂದು ಕಣ್ಣನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದ, ಕತ್ತರಿಯನ್ನು ಒಳಗೆ ಮರೆತು ಹೊಲಿಗೆ ಹಾಕಿದಂಥ ಕಲ್ಪನೆಗೆ ಮೀರಿದ ಘಟನೆಗಳನ್ನು ವರ್ತಮಾನ ಪತ್ರಗಳಲ್ಲಿ ಓದಿದವರಿಗೆ ಈ ಕಥೆಯಲ್ಲಿ ಏನೋ ಸತ್ಯಾಂಶ ಇರಬಹುದೆಂದು ಅನಿಸಬಹುದು ಸತ್ಯಾಂಶ ಎಲ್ಲಿ ಹಾಗೂ ಎಷ್ಟಿದೆ ಎಂದು ತಿಳಿಸುವುದು ಹಾಗೂ ವೈದ್ಯಶಾಸ್ತ್ರದ ಕೆಲ ವಿವರಗಳನ್ನು ಕೊಡುವುದು ಸಾಮಾಜಿಕ ಹೊಣೆಯ ದೃಷ್ಟಿಯಿಂದ ಸರಿಯಲ್ಲ.

ನನ್ನ ಕಥೆಯ ನಿರೂಪಣಾ ಶೈಲಿಯನ್ನು ಮೆಚ್ಚಿ ಬೆನ್ನು ತಟ್ಟಿದ ಆರನ್ಎಮ್‌ರಿಗೆ ನಾನು ಋಣಿ.

ಮದ್ರಾಸ್ –ಸತ್ಯಾ ಸವನೂರು

ಕಸ್ತೂರಿ

ವರ್ಷ: ೨೭ - ಸಪ್ಟೆಂಬರ್ ೧೯೮೨ ಸಂಚಿಕೆ: ೧

ಬಹುಮೂಲ್ಯ ರತ್ನ

ನೇಮಿಚಂದ

ಮಗಧಾಧಿಪತಿ ಅಶೋಕ ಅಸುಪಾಸಿನ ರಾಜ್ಯಗಳನ್ನು ಗೆದ್ದುಕೊಂಡು ತನ್ನ ಭಂಡಾರವನ್ನು ವಜ್ರವೈಢೂರ್ಯ ರತ್ನಾದಿಗಳಿಂದಲೂ ಮನಸ್ಸನ್ನು ಗರ್ವದಿಂದಲೂ ತುಂಬಿಕೊಂಡ. ರಾಜಗೃಹದ ಒಬ್ಬ ಪ್ರಸಿದ್ಧ ಬೌದ್ಧ ಭಿಕ್ಷು ಪಾಟಲೀಪುತ್ರಕ್ಕೆ ಬಂದರು. ಸಮ್ರಾಟ ಆ ಭಿಕ್ಷುವನ್ನು ಭೋಜನಕ್ಕೆ ಆಮಂತ್ರಿಸಿದ. ಭೋಜನಾನಂತರ ಭಿಕ್ಷುವನ್ನು ಅರಮನೆಯಲ್ಲಿ ಸುತ್ತಾಡಿಕೊಂಡು ಬರೋಣವೆಂದು ಕರೆದುಕೊಂಡೊಯ್ದ. ಹಾಗೇ ಸುತ್ತಾಡುತ್ತ ತನ್ನ ಬೊಕ್ಕಸವನ್ನೂ ತೋರಿಸಿದ. ಆಗ ಸಮ್ರಾಟನ ಕಣ್ಣಲ್ಲಿ ಹೊಳಪಿತ್ತು. ಮುಖದ ಮೇಲೆ ಮದದ ಮುದವಿತ್ತು. ಹೆಜ್ಜೆಯಲ್ಲಿ ಹೆಮ್ಮೆಯಿತ್ತು. ತನ್ನ ಸಂಗ್ರಹದಲ್ಲಿಯೇ ಅತಿ ದೊಡ್ಡ ಮತ್ತು ಬಹುಮೂಲ್ಯ ರತ್ನವೊಂದನ್ನು ಕೈಯಲ್ಲಿ ಹಿಡಿದು ಭಿಕ್ಷುವಿಗೆ ತೋರಿಸುತ್ತ, "ಭಿಕ್ಷುರಾಜ! ಇಂಥ ಬಹುಮೂಲ್ಯ ಮತ್ತು ವಿಶಾಲ ರತ್ನ ಭರತ ವರ್ಷದಲ್ಲೇ ದುರ್ಲಭವಾದದ್ದು!" ಎಂದ.

"ರಾಜನ್ ! ರತ್ನವೆಂದರೆ ಬಹುಮೂಲ್ಯವಾದೊಂದು ಕಲ್ಲು ಅಲ್ಲವೆ?" ಎಂದು ಕೇಳಿದರು ಭಿಕ್ಷು.

"ಹೌದು ಭಿಕ್ಷುರಾಜ. ರತ್ನವೆಂದರೆ ಬಹುಮೂಲ್ಯವಾದೊಂದು ಕಲ್ಲೆ."

"ರಾಜನ್, ನಿನ್ನ ರಾಜ್ಯದಲ್ಲಿಯೇ ನಾನು ಇದಕ್ಕಿಂತ ಹೆಚ್ಚು ಮೂಲ್ಯದ ರತ್ನದ ಕಲ್ಲುಗಳನ್ನು

ನೋಡಿದ್ದೇನೆ?"

"ಅದು ಹೇಗೆ ಸಾಧ್ಯ ಭಿಕ್ಷುರಾಜ?"

"ವಿಶ್ವಾಸವಾಗದಿದ್ದರೆ ನನ್ನ ಜತೆ ನಡೆ. ಅವೆಲ್ಲಿವೆಯೋ ಅಲ್ಲಿಯೇ ಕರೆದೊಯ್ದು ತೋರಿ–ಸುವೆ" ಎಂದರು ಭಿಕ್ಷು.

ಸಮ್ರಾಟ ಭಿಕ್ಷುವಿನೊಂದಿಗೆ ಹೊರಟ. ನಗರದ ಹೊರ ವಲಯದಲ್ಲಿದ್ದ ಕುಟೀರವೊಂದರ ಬಳಿ ಅವರು ಬಂದು ನಿಂತರು.

"ಅದೋ, ಅಲ್ಲಿದೆ ನೋಡು ರಾಜನ್!" ಎಂದರು ಭಿಕ್ಷು.

"ಆಂ? ಎಲ್ಲಿ ಇದೊಂದು ಕುಟೀರ. ಬಡವನ ಗುಡಿಸಲು. ಇಂಥಲ್ಲಿ ಎಲ್ಲಿಂದ ಬರಬೇಕು ರತ್ನ? ಚೇಷ್ಟೆ ಮಾಡಬೇಡಿ ಭಿಕ್ಷುರಾಜ."

"ರಾಜನ್. ಈ ಗುಡಿಸಲಲ್ಲಿ ಅಲ್ಲಿ ಎದುರಿಗೆ ಕಾಣುತ್ತಿದೆಯಲ್ಲ, ಅದೇ ರತ್ನ."

"ತಮಾಷೆ ಬೇಡ ಭಿಕ್ಷುರಾಜ ... ನೀವು ತೋರಿಸಿದ್ದು ಒಂದು ಬೀಸುವ ಕಲ್ಲು. ಅದ್ಹೇಗೆ ರತ್ನವಾದೀತು?"

"ಇದೇ ನಿಜವಾದ ರತ್ನ ರಾಜನ್. ಬಹು ಮೂಲ್ಯವಾದ ಬಹೂಪಯೋಗಿ ರತ್ನ. ನಿನ್ನ ಭಂಡಾರದಲ್ಲಿರುವ ರತ್ನಗಳಿಂದೇನು ಹೊಟ್ಟೆ ತುಂಬುತ್ತದೆಯೆ? ಈ ರತ್ನ ಒಂದು ಜೀವದ ಜೀವನಾಧಾರ. ಈ ಗುಡಿಸಲಿನ ಬಡ ಮುದುಕಿಯು ಅನ್ನದ ಮಾರ್ಗ. ಇದನ್ನು ಬೀಸಿ ಆಕೆ ಇತರರಿಗೆ ಹಿಟ್ಟು ಮಾಡಿಕೊಡುತ್ತಾಳೆ. ತನ್ನ ಹೊಟ್ಟೆಗೂ ಹಿಟ್ಟಾಗುತ್ತದೆ. ನಿತ್ಯದ ಊಟವನ್ನು ನೀಡುವ ಈ ರತ್ನದ ಮುಂದೆ ನಿನ್ನ ಆ ಅಲಭ್ಯವಾದ ದುರ್ಲಭವಾದ ಬಹುಮೂಲ್ಯವಾದ ರತ್ನಗಳನ್ನು ನಿವಾಳಿಸಿ ಚೆಲ್ಲು. ಅಷ್ಟೆ ಅಲ್ಲ, ನಿನ್ನ ಬಳಿಯಿರುವ ರತ್ನಗಳನ್ನು ಸಂಗ್ರಹಿಸಲು ನೀನು ಏನೆಲ್ಲ ಮಾಡಿದೆ? ಎಷ್ಟು ರಕ್ತಪಾತವಾಯಿತು. ಎಷ್ಟು ವಿತ್ತಹಾನಿ–ಜೀವಹಾನಿಯಾಯಿತು? ಅಷ್ಟೇ ಅಲ್ಲ, ನಿನ್ನ ಆ ರತ್ನಗಳನ್ನು ಕಾಪಾಡಲು ಹಗಲಿರುಳೂ ಚಿಂತೆಯಿಂದ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತ ಕುಳಿತಿರಬೇಕು. ಆದರೆ ಈ ರತ್ನ ಜೀವದಾಯಿನಿ. ನಿನ್ನಲ್ಲಿರುವಂಥವು ಮೃತ್ಯುವಿಗೆ ಮೂಲ. ಭವಿಷ್ಯದಲ್ಲಿ ನಿನ್ನ ಆ ಅಮೂಲ್ಯ ರತ್ನಗಳಿಗಾಗಿ ಅದೆಷ್ಟು ಕದನಗಳಾಗಲಿವೆಯೊ ಯಾರಿಗೆ ಗೊತ್ತು?"

ಸಮ್ರಾಟನ ಮುಖ ಕಂದಿತು. ಆತ ತಲೆ ತಗ್ಗಿಸಿದ.

ನಂತರ ಆತ ಅರಮನೆಗೆ ಮರಳಿದವನೇ ತನ್ನ ಭಂಡಾರದ ರತ್ನಗಳನ್ನೆಲ್ಲ ದಾನಮಾಡಿದನೆಂದೂ ಕೆಲವರು ಹೇಳುತ್ತಾರೆ. ☆

'ಹೆಣ್' ಗಾದೆಗಳು

ಸುಂದರ ಹೆಣ್ಣಿಗೆ ಮೂರು ಜನ ಗಂಡಂದಿರು ಬೇಕಂತೆ:
ಅವಳನ್ನು ಸಂರಕ್ಷಿಸಲು ಆಶ್ರಯ ನೀಡಲು ಶ್ರೀಮಂತ ಒಬ್ಬ;
ಅವಳನ್ನು ಪ್ರೀತಿಸಲು ಸುಂದರ ತರುಣನೊಬ್ಬ; ಮತ್ತು
ಅವಳನ್ನು ಹೊಡೆದು ಬಡಿದೂ ಮಾಡಲು ಡಕಾಯಿತ ಒಬ್ಬ.

—ಬಲ್ಗೆರಿಯನ್ ಗಾದೆ

* * *

ಹೆಣ್ಣಿಗೆ ೧೦ ವರ್ಷವಾಗಿದ್ದಾಗ ಆಕೆ ದೇವತೆ;
ಅವಳಿಗೆ ೧೫ ವರ್ಷ ಆಗಿದ್ದಾಗ ಆಕೆ 'ಸಂತಳು'
ಆಕೆಗೆ ೫೦ ವರ್ಷ ಆಗಿದ್ದಾಗ ಆಕೆ 'ದೆವ್ವ;'
ಆಕೆಗೆ ೮೦ ವರ್ಷವಾಗಿದ್ದಾಗ ಆಕೆ ಮಾಟಗಾತಿ.

—ಇಂಗ್ಲಿಷ್ ಗಾದೆ

ಸಂಗ್ರಹ: ಎಸ್. ವಿಶ್ವನಾಥ

ಕ್ಯಾಲೆಯನ್ನುಳಿಸಿದ ಧೀರರು

ರೇಣುಕ

ಫ್ರೆಂಚ್ ಸಿಂಹಾಸನಕ್ಕೆ ಉತ್ತರಾಧಿಕಾರಿಗಳಿಲ್ಲದಾದಾಗ ಇಬ್ಬರು ವಾರಸುದಾರರು ಹುಟ್ಟಿಕೊಂಡರು. ಅವರಲ್ಲೊಬ್ಬ ಫ್ರಾನ್ಸಿನ ದೊರೆ ನಾಲ್ಕನೆ ಫಿಲಿಪ್ಪನ ಸೋದರಳಿಯ ವಲಾಯ್ಸಿನ ಕೌಂಟ್ ಫಿಲಿಪ್. ಮತ್ತೊಬ್ಬ ವಾರಸುದಾರ ಇಂಗ್ಲೆಂಡಿನ ದೊರೆ ಮೂರನೆಯ ಎಡ್ವರ್ಡ್. ಈತನೂ ದೊರೆ ನಾಲ್ಕನೇ ಫಿಲಿಪ್ಪನ ಒಬ್ಬಳೇ ಮಗಳಾದ ಇಸಾಬೆಲಳ ಮಗ. ಫ್ರಾನ್ಸಿನ ಮೇಲೆ ನಡೆದ ಅನೇಕ ಯುದ್ಧಗಳಲ್ಲಿ ಜಯಶೀಲನಾದ ಮೂರನೆಯ ಎಡ್ವರ್ಡ್ ತಾನೇ ಫ್ರಾನ್ಸಿನ ದೊರೆಯೆಂದು ಘೋಷಿಸಿಕೊಂಡೂ ಬಿಟ್ಟ. ಈತನ ಕಾಲದಲ್ಲಿಯೇ ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ನಡುವೆ ನಡೆದ ಯುದ್ಧ ಪರಾಕಾಷ್ಠೆ ಮುಟ್ಟಿ ಇತಿಹಾಸದಲ್ಲಿ 'ನೂರು ವರ್ಷಗಳ ಯುದ್ಧ,' (ಕ್ರಿ.ಶ. ೧೩೩೭–೧೪೫೩) ವೆಂದು ಖ್ಯಾತಿ ಪಡೆಯಿತು.

ಸಮರ ನಿಷ್ಣಾತನಾದ ಮೂರನೆಯ ಎಡ್ವರ್ಡನಿಗೆ ಎಲ್ಲೆಲ್ಲೂ ಜಯದ ಮೇಲೆ ಜಯ ಲಭಿಸತೊಡಗಿತು ಇಂಗ್ಲಿಷ್ ಸೈನಿಕರು ಸಮರ ತಂತ್ರದಲ್ಲಿ ನುರಿತವರಾಗಿದ್ದರು. ಅದ್ವಿತೀಯ ಬಿಲ್ಲುಗಾರರಾಗಿದ್ದ ಇಂಗ್ಲಿಷ್ ಸೈನಿಕರಿಗೆ ಫ್ರೆಂಚ್ ಸೈನಿಕರು ಸರಿಸಾಟಿಯಾಗಿರಲಿಲ್ಲ.

ಯುದ್ಧದ ಮೊದಲ ಹಂತದಲ್ಲಿಯೇ ಇಂಗ್ಲಿಷ್ ಸೇನೆ 'ಸ್ಲ್ಯುಯ್ಸ್' ಬಳಿ ಮುಖ್ಯವಾದ ನೌಕಾ ಸಮರವೊಂದರಲ್ಲಿ ಜಯ ಗಳಿಸಿ (೨೪–೬–೧೩೪೦) ಇಂಗ್ಲಿಷ್ ಕಡಲ್ಗಾಲುವೆಯ ಮೇಲೆ ತನ್ನ ಪೂರ್ಣ ಒಡೆತನವನ್ನು ಸ್ಥಾಪಿಸಿತು. ಸ್ಲ್ಯುಯ್ಸ್ ಪತನದ ಆರು ವರ್ಷಗಳ ನಂತರ (೨೬–೮–೧೩೪೬ ರಂದು) ಕ್ರೇಸಿ ಎಂಬಲ್ಲಿ ಎಡ್ವರ್ಡನು ಫ್ರೆಂಚ್ ಸೇನೆಯನ್ನು ಧೂಳೀಪಟ ಮಾಡಿ, ಮರು ವರ್ಷ ಅಪಾರ ಸೇನೆಯೊಂದಿಗೆ ಕಡಲ ತೀರದ ಕ್ಯಾಲೆ ಪಟ್ಟಣದ ಮೇಲೆ ದಂಡೆತ್ತಿ ಹೊರಟ.

ಡೋವರ್ ಜಲಸಂಧಿಯಲ್ಲಿರುವ ಕ್ಯಾಲೆ ಇಂಗ್ಲೆಂಡಿಗೆ ಅತಿ ಸಮೀಪದಲ್ಲಿರುವ ಚಿಕ್ಕ ಫ್ರೆಂಚ್ ರೇವು. ಈ ಆಯಕಟ್ಟಿನ ಸ್ಥಳದಿಂದ ಫ್ರೆಂಚ್ ನೌಕೆಗಳು ಫ್ಲಾಂಡರಿಗೆ ತುಪ್ಪಟವನ್ನು ಹೊತ್ತು ಸಾಗುವ ಇಂಗ್ಲಿಷ್ ವಾಣಿಜ್ಯ ನೌಕೆಗಳಿಗೆ ಸದಾ ಉಪಟಳ ಕೊಡುತ್ತಿದ್ದುವು. ಇಂಗ್ಲೆಂಡಿನ ನೌಕಾ ಸಾರಿಗೋದ್ಯಮದ ಹಿತ ದೃಷ್ಟಿಯಿಂದ ಕ್ಯಾಲೆ ಪಟ್ಟಣವನ್ನು ವಶಪಡಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಗಿತ್ತು.

ಕ್ರೇಸಿ ವಿಜಯದಿಂದ ರಣೋನ್ಮತ್ತನಾಗಿ ಕ್ಯಾಲೆಗೆ ಅಭಿಮುಖವಾಗಿ ಸಾಗುತ್ತಿದ್ದ ಎಡ್ವರ್ಡನಿಗೆ ದೊಡ್ಡ ಅಂತಕವೆನಿಸಿರಲಿಲ್ಲ ಕಣ್ಣುಮುಚ್ಚಿ ತೆರೆಯುವುದರಲ್ಲಿ ಕ್ಯಾಲೆ ಪಟ್ಟಣ ತನ್ನ ಜೇಬಿಗೆ ಬೀಳುವುದೆಂದು ಆತ ಭಾವಿಸಿದುದುದರಲ್ಲಿ ಅಚ್ಚರಿಯಿರಲಿಲ್ಲ. ಹಾದಿಯಲ್ಲಿ ಇಂಗ್ಲಿಷ್ ಸೈನ್ಯದ ಮುನ್ನಡೆಗೆ ಫ್ರೆಂಚ್ ಸೈನ್ಯದ ಪ್ರತಿರೋಧವೇ ಕಂಡುಬರಲಿಲ್ಲ. ಕ್ಯಾಲೆ ನಗರದ ರಕ್ಷಣೆಯಲ್ಲಿದ್ದ ಫ್ರೆಂಚ್ ಪಡೆಗಳು ಪಟ್ಟಣವನ್ನು ತೊರೆದು ಓಡಿ



ಮೂರನೆಯ ಎಡ್ವರ್ಡ್

ಹೋದವೆಂದು ಬೇಹುಗಾರರು ಸುದ್ದಿಯನ್ನು ತಂದಾಗ ಎಡ್ವರ್ಡನಿಗೆ ಫ್ರೆಂಚರ ಬಗ್ಗೆ ಹೀನಾಯ ಭಾವ ಮೂಡಿತು.

ಎಡ್ವರ್ಡನ ಹೆಂಡತಿ ರಾಣಿ ಫಿಲಿಪ್ಪಳು ನೆವಿಲ್ ಕ್ರಾಸ್ ಬಳಿ ಸ್ಕಾಟರನ್ನು ಸೋಲಿಸಿ ಡೇವಿಡ್ ದೊರೆಯನ್ನು ಸೆರೆ ಹಿಡಿದ್ದಾಳೆಂಬ ಮತ್ತು ತನ್ನನ್ನು ಕೂಡಿಕೊಳ್ಳಲು ಬರುತ್ತಿರುವಳೆಂಬ ಮತ್ತೊಂದು ಸುದ್ದಿ ತಲಪಿ ಎಡ್ವರ್ಡ್ ದೊರೆಯ ರಣೋತ್ಸಾಹಕ್ಕೆ ಮೇರೆ ಇಲ್ಲದಂತಾಯಿತು. ಇಂಗ್ಲಿಷ್ ಸೈನ್ಯ ಕ್ಯಾಲೆ ಪಟ್ಟಣದ ಬಳಿ ಬಂದಾಗ ಅವರಿಗೆ ಅಚ್ಚರಿ ಕಾದಿತ್ತು. ಕ್ಯಾಲೆ ಪಟ್ಟಣ ಬಲಿಷ್ಠವಾದ ಕೋಟೆಯೊಳಗಿತ್ತು. ಜನರೆಲ್ಲಾ ಕೋಟೆಯ ಬಾಗಿಲುಗಳನ್ನು ಮುಚ್ಚಿಕೊಂಡು ಒಳ ಸೇರಿಕೊಂಡಿದ್ದರು.

ಕ್ಯಾಲೆ ಪಟ್ಟಣದ ಕೋಟೆಯ ಗೋಡೆಗಳು ಬಾಗಿಲುಗಳು ಅಭೇದ್ಯವಾಗಿದ್ದವು. ಫಿರಂಗಿಗಳನ್ನು ಇನ್ನೂ ಕಂಡುಹಿಡಿದಿರದ ಕಾಲವದು. ಬಿಲ್ಲು ಬಾಣ ಭಲ್ಲೆ ಥಾಲುಗಳೇ ಸೈನಿಕರ ಮುಖ್ಯ ಆಯುಧಗಳಾಗಿದ್ದವು. ಎಡ್ವರ್ಡ್ ದೊರೆ ಕೋಟೆಯ ಸುತ್ತಲೂ ಗುಡಾರಗಳನ್ನು ನೆಡೆಸಿ ಶಿಬಿರವನ್ನು ಸ್ಥಾಪಿಸಿದ. ಕೋಟೆಯೊಳಗಿನಿಂದ ಹೊರಗಾಗಲೀ ಹೊರಗಿನಿಂದ ಕೋಟೆಯೊಳಗಾಗಲೀ ಯಾರೂ ಹೋಗಿ ಬರದಂತೆ ಕೋಟೆಯ ಸುತ್ತಲೂ ಸೈನಿಕರನ್ನು ಕಾವಲು ಹಾಕಿದ.

ಕೋಟೆಯೊಳಗಿನ ಆಹಾರ ಸಾಮಗ್ರಿಗಳು ತೀರಿದೊಡನೆ ಜನರು ಕೋಟೆಯ ಬಾಗಿಲನ್ನು ತೆರೆದು ತನಗೆ ಶರಣು ಬರುವರೆಂದು ಊಹಿಸಿ ಎಡ್ವರ್ಡ್ ದೊರೆ ನಿರಾಳವಾಗಿದ್ದ. ಆದರೆ ದಿನೇ ದಿನೇ ಅವನ ಊಹೆ ಹುಸಿಯಾಗತೊಡಗಿತು. ತಿಂಗಳುಗಳ ಮೇಲೆ ತಿಂಗಳುಗಳು ಉರುಳಿದರೂ ಕ್ಯಾಲೆ ಪಟ್ಟಣದ ನಿವಾಸಿಗಳು ಕೋಟೆಯ ಬಾಗಿಲನ್ನು ತೆರೆಯಲೇ ಇಲ್ಲ. ಇಂಗ್ಲಿಷರಿಗೆ ಶರಣಾಗಲೂ ಇಲ್ಲ.


ಪ್ರಾರಂಭದಲ್ಲಿ ಕೋಟೆಯೊಳಗಿದ್ದ ಜನರು ತಮ್ಮ ಪಟ್ಟಣವನ್ನು ಸುತ್ತುವರಿದ ಇಂಗ್ಲಿಷ್ ಸೈನ್ಯವನ್ನು ಹೊಡೆದೋಡಿಸಲು ಫ್ರೆಂಚ್ ಸೇನೆ ತ್ವರಿತವಾಗಿ ಬರಬಹುದೆಂದು ಆಶಿಸಿ, ಪ್ರತಿದಿನ ಕೋಟೆಯ ಬುರುಜಿನ ಮೇಲೆ ನಿಂತು ಫ್ರೆಂಚ್ ಸೇನೆಯ ನಿರೀಕ್ಷಣೆಯಲ್ಲಿರುತ್ತಿದ್ದರು. ಪಾಪ, ಸೋಲಿನ ಮೇಲೆ ಸೋಲನ್ನನುಭವಿಸಿ ಜರ್ಜರಿತವಾಗಿದ್ದ ಫ್ರೆಂಚ್ ಸೇನೆ ತಮ್ಮ ನೆರವಿಗೆ ಧಾವಿಸಿ ಬರುವ ಸ್ಥಿತಿಯಲ್ಲಿಲ್ಲವೆಂದು ಅವರಿಗೆ ಹೇಗೆ ತಾನೆ ತಿಳಿಯಬೇಕು!

ಫ್ರೆಂಚ್ ಸೇನೆ ಆಗಮಿಸುವವರೆಗೂ ಜೀವ ಉಳಿಸಿಕೊಂಡಿರಲು ಕ್ಯಾಲೆ ನಿವಾಸಿಗಳು ತಮ್ಮ ಬಳಿಯಿದ್ದ ಆಹಾರ ಸಾಮಗ್ರಿಗಳನ್ನು ಮಿತವಾಗಿ ಬಳಸುತ್ತಿದ್ದರು. ದಿನಗಳುರುಳಿದಂತೆ ಫ್ರೆಂಚ್ ಸೇನೆಯ ಆಗಮನದ ನಿರೀಕ್ಷೆ ಹುಸಿಯಾಗತೊಡಗಿತು. ಆಹಾರ ಸಂಗ್ರಹ ತೀರತೊಡಗಿತು. ಕೆಲವೇ ದಿನಗಳಲ್ಲಿ ಅದೂ ತೀರಿಹೋಗಿ ಜನ ಹಸಿವೆಯಿಂದಲೂ ಹತಾಶರಾದರು.

ಕೊನೆಗೆ ಕೋಟೆಯೊಳಗಿದ್ದ ಕುದುರೆ, ನಾಯಿ, ಬೆಕ್ಕುಗಳನ್ನು ಕೊಂದು, ಅವುಗಳ ಮಾಂಸವನ್ನು ಬಿಸಿಲಿನಲ್ಲಿ ಒಣಗಿಸಿಟ್ಟುಕೊಂಡು ಪ್ರತಿದಿನ ಸ್ವಲ್ಪ ಸ್ವಲ್ಪವೇ ತಿನ್ನುತ್ತ ಪ್ರಾಣಧಾರಣೆ ಮಾಡಿಕೊಂಡರು. ಅದೂ ತೀರಿತು.

ವರೂ ಫ್ರೆಂಚ್ ಸೇನೆ ಬರಲಿಲ್ಲ. ಜನರಹೊಟ್ಟೆ ನ್ನಿಗೆ ಅಂಟಿಕೊಂಡಿತ್ತು. ಯಾರ ಮೈಯನ್ನು ಲಿದರೂ ಹಿಡಿ ಮಾಂಸ, ಹಿಂಡಿದರೆ ಉದ್ಧರಣೆ ಕ್ತ ದೊರೆಯುವಷ್ಟು ಸರಪೋತರಾಗಿದ್ದರು ಕ್ಯಾಲಿ ಪಟ್ಟಣದ ನತದೃಷ್ಟ ಜನ.

ಒಂದು ಮಧ್ಯಾಹ್ನ, ಕ್ಯಾಲಿ ಜನ ಹಸಿವಿನಿಂದ ಳಲಿ ಬಂದು ಕುಸಿದು ಮಲಗಿದ್ದರು. ಮರದ ಕೆಳಗೆ ಕಾಗೆಯೊಂದು ಸತ್ತ ಇಲಿಯನ್ನು ಕುಕ್ಕಿ ಕುಕ್ಕಿ ತಿನ್ನುತ್ತಿದ್ದುದನ್ನು ಹುಡುಗನೊಬ್ಬ



ನೋಡಿದ. ಅವನ ಶರೀರದಲ್ಲಿ ವಿದ್ಯುತ್ ಸಂಚಾರವಾಯಿತು. ಇಲ್ಲದ ಶಕ್ತಿಯನ್ನು ಒಗ್ಗೂಡಿಸಿಕೊಂಡು, ಓಡಿಹೋಗಿ ಕಾಗೆಯನ್ನು ಓಡಿಸಿ ಸತ್ತ ಇಲಿಯನ್ನು ಹಿಡಿದುಕೊಂಡು ಕಚಕಚನೆ ತಿನ್ನತೊಡಗಿದ. ಅದನ್ನು ನೋಡಿದವನೊಬ್ಬ ಮತ್ತೊಬ್ಬನಿಗೆ ಹೇಳಿದ. ಕೆಲವೇ ಕ್ಷಣಗಳಲ್ಲಿ ಈ ಸುದ್ದಿ ಕೋಟೆಯೊಳಗೆಲ್ಲಾ ಹಬ್ಬಿತು. ಸೊರಗಿಹೋಗಿದ್ದ ಜನ ಕೂಡಲೇ ಕಾರ್ಯತತ್ಪರರಾದರು. ಸಂದು ಗೊಂದು ಬಿಲಗಳನ್ನೆಲ್ಲ ಅಗೆದು ಜನರು

ಇಲಿಗಳನ್ನು ಹಿಡಿದು ತಿಂದರು; ಕ್ಯಾಲೆ ಪಟ್ಟಣದಲ್ಲಿ ಇಲಿಗಳ ಸಂತತಿ ಅಳಿದು ಹೋಗುವವರೆಗೂ.

ಕೋಟೆಯೊಳಗಿದ್ದ ಜನರಿಗೆ ಫ್ರೆಂಚ್ ಸೇನೆಯು ಆಗಮಿಸದ ಆಸೆಯಂತೂ ಕನಸಿನ ಮಾತಾಯಿತು. ಅವರು ನೀರು ಕುಡಿದುಕೊಂಡೇ ಮುಂದೆ ಹಲವಾರು ದಿನಗಳನ್ನು ತಳ್ಳಿದರು. ಹಸಿವು ಬೆಂಕಿಯಂತೆ ಎಲ್ಲರನ್ನೂ ದಹಿಸತೊಡಗಿತು.

ಇಂಗ್ಲಿಷರು ಕ್ಯಾಲೆ ಪಟ್ಟಣವನ್ನು ಮುತ್ತಿ ಹನ್ನೊಂದು ತಿಂಗಳುಗಳು ಉರುಳಿ ಹೋಗಿದ್ದವು. ಇಂಗ್ಲಿಷ್ ಸೈನ್ಯದ ಸೈರಣೆ ತಪ್ಪತೊಡಗಿತು. ಈ ಚಿಕ್ಕ ಪಟ್ಟಣದ ಜನರು ತಮಗರಿವಿಲ್ಲದಂತೆಯೇ ಎಡ್ವರ್ಡ್ ದೊರೆಯ ಗರ್ವವನ್ನು ಮಣ್ಣು ಮುಕ್ಕಿಸಿದ್ದರು.

ಕಟ್ಟ ಕಡೆಗೊಮ್ಮೆ ಕ್ಯಾಲೆ ಪಟ್ಟಣಿಗರ ಪ್ರತಿರೋಧ ಶಕ್ತಿ ಕುಸಿದು ಅವರು ಹೊಟ್ಟೆಯ ಹಸಿವಿಗೆ ಪೂರ್ಣವಾಗಿ ಶರಣಾದರು. ಜನರೆಲ್ಲಿ ಒಂದೆಡೆ ಕಲೆತು ಕೋಟೆಯೊಳಗಿನ ಜನರೆಲ್ಲರ ಪ್ರಾಣವನ್ನುಳಿಸುವ ವಾಗ್ದಾನ ಮಾಡಿದರೆ ಕೋಟೆಯ ಬಾಗಿಲನ್ನು ತೆರೆದು ಇಂಗ್ಲಿಷ್ ಸೈನ್ಯಕ್ಕೆ ಶರಣಾಗುವುದಾಗಿ ಎಡ್ವರ್ಡ್ ದೊರೆಗೆ ಸಂದೇಶವೊಂದನ್ನು ಕಳಿಸುವ ನಿರ್ಧಾರವನ್ನು ಕೈಗೊಂಡರು. ಆದರೆ ಎಡ್ವರ್ಡ್ ದೊರೆ ಕ್ಯಾಲೆ ನಿವಾಸಿಗಳ ಕೋರಿಕೆಯನ್ನು ಒಡನೆ ಪಟ್ಟಿಗೆ ಮನ್ನಿಸಲು ಸಿದ್ಧನಿರಲಿಲ್ಲ. ಹನ್ನೊಂದು ತಿಂಗಳಷ್ಟು ದೀರ್ಘ ಕಾಲ ಮುತ್ತಿಗೆ ಹಾಕಿ ಕಾದರೂ ಕ್ಯಾಲೆಯಂಥ ಯಃಕಶ್ಚಿತ್ ಪಟ್ಟಣವನ್ನು ವಶಪಡಿಸಿಕೊಳ್ಳಲಾಗದೆ ಅವಮಾನಿತನಾಗಿದ್ದನಾತ. ಹಿಂದೆಂದೂ ಆತನಿಗೆ ಇಂಥ ತೇಜೋಭಂಗವಾಗಿರಲಿಲ್ಲ. "ಕಣ್ಣು ಮುಚ್ಚಿ ತೆರೆಯುವುದರಲ್ಲಿ ಕ್ಯಾಲೆ ಪಟ್ಟಣವನ್ನು ವಶಪಡಿಸಿಕೊಳ್ಳಬಲ್ಲೆ" ಎಂಬ ಆತನ ದೃಢ ಆತ್ಮವಿಶ್ವಾಸಕ್ಕೆ ಎಂಥ ಆಘಾತ!

ಸಂದೇಶವನ್ನು ತಂದ ಹರಿಕಾರನೊಂದಿಗೆ ಎಡ್ವರ್ಡ್ ದೊರೆ, "ನಿಮ್ಮಲ್ಲಿಯ ಆರು ಜನ ಪ್ರಮುಖರು ಕೋಟೆಯ ಮತ್ತು ದ್ವಾರಗಳ ಬೀಗದ ಕೈಗಳನ್ನು ಹಿಡಿದುಕೊಂಡು ಬರಿತಲೆಯಲ್ಲಿ, ಬರಿಗಾಲಿನಲ್ಲಿ ಕೊರಳಿಗೆ ಹಗ್ಗವನ್ನು ಕಟ್ಟಿಕೊಂಡು ಸೈನಿಕ ಪಾಳೆಯಕ್ಕೆ ನನಗೆ ಬರಲಿ. ತೋಚಿದಂತೆ ಅವರನ್ನು ಶಿಕ್ಷಿಸಿ ಪಟ್ಟಣದ ಉಳಿದ ಜನರನ್ನು ಬಿಟ್ಟುಬಿಡುತ್ತೇನೆ," ಎಂದು ಹೇಳಿ ಕಳುಹಿಸಿದ.

ಎಡ್ವರ್ಡ್ ದೊರೆಯ ಸಂದೇಶವನ್ನು ಕೇಳಿ ಜೀವಚ್ಛವದಂತಿದ್ದ ಕ್ಯಾಲೆ ಪಟ್ಟಣದ ಜನ ತಲೆಯ ಮೇಲೆ ಕೈ ಹೊತ್ತು ಕುಳಿತರು. ಸಾವಿನ ಬಾಯಿಗೆ ಯಾರು ಯಾರನ್ನು ತಾನೆ ಹೋಗೆಂದು ಹೇಳಲು ಸಾಧ್ಯ! ಆಗ ಅಲ್ಲಿ ನೆರೆದಿದ್ದ ಜನರಲ್ಲಿ ಪ್ರಮುಖನಂತೆ ತೋರುತ್ತಿದ್ದ ವಸ್ತಾಬ್ಬ ಎದ್ದು ನಿಂತು, "ನೋಡಿರಲ್ಲ ಹಸಿವಿನಿಂದ ಎಲ್ಲರೂ ಸಾಯುವ ಬದಲು ನಮ್ಮಲ್ಲಿಯೇ ಯಾರಾದರೂ ಆರು ಜನರು ಪಟ್ಟಣದ ಜನರನ್ನುಳಿಸುವ ಸಲುವಾಗಿ ಸಾಯುವುದು ಉತ್ತಮ. ನಾನೇನೋ ಶತ್ರುಪಾಳೆಯಕ್ಕೆ ಹೋಗಲು ಸಿದ್ಧನಿದ್ದೇನೆ," ಎಂದು ಭಾವುಕನಾಗಿ ನುಡಿದೊಡನೆ ಮತ್ತೆ ಐವರು ಅವನೊಂದಿಗೆ ಇಂಗ್ಲಿಷರ ಸೇನಾಶಿಬಿರಕ್ಕೆ ಹೋಗಲು ಸಿದ್ಧರಾದರು.

ಈ ಆರು ಜನ ಧೀರರು ತಮ್ಮ ಜನಕ್ಕೆ ವಿದಾಯ ಹೇಳಿ ಕೋಟೆಯ ಚಿಕ್ಕ ದಿಡ್ಡಿ ಬಾಗಿಲಿನಿಂದ ಹೊರ ಬಿದ್ದರು. ತಮ್ಮ ದೊರೆಯ ಶಿಬಿರಾಭಿಮುಖವಾಗಿ ಚಿಕ್ಕ ಪಟ್ಟಣದ ದೊಡ್ಡ ಮನಸ್ಸಿನ ಈ ಆರು ಜನ ಧೀರರು ನಡೆಯುತ್ತಾ ಬರುತ್ತಿರುವುದನ್ನು ನೋಡಲು ರಸ್ತೆಯ ಇಕ್ಕೆಡೆಗಳಲ್ಲಿ ಇಂಗ್ಲಿಷ್ ಸೈನಿಕರು ಕಿಕ್ಕಿರಿದು ನಿಂತಿದ್ದರು. ಅನ್ನಾಹಾರಗಳಿಲ್ಲದೆ ಬಳಲಿ ಕಂಗೆಟ್ಟಿದ್ದ ಅವರು ನಡೆಯಲಾರದೆ ತೂರಾಡುತ್ತಾ ಬರುತ್ತಿರುವುದನ್ನು ನೋಡಿದರೆ, ಅಸ್ಥಿಪಂಜರಗಳು ಆದೇ ತಾನೆ ಗೋರಿಯಿಂದೆದ್ದು ನಡೆದು ಬರುತ್ತಿರುವಂತೆ ತೋರುತ್ತಿತ್ತು.

ಬರಿ ತಲೆ, ಬರಿಗಾಲಿನಲ್ಲಿ ಕೊರಳ ಸುತ್ತ ಹಗ್ಗವನ್ನು ಕಟ್ಟಿಕೊಂಡು ನಡೆದು ಬರುತ್ತಿದ್ದ ಆ ಆರು ಜನರಲ್ಲಿ ಮುಂದಿದ್ದವನ ಕೈಯಲ್ಲಿ ಕೋಟೆಯ ಬಾಗಿಲುಗಳ ಬೀಗದ ಕೈ ಗೊಂಚಲಿತ್ತು. ಅವರು ಎಡ್ವರ್ಡ್ ದೊರೆಯ ಮುಂದೆ ಮಂಡಿಯೂರಿ ತಲೆ ಬಾಗಿ ಕುಳಿತರು. ಅವರ ಮುಖಂಡ ತಲೆ ಎತ್ತಿ, "ದೊರೆಯೇ, ನಾವು

ಆರು ಜನರೂ ಕ್ಯಾಲೆ ಪಟ್ಟಣದ ಪ್ರಮುಖರು ಮತ್ತು ದೊಡ್ಡ ವ್ಯಾಪಾರಿಗಳು. ಕೋಟೆಯ ಬಾಗಿಲುಗಳ ಬೀಗದ ಕೈಗಳನ್ನು ತಂದಿದ್ದೇವೆ. ನಮ್ಮ ಪಟ್ಟಣದ ಜನರನ್ನುಳಿಸುವ ಸಲುವಾಗಿ ನಿನ್ನ ಬಳಿ ಬಂದಿರುವ ನಮ್ಮನ್ನು ನಿನಗಿಷ್ಟ ಬಂದಂತೆ ಶಿಕ್ಷಿಸು. ಪಟ್ಟಣದ ಜನರ ಪ್ರಾಣವನ್ನು ಉಳಿಸು," ಎಂದು ಕಂಪಿಸುವ ಧ್ವನಿಯಲ್ಲಿ ವಿನೀತ ನಾಗಿ ಬೇಡಿಕೊಂಡ.

ಅವರ ಶೋಚನೀಯ ಸ್ಥಿತಿಯನ್ನು ಕಂಡು, ಅವರ ಮಾತುಗಳನ್ನು ಕೇಳಿ ಸುತ್ತಲೂ ನಿಂತಿದ್ದ ಇಂಗ್ಲಿಷ್ ಸೈನಿಕರು ಮನ ಕರಗಿದವರಾಗಿ ಅತ್ತು ಬಿಟ್ಟರು. ಆದರೆ ಎಡ್ವರ್ಡ್ ದೊರೆಯ ಕಲ್ಲಿನಂಥ ಮನಸ್ಸು ಮಾತ್ರ ಕರಗಲಿಲ್ಲ. ತನ್ನನ್ನು ಅವಮಾನಿಸಿದ ಕ್ಯಾಲೆ ಪಟ್ಟಣದ ಜನರನ್ನು ಶಿಕ್ಷಿಸಲು ಅವನು ದೃಢ ನಿರ್ಧಾರ ಮಾಡಿದ್ದ. "ಈ ಆರೂ ಜನರ ತಲೆಗಳನ್ನು ಕತ್ತರಿಸಿ," ತನ್ನ ಸೈನಿಕರಿಗೆ ಆಜ್ಞಾಪಿಸಿದ ದೊರೆ.

ರಾಜನ ಬಳಿಯಲ್ಲಿ ನಿಂತಿದ್ದ ಆಪ್ತ ಸರದಾರರು, "ಪ್ರಭು. ದಯಾವಂತನಾದ ದೊರೆಯೆಂದು ನಾಡಿನ ಜನವೆಲ್ಲಾ ನಿನ್ನನ್ನು ಕೊಂಡಾಡುತ್ತಿದೆ. ಈ ನಿರಪರಾಧಿಗಳನ್ನು ವಧಿಸುವುದರಿಂದ ತಮ್ಮ ಹೆಸರಿಗೆ ಅಳಿಸಲಾರದಂಥ ಕಳಂಕ ತಟ್ಟುತ್ತದೆ. ಕೃಪೆ ಮಾಡಿ ಈ ನತದೃಷ್ಟರ ಮೇಲೆ ಕರುಣೆ ತೋರಿಸಿ," ಎಂದು ದೊರೆಯನ್ನು ಕುರಿತು ಪರಿಪರಿಯಾಗಿ ಬೇಡಿಕೊಂಡರು. ಆದರೂ ನಿಷ್ಠುರನಾದ ಎಡ್ವರ್ಡ್ ದೊರೆಯ ಮನಸ್ಸು ಕರಗಲಿಲ್ಲ. ತನ್ನ ಆಜ್ಞೆಯನ್ನು ತಡ ಮಾಡದೆ ನೆರವೇರಿಸುವಂತೆ ಸೈನಿಕರಿಗೆ ಆಜ್ಞಾಪಿಸಿದ. ಪ್ರಾಣಿಗಳನ್ನೆಳೆದೊಯ್ಯುವಂತೆ ಸೈನಿಕರು ಆ ಆರೂ ಜನರ ಕೊರಳಿನ ಹಗ್ಗ ಹಿಡಿದುಕೊಂಡು ಎಳೆದೊಯ್ಯಲಾರಂಭಿಸಿದರು.

ಇವನ್ನೆಲ್ಲಾ ನೋಡುತ್ತಾ ಎಡ್ವರ್ಡ್ ದೊರೆಯ ಪಕ್ಕದಲ್ಲಿ ನಿಂತಿದ್ದ ರಾಣಿ ಫಿಲಿಪ್ಪಳ ಕಣ್ಣಿಂದ ಬಳಬಳನೆ ಕಣ್ಣೀರುದುರಿದುವು. ಒಂದು ಕ್ಷಣ ತನ್ನ ಸ್ಥಾನಮಾನದ ಅರಿವನ್ನು ಮರೆತು ರಾಣಿ ಫಿಲಿಪ್ಪಳು ಅಳುತ್ತಾ ರಾಜನ ಮುಂದೆ ಮಂಡಿ ಯೂರಿ ಕುಳಿತು, "ಪ್ರಭು, ನಿನಗಾಗಿ ಏಳು ಮಂದಿ ಶೂರರಾದ ಗಂಡು ಮಕ್ಕಳನ್ನೂ ಐವರು ಚೆಲುವರಾದ ಹೆಣ್ಣು ಮಕ್ಕಳನ್ನೂ ಹಡೆದೆ. ನಿನಗಾಗಿ ನಿನ್ನನ್ನು ನಾನು ಎಂದೂ ಏನನ್ನೂ ಬೇಡಿಲ್ಲ. ನಿಜವಾಗಿಯೂ ನೀವು ನನ್ನನ್ನು ಪ್ರೀತಿಸುವಿರಾದರೆ ಈ ಆರು ಮಂದಿ ಧೀರರಿಗೆ ಪ್ರಾಣದಾನ ಮಾಡಿರಿ," ಎಂದು ಬೇಡಿ ಕೊಂಡಳು.

ಎಡ್ವರ್ಡ್ ದೊರೆ ಬಹಳ ಹೊತ್ತು ಮೌನ ವಾಗಿದ್ದ, ಕೊನೆಗೆ, "ರಾಣಿ, ಈ ಆರೂ ಮಂದಿ. ಯನ್ನು ನಿನಗೊಪ್ಪಿಸಿದ್ದೇನೆ. ನಿನಗೆ ಇಷ್ಟ ಬಂದಂತೆ ಮಾಡು," ಎಂದು ಹೇಳಿದವನೇ ಡೇರೆ ಯೊಳಗೆ ನಡೆದುಬಿಟ್ಟ.

ರಾಣಿ ಫಿಲಿಪ್ಪಳು ಕ್ಯಾಲೆ ಪಟ್ಟಣದ ಆ ಆರೂ ಜನ ಧೀರರನ್ನು ಅನ್ನಾಹಾರಗಳಿಂದ ತಣಿಸಿ, ಉಡುಗೊರೆ ನೀಡಿ ಮರ್ಯಾದೆಯಿಂದ ಕ್ಯಾಲೆ ಪಟ್ಟಣಕ್ಕೆ ಕಳಿಸಿಕೊಟ್ಟಳು. ಹೀಗೆ ಆ ಆರೂ ಮಂದಿ ಧೀರರು ಕ್ಯಾಲೆ ಪಟ್ಟಣದ ಜನರನ್ನು ಸಾವಿನಿಂದುಳಿಸಿದರು. ಇದು ಘಟಿಸಿದ್ದು ೪—೮—೧೩೪೭ರಂದು.

ಮುಂದೆ ಇನ್ನೂರ ಹನ್ನೊಂದು ವರ್ಷಗಳ ಕಾಲ (ಕ್ರಿ. ಶ. ೧೩೪೭ ರಿಂದ ೧೫೫೮) ಕ್ಯಾಲೆ ಪಟ್ಟಣ ಇಂಗ್ಲಿಷರ ವಶದಲ್ಲಿಯೇ ಇದ್ದಿತು. ಈ ಘಟನೆ ನಡೆದು ಆರು ಶತಮಾನಗಳಿಗೂ ಹೆಚ್ಚು ಕಾಲವಾದರೂ ಇಂದಿಗೂ ಕ್ಯಾಲೆ ಪಟ್ಟಣದ ವಾಸಿಗಳು ಮತ್ತು ಆರು ಜನ ತಮ್ಮ ಧೀರ ಪೂರ್ವಜನರನ್ನೂ ರಾಣಿ ಫಿಲಿಪ್ಪಳನ್ನೂ ಕೃತಜ್ಞತೆಯಿಂದ ನೆನೆಯುತ್ತಾರೆ. ☆

ಯುದ್ಧಕ್ಕಿಂತ ಮುನ್ನ—"ನಾನು ಬಲಶಾಲಿ, ಶತ್ರು ಹೇಗೋ ನೋಡಬೇಕು," ಎನ್ನಬೇಕು.

ಯುದ್ಧ ನಡೆದಾಗ— "ನಾನಂತೂ ದಣಿದೆ, ಆದರೆ ಶತ್ರುವೂ ಸಾಕಷ್ಟು ದಣಿದಿರಬೇಕು," ಎನ್ನಬೇಕು.

ಆದರೆ ಇವುಗಳನ್ನು ಸರಿಯಾದ ಸಮಯದಲ್ಲಿ ಸರಿಯಾಗಿಯೇ ಅನ್ನಬೇಕು. ಇಲ್ಲದಿದ್ದರೆ ಆಗುವುದೆಲ್ಲಾ ತಲೆ ಕೆಳಗು ಅಷ್ಟೆ. —ವಿನ್‌ಸ್ಟನ್ ಚರ್ಚಿಲ್

ಕನ್ನಡ ಮತ್ತು ಕರ್ನಾಟಕಕ್ಕಾಗಿ ಮುಂಚೈಯಲ್ಲಿದ್ದು ಹೋರಾಡಿದ ಸೇನಾನಿ ಕನ್ನಡದ ಮತ್ತು ಕರ್ನಾಟಕದ ಭವ್ಯ ಭವಿಷ್ಯದ ಕನಸು ಕಾಣುತ್ತಿದ್ದ ಕವಿ, ಕಥೆಗಾರ, ಪ್ರಬಂಧಕಾರ ಸಮಾಜ ಸುಧಾರಕ, ಸ್ವಾತಂತ್ರ್ಯವೀರ ಕೃಷ್ಣ ಕುಮಾರರು ೧೪-೫-೮೨ ರಂದು ಹೃದಯಾಘಾತದಿಂದ ನಿಧನರಾದ ಸುದ್ದಿಯನ್ನು ಬಾನುಲಿ ಬಿತ್ತರಿಸಿದ್ದನ್ನು ಕೇಳಿದಾಗ ನನಗೆ ಆ ಸುದ್ದಿಯನ್ನು ನಂಬಲಿಕ್ಕೇ ಆಗಲಿಲ್ಲ. ಏಕೆಂದರೆ ಅವರು ನನಗೆ ೫-೫-೮೨ ರಂದು ಪತ್ರ ಬರೆದಿದ್ದರು. ಅವರು ನನ್ನೊಂದಿಗೆ ಘಟಪ್ರಭೆಯಲ್ಲಿ ಒಂದು ತಿಂಗಳು ಕೂಡಿ ಇರಬಯಸಿದ್ದರು. ನನ್ನ ಅನುಕೂಲದ ಪ್ರಕಾರ ಅಲ್ಲಿಗೆ ಬಂದು ಇರಬೇಕೆಂದಿದ್ದರು—ಜೂನಿನಲ್ಲಿ, ತಪ್ಪಿದರೆ ಸಪ್ಟೆಂಬರ್ ಕೊನೆಯಲ್ಲಿ ಅಥವಾ ಅಕ್ಟೋಬರಿನಲ್ಲಿ. ಆದರೆ ಅವರು ಬಯಸಿದ್ದು ಒಂದು ವಿಧಿ, ಮಾಡಿದ್ದು ಇನ್ನೊಂದು. ಅದೇ ಪತ್ರದಲ್ಲಿ ಅವರು ಬರೆದಿದ್ದರು: "ನನ್ನ ಆರೋಗ್ಯ ಸರಿಯಾಗಿಲ್ಲ. ಸದ್ಯ ಒಬ್ಬ ಕಾರ್ಡಿಯಾಲಾಜಿಸ್ಟರ ಉಪಚಾರ ಆರಂಭವಾಗಿದೆ. ಮೈಯಲ್ಲಿ ಅಶಕ್ತಿ ಬಹಳ. ವಿಶೇಷ ಸಮಾಕ್ಷಮ." ಈ ಪತ್ರ ಓದಿದಾಗ ನೋಡಿದಾಗಲೆಲ್ಲಾ ನನಗೆ ಬಹಳ ಕಸಿವಿಸಿಯಾಗುತ್ತದೆ. ಅವರು ತಮ್ಮ ಆಸೆ ಆಕಾಂಕ್ಷೆಗಳನ್ನೆಲ್ಲಾ ನನ್ನ ಮುಂದೆ ಹೇಳಬಯಸಿದ್ದರೆಂದು ನನಗೆನಿಸುತ್ತದೆ. ಆದರೆ ಅದಕ್ಕೆ ವಿಧಿ ಇಂಬುಗೊಡಲಿಲ್ಲ.

ನನ್ನ ಹಾಗೂ ಕೃಷ್ಣಕುಮಾರ ಕಲ್ಲೂರವರ ಗೆಳೆತನ ಸುಮಾರು ಅರವತ್ತು ವರ್ಷಕ್ಕೂ ಮೇಲ್ಪಟ್ಟದ್ದು. ಹಿಂದಿನ ನಮ್ಮ ಗೆಳೆತನದ ವಿಷಯಗಳನ್ನು ಹೇಳುವುದಕ್ಕಿಂತ ಅವರ ಕೊನೆಯ ದಿನಗಳ ಬಗ್ಗೆಯೆ ಹೆಚ್ಚು ಹೇಳುವುದು ಸೂಕ್ತವೆನಿಸುತ್ತದೆ. ಏಕೆಂದರೆ ಅವರ ಹಿರಿಯ ವ್ಯಕ್ತಿತ್ವ ಹಾಗೂ ಅವರಿಗಿದ್ದ ಕನ್ನಡ ಹಾಗೂ ಕರ್ನಾಟಕದ ಬಗೆಗಿನ ಕಳಕಳಿ. ಅವರ ಸಾಹಿತ್ಯ ಸೇವೆ, ಕರ್ನಾಟಕದ ಬಹುಮುಖ ಸೇವೆ ಇತ್ಯಾದಿಯನ್ನು ಕುರಿತು ನನಗಿಂತ ಈ ಬಗ್ಗೆ ಹೆಚ್ಚು ತಿಳಿದಿರುವ ಡಾ. ಶ್ರೀನಿವಾಸ ಹಾವನೂರರು ಬರೆಯಲಿದ್ದಾರೆ.


ಕೃಷ್ಣಕುಮಾರರು ಬರೆದ ಪತ್ರಗಳ ಆಧಾರದಿಂದ, ಅವರು ತಮ್ಮ ಕೊನೆಯ ದಿನಗಳಲ್ಲಿ

ಬರತೇನಂದವ ಬರಲೇ ಇಲ್ಲಾ!

ಗುರುನಾಥ ಜೋಶಿ

ಹೇಗೆ ವಿಚಾರ ಮಾಡುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅವರು ಮನಬಿಚ್ಚಿ, ಹೃದಯ ಬಿಚ್ಚಿ ಪತ್ರ ಬರೆದಿದ್ದಾರೆ. ಅವರ ಪತ್ರಗಳು [illegible] ಗಳಾಗಿವೆಯೆನ್ನಬಹುದು. ಅವು ಅವರ ವ್ಯಕ್ತಿತ್ವದ ಮೇಲೆ ವಿಚಾರ ಸರಣಿಯ ಮೇಲೆ ಬೆಳಕು ಚೆಲ್ಲುತ್ತವೆ. ಆ ಪತ್ರಗಳಲ್ಲಿ ಅವರ ಕೊರಗು ಗೆಳೆಯನ ಬಗ್ಗೆ ಇದ್ದ ಒಲವು ಹೊರಹೊಮ್ಮುತ್ತವೆ.

"ಪ್ರಿಯ ಗುರುನಾಥ" ಎಂದು ಸಂಬೋಧಿಸಿ [illegible] ಯುವ ಪ್ರಸಂಗ ಬಂದಿದೆಯಲ್ಲ! ಎಂದು



ದಿ. ೧೬-೬-೮೧ ರ ಬರೆದು ನಾನು ಕರ್ನಾಟಕ ಆರೋಗ್ಯಧಾಮದಲ್ಲಿ ಇದ್ದುದು ಯಾಕೆ ಅಂತ ವಿಚಾರಿಸಿದ್ದರು. ಅದಕ್ಕೆ ನಾನು ಕರ್ನಾಟಕ ಆರೋಗ್ಯಧಾಮದಲ್ಲಿ ಇದ್ದುದು ಯಾವ ಚಿಕಿತ್ಸೆಗಾಗಿಯೂ ಅಲ್ಲ. ಹವಾ ಬದಲಾವಣೆಗಾಗಿಯೂ ಅಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿಯವರು ಕುವೆಂಪು ವಿರಚಿತ ಕಾನೂರು ಹೆಗ್ಗಡತಿ ಕಾದಂಬರಿಯನ್ನು ಹಿಂದಿಗೆ ಅನುವಾದಿಸಿ ಕೊಡಲು ಕೇಳಿದ್ದರಿಂದ ಪ್ರಶಾಂತವಾಗಿ ಕೂತು ಅನುವಾದಿಸಲು ಆಗುವುದೆಂದು ನಂಬಿ ಡಾ. ಎಂ. ಕೆ. ವೈದ್ಯರು ನನಗೆ ಅನುಕೂಲ ಮಾಡಿಕೊಟ್ಟಿದ್ದರಿಂದ ಕರ್ನಾಟಕ ಆರೋಗ್ಯಧಾಮದಲ್ಲಿ ಇರುತ್ತಿದ್ದೆ ಮತ್ತು ಅಲ್ಲಿಯ ಹವೆ ನೀರು ಉತ್ತಮ-ವೆಂದು ತಿಳಿಸಿದೆ. (ಕಾನೂರು ಹೆಗ್ಗಡತಿ ಹಿಂದಿಯಲ್ಲಿ ಪ್ರಕಟವಾಗಿದೆ.)

ಇದೇ ಪತ್ರದಲ್ಲಿ ಸಾಹಿತ್ಯ ಸಂನ್ಯಾಸವನ್ನು ಕುರಿತು ಬರೆದು ಮತ್ತೆ ಕೆಲವು ಆತ್ಮೀಯ ವಿಷಯಗಳನ್ನೂ ಕೃಷ್ಣಕುಮಾರರು ಪ್ರಸ್ತಾಪಿಸಿದ್ದಾರೆ: "ನಾನು ಸಾಹಿತ್ಯ ಸಂನ್ಯಾಸ ವಹಿಸಿ ೩೦ ವರ್ಷಗಳೇ ಆಗುತ್ತ ಬಂದವು. ಆದರದೇ ಒಂದು ಅಂಶವೆಂಬಂತೆ ನನ್ನ ಗ್ರಂಥಾಲಯವನ್ನೆಲ್ಲಾ ಬರಿದು ಮಾಡುತ್ತಿದ್ದೇನೆ. ಅಂತಾಗಿ ಕ. ಆ. ಧಾ. ದ ಗ್ರಂಥಾಲಯಕ್ಕಾಗಿ ೧೦೦ ಕನ್ನಡ ೨೫ ಇಂಗ್ಲಿಷ್ ಗ್ರಂಥಗಳನ್ನು ಕಳಿಸಿದ್ದೇನೆ."

೧೬-೬-೮೧ ಕ್ಕಿಂತ ಮುಂಚೆ ಚಿಕಿತ್ಸೆ ಹಾಗೂ ಆರೋಗ್ಯ ವರ್ಧನೆಗಾಗಿ ಕ. ಆ. ಧಾ. ದಲ್ಲಿ ಕೃಷ್ಣಕುಮಾರರು ಒಂದೆರಡು ತಿಂಗಳು (೧೯೮೦ ಮೇ) ಇದ್ದು ಹೋಗಿದ್ದರು. ಆರಾಮವಾಗಿ ಅವರು ಮನೆ ನನ್ನ ಜೊತೆಗೆ ಅಲ್ಲಿ ದೀಪಾವಳಿ ರಜೆಯಲ್ಲಿ ಇರಬೇಕೆಂದು ಅಪೇಕ್ಷಿಸಿ ಅಂದೇ ಒಂದು ಕವನ ಬರೆದು, 'ಅದನ್ನು ಪ್ರಕಟಿಸಬೇಡ! ಪ್ರಕಟಿಸಿದರೆ ತಮ್ಮ ಸಾಹಿತ್ಯ ಸಂನ್ಯಾಸ ಭಂಗವಾದೀತು' ಎಂಬ ಎಚ್ಚರಿಕೆಯನ್ನು ಈ ಪತ್ರದಲ್ಲಿ ಕೊಟ್ಟಿದ್ದರು. ಆದರೆ ಇಂದು ಅವರಿಲ್ಲ. ಸಾಹಿತ್ಯ ಸಂನ್ಯಾಸದಿಂದಲೂ ಮುಕ್ತಿ ಹೊಂದಿದ್ದರಿಂದ ಮತ್ತು ಕಳಿಸಿದ ಕವನದಲ್ಲಿ ಸನಾತನ ಸತ್ಯವೂ ಸನಾತನ ಅನುಭವವೂ ಅಡಕವಾಗಿರುವುದರಿಂದ ಮತ್ತು ಇಂದಿನವರ ಕಣ್ಣಿಗೆ ಮಂಜು ಹಿಡಿದಂತಿರುವುದರಿಂದ ಅದನ್ನು ಇಲ್ಲಿ ಕೊಡುತ್ತಿದ್ದೇನೆ—ಈ ಲೇಖನದ ಕೊನೆಯಲ್ಲಿ. ಅವರು ವಿಸ್ತರಿಸಿ ರವೀಂದ್ರನಾಥರಂತೆ ಸಾಹಿತ್ಯ ಮಾರ್ಗದಲ್ಲಿದ್ದರೂ ಅವರ ಮನಸ್ಸು ಸದಾ ಜಾಗೃತವಾಗಿರುತ್ತಿತ್ತು. ಅವರು ಅನಾರೋಗ್ಯದ ಸ್ಥಿತಿಯಲ್ಲೂ ಬರೆದ ಇನ್ನು ಕೆಲವು ಸ್ವಂತದ ಕವನಗಳನ್ನೂ ಕೆಲವು ಅನುವಾದಗಳನ್ನೂ ಕಳಿಸಿದ್ದಾರೆ.

ಕೃಷ್ಣಕುಮಾರರು ೫-೭-೮೧ ರಂದು ನನಗೆ ಬರೆದ ಪತ್ರದಲ್ಲಿ ತಮ್ಮ ಸಾಹಿತ್ಯ ಸಂನ್ಯಾಸದ ಬಗ್ಗೆ ಕಾರಣಗಳನ್ನು ಕೊಟ್ಟಿದ್ದಾರೆ. ಆ ಪತ್ರ

ನಾನು ಅವರಿಗೆ ೨೦-೬-೮೧ ರಂದು ಬರೆದ ಪತ್ರಕ್ಕೆ ಉತ್ತರವಾಗಿದೆ. ಅದರಲ್ಲಿ ಅವರು,

"ನಾವು ಘಟಪ್ರಭಾದಲ್ಲೇ ಇದ್ದಾಗ ನೀನು, ಅಷ್ಟು ಹೇಳಿದ ಮೇಲೆ ಅಲ್ಲಿಗೆ ಬರುತ್ತಿ [illegible]. ಅದಾವ ಯೋಗಾಯೋಗದಿಂದ ಬರಲು ತಪ್ಪಿದೆ? ನಮಗೆ ಆ ಬಗ್ಗೆ ಸುಳುವೂ ಸಿಕ್ಕಿಲ್ಲ. ನಿನಗದು ೪ನೇ ಮನೆಯಾದದ್ದು ವಿಷ್ಟರ ಮಟ್ಟಿಗೆ ಮಹತ್ವದ್ದೋ ಅಷ್ಟುಮಟ್ಟಿಗೆ ಇನ್ನು ೩ ಮನೆಗಳದ್ದೂ ಮಹತ್ವವಿದೆ! ಯಾರಿಗೆ ಆದರೂ ೪ನೇ ಮನೆಯು ಶಾಶ್ವತವಾದದ್ದೊಂದು ಹೇಗಾದರೂ ಸಿಕ್ಕೀತು. ಆದರೆ ಬಹಳ ತಂದೆ-ತಾಯಂದಿರಿಗೆ ಮಿಕ್ಕ ಮೂರು ಮನೆಗಳೂ ನಮ್ಮವೇ ಎಂದು ಆತ್ಮವಿಶ್ವಾಸದಿಂದ ಹೇಳಿಕೊಳ್ಳುವ ಪರಿಸ್ಥಿತಿ ಇರುವುದಿಲ್ಲ. ಇಲ್ಲಿಂದ ಹೊರಟಿದ್ದರೆ ನಾನೇ [illegible] ೪ನೇ ಮನೆ ಹುಡುಕಬೇಕಾದೀತು!

"ಇಲ್ಲಿಯ ಋಣಾನುಬಂಧ ಕೇವ ಇನ್ನು ತಿಂಗಳೋ ವರ್ಷೋಪ್ಪತ್ತೊ ಇದ್ದೀತು. ಅದು ಅನಿವಾರ್ಯವಾಗಿ ೪೫ ವರ್ಷ ಯಾವ ಸಂಸ್ಥೆಯನ್ನು [Patuk Polytechnic] ಎತ್ತಿ [illegible] ಬೆಳೆಸಿದೆನೋ ಅದೇ ಈಗ ಹತೋಟಿ ತಪ್ಪುತ್ತಿದೆ. ಶಿಕ್ಷಣ ಕ್ರಮದ ದಿಶೆಯೇ ತಪ್ಪುತ್ತಿದೆ. ಇಂತಹ ಪರಿಸ್ಥಿತಿಗೆ ಹೊಂದಿಕೊಂಡಿರಲು ಮೂಲಭೂತ ದೃಢವಿಶ್ವಾಸಗಳಿಗೆ ಅಂಟಿಕೊಂಡ ಮನಸ್ಸು ಒಪ್ಪಲಾರದು. ಸ್ವಲ್ಪ ಹೆಚ್ಚು ಕಡಿಮೆ ಇಂತಹದೇ ಅವಸ್ಥೆಯನ್ನು ಗುರುದೇವ ರವೀಂದ್ರರೂ ಮನಗಂಡಿದ್ದರು. ಈಗಿನ ಶಾಂತಿ ನಿಕೇತನವೇ ಬೇರೆ. ಅದರ ದಿಶೆಯೇ ಬೇರೆ," ಇಷ್ಟು ಬರೆದು ತಮ್ಮ ಮತ್ತು ನನ್ನ ವೈಯುಕ್ತಿಕ ಜೀವನಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಬರೆದಿದ್ದಾರೆ.

"ನನಗೂ ೩ ಗಂಡು ಮಕ್ಕಳಿದ್ದಾರೆ. ಒಬ್ಬ ಹಿರಿಯವ ಕ್ಯಾನಡಾದಲ್ಲಿ ಇದ್ದಾನೆ- ತನ್ನ ದಾರಿ ತಾನು ಕಂಡುಕೊಂಡು. ಇನ್ನಿಬ್ಬರು ಕಿರಿಯರು ಇದೀಗ ದಾರಿಗೆ ಹತ್ತುವವರಿದ್ದಾರೆ. ಹೀಗಾಗಿ ನನಗಂತೂ ಮೊದಲಿನ ಮೂರು ಮನೆಗಳು ಇಲ್ಲವೇ ಇಲ್ಲ ಎಂಬಂತಾಗಿದೆ. ೪ನೇದಿನ್ನೂ ಸಿಕ್ಕಿಲ್ಲ. ವಯಸ್ಸೂ ಸರಿಯೆ! ಇದ್ದ ನಾಲ್ಕು ದಿನ [illegible] ದೊಂದೂ ನಿಜ ಉಪಯೋಗಕ್ಕಾಗಬೇಕು.

ಸಾಹಿತ್ಯ ಸಂನ್ಯಾಸಕ್ಕೆ ಕಾರಣಗಳು

ಸಾಹಿತ್ಯ ಸಂನ್ಯಾಸದ ಬಗ್ಗೆ ಬರೆಯುತ್ತಾ ಹೀಗೆ ಎಂದಿದ್ದಾರೆ: "ನಿನ್ನ ಪತ್ರ ನಿನ್ನ [illegible] ಎಳೆ ವಯಸ್ಸಿನ ಎಳೆಯ ಮನಸ್ಸಿನ ಬಿಚ್ಚುತನ ವನ್ನೇ ತರಣ ತೋರುತ್ತದೆ. ಆದರೆ [illegible] [illegible] ಸಾಹಿತಿಗಳಲ್ಲಿ [illegible]! ಆದರಿಂದಾಗಿ ಕೇವಲ ಸಾಹಿತಿಗಳ 'ಸ್ವಂತಿಕೆ'ಯು ಮಡಿವಂತಿಕೆ ಆಡ್ಡಬಾರದೆ' ಅಂತರ್ಭಾಷಾ [illegible] ಹೆಚ್ಚಿನ ಕಾರ್ಯ ನಿನ್ನಿಂದಾಗಿದೆ. ನಾನೂ ಅಂಥ ಮಡಿವಂತಿಕೆಗೆ, ಸ್ವಾರ್ಥ [illegible] ಸ್ವಪ್ರತಿಷ್ಠೆಗೆ [illegible] ಸಾಹಿತ್ಯದ ಸಂನ್ಯಾಸ ಸ್ವೀಕರಿಸಿದ್ದು. ಕನ್ನಡದಲ್ಲಿ [illegible] ಸಾಹಿತ್ಯ [illegible] ಬೇಕಾದಷ್ಟಿದೆ. ಆದರೆ ಕನ್ನಡದ 'ವಾಙ್ಮಯ'ದ [illegible].

"ನಾನು ಸಾಹಿತ್ಯ ಸಂನ್ಯಾಸ ಸ್ವೀಕರಿಸಿದ್ದಕ್ಕೆ ಈನ್ನೂ ಒಂದು ಪ್ರಬಲ ಕಾರಣ ನಿನ್ನ ಪತ್ರದಲ್ಲೇ ಇದೆ. 'ಅಮೃತವೇಲ್' ಪ್ರಕಾಶಕರನ್ನು [illegible] ಹುಡುಕುತ್ತಿದೆಯಲ್ಲ! ಅದೇ ಕಾರಣ!! ಶ್ರಮಪಟ್ಟು ಬರೆಯುವದನ್ನು ಬರೆದಾದ ಮೇಲೆ ಪ್ರಕಾಶಕರನ್ನು ಹುಡುಕುತ್ತ ಗೋಳಾಡಬೇಕು. ಆ ಪ್ರಕಾಶಕರೂ ಮಾರವಾಡಿ ಜಾತಿಗೆ ಸೇರುತ್ತಿದ್ದಾರೆ. ನಾನು ಸಾಹಿತ್ಯದ ಸಂನ್ಯಾಸ ವಹಿಸಲು ನಾವೇ ಕಾರಣೀಭೂತರಾದ ಮನೋಹರ ಗ್ರಂಥಮಾಲೆಯೂ ಅಪ್ರತ್ಯಕ್ಷ ನಿಮಿತ್ತ ಎಂದರೂ ಸಲ್ಲೀತು! ನಮ್ಮಲ್ಲಿ ವಿಚಾರವಂತಿಕೆಯ, ವಿವೇಚನಾತ್ಮಕ ಪ್ರಯೋಜನಾತ್ಮಕ ಸಾಹಿತ್ಯ, ಅಂದರೆ ನನ್ನ [illegible] ಸಂಶೋಧನಾತ್ಮಕ ವಾಙ್ಮಯ ಇಲ್ಲವೇ ಇಲ್ಲವೆಂದರೂ ಸಲ್ಲೀತು. ನಾನು ಆ ದಿಸೆಯಲ್ಲಿ ಪ್ರಯತ್ನಪಟ್ಟು ವಿಫಲನಾಗಿದ್ದೇನೆ."

ಸಂಶೋಧನಾತ್ಮಕ ಸಾಹಿತ್ಯ

ಇಲ್ಲಿ ಒಂದು ಮಾತು ಹೇಳಬೇಕೆನಿಸುತ್ತದೆ. 'ಅಮೃತವೇಲ್' ಜ್ಞಾನಪೀಠ ಪ್ರಶಸ್ತಿ [illegible]

ಕೃಷ್ಣಕುಮಾರ ಮತ್ತು ಕನ್ನಡ

ಮುಂಬಯಿಗೆ ಹೋದಾಗೊಮ್ಮೆ ಕೃಷ್ಣಕುಮಾರ ಕಲ್ಲೂರವರನ್ನು ಕಂಡೇ ಬರುವುದು ನನ್ನ ವಾಡಿಕೆ. ಇತ್ತೀಚೆ ಏಪ್ರಿಲ್ (೧೯೮೨) ಹೋದಾಗಲೂ ಕಂಡು ಮಾತಾಡಿ ಬಂದೆ. ಆದರೆ ಈಗವರು ಕ್ಯಾನ್ಸರ್‌ನಂತಹ ರೋಗಕ್ಕೆ ಸಿಲುಕಿ ತುಂಬ ಹಣ್ಣಾಗಿದ್ದರು. ಆದರೆ ಅವರ ಪ್ರಜ್ಞೆ ಮಾತ್ರ ಮೊದಿನಂತೇ ಚುರುಕಾಗಿತ್ತು. ಕನ್ನಡದ ಬಗ್ಗೆ ಅವರಿಗಿದ್ದ ಕಳಕಳಿ ಮತ್ತು ಆ ಕುರಿತು ಅವರು ಮಾಡುತ್ತಿದ್ದ ವಿಧಾಯಕ ಚಿಂತನೆ ಮಾತು ಮಾತಿನಲ್ಲೂ ವ್ಯಕ್ತವಾಗುತ್ತಿತ್ತು. ಈ ಸಲದ ವಾಸ್ತವ್ಯದಲ್ಲಿ ಎರಡು ಮೂರು ಬಾರಿ ಕಂಡರೂ ಅವರ ರೋಗದ ಬಗ್ಗೆ ಕೆದಕಿ ಅವರನ್ನು ನೋಯಿಸುವ ಗೋಜಿಗೆ ಹೋಗದೆಯೆ ಅವರ ಚಿಂತನ ಫಲವನ್ನೇ ಸವಿಯಲು ಯತ್ನಿಸಿದೆ ನಾನು. ಹೇಳಬೇಕಾದುದು ಗುಡ್ಡದಷ್ಟಿದ್ದರೂ ಸದಾ ಅವರನ್ನು ಪೀಡಿಸುತ್ತಿದ್ದ ನೋವು ಹಾಗೂ ಕೆಮ್ಮು ಅವರನ್ನು ನಿತ್ರಾಣಗೊಳಿಸಿದ್ದವು. ಆದರೂ ಅವರು ಹಟವಿಡಿದಂತೆ ನನ್ನೊಡನೆ ಮಾತಾಡಿದಾಗ ತಿಳಿದು ಬಂದ ಒಂದೆರಡು ಹೃದ್ಯ ಅಂಶಗಳನ್ನು ಮಾತ್ರ ಇಲ್ಲಿ ಉದ್ಧರಿಸಬಯಸುತ್ತೇನೆ.

ಬೇಂದ್ರೆಯವರು ಚಿಕಿತ್ಸೆಗಾಗಿ ಮುಂಬಯಿಯ ಆಸ್ಪತ್ರೆಯಲ್ಲಿದ್ದಾರೆಂದು ತಿಳಿದೊಡನೆಯೇ ಕೃಷ್ಣಕುಮಾರರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ಅಲ್ಲಿ ಹೋಗಿ ಅವರನ್ನು ಕಂಡು ಬಂದವರು. ಮುಂಬಯಿಯ ಕನ್ನಡ ಸಂಘ – ಸಂಸ್ಥೆಗಳು ತಮ್ಮನ್ನು ಗೌರವಿಸಿ ಹೊದಿಸಿದ ಶಾಲನ್ನು ಅವರು ಬೇಂದ್ರೆಯವರಿಗೆ ಹೊದಿಸಿ ಬಂದಿದ್ದರು. ಬೇಂದ್ರೆಯವರು ನಿಧನರಾದ ವಾರ್ತೆ ಕೇಳಿ ಸ್ಮಶಾನಕ್ಕೇ ಧಾವಿಸಿ ಅಂತಿಮ ದರ್ಶನ ಪಡೆಯುತ್ತಿದ್ದಾಗ ಬೇಂದ್ರೆಯವರ ಮಗ ಶಾಲನ್ನು ಹಿಂದಿರುಗಿಸಲು ಬಂದಾಗ ಕೃಷ್ಣಕುಮಾರರ ಪ್ರತಿಕ್ರಿಯೆ: "ಆ ಶಾಲು ಯಾರಿಗೆ ಸಲ್ಲಬೇಕಿತ್ತೋ ಅವರಿಗೇ ಸಂದಿದೆ. ಅದು ಅವರೊಂದಿಗೆ ಹೋಗಲಿ." ಕನ್ನಡಕ್ಕಾಗಿ ತಾವು ಮಾಡಿದ ಕಿಂಚಿತ್ ಕಾರ್ಯಕ್ಕೆ ಕಾರಣಪುರುಷ ಬೇಂದ್ರೆಯವರೇ ಎಂದು ಕೃಷ್ಣಕುಮಾರರು ಹೇಳುತ್ತಿದ್ದರು.

"ಇದು, ನೋಡು, ಬೇಂದ್ರೆಯವರು ಚಿತಾರೂಢರಾಗುವ ಮುನ್ನ ನಾನು ಹೊದಿಸಿದ ಶಾಲು ಅವರನ್ನು ಸುತ್ತಿಕೊಂಡಾಗ ತೆಗೆದ ಚಿತ್ರ," ಎಂದು ಒಂದು ಭಾವ ಚಿತ್ರವನ್ನು ಅವರು ನನಗೆ ತೋರಿಸಿದಾಗ ಅವರ ಕಂಠ ಗದ್ಗದಿತವಾಗಿತ್ತು.


ಕನ್ನಡ ಹೆಸರುಗಳನ್ನು ಇಂಗ್ಲೀಷಿನಲ್ಲಿ ಬರೆಯುವಾಗ ಆಗುವ ತಪ್ಪುಗಳು ಅವರನ್ನು ಕಂಗೆಡಿಸುತ್ತಿದ್ದವು. ಹಿಂದಕ್ಕೆ ಪಾವಟೆಯವರು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದಾಗ 'KARNATAK' ಎಂದು ಬರೆಯುವುದರ ಔಚಿತ್ಯವನ್ನು ಪ್ರಶ್ನಿಸಿ ಅದು 'KARNATAKA' ಆಗಿರಬೇಕೆಂದು ಬರೆಯುವುದೇ ಯೋಗ್ಯವೆಂದು ಕೃಷ್ಣಕುಮಾರರು ಅವರಿಗೆ ಬರೆದರು. ಈ 'ಅ'ಕಾಂತ ಶಬ್ದವನ್ನು ರೂಢಿಗೆ ತರಲೋಸುಗ ಪಾವಟೆಯವರಿಗೆ ಒಂದು ಸಾವಿರ ರೂಪಾಯಿಗಳ ಚೆಕ್ಕನ್ನೂ ಕಳಿಸಿದ್ದರಂತೆ. ಆದರೆ ಚೆಕ್ಕು ಮಾತ್ರ ವಿಶ್ವವಿದ್ಯಾಲಯದಿಂದ ಮರಳಿ ಬಂತಂತೆ. ವಿಶ್ವವಿದ್ಯಾಲಯ 'KARNATAK' ಮಾತ್ರವೇ ಆಗಿ ಉಳಿಯಿತಂತೆ !

–ಭೀಮರಾವ ಅಚ್ಯುತರಾವ ಹುಯಿಲಗೋಳ

ವಿ. ಸ. ಖಾಂಡೇಕರರ ಕೊನೆಯ ಉತ್ತಮ ಕಾದಂಬರಿ. ಇದಕ್ಕೆ ಈಗ 'ಮಲ್ಲಿಗೆ ಅರಳಿತು' ಎಂದು ಹೆಸರಿಸಲಾಗಿದೆ. ಇದು ಬೇಗ ಪ್ರಕಟವಾಗಲಿದೆ. ಧಾರವಾಡದ ಸುಂದರ ಪುಸ್ತಕ ಪ್ರಕಾಶನದವರು ಇದನ್ನು ಪ್ರಸಿದ್ಧಿಸಲಿದ್ದಾರೆ. ಇದಕ್ಕೆ ಪ್ರೊ. ಸ. ಸ. ಮಾಳವಾಡರು ಅಭ್ಯಾಸಪೂರ್ಣ ಮುನ್ನುಡಿ ಬರೆದಿದ್ದಾರೆ. ಈ ಪ್ರಕಾಶಕರು ವ್ಯಾಪಾರಿ ಜಾತಿಗೆ ಸೇರಿದವರಲ್ಲ ಎಂದು ನನ್ನ ನಂಬುಗೆ. ಇದರ ಹಿನ್ನೆಲೆಯಲ್ಲಿ ಇದ್ದವರೆಲ್ಲರೂ ಸಾಹಿತಿಗಳೇ ಎಂದು ನನ್ನ ತಿಳಿವಳಿಕೆ. ಡಾ. ಶ್ರೀನಿವಾಸ ಹಾವನೂರ ಅವರು ನಿಜವಾದ ಸಂಶೋಧನಾತ್ಮಕ ವಾಙ್ಮಯದ ಕೊರತೆಯನ್ನು ಕನ್ನಡದಲ್ಲಿ ತುಂಬಿ ಕೊಡಲು ಯತ್ನಿಸುತ್ತಿದ್ದಾರೆ. ಅವರ ಯಶಸ್ಸು ಕೃಷ್ಣಕುಮಾರರ ಆತ್ಮಕ್ಕೆ ಶಾಂತಿಯನ್ನು ತಂದೀತು.

ಸಾಹಿತ್ಯ ವಿಹಾರ–ವಿನೋದ

ಕರ್ನಾಟಕ ಆರೋಗ್ಯದ ಧಾಮದ ವೈದ್ಯಾಧಿಕಾರಿಗಳಾಗಿರುವ ಡಾ. ಎಂ. ಕೆ. ವೈದ್ಯರಲ್ಲಿ ಕ. ಆ. ಧಾ. ದಲ್ಲಿ ಒಂದು ಲೇಖಕ ಭವನ ಕಟ್ಟಿಸಲ್ಪಟ್ಟರೆ ಯೋಗ್ಯವಾದೀತು ಅಂತ ನಿವೇದಿಸಿದೆ. ಅದಕ್ಕೆ ಅವರು ಒಪ್ಪಿದ್ದಲ್ಲದೆ ಗೋವೆಯ ದಿವಂ... ಲೇಖಕ ಶ್ರೀ ಸಾತೋಸ್ಕರರು ಈ ಯೋಜನೆ... ತಮ್ಮ ಅನುಮೋದನೆಯನ್ನು ವ್ಯಕ್ತಗೊಳಿ... ಅದರ ಬಗ್ಗೆ ಪ್ರಥಮ ಕಂತಾಗಿ ಐದು ನೂರ... ರೂಪಾಯಿ ವಂತಿಗೆಯನ್ನು ಸಲ್ಲಿಸಿದ್ದಾರೆಂದು ನನಗೆ ಡಾ. ವೈದ್ಯರೇ ಹೇಳಿದರು. ಈ ಬಗ್... ಕೃಷ್ಣಕುಮಾರರು ತಮ್ಮ ಸಂತೋಷವನ್ನು ವ್ಯಕ್ತಮಾಡುತ್ತ ಲೇಖಕ ಭವನ ಎನ್ನುವುದಕ್ಕಿಂ... ಸಾಹಿತ್ಯ ವಿಹಾರ ಎನ್ನುವುದು ಲೇಸೆಂದು ಬ...ಯುತ್ತ ಕೆ. ಎಚ್. ಐ. ದ ಬಗ್ಗೆ ಹೀಗೆಂದಿದ್ದಾರೆ "ಕೆ. ಎಚ್. ಐ. ಗೆ ಆರ್ ಯು ಸೇರಿಸಿದ... ಎಷ್ಟು ಉತ್ತಮವಾಗುತ್ತದಲ್ಲ! ಅಂದರೆ KH... Research Unit ಸೇರಿಸಿದರೆ 'ಖೇರು' ಆಗು...ತ್ತದೆ. ಇದನ್ನು ವಿನಗಜೇವ" ಎಂದು ತಮಾಷೆ... ಮಾಡಿದ್ದಾರೆ. ಬಳಿಕ ಹೀಗೆ ಬರೆದಿದ್ದಾರೆ: "... ಸಂಶೋಧನೆ ಮಾನವನ ಮೈ ಆರೋಗ್ಯ ಮನ... ಆರೋಗ್ಯ ಬೌದ್ಧಿಕ ಆರೋಗ್ಯಗಳಿಗೆಲ್ಲಾ ಸಂಬಂ... ಪಟ್ಟದ್ದಿರಬಹುದು. ಡಾ. ಮರ್ಡೇಕರರು ಅಂ... ತ್ರಿವಿಧ ಆರೋಗ್ಯಗಳನ್ನು ಗಮನಿಸಿದ್ದರೆಂದು ನನ... ಭಾವನೆ ಆ ಬಗ್ಗೆ ನೀನು ಹೆಚ್ಚು ಬಲ್ಲೆ."



ಕ್ಯಾನ್ಸರ್ ರೋಗಿ:

ಅನಂತರ ಇದೇ ಪತ್ರದಲ್ಲಿ ತಮ್ಮ ಆರೋ...ಗ್ಯದ ಬಗ್ಗೆ ಹೀಗೆ ಬರೆದಿದ್ದಾರೆ. "ನಾನು ... ಎಚ್. ಐ. ನಲ್ಲಿ Patient ಆಗಿ ಇರದಿದ್ದರ... ಕಳೆದ ೫ ವರ್ಷಗಳಿಂದ ನಾನು Cance... Patient ಆಗಿದ್ದೇನೆ. ಇಲ್ಲಿಯ Tat... Memorial Hospitalನಲ್ಲಿ ಇಂಗ್ಲೆಂ... ಚಿಕಿತ್ಸೆ ನಡೆಯುತ್ತಿದೆ. ೧೯೬೯ರಲ್ಲಿ ಇಲ್ಲಿಯವರ... ಕೈಬಿಟ್ಟಿದ್ದರು. ಆ ವರ್ಷ ಅಮೇರಿಕೆಯಲ್ಲಿದ್ದ ನ... ಮಗಳೂ ಅಳಿಯನೂ ಇಲ್ಲಿ ಬಂದಿದ್ದರು... ಹೋಗುವಾಗ ನನ್ನನ್ನೂ ಕಟ್ಟಿಕೊಂಡ... ಹೋದರು. ಅಲ್ಲಿಯ ಚಿಕಿತ್ಸೆಯ ಪರಿಣಾಮವಾ... ಕಾಯಿಲೆ ಹತೋಟಿಗೆ ಬಂದಿದ್ದಲ್ಲದೆ ಈಗ... ಹತೋಟಿಯಲ್ಲಿದೆ. ನನ್ನ ಕಾಯಿಲೆಯ ... ರಕ್ಕೆ Lymphoma ಅಂತ ಹೆಸರು. ಅಂತ... ಸದ್ಯ ದಿನಗಳನ್ನು ಮುನ್ನೂಕುವ ...

ಮಾತ್ರ ಇದು. ಅಮೇರಿಕೆಯಿಂದಲೇ Prescription ತಂದಿದ್ದೇನೆ. ಇಲ್ಲಿಯೂ ಕೊಡುತ್ತಲಿದ್ದಾರೆ. ಅವೇ ಇಂಜಕ್ಷನ್ನಗಳನ್ನು ಕೆ. ಎಚ್. ಐ. ದಲ್ಲೂ ಕೊಡಬಹುದು ಅಂತ ಡಾ. ವೈದ್ಯರೂ ಶ್ರೀ ಪ್ರಭುದೇಸಾಯಿ ಅವರೂ ಅಂದ ಹಾಗೆ ನೆನಪು......ದೀಪಾವಳಿಯಲ್ಲಿ ನೀನು ಬಂದರೆ ನಾನು ಪತ್ನಿಸಹಿತ ಬರುತ್ತೇನೆ. ಧಾರವಾಡದ ಸುದ್ದಿ ಏನಾದರೂ ವಿಶೇಷವಿದ್ದರೆ ತಿಳಿಸು. ನನ್ನ ಮಟ್ಟಿಗೆ ಧಾರವಾಡವೂ 'ಬರ್ಮು'ವಾದಂತೇ ಆಗಿದೆ.

"ಇದೀಗ ಇಲ್ಲಿ ನನ್ನ ಕಿರಿಯ ಮಗಳ ಬಾಣಂತಿತನ. ಮೊಮ್ಮಗ ಪ್ರಮೋದ ಹೆಸರಿಗೆ ತಕ್ಕಂತೆ ಬೆಳಗುತ್ತಿದ್ದಾನೆ. ದೀಪಾವಳಿ ಹೊತ್ತಿಗೆ ಇವರಿಂದ ನಾವೂ ಮುಕ್ತರಾಗುತ್ತೇವೆ. ಆಗ ಬರೆಯುತ್ತೇನೆ."

ಅನಂತರ ಅವರು ೨೨-೮-೮೧ ರಂದು ಬರೆದ ಪತ್ರದಲ್ಲಿ ಕರ್ನಾಟಕ ಆರೋಗ್ಯ ಧಾಮದಲ್ಲಿ ಕಾಯಂ ನೆಲೆಸುವ ವಿಚಾರವನ್ನು ವ್ಯಕ್ತಗೊಳಿಸಬೇಕೆಂದೂ ಯಾರಿಗೂ ಭಾರವಾಗದಂತೆ ಆ ಸಂಸ್ಥೆಗೆ ಗೌರವಪರ ಸೇವೆ ನಮ್ಮಿಂದ ಸಲ್ಲಬೇಕೆಂಬುದನ್ನೂ ಬರೆದು ಅಲ್ಲಿಯ ಮಾಜಿನಾಲಯುಕ್ತ ಸಂಸ್ಕೃತಿ ಕೇಂದ್ರ ನಿಯೋಜಿತ ಸಾಹಿತ್ಯ ಭವನ ಆದಿಗಳಿಗೆ ತಮ್ಮಿಂದ ವಿಶೇಷ ಸೇವೆ ಸಲ್ಲಲೂ ಸಾಧ್ಯವೆಂದು ತಿಳಿಸಿದ್ದರು. ಈ ತಮ್ಮ ವಿಚಾರವನ್ನು ತುಸು ಗೌಪ್ಯದಲ್ಲಿಡಬೇಕೆಂದು ಬರೆದಿದ್ದರು. ಆದರೆ ದೀಪಾವಳಿಯಲ್ಲಿ ನನ್ನ ಜೊತೆಗೆ ಕೆ. ಎಚ್. ಐ. ನಲ್ಲಿ ಇರುವ ಇಚ್ಛೆಯನ್ನು ಪದೇ ಪದೇ ವ್ಯಕ್ತ ಮಾಡಿದ್ದಾರೆ. ಆದರೆ ಅವರ ಆರೋಗ್ಯ ಅವರಿಗೆ ತಮ್ಮ ಇಚ್ಛೆಯನ್ನು ಪೂರ್ತಿಮಾಡಿಕೊಳ್ಳಲು ಅವಕಾಶವೀಯಲಿಲ್ಲ. ಪುನಃ ಮಾರ್ಚ ೧೯೮೨ ರಂದು ಬರೆದ ಪತ್ರದಲ್ಲಿ "ಸಪ್ಟೆಂಬರಿನಲ್ಲಿ ಕಾಹಿಲೆಬಿದ್ದ ಅವರು ಪುನಃ ಅಕ್ಟೋಬರಿನಲ್ಲಿ ಆಸ್ಪತ್ರೆ ಸೇರಿ ಮೂರು ತಿಂಗಳ ಕೊನೆಗೆ ಅಲ್ಲಿಂದ ಮನೆಗೆ ಬಂದು ಸ್ವಲ್ಪ ಸುಧಾರಿಸಿಕೊಂಡರು. ಹವಾ ಬದಲಾವಣೆಯ ಶಿಫಾರಸು ಆದದ್ದರಿಂದ ಮತ್ತೆ ಕೆ. ಎಚ್. ಐ. ಗೆ ಬಂದು ನನ್ನ ಜೊತೆ ಇರುವ ಇಚ್ಛೆ ವ್ಯಕ್ತ ಮಾಡಿದ್ದರು. ಅನಂತರ ೨೬. ಮಾರ್ಚ ೮೨ ರಂದು ಬರೆದ ಪತ್ರದಲ್ಲಿ ಮೇ ಒಂದನೇ ವಾರದಲ್ಲಿ ಕೆ. ಎಚ್. ಐ. ಗೆ ಬರುವ ವಿಚಾರ ವ್ಯಕ್ತ ಮಾಡಿದ್ದರು. ಆಗ ಅನುಕೂಲವಾಗಲಿಲ್ಲ. ಪುನಃ ಎಪ್ರಿಲ್ ೮೨ ರಲ್ಲಿ ಅವರ ಆರೋಗ್ಯ ಕೆಟ್ಟಿತು. ೭-೪-೮೨ ರಂದು ರಾತ್ರಿಯಲ್ಲಿ ಕುಳಿತು ನನಗೊಂದು ಪತ್ರ ಬರೆದರು. ತಮ್ಮ ಆರೋಗ್ಯದ ಬಗ್ಗೆ ಮತ್ತು ಘಟಪ್ರಭಾದಲ್ಲಿ ವಾಸ ಮಾಡುವ ಬಗ್ಗೆ ಅಲ್ಲ, ಸಹವಾಸದ ಬಗ್ಗೆ, ಪ್ರಕೃತಿಯ ಬಗ್ಗೆ ಹೀಗೆ ಬರೆದಿದ್ದಾರೆ:

"ನನ್ನ ಆರೋಗ್ಯ ಸುಧಾರಿಸಬೇಕಾದಷ್ಟು ಸುಧಾರಿಸಿಲ್ಲ. ಅತಿ ನಿತ್ರಾಣ ಮುಖ್ಯ ವಿಷಯ. ಊಟ ತಿಂಡಿ ರುಚಿಸುವದಿಲ್ಲ. ಸಾಕಷ್ಟು ಹೋಗುತ್ತಿಲ್ಲ. ಕಳೆದ ಸಪ್ಟೆಂಬರ್ ವರೆಗೆ ಟಾಟಾ ಹಾಸ್ಪಿಟಲ್ ಉಪಚಾರ ನಡೆದಿತ್ತು. ಸಪ್ಟೆಂಬರದಲ್ಲಿ ಇಂಜಕ್ಷನ್ ಕೊಡುವ ಮುನ್ನ ನಾನೇ ಟಾಟಾ ಡಾಕ್ಟರರಿಗೆ ನನ್ನ ಸೂಕ್ಷ್ಮ ಪರಿಸ್ಥಿತಿಯನ್ನು ವಿವರಿಸಿದೆ. ಅವರು ಅದೇಕೋ ಉಪೇಕ್ಷಿಸಿ ಇಂಜಕ್ಷನ್ ಕೊಟ್ಟರು. ಕೂಡಲೇ ಬ್ರಾಂಕೈಟಿಸ್ ಅನಂತರ ನ್ಯೂಮೋನಿಯಾಗಳು ಗಂಟು ಬಿದ್ದು ತಿಂಗಳೊಪ್ಪತ್ತು ವಿಲೇ ಪಾರ್ಲೆದ ನಾನಾವತಿ ಆಸ್ಪತ್ರೆ ಸೇರಬೇಕಾಯಿತು. ಕಾರ್ಡಿಯಾಲಾಜಿಸ್ಟರ ಚಿಕಿತ್ಸೆ ಉಪಚಾರಕ್ಕೊಳಗಾಗಿ ಹೃದಯ ನಿಃಶಕ್ತವಾಗತ್ತಿದೆಯೆಂದೂ ಟಾಟಾದ ಇಂಜೆಕ್ಷನ್‌ಗಳನ್ನು ನಿಲ್ಲಿಸಿಬಿಡಬೇಕೆಂದೂ ನಿರ್ಣಯವಾಯಿತು. ಆಸ್ಪತ್ರೆಯಿಂದ ಹಿಂತಿರುಗಿದ ೫ ತಿಂಗಳ ಮೇಲೂ ಕಾರ್ಡಿಯಾಲಾಜಿಸ್ಟರ ಉಪಚಾರವೇನೊ ನಡೆಯುತ್ತಿದೆ. ನಿಜವಾಗಿ ನೋಡಿದರೆ ನನ್ನ ಹೃದಯದ ಪ್ರಾಣ ಬಲಿಷ್ಠವಾದುದು. ಆದರ ಅಶಕ್ತತೆಯ ವಿಶ್ವಸಿತು ಲಕ್ಷಣವೂ ಇರಲಿಲ್ಲ ಈವರೆಗೆ.

"ಈ ವರ್ತಮಾನ ನಮ್ಮ ಟಾಟಾದ ಡಾಕ್ಟರರಿಗೂ ತಿಳಿದು ಅವರು ಮಾರ್ಚ್ ೨೦ರಂದು ಕರೆಸಿ ತಪಾಸು ಮಾಡಿಸಿ ಅವರು ಕೊಡುತ್ತಿದ್ದ (Chemo-theropy) ಇಂಜಕ್ಷನ್ ನಿಲ್ಲಿಸಿ ಬಿಡುವುದೇ ಉಚಿತ ಎಂದರು. [ಅರ್ಥಾತ್ ತಮ್ಮ ತಪ್ಪನ್ನು ಒಪ್ಪಿಕೊಂಡರು.] ಆದರೆ

ತಪ್ಪಿಲ್ಲ. ಇನ್ನು ಯಾವ ಉಪಚಾರವೇ ಇಲ್ಲ, ಈ ಮುಂದಿನ ಗತಿಗೆ ನೀವೇ ಬಾಧ್ಯರು ಎಂದು ಕೈ ಚೆಲ್ಲಿಬಿಟ್ಟರು.

"ಈ ಮಧ್ಯೆ ೭೯ ರಲ್ಲಿ ಅಮೇರಿಕೆಯಲ್ಲಿ ನನಗೆ ಉಪಚಾರ ಕೊಟ್ಟು ಕ್ಯಾನ್ಸರಿನ ಗಂಟುಗಳನ್ನೆಲ್ಲ ನಾಲ್ಕೇ ತಿಂಗಳಲ್ಲಿ ನಿರ್ಮೂಲ ಮಾಡಿದ್ದ ಡಾ. ಜೇಕಬ್ ಅಮೀರರಿಂದ ನನಗೊಂದು ಪತ್ರ ಬಂದಿತ್ತು: 'ನಿಮ್ಮ ಡಾಕ್ಟರರಿಗೆ ಚಿಕಿತ್ಸೆ ಉಪಚಾರದಲ್ಲಿ ಏನಾದರೂ ತೊಡಕು ಬಂದರೆ ನಿರ್ಭೀತಿಯಿಂದ ನನಗೆ ಬರೆಯಿರಿ: ತಕ್ಕ ಮಾರ್ಗದರ್ಶನ ಮಾಡಲು ಯತ್ನಿಸುವೆ' ಎಂದು. ಅದನ್ನು ನಮ್ಮ ಟಾಟಾ ಡಾಕ್ಟರರಿಗೆ ತೋರಿಸಿದೆ. ಅವರು ಅಮೇರಿಕೆಗೆ ಪತ್ರ ಬರೆದಿದ್ದಾರೆ. ಡಾ. ಅಮೀರರಿಂದ ಮಾರ್ಗದರ್ಶನ ಬರುವ ವರೆಗಂತೂ ಯಾವ ಉಪಚಾರವೂ ಇಲ್ಲದೆ ದಾರಿ ಕಾಯಬೇಕಿದೆ. ೧೯೮೦ ರಲ್ಲಿ ಒಂದೂ ಗಂಟು ಇಲ್ಲದ ನನಗೆ ಈಗ ಐದಾರು ಗಂಟುಗಳಿವೆ. ಉಪಚಾರಕ್ಕಾಗಿ ಮಾರ್ಗವಿಲ್ಲ. ಹೃದಯದ ಅಶಕ್ತತೆಗಾಗಿ ಗುಳಿಗೆ ನುಂಗುವುದೊಂದೇ ನಡೆದಿದೆ. ಅದು ಆನುಷಂಗಿಕ. ಮುಖ್ಯ ರೋಗ ಹಾಗೇ ಇದೆ. ನಿಕ್ಕಿಯಾದ ಹವೆ ಬದಲಾಗಿ ಘಟಪ್ರಭಾದಲ್ಲಿದ್ದರೆ ಊಟ ತಿಂಡಿ ಹೋಗಲಾದರೂ ಅನುಕೂಲವಾದೀತೆಂದು ಆಸೆ. ದೇಹದ ಶಕ್ತಿಯಾದರೂ ಕಡಿಮೆಯಾದರೆ ಒಂದು ಮಾರ್ಗ.

ಇನ್ನು ಮೇ ೧೫ ರ ಸುಮಾರಿಗೆ ಅಲ್ಲಿಗೆ ಬರಲು ಪೂರಾ ಒಪ್ಪಿಗೆ. ನಾವು ಇಬ್ಬರು ಬರುವವರು. ನಾನು ಒಬ್ಬನೆ ಇರಲು ಸಾಧ್ಯವೆ ಇಲ್ಲ. ಘಟಪ್ರಭೆಯ ವರೆಗೆ ನಮ್ಮನ್ನು ಸುರಕ್ಷಿತ ಮುಟ್ಟಿಸಲು ಒಬ್ಬ ಮಗನನ್ನು ಕರೆತರಬೇಕಾದೀತು. ನಿಮ್ಮಂತೆ ನಮಗೂ ಆ ಜಾಗದ ಆಕರ್ಷಣೆ ಇದೆ. ಡಾ. ವೈದ್ಯರಿಂದೇನಾದರೂ ಮಾರ್ಗದರ್ಶನ ದೊರೆತರಂತೂ ಬಂಗಾರವೇ. ನೀನು ಒಬ್ಬನೇ ಬರುವವ ಎಂದಮೇಲೆ ನಾವು ಮೂವರೂ ಒತ್ತಟ್ಟಿಗೆ ಇರುವಂತೆ ಏರ್ಪಾಡು ಮಾಡು. ಮೇ ೧೧ ರಿಂದ ಜೂನ್ ೮-೧೦ ರ ವರೆಗೂ ಪರವಾ ಇಲ್ಲ. ಬಾಡಿಗೆ ಇತ್ಯಾದಿ ನನ್ನ ಲೆಕ್ಕಕ್ಕೆ: ಡಾ. ಕೇಸಕರರಿಗೂ ನನ್ನದು ಅಲ್ಪ ಸ್ವಲ್ಪ ಪರಿಚಯ. ನನ್ನ ಕಾರವಾರದ ಪುಸ್ತಕಕ್ಕೆ ಅವರೆರಡು ಚಿಕ್ಕ ಮುನ್ನುಡಿ ಬರೆದಿದ್ದಾರೆ. ೩-೪ ವರ್ಷಗಳ ಹಿಂದೆ. ಇದಕ್ಕೆ ಕೂಡಲೇ ಉತ್ತರ ಬರೆಯಲು ಸಾಧ್ಯವಾದರೆ ಉತ್ತಮ. ನಿನ್ನ ಕೈಲಿದ್ದ ಕಾರ್ಯಕಲಾಪ ಕೈಗೂಡಲಿ. ನಿನ್ನೊಲವಿನ ಕೃಷ್ಣಕುಮಾರ." ೭-೪-೮೨ ರ ನಂತರ ೫-೫-೮೨ ರ ಅನಂತರ ಒಮ್ಮೆಲೆ ನಾನು ಬರೆದ ಪತ್ರಕ್ಕೆ ಒಂದು ಕಾರ್ಡು ಅವರಿಂದ ಬಂದಿತು. ಇದನ್ನು ಲೇಖನದ ಕೊನೆಯಲ್ಲಿ ಉಲ್ಲೇಖಿಸಿದ್ದೇನೆ. ಅಂತೂ ನಾವಿಬ್ಬರೂ ಕರ್ನಾಟಕ ಆರೋಗ್ಯ ಧಾಮದಲ್ಲಿ ಕೂತಿರಲು ಸಾಧ್ಯವಾಗಲೇ ಇಲ್ಲ. ಇದಕ್ಕಾಗಿ ನನಗೆ ಅತೀವ ದುಃಖ ಹಳಹಳಿ. ಕೂಡಿದ್ದಾಗ ಅವರು ನನ್ನೆದುರು ಏನೇನು ಹೇಳುತ್ತಿದ್ದರೋ ಅದಕ್ಕೆ ನಿಯತಿ ಅವಕಾಶವನ್ನೀಯಲಿಲ್ಲ. ನನ್ನ ಜೀವನದಲ್ಲಿ ಇದೊಂದು ಕೊರಗು ಸದಾ ಕಾಡುತ್ತಲೇ ಇರುವುದು. ನರನರಗಳಲ್ಲಿ ಕನ್ನಡ, ಕರ್ನಾಟಕ ಮಿಡಿಯುತ್ತಿದ್ದ ನೊಂದ ಕೃಷ್ಣಕುಮಾರರಿಗೆ ಯೋಗ್ಯ ಮರಣೋತ್ತರ ಸ್ಮಾರಕವೊಂದು ಏನಾದರೂ ನಿರ್ಮಾಣವಾದರೆ ಒಳ್ಳೆಯದು. ಈ ದಿಸೆಯಲ್ಲಿ ಅವರ ಪತ್ನಿ ಸಾವಿತ್ರಿಬಾಯಿ ವಿಚಾರ ಮಾಡುತ್ತಿದ್ದಾರೆ. ಅವರ ವಿಚಾರ ರೂಪ ತಾಳಲಿ. ಅದಕ್ಕೆ ಕನ್ನಡಿಗರು ನೆರವಾಗದೇ ಇರಲಾರರೆಂದು ನನ್ನ ವಿಶ್ವಾಸ.

ಕೃಷ್ಣಕುಮಾರ ಕಲ್ಲೂರ ಅವರ ಕೊನೆಯ ಕವನಗಳು

(ದಿವಂಗತ ಕೃಷ್ಣಕುಮಾರರ ಕ್ಷಮಾಯಾಚನೆಯೊಂದಿಗೆ)

* ಮಾನವನು ಏರದಾ ಊರ್ಧ್ವಗಳೆ ಇಲ್ಲಾ!
ಅವನು ಇಳಿಯದ ಅಧಃಪಾತವೂ ಇಲ್ಲಾ!
ಎಷ್ಟೆಷ್ಟೊ ಎವರೆಸ್ಟುಗಳ ಏರಿ ಸಹಿತಾ
ಚ್ಯಾಲೇಂಜರ**ದ ಆಳವನೆ ಮೀರಿದಾತಾ,
ಮಾಡಿದ ಶತಕೃತ್ಯಕೆಲ್ಲ ಏರುಗಳು,
ನಾಚಿ ತಲೆ ಬಾಗಿದವು ಜಗದ ಮೇರುಗಳು!!

* ಇದು ಕೇವಲ ವೈಯಕ್ತಿಕ, ಪ್ರಕಟನೆಗಲ್ಲ. ಹಾಗಾದರೆ ನನ್ನ ಸಾಹಿತ್ಯ ಸಂನ್ಯಾಸ ಭಂಗವಾದೀತು. -ಕೃ. ೧೬-೬-೮೧

** Challenger deep – Earth's lowest point in the Pacific Ocean.

*

ಏರಿಕೆಗೆ ಹವ್ಯಾಸ ಎತ್ತುಗಡೆ ಬೇಕು!
ಅಥವು ಪತನದ ಪಥವು, ಜಾರಿದರೆ ಸಾಕು!!

ಸಿದ್ಧಾರ್ಥಿ?

('ಮಾನವನು ವಿರಮಿ ಊರ್ಧ್ವಗಳಿ ಇಲ್ಲಾ' ಎಂಬ ಕಳೆದ ಪತ್ರದಲ್ಲಿ ಬರೆದ ಕವನದ ಪೂರ್ವ ಪೀಠಿಕೆ ಈ 'ಸಿದ್ಧಾರ್ಥಿ'. ೧೯೭೯ ರಲ್ಲಿ ಸಿದ್ಧಾರ್ಥಿ ನಾಮ ಸಂವತ್ಸರದಲ್ಲಿ ಬರೆದುದು)

ಒಳ್ಳಿತೆಂಬುದು ಜಗದಿ ಒಟ್ಟೊಟ್ಟ ನಿಂತಿರಲು
ಅದನು ಕಡಿಗಣಿಸೆ ಮನುಜ,
ಅದೆ ವಿಪರ್ಯಾಸಗೊಳೆ ಯುಗಯುಗದಿ
ಅವತರಿಸಿದಾಧುನಿಕ ದನುಜ!
ಕಂಸ ರಾವಣರೆಲ್ಲ ಕ್ಷುಲ್ಲಕರು ಎನಿಸ್ಯಾರು
'ಇದಿ, ಮುಸಲೋನಿ, ಹಿಟ್ಲರರ' ಮುಂದು
ಜಗದ ಉದ್ಧಾರಕನೆ ಅಂಜಿ ಅಡಗಿದನೇನು
ತನ್ನ ಯೋಗಕ್ಷೇಮ ತನಗೆ ಸಾಕೆಂದು!!

*

ಗಾಂಧಿ-ರವೀಂದ್ರ-ಬಿಟ್ರ್ಯಾಂಡರೆಲ್ಲ
ನುಡಿದ ಸೊಲ್ಲೇ ಕೇಳಸಿಗುವದಿಲ್ಲ!
ಸಿದ್ಧಾರ್ಥನಿದ್ದರೀ ಸಿದ್ಧಾರ್ಥಿಯಲ್ಲಿ.
ದಗ್ಧನಾಗುತ್ತಿದ್ದ, ದಾವಾಗ್ನಿಯಲ್ಲಿ!!

(ಅಸ್ವಗ್ನಿಯಲ್ಲಿ) ಕೃ,
೪-೮-೭೯

ಕೆಲವು ಭಾಷಾಂತರಗಳು

೧

ಮಲಗಿದೆನ್ನಯ ನುಡಿಯ ಒಳನುಗ್ಗಿ
ಚೇತರಿಸಿ
ತನ್ನೆಲ್ಲ ಚೈತನ್ಯ ತುಂಬಿ ಸಂಜೀವಿಸುತ.
ಪಂಚಕರಣ ಪ್ರಾಣ-ಚಿತ್ರಗಳ ಸತ್ವವೆನೆ
ವ್ಯಾಪಿಸಿದೆ, ಪರತತ್ವ ರೂಪದ ಪರ ಪ್ರದೀಪ!

ಮೂಲ

ಯೋಂತಃ ಪ್ರವಿಶ್ಯ ಮಮ ಚಿತ್ತ ಮಿಮಾಂ
ಪ್ರಸುಪ್ತಾಮ್
ಸಂಜೀವಯತ್ಯಖಿಲ ಶಕ್ತಿಧರಃ ಸ್ವಧಾಮ್ನಾ
ಅನ್ಯಾಶ್ಚ ಹಸ್ತ ಚರಣ ಶ್ರವಣತ್ವಗಾದೀನ್
ಪ್ರಾಣಾಂತವೊ ಭಗವತೆ, ಪುರುಷಾಯ
ತುಭ್ಯಮ್!
(ಯಜುರ್ವೇದ ಸೂಕ್ತ)

೨

ರೂಪರಹಿತನ ನಿನ್ನನೇಕ ರೂಪಗಳಲ್ಲಿ
ಧ್ಯಾನಿಸಿದ್ದೊಂದು ಪಾಪ!!
ಸ್ತುತಿನುತಿಗಳನು ಮಾಡಿ ನಿನ್ನ ನಿರ್ವಚ-
ನೀಯತೆಯ ನೆನೆಯದೊಂದು ಪಾಪ!!
ನಿನ್ನ ಸರ್ವವ್ಯಾಪ್ತಿಯನು ಮರೆದು
ತೀರ್ಥಯಾತ್ರೆಗೈದುದೊಂದು ಪಾಪ!
ಮತಿಗೆಟ್ಟುಮಾಡಿದೀ ಈ ಮೂರು ಪಾಪ-
ಗಳನ್ನು ಪರಿಹರಿಸು ವಿಶ್ವರೂಪ!!

ಮೂಲ§

ರೂಪಂ ರೂಪವಿವರ್ಜಿತಶ ಧ್ಯಾನೇನ
ಯತ್ ಕಲ್ಪಿತಮ್ ।
ಸ್ತುತ್ಯಾನಿರ್ವಚನೀಯತಾಖಿಲಗುರೋಃ
ದೂರೀಕೃತಾಯನ್ಮಯಾ॥
ವ್ಯಾಪ್ತಿತ್ವಂಚನಿರಾಕೃತಂ ಭಗವತೋ
ಯತ್ತೀರ್ಥ ಯಾತ್ರಾದಿನಾ।
ಕ್ಷಂತವ್ಯಂ ಜಗದೀಶ, ಯದ್ವಿಕಲತಾ
ಪಾಪತ್ರಯಂ ಮತ್‌ಕೃತಮ್॥
(ಅಪ್ಪಯ್ಯ ದೀಕ್ಷಿತರು)

೩

ಜತೆಗೂಡಿ ನಡೆಯೋಣ, ಮಾತಾಡೋಣ,
ಮನದಾಳವರಿಯೋಣ,
ಒಂದೆ ಗುರಿ ಹೃದಯ ಬಗೆಗಳು ಒಂದೆ,
ಬಾಳನೇ ಒಂದಾಗಿಸೋಣ

ಮೂಲ

ಸಂಗಚ್ಛಧ್ವಂ ಸಂ ವದಧ್ವಂ
ಸಂ ವೊ ಮನಾಂಸಿ ಜಾನತಾಂ
ಸಮಾನೀ ವ ಆಕೂತಿಃ ಸಮಾನಾ
ಹೃದಯಾನಿ ವಃ (ಋಗ್ವೇದ)

§ ಮೂಲಗಳೆಲ್ಲವೂ ದೇವನಾಗರಿ ಲಿಪಿಯಲ್ಲಿ ಬರೆಯಲ್ಪಟ್ಟವೆ. ನನಗೆ ಬಂದ ಪತ್ರಗಳ ಜೊತೆಯಲ್ಲಿ ಕಳಿಸಿದ ಕವನಗಳಿವು.

೪

ದೇಗರಿದ್ದಾನೆಂದವರನ್ನು
ಅರ್ಚಿಸಿದರ್ಚಿಸೇವು ।
ಮಕ್ಕಳನು ಮತ್ತೆ ಮಹದಾತ್ಮರನು
ತಪ್ಪದೇ ವಂದಿಸುವೆವು ॥
ಮನುಜ ಧರ್ಮಕ್ಕಿಂತ ಇಲ್ಲ ಬೇರೊಂದು
ಧರ್ಮ ।
ಇದರ ತಿಳುವಳಿಕೆಯಲಿ ಅಡಗಿಹುದು
ಬಾಳ ಮರ್ಮ ॥

ಮೂಲ

ನ ಮಾನುಷಾತ್ ಪರೋ ಧರ್ಮಃ !
ಯ ಜಾನು ದೇವಾನ್ ಯದಿ
ಶಕ್ನುಯಾಮಃ ।
ನಮೊ ಮಹದ್ಭ್ಯೋನ್ನಮಃ ಅರ್ಭಕೇಭ್ಯೋ ॥

೫

ಎಲ್ಲಿ ಮನವಳುಕದೆಯೆ ತಲೆಯೆತ್ತಿ,
ನಿಲಬಹುದೋ,
ತಿಳಿ ತಿಳಿವು ಜನತೆಯ ವಿಭಿನ್ನತೆಯ,
ಅಳಿಸಲುಹುದೋ,
ಸತ್ಯವಾಕ್ಯಕೆ ಎಲ್ಲ ಮಾನವನ ಸಹೃದಯ,
ನಿತ್ಯ ಸತ್ಯಾಶ್ರಯುವದೋ,
ಯತ್ನಶೀಲತೆ ಸತತ ಪೂರ್ಣತೆಯ,
ಎಲ್ಲೆಯನೆಲ್ಲ ಕೈಗೂಡಿಸುವುದೋ,
ಹಳೆಯ ಪಳಮೆಗಳಲ್ಲಿ ಕುಸಿಯದ
ವಿವೇಕಕ್ಕೆ ಎಲ್ಲಿನಿತು ಬಾಧೆಯಿರದೋ
ಎಲ್ಲಿ ಮಾನವ ಮನಕೆ ನಿನ್ನ ನಿರ್ದೇಶನದಿ,
ಸಂಸ್ಕೃತಿಗೆ ಎಡೆಯಿರುವುದೋ
ಅಲ್ಲಿ, ಅಂತಹ ಮುಕ್ತ ಸ್ವರ್ಗದಲ್ಲಿ
ಓ ಪಿತನೆ, ನನ್ನ ನಾಡೆಚ್ಚರಿಯಲಿ !

(ಇದು ರವೀಂದ್ರರ Where the mind is without fear and the head is held high.........
Into that Heaven of FREEDOM,
My Father, Let my Country AWAKE ! ಎಂಬುದರ ಅನುವಾದ.

ನಿನ್ನ
ಕೃಷ್ಣಕುಮಾರ

ಈ ಕವನಗಳು ಅವರ ಹೈಸ್ಕೂಲಿಗಳು ಎಂತು ಯೋಚಿಸುತ್ತಿದ್ದವೆಂಬುದನ್ನು ಎತ್ತಿತೋರಿಸುತ್ತವೆ

ಸತ್ಯದ ಸನ್ಮಿತ್ರನೆಂದರೆ ಸಮಯ. ಆದರೆ ಪೂರ್ವಗ್ರಹ ಶತ್ರು. ನಮ್ರತೆ ಸತ್ಯದ ಬಾಳ ಗೆಳತಿ.
—ಚಾರ್ಲ್ಸ್ ಕೋಲ್ಟನ್

* * *

ಸುಳ್ಳಿಗೆ ಬಚ್ಚಿಟ್ಟುಕೊಳ್ಳುವುದು ಅನಿವಾರ್ಯ. ಆದರೆ ಸತ್ಯಕ್ಕೆ ಮಾತ್ರ ನಗ್ನನಾಗಿರುವುದೇ ಹೆಚ್ಚು ಪ್ರಿಯ.
—ಥಾಮಸ್ ಫುಲರ್

* * *

ಒಬ್ಬ ಜಾಣನೂ ಮುಟ್ಠಾಳನೂ ಕಲಾಶಾಲೆಯೊಂದರಲ್ಲಿ ಸಂಧಿಸಿದರು. ಇಬ್ಬರೂ ಒಂದೊಂದು ಚಿತ್ರ ಬರೆಯುವುದೆಂದೂ ಒಬ್ಬ ನಿರ್ಣಾಯಕನನ್ನು ಕರೆದು 'ಯಾವುದು ಒಳ್ಳೆಯ ಚಿತ್ರ ?' — ಎಂದು ಕೇಳುವುದೆಂದೂ ಮಾತಾಡಿಕೊಂಡರು.

ಜಾಣ ಒಂದು ಸುಂದರ ಹೆಣ್ಣಿನ ಚಿತ್ರವನ್ನು ತಯಾರಿಸಿದ. ಕೂಡಲೇ ಮುಟ್ಠಾಳ ಎದ್ದು ಆ ಚಿತ್ರಕ್ಕೆ ಮೀಸೆ ಇಟ್ಟ.

ನಿರ್ಣಾಯಕನನ್ನು ಕರೆದು ತೋರಿಸಿದರು.

"ಆಹಾ ! ಮೀಸೆ ಸುಂದರವಾಗಿದೆ !"......
—ಬಿ. ಜಿ. ರಾಮಚಂದ್ರ

ದುರ್ವಾಸನೆ

ಡಾ. ಕೆ. ಎಂ. ಧ್ರುವಕುಮಾರ

ಅವರು ಸುಮಾರು ಐವತ್ತು ವರ್ಷ ವಯಸ್ಸಿನವರು. ತಾವು ಒಂದು ಕಾಲೇಜಿನಲ್ಲಿ ಪ್ರಾಧ್ಯಾಪಕರೆಂದು ಪರಿಚಯ ಮಾಡಿಕೊಂಡರು. ಅವರ ಹಿಂದೆ ಒಬ್ಬ ಹುಡುಗ. ಅವನನ್ನು ತಮ್ಮ ಮಗ ಮೋಹನ ಎಂದು ಪರಿಚಯಿಸಿದರು. ಅವನಿಗೆ ದುರ್ವಾಸನೆಯ ಕಾಯಿಲೆಯೆಂದು ಹೇಳಿದರು. ತನ್ನಿಂದ ಯಾವುದೋ ರೀತಿಯ ದುರ್ವಾಸನೆ ಬರುವುದೆಂದು ಮತ್ತು ಇದರಿಂದ ಎಲ್ಲರೂ ಮೂಗು ಮುಚ್ಚಿಕೊಂಡು ಒಂದು ತರಹ ಮುಖ ಮಾಡುತ್ತಾರೆ ಎಂದು ಅವನು ಹೇಳುತ್ತಾನೆ; ಆದರೆ ತಮಗೆಲ್ಲ ಯಾವ ವಾಸನೆಯೂ ಗೊತ್ತಾಗುವುದಿಲ್ಲ ಎಂದರು. ವೈದ್ಯರ ಬಳಿ ಕರೆದೊಯ್ದಾಗ ಅವರು ಯಾವ ಕಾಯಿಲೆಯೂ ಇಲ್ಲವೆಂದರು. ಚರ್ಮ ಮತ್ತು ಬೆವರಿನಿಂದ ಸಹ ದುರ್ವಾಸನೆ ಬರುತ್ತದೆಂದು ಅವನು ಹೇಳಿದುದರಿಂದ ಇಬ್ಬರು ಚರ್ಮ ರೋಗ ತಜ್ಞರ ಬಳಿ ಕರೆದೊಯ್ದರು. ಅವರೂ ಎಲ್ಲ ಸರಿಯಾಗಿದೆಯೆಂದರು. ಕಡೆಗೆ ಅವರ ಸಲಹೆಯ ಮೇರೆಗೆ ಸರ್ಕಾರಿ ಆಸ್ಪತ್ರೆಯ ಮನೋರೋಗ ತಜ್ಞರ ಬಳಿ ಕರೆದೊಯ್ದರು. ಅವರು ಪರೀಕ್ಷಿಸಿ ಒಂದೆರಡು ರೀತಿಯ ಮಾತ್ರೆಗಳನ್ನು ಬರೆದುಕೊಟ್ಟರು. ಅವನ್ನು ತೆಗೆದುಕೊಂಡ ನಂತರ ಕೊಂಚ ವಾಸಿಯಾಯಿತು. ಮಾತ್ರೆಗಳನ್ನು ನಿಲ್ಲಿಸಿದ ನಂತರ ತೊಂದರೆ ಮತ್ತೆ ಪ್ರಾರಂಭವಾಯಿತು. ಸರ್ಕಾರಿ ಆಸ್ಪತ್ರೆಯಲ್ಲಿ ಬಹಳ ಕಾಯಬೇಕಾಗುವುದೆಂದು ಅಲ್ಲಿಗೆ ಮತ್ತೆ ಹೋಗದೆ ನನ್ನ ಬಳಿಗೆ ಬಂದರು.

ತಂದೆಯನ್ನು ಕಳುಹಿಸಿ ವಿಷಯವೇನೆಂದು ಮೋಹನನನ್ನು ಕೇಳಿದೆ. ಅವನು ನಾಲ್ಕು ತಿಂಗಳಿನಿಂದಲೂ ಪೂರ್ತಿ ದೇಹದಿಂದ ವಾಸನೆ ಬರುತ್ತಿದೆಯೆಂದನು. ಕೂದಲು, ಮೂಗು, ಚರ್ಮ ಎಲ್ಲ ಕಡೆಯಿಂದಲೂ ಒಂದೇ ತರಹ ವಾಸನೆ ಬರುತ್ತದೆ ಎಂದನು. ನನಗಂತೂ ಯಾವ ವಾಸನೆಯೂ ತಿಳಿಯಲಿಲ್ಲ. ಜನರು ಇವನ ಹತ್ತಿರ ಬಂದ ಕೂಡಲೆ ಮೂಗನ್ನು ತೀಡುವುದು ಮೂಗನ್ನು ಮುಚ್ಚಿಕೊಳ್ಳುವುದು ಅಥವಾ ಎದ್ದು ದೂರ ಹೋಗುವುದು ಇತ್ಯಾದಿ ಮಾಡುತ್ತಾರೆಂದು ಬೇಸರ ಪಟ್ಟನು. ತನ್ನ ಬಟ್ಟೆ, ಶಾಲೆಯ ಚೀಲ, ಕಾಲು ಚೀಲಗಳಿಂದಲೂ ವಾಸನೆ ಬರುವುದೆಂದು ಹೇಳಿದನು. ತನಗೆ ಜೀವನವೇ ಬೇಸರವಾಗಿದೆ ಎಂದನು. ಪ್ರತಿದಿನವೂ

ಸಾಬೂನಿನಿಂದ ಚೆನ್ನಾಗಿ ತೊಳೆದು ಸ್ನಾನ ಮಾಡಿದರೂ ದುರ್ವಾಸನೆ ಹೋಗದು. ಯಾವಾಗಲೂ ಶುಭ್ರವಾದ ಬಟ್ಟೆಗಳನ್ನೇ ಧರಿಸುವನು. ಆದರೂ ಅವುಗಳಿಂದ ವಾಸನೆ ಬರುವುದೆಂದು ಹೇಳುತ್ತಾನೆ. ಬಹುಶಃ ಈ ದುರ್ವಾಸನೆ ಬಟ್ಟೆ ಒಗೆದರೂ ಹೋಗಲಾರದಂತಹ ಅಂಟು ವಾಸನೆಯಾಗಿರಬಹುದೆಂದು ಅವನಿಗನಿಸಿತು. ಈ ದುರ್ವಾಸನೆ ಅವನಿಂದಲೇ ಬರುತ್ತಿದೆಯೋ ಎಂಬ ಪ್ರಶ್ನೆಗೆ ತಾನೆಲ್ಲಿ ಹೋದರೆ ಅಲ್ಲಿ ದುರ್ವಾಸನೆ ಇರುವುದರಿಂದ ಅದು ತನ್ನಿಂದ ಬರುತ್ತಿರುವುದರಲ್ಲಿ ಅನುಮಾನವೇ ಇಲ್ಲ ಎಂದನು. ಅದು ಯಾವ ರೀತಿಯ ದುರ್ವಾಸನೆಯೆಂದು ವರ್ಣಿಸಲು ಹೇಳಿದೆ. ಅವನ್ನು ವರ್ಣಿಸಲು ಕಷ್ಟವೆಂದೂ ಮತ್ತು ಅದು ಒಂದು ರೀತಿಯ ಕೊಳೆತ ಪದಾರ್ಥಗಳ ಅಥವಾ ಕಸದ ತರಹದ ವಾಸನೆಯೆಂದನು. ಸಾಧಾರಣವಾಗಿ, ಭಯ, ಚಿಂತೆ ಇತ್ಯಾದಿಗಳ್ಯಾವುವೂ ಇಲ್ಲವೆಂದೂ ಆದರೆ ಯಾರಾದರೂ ಮೂಗು ಹಿಡಿದರೆ ಒಂದು ರೀತಿಯ ಬೇಸರವಾಗುವುದು ಎಂದನು. ಅದಿಲ್ಲದಿದ್ದರೆ ಮನಸ್ಸು ಆರಾಮವಾಗಿರುತ್ತದಂತೆ. ನಿದ್ದೆ, ಹಸಿವು ಕೂಡ ಚೆನ್ನಾಗಿಯೇ ಇರುವುದು. ಮೋಹನ ಸಣಕಲ ಹುಡುಗ. ಬಹು ಗಂಭೀರ ಸ್ವಭಾವದವನು ಮತ್ತು ಮಿತಭಾಷಿ. ಮಾತನಾಡಲು ಸಂಕೋಚ, ಕೇಳಿದ್ದಷ್ಟಕ್ಕೆ ಮಾತ್ರ ಉತ್ತರಿಸುವವ. ಬಲು ಸೂಕ್ಷ್ಮ ಮತ್ತು ಮೃದು ಸ್ವಭಾವದ ಹುಡುಗ. ಕೈಗಳು ಸ್ವಲ್ಪ ನಡುಗುತ್ತಿದ್ದವು. ತನ್ನ ನಡೆ, ನುಡಿಗಳ ಮೇಲೆ ಬಹಳ ಹತೋಟಿಯಿದ್ದಿತು. ಶಾರೀರಿಕ ಪರೀಕ್ಷೆಯಲ್ಲಿ ಯಾವ ಕುಂದೂ ಕಾಣ ಬರಲಿಲ್ಲ.

ಅವನ ಶರೀರದಿಂದ ಯಾವ ವಾಸನೆಯೂ ಬರುತ್ತಿರುವಂತೆ ಕಾಣಲಿಲ್ಲ. ಟಿ. ಎ. ಟಿ. ಪರೀಕ್ಷೆಯಲ್ಲಿ ಅವನು ಬಹಳ ಹತೋಟಿಯಿಂದ ಎಲ್ಲಕ್ಕೂ ಉತ್ತರಿಸುತ್ತಿದ್ದಾನೆ ಎಂದು ತಿಳಿಯಿತು. ಆದುದರಿಂದ ಈ ಪರೀಕ್ಷೆಯ ಫಲಿತಾಂಶವು ಸರಿಯಾಗಿರುವುದಿಲ್ಲ. ಇದು ಶಾರೀರಿಕ ಕಾಯಿಲೆಯಲ್ಲ. ಒಂದು ರೀತಿ ಮಾನಸಿಕ ಅಸ್ವಾಸ್ಥ್ಯ. ಕೇವಲ ಮಾತ್ರೆಗಳ ಸೇವನೆಯಿಂದ ಪೂರ್ಣವಾಗಿ ವಾಸಿಯಾಗುವುದಿಲ್ಲವೆಂದೂ, ಮನೋವಿಶ್ಲೇಷಣೆಯೇ ಇಲ್ಲಿ ಮುಖ್ಯವಾದ ಚಿಕಿತ್ಸೆಯೆಂದೂ ಹೇಳಿದೆನು. ಮೋಹನ ಮತ್ತು ಅವನ ತಂದೆ ಇಬ್ಬರೂ ಇದಕ್ಕೆ ಒಪ್ಪಿದರು. ಸರ್ಕಾರಿ ಆಸ್ಪತ್ರೆಯ ಮನೋರೋಗ ತಜ್ಞರು ಬರೆದುಕೊಟ್ಟ ಮಾತ್ರೆಗಳನ್ನೇ ಬರೆದುಕೊಟ್ಟೆನು.

ಒಂದು ವಾರದ ನಂತರ ಮೋಹನ ಗೆಲುವಿನಿಂದ ಬಂದಿದ್ದ. ಮಾತ್ರೆಗಳನ್ನು ಪ್ರಾರಂಭಿಸಿದ ಕೂಡಲೆ ಅವನ ತೊಂದರೆ ಹೊರಟು ಹೋಗಿತ್ತು. ಆದರೆ ಈಗಲೇ ಚಿಕಿತ್ಸೆ ನಿಲ್ಲಿಸಿಬಿಟ್ಟರೆ ಮತ್ತೆ ದುರ್ವಾಸನೆ ಬರುವುದೆಂದು ಈಗಾಗಲೇ ಅವನು ಸ್ವತಃ ಅನುಭವದಿಂದ ಮನಗಂಡಿದ್ದನು. ಮಾತಿನ ಚಿಕಿತ್ಸೆ ಅಥವಾ ಮನೋವಿಶ್ಲೇಷಣೆ ಎಂದರೆ ಹೆಚ್ಚಾಗಿ ಮಾತನಾಡಬೇಕು. ಆದರೆ ಮೋಹನ ಏನು ಹೇಳಬೇಕೆಂದು ತೋಚದೆ ಒದ್ದಾಡಿದನು. ಮಾತನಾಡದೆ ಇದ್ದರೆ ಕಾಲವ್ಯಯ ಮಾಡಿದಂತೆ, ತಂದೆಯ ಹಣ ಖರ್ಚು ಮಾಡಿ ಕಾಲವ್ಯಯ ಮಾಡಲು ಅವನಿಗಿಷ್ಟವಿಲ್ಲ. ಆದುದರಿಂದ ಯಾವಾಗಲೂ ಏನಾದರೂ ಹೇಳಲೇಬೇಕೆಂದು ಚಡಪಡಿಸುತ್ತಿದ್ದನು. ಮನೋವಿಶ್ಲೇಷಣೆಯಲ್ಲಿ ಈ ಸಮಸ್ಯೆ ಆಗಿಂದಾಗ್ಗೆ ಏಳುತ್ತಿರುತ್ತದೆ. ನಾವು ಮಾತನಾಡುವುದಕ್ಕೆ ಹಣ ಕೊಡುತ್ತೇವೆ. ಆದರೆ ಸುಮ್ಮನಿರುವ ಕಾಲಕ್ಕೂ ಅನಾವಶ್ಯಕವಾಗಿ ತೆರುತ್ತೇವೆ ಎಂದು ರೋಗಿಗಳು ಚಡಪಡಿಸುತ್ತಾರೆ. ಈ ರೀತಿ ಚಡಪಡಿಸುವಷ್ಟು ಸಮಯ ಇನ್ನೂ ಹೆಚ್ಚು ವ್ಯಯವಾಗುತ್ತದೆ. "ಸಮಾಧಾನದಿಂದ ಮನಸ್ಸಿಗೇನು ಬರುತ್ತದೋ ಅದನ್ನು ಹೇಳು. ಕಾಲವನ್ನು ತುಂಬಲು ಏನೇನೋ ಒದರುವುದು ಬೇಡ. ಎಷ್ಟು ಮಾತನಾಡಿದ್ದೀಯೋ ಎಂಬುದು ಮುಖ್ಯವಲ್ಲ. ಏನು ಮಾತನಾಡಿದ್ದೀಯ ಎಂಬುದು ಮುಖ್ಯ. ಕೆಲವು ಗಳಿಗೆಗಳು ಮನಸ್ಸಿಗೆ ಏನೂ ಬರದಿದ್ದರೂ ಅದರಲ್ಲೇನೂ ತಪ್ಪಿಲ್ಲ" ಎಂದು ಮೋಹನನಿಗೆ ಹೇಳಿದೆ. ತದನಂತರ ಅವನು ಚಡಪಡಿಸುವುದನ್ನು ಕಡಿಮೆ ಮಾಡಿದ. ಈ ಘಟ್ಟದಲ್ಲಿ ಕೆಲವು ಪ್ರಶ್ನೆಗಳನ್ನು ಅವನ ಮುಂದಿಟ್ಟೆ.

(೧) ಈ ದುರ್ವಾಸನೆ ಅವನಿಗೆ ಮಾತ್ರ ಗೊತ್ತಾಗುತ್ತಿದ್ದು ಬೇರೆಯವರ್ಯಾರೂ ಇದ

ಬಗ್ಗೆ ದೂಷಿಸಲಿಲ್ಲವೇಕೆ?

(೨) ಜನ ಮೂಗನ್ನು ತೀಡಿಕೊಳ್ಳುತ್ತಿದ್ದರೆ ಅದು ಇವನಿಂದ ದುರ್ವಾಸನೆ ಬರುತ್ತಿದೆ ಯೆಂಬ ಕಾರಣದಿಂದಲೇ ಎಂದು ಹೇಗೆ ಗೊತ್ತು ಮತ್ತು ಮೂಗು ತೀಡಿಕೊಳ್ಳುವುದು ಅದರ ಅಭ್ಯಾಸ ಬಲವೂ ಆಗಿರಬಹುದೇ?

(೩) ನಾವು ರಾತ್ರಿ ಒಬ್ಬರೇ ಭಯದಿಂದ ಹೋಗುತ್ತಿದ್ದಾಗ ಯಾರೋ ಕೂಗಿದಂತಾಗಿ ಬೆಚ್ಚಿ ಬೀಳುವುದು ಸಾಮಾನ್ಯ ಅನುಭವ. ತಿರುಗಿ ನೋಡಿದರೆ ಯಾರೂ ಇರುವುದಿಲ್ಲ. ಹಾಗಾದರೆ ನಮ್ಮ ಕಣ್ಣು ನೋಡಿದುದು ಮತ್ತು ಕಿವಿ ಕೇಳಿದುದು ಸುಳ್ಳೇ? ಖಂಡಿತ ಇಲ್ಲ. ನಮ್ಮ ಮನಸ್ಸು ಇಂದ್ರಿಯಗಳ ಮೇಲೆ ಪ್ರಬಲವಾದ ಪರಿಣಾಮ ಬೀರುವುದು. ನಾವು ಯಾರೋ ಬರುವರೆಂಬ ಭಯದಿಂದಿದ್ದರೆ ಯಾರೋ ಬಂದಂತಾಗುತ್ತದೆ. ಮನಸು ಕಣ್ಣಿಗೆ ಕಾಣುವಂತೆ ಮತ್ತು ಕಿವಿಗೆ ಕೇಳುವಂತೆ ಮಾಡುತ್ತದೆ. ಹಾಗೆಯೇ ಮೋಹನನಿಗೆ ತನ್ನಿಂದ ದುರ್ವಾಸನೆ ಬರುತ್ತಿದೆಯೆಂಬುದು ಮನಸ್ಸಿನಲ್ಲಿರುವುದರಿಂದ ಅವನ ಮೂಗು ದುರ್ವಾಸನೆಯನ್ನು ಗ್ರಹಿಸುತ್ತಿರಲೂಬಹುದೇ?

(೪) ದುರ್ವಾಸನೆ ಅವನ ಪ್ರಕಾರ ಎಂಥದರಿಂದ ಬರುತ್ತದೆ. ಕೆಟ್ಟ ಪದಾರ್ಥಗಳಿಂದಲೊ ಒಳ್ಳೆಯ ಪದಾರ್ಥಗಳಿಂದಲೊ?

(೫) ಈ ದುರ್ವಾಸನೆ ಅವನಿಗೆ ತಿಳಿದ ಯಾವುದಾದರೂ ದುರ್ವಾಸನೆಗೆ ಹೋಲುತ್ತದೆಯೇ?

(೬) ಅವನಿಗೆ ತಿಳಿದಂತೆ ಈ ದುರ್ವಾಸನೆ ಯಾವುದರಿಂದ ಬರುತ್ತದೆ?

(೭) ದುರ್ವಾಸನೆ ಇದೇ ರೀತಿ ಹೆಚ್ಚುತ್ತಾ ಹೋದಲ್ಲಿ ಏನಾಗಬಹುದೆಂದು ಅವನಿಗನಿಸುವುದು?

ತನ್ನಿಂದಲೇ ದುರ್ವಾಸನೆ ಬರುತ್ತಿದೆಯೆಂದು ಮತ್ತು ಅದಕ್ಕೋಸ್ಕರವೇ ತಾವು ಮೂಗು ತೀಡಿಕೊಳ್ಳುತ್ತಿರುವುದೆಂದು ಇದುವರೆಗೂ ಯಾರೂ ಹೇಳಿಲ್ಲವೆಂದು ಮೋಹನ ಹೇಳಿದ. ಆದರೆ ಅದು ಕೇವಲ ಭ್ರಮೆಯಾಗಿದ್ದಿರಬಹುದೆಂಬುದನ್ನು ಅವನು ಒಪ್ಪಿಕೊಳ್ಳಲು ತಯಾರಾಗಿರಲಿಲ್ಲ. ಜನರು ದುರ್ವಾಸನೆಯಿದೆ ಎಂದು ತನಗೆ ಹೇಳಲು ಇಷ್ಟಪಡದೆ ತಾವೇ ಮೂಗು ತೀಡಿಕೊಂಡು ಸುಮ್ಮನಿರುವರೆಂದು ಅವನ ವಾದ. ಅವನು ಹೇಳುವುದು ಸಹ ಸಾಧ್ಯವೇ. ಆದರೆ ಒಂದಂತೂ ನಿಜ. ಅವರು ಮೂಗು ನಿಜವಾಗಿ ಯಾಕೆ ತೀಡಿಕೊಳ್ಳುತ್ತಾರೆಂಬುದು ಅವರಿಗೆ ಮಾತ್ರ ಗೊತ್ತು. ಅದು ನನಗೂ ತಿಳಿದಿರಲು ಸಾಧ್ಯವಿಲ್ಲ ಮತ್ತು ಮೋಹನನಿಗೂ ತಿಳಿದಿರಲು ಸಾಧ್ಯವಿಲ್ಲ. ನಮ್ಮದು ಕೇವಲ ಊಹೆ. ಇಲ್ಲಿ ಎರಡು ಸಾಧ್ಯತೆಗಳು ಸರಿಸಮವಾಗಿದ್ದರೂ ಏಕೆ ಒಂದೇ ಸಾಧ್ಯತೆಯನ್ನು (ತನ್ನಿಂದ ದುರ್ವಾಸನೆ ಬರುವುದರಿಂದಲೇ ಅವರು ಮೂಗು ತೀಡಿಕೊಳ್ಳುವುದು) ನಿಜವೆಂದೇ ನಂಬಿರುವುದು. ಇನ್ನೊಂದು ಸಾಧ್ಯತೆಯ ಬಗ್ಗೆ ಯೋಚಿಸಿಯೂ ಇಲ್ಲ. ಆದರೆ ಯಾವಾಗಲೂ ದುರ್ವಾಸನೆ ಬರುತ್ತಿದ್ದರೆ, ನನಗೆ, ಅವನ ತಂದೆ ತಾಯಿಗಳಿಗೆ ಮತ್ತು ಇತರ ಕೆಲವರಿಗೆ ಏಕೆ ಬರುತ್ತಿಲ್ಲ? ನಾನು ಕೊಟ್ಟಿರುವ ಮಾತ್ರೆಗಳು ಮನಸ್ಸನ್ನು ಶಾಂತಿಗೊಳಿಸುವ ಮಾತ್ರೆಗಳು, ಖಂಡಿತ ದುರ್ವಾಸನೆಯನ್ನು ಕಡಿಮೆ ಮಾಡುವ ಮಾತ್ರೆಗಳಲ್ಲ. ಆ ಮಾತ್ರೆಗಳಿಂದ ಸಮಸ್ಯೆ ಕಡಿಮೆಯಾಗಿದ್ದರೆ, ಆ ದುರ್ವಾಸನೆ ಮಾನಸಿಕವಾಗಿರಲೇಬೇಕು. ಇಷ್ಟಲ್ಲದೇ, ಶಾರೀರಿಕ ತೊಂದರೆಗಳ್ಯಾವುವೂ ಇಲ್ಲವೆಂದು ಖಚಿತವಾಗಿ ತಿಳಿದಿದೆ. ಈ ಕಾರಣಗಳನ್ನು ಅವಲೋಕಿಸಿದರೆ ಇದು ಮಾನಸಿಕವೆಂಬುದರಲ್ಲಿ ಅನುಮಾನವೇ ಇಲ್ಲ. ಈ ತರ್ಕಕ್ಕೆ ಮೋಹನ ಹೆಚ್ಚು ಮಾತಿಲ್ಲದವನಾದನು. "ತಾವು ಹೇಳುತ್ತಿರುವುದೇನೋ ಸರಿಯಿರಬಹುದು. ಆದರೆ ನಾನು ಸುಳ್ಳು ಹೇಳುತ್ತಿಲ್ಲ. ನನ್ನಿಂದ ದುರ್ವಾಸನೆ ಬರುತ್ತಿರಲೇಬೇಕು." ಅವನು ಸುಳ್ಳು ಹೇಳುತ್ತಿಲ್ಲವೆಂಬುದಂತೂ ನಿಜ. ಸುಳ್ಳು ಪ್ರಜ್ಞೆಯ ಮಟ್ಟದಲ್ಲಿ ನಡೆಯುವುದು. ವ್ಯಕ್ತಿ ಅದು ನಿಜವಲ್ಲವೆಂದು ತಿಳಿದಿದ್ದೂ ಹೇಳುವನು. ಮೋಹನನಲ್ಲಿ ಅದು ಅಪ್ರಜ್ಞೆಯಲ್ಲಿ ನಡೆಯುತ್ತಿರುವುದು. ವ್ಯಕ್ತಿಗೆ ಅದು ಸುಳ್ಳೆಂದು ತಿಳಿದೇ ಇರುವುದಿಲ್ಲ. ಅಂದರೆ ಅವನು ತನ್ನಿಂದ ದುರ್ವಾಸನೆ ಬರುತ್ತಿರಬಹುದೆಂದು (ಅವನಿಂದ ನಿಜವಾಗಿ ದುರ್ವಾಸನೆ ಬರುತ್ತಿರದಿದ್ದರೂ) ನಂಬಿರು

ತ್ತಾನೆ. ಇದನ್ನು ಮಾನಸಿಕ ಕಾರಣಗಳಿಂದುಂಟಾದ ತಪ್ಪು ಗ್ರಹಿಕೆಯೆಂದು ಹೇಳಬಹುದೇ ಹೊರತು ಸುಳ್ಳೆಂದು ಹೇಳಕೂಡದು. ಅವನ ಪ್ರಕಾರ ದುರ್ವಾಸನೆ ಬರುವುದು ಕೆಟ್ಟದ್ದರಿಂದ ಮಾತ್ರ. ಒಳ್ಳೆಯ ವಾಸನೆ ಒಳ್ಳೆಯ ಒಳ್ಳೆಯ ಪದಾರ್ಥಗಳಿಂದ ಬರುವುದು. ಹಾಗಾದರೆ ಅವನಿಂದ ದುರ್ವಾಸನೆ ಬರುತ್ತಿರಬೇಕಾದರೆ ಅವನ ಮನಸ್ಸಿನಲ್ಲಿ ತಾನು ಕೆಟ್ಟವನೆಂಬ ಭಾವನೆ ಇರಬಹುದೇ? ಎಂಬ ಯೋಚನೆ ನನ್ನ ಮನಸ್ಸಿನಲ್ಲಿ ಮೂಡಿತು. ನಾನು ಅವನಿಗೇನೂ ಹೇಳಲಿಲ್ಲ. ನಾವು ಸ್ವಲ್ಪ ಸಾವಧಾನವಾಗಿ ಕೇಳುತ್ತಲಿದ್ದರೆ ಇದಕ್ಕೆ ಉತ್ತರ ತಾನಾಗಿಯೇ ಹೊರಬರುವುದು. ತನ್ನಿಂದ ಬರುವ ದುರ್ವಾಸನೆ ತನಗೆ ತಿಳಿದಂತೆ ಬೇರೆ ಯಾವ ದುರ್ವಾಸನೆಗೂ ಹೋಲಿಕೆಯಿಲ್ಲವೆಂದನು. ಈ ದುರ್ವಾಸನೆ ಶರೀರದ ಯಾವುದೇ ಒಂದು ಭಾಗದಿಂದ ಬರುತ್ತಿದೆಯೆಂದು ಹೇಳಲು ಸಾಧ್ಯವಿಲ್ಲವೆಂದನು ಮತ್ತು ಇದರಿಂದ ಯಾವ ರೀತಿ ಕೆಡುಕುಂಟಾಗಬಹುದೆಂದೂ ಹೇಳದಾದನು.

ಮೂರನೇ ಭೇಟಿಯಲ್ಲಿ ಮತ್ತೆ ಅದೇ ವಿಷಯ ಚರ್ಚಿಸಲಾಯಿತು. ಈ ಭೇಟಿಯಲ್ಲಿ ಹೊಸದೇನೂ ತಿಳಿಯಲಿಲ್ಲ. ಇದು ಸಾಧಾರಣ. ನಾಲ್ಕನೇ ಭೇಟಿಯಲ್ಲಿ ಮೋಹನ ಒಂದು ರೀತಿಯ ಮುಜುಗರದಿಂದ ಮಾತನಾಡುತ್ತಿದ್ದನು. ತಾನಾಗಿಯೇ ಮುಜುಗರವೇತಕ್ಕೆಂದು ಹೇಳುವನೇನೋ ಎಂದು ಸ್ವಲ್ಪ ಕಾದೆ. ಅವನು ಹೇಳಲಿಲ್ಲ. ಮುಜುಗರ ಹೆಚ್ಚುತ್ತಾ ಹೋಯಿತು. ಯಾಕೆ ಮುಜುಗರದಿಂದ ಇದ್ದಾನೆ ಎಂದು ನೇರವಾಗಿಯೇ ಕೇಳಿದೆ. ಏನೂ ಇಲ್ಲವೆಂದ. ಆದರೆ ಮುಜುಗರ ಹೆಚ್ಚುತ್ತಲೇ ಹೋಯಿತು. ಅವನು ಏನೋ ಹೇಳಲು ಸಂಕೋಚಪಡುತ್ತಿರುವನೆಂಬುದು ಯಾರಿಗಾದರೂ ಸುಲಭವಾಗಿ ವೇದ್ಯವಾಗುವ ರೀತಿಯಲ್ಲಿತ್ತು. ತನ್ನ ಮನಸ್ಸಿನಲ್ಲೇನಿದೆಯೆಂಬುದನ್ನು ಸಂಕೋಚವಿಲ್ಲದೇ ಹೇಳಬೇಕೆಂದು ಒತ್ತಾಯಿಸಿದೆ. "ಸಾರ್, ಹೇಳಿದರೆ ನೀವೇನು ತಿಳಿದುಕೊಳ್ಳುವಿರೋ?" ಎಂದನು. ನಾನು ವೈದ್ಯ ಮತ್ತು ಮನೋರೋಗ ತಜ್ಞನಾದುದರಿಂದ ಏನು ಬೇಕಾದರೂ ನನ್ನ ಮುಂದೆ ಮಾತನಾಡಬಹುದು ಮತ್ತು ಇದೇ ವಿಷಯದಲ್ಲಿ ಪರಿಣಿತನಾಗಿರುವುದರಿಂದ ಪ್ರತಿ ದಿನವೂ ಇಂತಹ ಅನೇಕ ವಿಷಯಗಳನ್ನು ಕೇಳುವುದು ಮಾಮೂಲೆಂದು ಹೇಳಿದೆ. ಅತಿ ಸಣ್ಣ ಧ್ವನಿಯಲ್ಲಿ "ಸಾರ್, ನಾನು ಹಸ್ತ ಮೈಥುನ ಮಾಡುತ್ತೇನೆ. ಅದರಿಂದಲೇ ದುರ್ವಾಸನೆ ಬರುತ್ತಿರುವುದು" ಎಂದ. ಅವನ ಮಾತಿನ ಧಾಟಿ ತಾನು ಯಾವುದೋ ಒಂದು ದೊಡ್ಡ ಅಪರಾಧ ಮಾಡಿರುವೆನೆಂಬ ರೀತಿಯಲ್ಲಿತ್ತು. ಇದನ್ನು ಹೇಳುವುದಕ್ಕೆ ಏತಕ್ಕೋಸ್ಕರ ಇಷ್ಟು ಸಂಕೋಚಪಟ್ಟುಕೊಳ್ಳಬೇಕೆಂದು ಕೇಳಿದೆ. ತಾನು ಮಾಡುತ್ತಿರುವುದು ಕೆಟ್ಟ ಕೆಲಸ ಮತ್ತು ಅದನ್ನು ಕೇಳಿದ ಕೂಡಲೆ ನಾನು ಬೈಯುವೆನೆಂಬ ಭಯ ಅವನಲ್ಲಿದ್ದಿತು. ಇದು ಅಪರಾಧವೇನಲ್ಲವೆಂಬ ಧಾಟಿಯಲ್ಲಿ ನನ್ನ ಪ್ರಶ್ನೆಯಿದ್ದುದರಿಂದ ಅವನಿಗೆ ಧೈರ್ಯ ಬಂದಿತು. "ಸಾರ್, ನೀವು ನನಗೆ ತಂದೆಯಿದ್ದಂತೆ. ನೀವು ಬೈಯುವುದಿಲ್ಲವೆಂಬ ಧೈರ್ಯದಿಂದ ಹೇಳುತ್ತಿದ್ದೇನೆ. ನನಗೇಕೋ ಹಸ್ತ ಮೈಥುನ ನಿಲ್ಲಿಸಲಾಗುತ್ತಿಲ್ಲ. ಒಂದು ವರ್ಷದಿಂದ ಒಂದು ಅಥವಾ ಎರಡು ವಾರಕ್ಕೊಮ್ಮೆ ಮಾಡುತ್ತಿದ್ದೇನೆ. ಅದು ಕೆಟ್ಟದ್ದು. ಅದು ಹೇಗೆ ನನಗೆ ಈ ಚಟ ಅಭ್ಯಾಸವಾಯಿತೋ ನನಗೇ ಗೊತ್ತಿಲ್ಲ. ಅದನ್ನು ನಿಲ್ಲಿಸಬೇಕೆಂದು ಬಹಳ ಪ್ರಯತ್ನಪಟ್ಟೆ. ನಾನು ಎಚ್ಚರವಾಗಿದ್ದಾಗ ತಡೆದುಕೊಂಡರೂ ರಾತ್ರಿ ನಿದ್ದೆಯಲ್ಲಿ ನನಗೆ ತಿಳಿಯದ ಹಾಗೆ ಹಸ್ತ ಮೈಥುನ ಮಾಡಿಕೊಂಡಿರುತ್ತೇನೆ. ವೀರ್ಯ ಸ್ಖಲನವಾದಾಗ ಎಚ್ಚರವಾಗಿ ನಾನು ಮಾಡಿದ ಕೆಟ್ಟ ಕೆಲಸಕ್ಕೆ ಅನುತಾಪವಾಗುತ್ತದೆ. ಆ ವೀರ್ಯ ಬಹಳ ದುರ್ವಾಸನೆಯಿಂದ ಕೂಡಿರುತ್ತದೆ. ಕೆಲವು ಸಲ ಆ ವಾಸನೆಗೆ ವಾಂತಿ ಬರುವಂತಾಗುತ್ತದೆ. ಈಗ ನನ್ನ ಶರೀರದಿಂದೆಲ್ಲ ಅದೇ ರೀತಿಯ ದುರ್ವಾಸನೆ ಬರುತ್ತಿದ್ದು, ಹಸ್ತ ಮೈಥುನದಿಂದಲೇ ಆ ರೀತಿ ಆಗುತ್ತಿರಬೇಕು. ಇದರಿಂದ ಜೀವನವೇ ಬೇಸರವಾಗಿದೆ" ಎಂದು ಪೇಚಾಡಿದ.

ಹಸ್ತ ಮೈಥುನದಿಂದ ಹಾನಿಯೇನೂ ಆಗುವುದಿಲ್ಲ. [illegible] ಹಸ್ತ ಮೈಥುನ ಕೆಟ್ಟದ್ದು ಎಂಬ ಭಾವನೆ ಯಾವ ರೀತಿ

ಬಂತೆಂಬುದನ್ನು ತಿಳಿಯಲು ಬಯಸಿದೆ. ಅವನ ತಂದೆ–ತಾಯಿಗಳಂತೂ ಆ ವಿಷಯದ ಬಗ್ಗೆ ಮಾತೇ ಆಡಿರಲಿಲ್ಲ. ಅವರಿವರಿಂದ ಕೇಳಿದ್ದ ಮತ್ತು ಕೆಲವು ಪತ್ರಿಕೆಗಳಲ್ಲಿ ಹಸ್ತ ಮೈಥುನ ಕೆಟ್ಟದ್ದು ಮತ್ತು ಹಾನಿಕರ ಎಂದು ಓದಿದ್ದ. ಕಿನ್ಸಿ ನಡೆಸಿದ ಸಮೀಕ್ಷೆಯ ಪ್ರಕಾರ ಶೇ. ೯೨ ರಷ್ಟು ಗಂಡಸರು ಮತ್ತು ಶೇ. ೬೦ ರಷ್ಟು ಹೆಂಗಸರು ತಾವು ಹಸ್ತ ಮೈಥುನ ಮಾಡಿದ್ದೇವೆಂದು ಒಪ್ಪಿ–ಕೊಂಡಿದ್ದಾರೆ. ಹಸ್ತ ಮೈಥುನದಿಂದ ಯಾವುದೇ ರೀತಿಯ ಹಾನಿಯಿಲ್ಲವೆಂಬುದು ಖಚಿತವಾಗಿ ತಿಳಿದಿರುವ ವಿಷಯ. ಇದನ್ನು ಕೇಳಿ ಮೋಹನ ಅಚ್ಚರಿ ಪಟ್ಟನು. ಜನರು ಮತ್ತು ಪತ್ರಿಕೆಗಳು ತಪ್ಪು ವಿಷಯವನ್ನೇಕೆ ಬಿತ್ತಬೇಕು? ಜನರ ಅಜ್ಞಾನ ಮತ್ತು ಪತ್ರಿಕೆಗಳ ವ್ಯಾಪಾರೀ ದೃಷ್ಟಿಯೇ ಇದಕ್ಕೆ ಕಾರಣ. ನಮ್ಮ ಸಮಾಜದಲ್ಲಿ ಲೈಂಗಿಕ ವಿಷಯಗಳನ್ನು ಬಹಿಷ್ಕರಿಸುತ್ತೇವೆ. ಅದರ ವಿಷಯ ಮಾತನಾಡುವುದೂ ತಪ್ಪು ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತೇವೆ. ವಯಸ್ಸಿಗೆ ತಕ್ಕುದಾದ ಸೂಕ್ತ ಲೈಂಗಿಕ ಶಿಕ್ಷಣ ಕೊಡುವುದು ಎಲ್ಲಾ ದೃಷ್ಟಿಯಲ್ಲೂ ಹಿತಕರ. ಲೈಂಗಿಕ ವಿಷಯಗಳೆಲ್ಲಾ ತಪ್ಪು ಎಂಬ ಭಾವನೆಯನ್ನು ನಾವು ಮಕ್ಕಳಲ್ಲಿ ಬಿತ್ತುತ್ತೇವೆ. ಇದು ಸರಿಯೇ? ಲೈಂಗಿಕ ಆಸಕ್ತಿ ಸಹಜ–ವಾದುದಲ್ಲವೇ? ತಿಳಿದವರಾಗುವಂತಹ ನಾವು ನಮ್ಮ ಮಕ್ಕಳಿಗೆ ಲೈಂಗಿಕ ವಿಷಯಗಳಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ತಿಳಿಸದಿದ್ದರೆ ಅನಾಹುತವಾಗಲೂಬಹುದು. ಆಗ ಅಜ್ಞಾನದಿಂದ ಮಕ್ಕಳು ತಪ್ಪು ವಿಷಯ ಬಿತ್ತುವ ಜನರು ಅಥವಾ ಪತ್ರಿಕೆಗಳೇ ಸರಿ ಅಂದುಕೊಳ್ಳುವರು. ಇದರಿಂದ ಮಾನಸಿಕ ಶಾಂತಿ ಕದಡಿ ಮಾನಸಿಕ ಅಸ್ವಸ್ಥತೆಯುಂಟಾಗ–ಬಹುದು. ಎಳೆಯ ವಯಸ್ಸಿನ ಕಾಲೇಜು ವಿದ್ಯಾರ್ಥಿ ಹಸ್ತ ಮೈಥುನ ಮಾಡಿಕೊಳ್ಳುವುದೂ ತಪ್ಪೇ? ಖಂಡಿತ ಅಲ್ಲ.

ಹಸ್ತ ಮೈಥುನದಂಥ ಲೈಂಗಿಕ ಕ್ರಿಯೆಗಳು ಪ್ರಕೃತಿ ಸಹಜವಾಗಿರಬಹುದೆಂಬುದನ್ನು ಒಪ್ಪಿಕೊಳ್ಳಲು ಮೋಹನ ಹಿಂಜರಿದನು. ಅವನ ಪ್ರಕಾರ ಲೈಂಗಿಕ ಆಲೋಚನೆಗಳು ಮತ್ತು ಕ್ರಿಯೆಗಳು ಮದುವೆಯಾಗಿರುವವರಿಗೆ ಮಾತ್ರ ಮೀಸಲಾಗಿರಬೇಕು. ಮದುವೆಯಾಗುವುದಕ್ಕೆ ಮುಂಚೆ ಲೈಂಗಿಕ ಆಸಕ್ತಿ ಇರಲೇಬಾರದು. ಕಾಲೇಜಿನಲ್ಲಿ ಸಹ ವಿದ್ಯಾರ್ಥಿಗಳ್ಯಾರಾದರೂ ಹುಡುಗಿಯರ ಬಗ್ಗೆ ಮಾತಾಡುತ್ತಿದ್ದರೆ ಅಲ್ಲಿ ನಿಲ್ಲಲು ಕೂಡ ಅವನಿಗೆ ಆಗುತ್ತಿರಲಿಲ್ಲ. ಆದರೆ ಯಾರಿಗೂ ತಿಳಿಯದ ಹಾಗೆ ತನ್ನ ಪಾಡಿಗೆ ತಾನೇ ಹುಡುಗಿಯರನ್ನು ಕದ್ದು ನೋಡುವನು. ಅದರಲ್ಲಿ ಯಾವುದೋ ರೀತಿಯ ತೃಪ್ತಿ. ಕೆಟ್ಟ ನಂತರ ಕೆಲಸ ಮಾಡಿದೆನೆಂದು ಪರಿತಪಿಸುವನು. ಅವನ ಸ್ನೇಹಿತರಿಗೆ ಮೋಹನನೆಂದರೆ "Mr.Clean". ಏಕೆಂದರೆ ಅವನು ಹುಡುಗಿಯರನ್ನು ಕಣ್ಣೆತ್ತಿ ನೋಡುವುದಿರಲಿ ಅವರ ಬಗ್ಗೆ ಮಾತೂ ಆಡುವುದಿಲ್ಲ. ಒಟ್ಟಿನಲ್ಲಿ ಲೈಂಗಿಕ ಆಸಕ್ತಿ ತನಗಿಲ್ಲವಾದ್ದರಿಂದ ತಾನು ಒಳ್ಳೆಯವನು ಎಂಬ ಭಾವನೆಯನ್ನು ಇತರರಲ್ಲಿ ಬಿತ್ತಿದನು. ಇತರರನ್ನೇನೋ ಮೋಸಗೊಳಿಸಬಹುದು. ತನ್ನ ಆತ್ಮವನ್ನೇ ಮೋಸಗೊಳಿಸಲು ಸಾಧ್ಯವೇ? ತನಗೂ ಲೈಂಗಿಕ ಆಸಕ್ತಿಯಿದ್ದು ಹುಡುಗಿಯರನ್ನು ಕದ್ದು ನೋಡುತ್ತೇನೆಂಬುದು ನುಂಗಲಾರದ ತುತ್ತಾಯಿತು. ಇಷ್ಟಲ್ಲದೇ ಹಸ್ತ ಮೈಥುನ ಮಾಡುವುದು ಇನ್ನಷ್ಟು ಬೇಸರವಾಯಿತು. "ಸಾರ್, ಲೈಂಗಿಕ ಆಸಕ್ತಿ ಮದುವೆಯಾಗುವುದಕ್ಕೆ ಮುಂಚೆ ಯಾಕಿರಬೇಕು? ಅದು ಇರಲೇಕೂಡದು" ಎಂದ ಮೋಹನ. ಅದು ಲೈಂಗಿಕ ವಿಷಯಗಳ ಬಗ್ಗೆ ಅವನಿಗಿರುವ ಅಜ್ಞಾನ ಸೂಚಿಸುತ್ತದೆಂದೂ ಮತ್ತು ಹೊಟ್ಟೆಯ ಹಸಿವು ಯಾವ ರೀತಿ ಪ್ರಕೃತಿ ಸಹಜವಾದುದೋ ಅದೇ ರೀತಿ ಲೈಂಗಿಕ ಹಸಿವು ಪ್ರಕೃತಿ ಸಹಜವಾದುದು ಎಂದು ತಿಳಿಸಿದೆ. ಅವನು ಲೈಂಗಿಕ ವಿಷಯಗಳ ಬಗ್ಗೆ ತನಗೆ ಅಜ್ಞಾನವಿದೆಯೆಂದು ಒಪ್ಪಿಕೊಂಡರೂ ಮದುವೆಗೆ ಮುಂಚೆ ತಪ್ಪು ಎಂದೇ ವಾದಿಸಿದನು. ಯಾವುದು ಸರಿ ಎಂದು ತಿಳಿಯದೇ ಇರುವವನು ಯಾವುದು ತಪ್ಪು ಎಂದು ನಿರ್ಧರಿಸುವುದು ಸರಿಯೇ ಎಂಬ ನನ್ನ ಪ್ರಶ್ನೆಗೆ ಮೋಹನ ನಿರುತ್ತರನಾದನು..

ಮುಂದಿನ ಭೇಟಿಯಲ್ಲಿ ಮೋಹನ ಕೊಂಚ

ಉತ್ಸಾಹಿತನಾಗಿದ್ದನು. "ಸಾರ್, ನಿಜವಾಗಿಯೂ ಲೈಂಗಿಕ ಆಸಕ್ತಿಯಲ್ಲಿ ತಪ್ಪಿಲ್ಲವೇ?" ಎಂದು ಕೇಳಿದನು. ಹಿಂದೆ ಅದು ತಪ್ಪು ಎಂದು ವಾದಿಸುತ್ತಿದ್ದವನು ಈಗ ಅದರಲ್ಲಿ ನಿಜವಾಗಿಯೂ ಲೈಂಗಿಕ ಆಸಕ್ತಿಯಲ್ಲಿ ತಪ್ಪಿಲ್ಲವೇ ಎಂದು ಕೇಳಿದನು. ಇತರರಿಗೆ ಇವೆಲ್ಲ ಸಣ್ಣ ವಿಷಯಗಳೆನಿಸಬಹುದು. ಇಲ್ಲಿ ಅವನ ಮಾತಿನ ಧಾಟಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವನು ಬದಲಾಗುತ್ತಿದ್ದಾನೆಂದು ಸಂಭವವಾಗಿ ಹೇಳಬಹುದು. ಲೈಂಗಿಕ ಆಸಕ್ತಿ ಮತ್ತು ಹಸ್ತಮೈಥುನದಲ್ಲಿ ತಪ್ಪೇನೂ ಇಲ್ಲ ಎಂದು ನಾನು ಹೇಳಿದುದು ಪರಿಣಾಮ ಮಾಡಿದೆ. ಈಗ ಅದು ತಪ್ಪು ಎಂದು ವಾದಿಸದೆ, ಅದರಲ್ಲಿ ನಿಜವಾಗಿಯೂ ಏನೂ ತಪ್ಪಿಲ್ಲವೇ ಎಂದು ಕೇಳುತ್ತಿರುವನು. ಅಂದರೆ ಅವನಿಗೆ ನಾನು ಹೇಳುತ್ತಿರುವುದು ನಿಜ ಎಂಬುದು ಮನದಟ್ಟಾಗುತ್ತಿದೆ. ಆದರೆ ಇಷ್ಟು ದಿನ ಒಂದು ರೀತಿ ನಂಬಿ ಕೂಡಲೇ ಬದಲಾಗಲು ಸಾಧ್ಯವೇ? ಅದಕ್ಕೂ ಸಮಯ ಬೇಕು. ಈಗಿನ ಚಿಕಿತ್ಸೆಯ ಮಟ್ಟದಲ್ಲಿ ಮೋಹನನ ಒಂದು ಭಾಗದ ಮನಸ್ಸಿಗೆ ನಾನು ಹೇಳುತ್ತಿರುವುದು ನಿಜವೆನಿಸಿದರೆ, ಇನ್ನೊಂದು ಭಾಗಕ್ಕೆ (ಹಿಂದಿನಿಂದಲೂ ಅದು ತಪ್ಪು ಎಂದು ನಂಬಿರುವ ಭಾಗ) ಒಪ್ಪಲು ಕಷ್ಟವಾಗುತ್ತಿರುವುದು. ಈ ಎರಡು ಭಾಗಗಳ ತೊಳಲಾಟವನ್ನು ಅವನ ಪ್ರಶ್ನೆಯಲ್ಲಿ ಗಮನಿಸಬಹುದು. ಇಂತಹ ಸಂದರ್ಭಗಳಲ್ಲಿ ಮನೋರೋಗ ತಜ್ಞರೇನು ಮಾಡಬೇಕು? ಗಿಣಿಗೆ ಪಾಠ ಹೇಳಿದ ಹಾಗೆ ಹೇಳಿದರೂ ಅವನು ನನ್ನನ್ನು ನಂಬಲಿಲ್ಲ ಎಂದು ಕೋಪಿಸಿಕೊಳ್ಳಕೂಡದು. ಮನುಷ್ಯನ ನಂಬಿಕೆಗಳನ್ನು ಬದಲಾಯಿಸುವುದಕ್ಕೆ ಸಮಯ ಬೇಕು. "ಇಷ್ಟು ದಿನ ಒಂದು ರೀತಿ ನಂಬಿದ್ದು ಈಗ ಕೂಡಲೆ ಇನ್ನೊಂದು ರೀತಿ ನಂಬಲು ನಿನಗೆ ಕಷ್ಟ ಎಂಬುದು ನಿಜ. ನಾನು ಹೇಳುತ್ತಿರುವುದು ನಿನ್ನನ್ನು ಸಮಾಧಾನಗೊಳಿಸಲೇನಲ್ಲ. ನಾನು ಹೇಳುತ್ತಿರುವುದು ವೈಜ್ಞಾನಿಕ ಆಧಾರದ ಮೇಲೆ. ಲೈಂಗಿಕ ವಿಷಯಗಳ ಬಗ್ಗೆ ವೈಜ್ಞಾನಿಕವಾಗಿ ಬರೆದ ಯಾವುದೇ ಪುಸ್ತಕಗಳನ್ನು ಓದಿದರೂ ನಾನು ಹೇಳಿದುದನ್ನೇ ಸಮರ್ಥಿಸುವುದರೆಂಬುದರಲ್ಲಿ ಅನುಮಾನವೇ ಇಲ್ಲ," ಎಂದು ಹೇಳಿದೆನು. ಕೇವಲ ಅವನ ಸಮಾಧಾನಕ್ಕೋಸ್ಕರ ನಾನು ಈ ರೀತಿ ಹೇಳುತ್ತಿಲ್ಲವೆಂಬುದು ಅವನಿಗೆ ಚೆನ್ನಾಗಿ ಮನದಟ್ಟಾಯಿತು. ಲೈಂಗಿಕ ಆಸಕ್ತಿ ಮತ್ತು ಹಸ್ತಮೈಥುನ ಸಹಜ ಪ್ರವೃತ್ತಿ ಎಂಬುದು ಅವನಿಗೆ ನಂಬಿಕೆಯಾಯಿತು. "ಸಾರ್, ವೀರ್ಯ ದುರ್ವಾಸನೆಯಿಂದ ಏಕೆ ಕೂಡಿರಬೇಕು?" ಎಂದು ಮೋಹನ ಕೇಳಿದನು. ದುರ್ವಾಸನೆಯೆಂದರೇನು ಎಂದು ಹೆಚ್ಚು ತಿಳಿಯಲು ಪ್ರಯತ್ನಿಸಿದೆನು. ಅವನಿಗೆ ವೀರ್ಯಕ್ಕೆ ತನ್ನದೇ ಆದ ಒಂದು ವಾಸನೆಯಿರುತ್ತದೆ ಎಂಬುದು ಹೊಸ ವಿಷಯ. ಎಲ್ಲರ ವೀರ್ಯವೂ ವಾಸನೆಯಿಂದ ಕೂಡಿರುತ್ತದೆ. ಎಂಬುದು ಅವನಿಗೆ ತಿಳಿದೇ ಇರಲಿಲ್ಲ. ಆ ಸಹಜವಾದ ವಾಸನೆಯನ್ನೇ ದುರ್ವಾಸನೆಯೆಂದು ಅವನು ಕರೆದದ್ದು. ತನ್ನ ವೀರ್ಯದ ವಾಸನೆ ಎಲ್ಲರಂತೆಯೇ ಇರಬಹುದೆಂದು ಅವನಿಗೆ ಹೊಳೆದೇ ಇರಲಿಲ್ಲ. ಅದು ದುರ್ವಾಸನೆಯೆಂದು ಮಾತ್ರ ತಿಳಿದುಬಿಟ್ಟಿದ್ದನು. ಲೈಂಗಿಕ ವಿಷಯ ಕೆಟ್ಟದ್ದು ಮತ್ತು ಲೈಂಗಿಕ ಕ್ರಿಯೆಯಿಂದ ಹೊರಬಂದ ವೀರ್ಯವೂ ಕೆಟ್ಟದಿರಲೇಬೇಕಲ್ಲವೇ? ಈ ಕಾರಣದಿಂದಲೇ ಅವನಿಗೆ ವೀರ್ಯ ದುರ್ವಾಸನೆಯಿಂದ ಕೂಡಿದ್ದೆಂಬ ನಂಬಿಕೆ ಬಂದದ್ದು. ಈ ಭೇಟಿಯಲ್ಲಿ ಮಾತ್ರೆಗಳನ್ನು ಅರ್ಧ ಕಡಿಮೆ ಮಾಡಿ ಮುಂದಿನ ಭೇಟಿಯಲ್ಲಿ ಪೂರ್ತಿ ನಿಲ್ಲಿಸಿದೆ. ಮಾತ್ರೆಗಳನ್ನು ನಿಲ್ಲಿಸಿದರೂ ಈ ಬಾರಿ ದುರ್ವಾಸನೆ ಬರುತ್ತಿದೆಯೆಂಬ ಭಾವನೆ ಮರಳಿ ಬರಲಿಲ್ಲ. ಮೋಹನನಿಗೆ ಮನೋಚಿಕಿತ್ಸೆಯಲ್ಲಿ ಆಸಕ್ತಿ ಹೆಚ್ಚಾಯಿತು. ಈಗ ತಾನೇ ಎಲ್ಲಕ್ಕೂ ಅರ್ಥ ಕಲ್ಪಿಸುವ ರೀತಿಯಲ್ಲಿ ಯೋಚಿಸಲು ಪ್ರಾರಂಭಿಸಿದನು. ದುರ್ವಾಸನೆಯ ಮೂಲದಲ್ಲಿ ಲೈಂಗಿಕ ವಿಷಯಗಳ ಬಗ್ಗೆ ಇರುವ ಅಜ್ಞಾನವೇ ಕಾರಣ ಎಂಬುದು ಅವನಿಗೆ ಸ್ಪಷ್ಟವಾಗಿರಲಿಲ್ಲ. ಆದರೆ ಈ ದುರ್ವಾಸನೆ [illegible] ಭಾಗಗಳಿಂದಲೂ [illegible] ಎಂಬುದನ್ನು ತಿಳಿಯಲು [illegible] ಸಮಯದಲ್ಲಿ [illegible] ಕೆಲಸ [illegible]

ವವನಿಗೆ ಕೆಟ್ಟವನು ಎಂದು ಕರೆಯುತ್ತೇವೆ. ಮೋಹನನ ಪ್ರಕಾರ ಹಸ್ತ ಮೈಥುನ ಕೆಟ್ಟದ್ದಾದ್ದರಿಂದ ತಾನು ಕೆಟ್ಟವನೆಂಬ ಭಾವನೆ ಅವನಲ್ಲಿ ಮೂಡಿತ್ತು. ಅವನ ಹೇಳಿಕೆಯ ಪ್ರಕಾರ ದುರ್ವಾಸನೆ ಬರುವುದು ಕೆಟ್ಟದ್ದರಿಂದ ಮಾತ್ರ ಹಸ್ತ ಮೈಥುನ ಮಾಡುತ್ತಿದ್ದುದರಿಂದ ಪೂರ್ತಿ ಶರೀರವೇ ಕೆಟ್ಟು ಹೋಗುವುದೆಂಬುದನ್ನು ಎಲ್ಲಿಯೋ ಓದಿದ್ದನು. ತಾನು ತನ್ನ ಶರೀರವನ್ನು ಹಾಳುಮಾಡಿಕೊಂಡು ಬಿಟ್ಟಿದ್ದೇನೆಂಬ ಭಯ ಅವನಲ್ಲಿ ಮೂಡಿತ್ತು. ಆದುದರಿಂದಲೇ ದುರ್ವಾಸನೆ ಶರೀರದ ಎಲ್ಲ ಭಾಗಗಳಿಂದಲೂ ಬರುತ್ತಿದೆ ಎಂಬ ಭಾವನೆ ಮೂಡಿದ್ದು.

ಕೇವಲ ಇಷ್ಟೇ ವಿಷಯಕ್ಕೆ ಹಲವಾರು ಭೇಟಿಗಳು ಬೇಕೇ? ಮೋಹನ ಇತರ ವೈದ್ಯರಿಗಾಗಲೀ ಅಥವಾ ತಂದೆ ತಾಯಿಗಳಿಗಾಗಲೀ ಏಕೆ ಹೇಳಲಿಲ್ಲ ಎಂಬ ಪ್ರಶ್ನೆ ಮೂಡುವುದು ಸಹಜ. ತನ್ನ ತೊಂದರೆಯ ಮೂಲ ಯಾವುದು ಎಂದು ಹೇಳಲು ರೋಗಿಗೇ ತಿಳಿದಿರುವುದಿಲ್ಲ. ಆ ಕಾರಣ ಅಪಪ್ರಜ್ಞೆಯಲ್ಲಿರುತ್ತದೆ. ಆ ಕಾರಣ ಹೊರಬಾರದಂತೆ ಮನಸ್ಸು ತಡೆಯುವ ಪ್ರಯತ್ನಿಸುತ್ತದೆ. ಮನೋವಿಶ್ಲೇಷಣಾತಜ್ಞರು ಅದು ಹೊರ ಬರಲು ಸೂಕ್ತ ವಾತಾವರಣವನ್ನು ಮೊದಲನೆಯದಾಗಿ ಕಲ್ಪಿಸಬೇಕು. ಇಂತಹ ವಾತಾವರಣವನ್ನು ಕಲ್ಪಿಸಲು ಕೆಲವು ಭೇಟಿಗಳೇ ಬೇಕಾಗಬಹುದು. ರೋಗಿ ನಿಸ್ಸಂಕೋಚವಾಗಿ ಮಾತನಾಡಲು ಪ್ರಾರಂಭಿಸಿದ ನಂತರ ಆ ಕಾರಣ ಒಗಟಿನ ರೀತಿ ಯಾವಾಗಲೋ ಹೊರಗೆ ಬರುವುದು. ಒಗಟಿನ ಅರ್ಥ ತಿಳಿಯುವುದು, ಅದನ್ನು ಸರಿಯಾಗಿ ಬಿಡಿಸಿ ಅರ್ಥಮಾಡಿಕೊಂಡಾಗಲೇ ಅಲ್ಲವೇ? ಅದೇ ರೀತಿ ಮನೋವಿಶ್ಲೇಷಣೆಯಲ್ಲಿ ರೋಗಿ ಹೇಳಿದುದನ್ನು ಬಿಡಿಸಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಅದರ ಅರ್ಥ ಯಾವಾಗಲೋ ತಿಳಿಯುತ್ತದೆ. ರೋಗಿ ಏನು ಹೇಳಿದರೂ ಅವನು ಏಕೆ ಹೇಳುತ್ತಿದ್ದಾನೆ. ಅದಕ್ಕೆ ಬೇರೇನಾದರೂ ಅರ್ಥವಿರಬಹುದೇ, ಅದಕ್ಕೂ ಅವನ ತೊಂದರೆಗೂ ಏನಾದರೂ ಸಂಬಂಧವಿರಬಹುದೇ, ಎಂಬುದನ್ನು ಸದಾಕಾಲ ಮನೋರೋಗತಜ್ಞರು ಯೋಚಿಸುತ್ತಲೇ ಇದ್ದರೆ ತೊಂದರೆಯ ಮೂಲವನ್ನು ಭೇದಿಸಬಹುದು.

ಮೋಹನನ ಕಾಯಿಲೆಗೆ "Psycho-neurosis" ಎಂದು ಕರೆಯುತ್ತೇವೆ. ಮಾನಸಿಕ ಅಸ್ವಾಸ್ಥ್ಯವೆಂದರೆ ಸಾಮಾನ್ಯವಾಗಿ ಯೋಚಿಸುವುದು ಹುಚ್ಚು ಎಂದು. ಸಾಮಾನ್ಯವಾಗಿ ಹುಚ್ಚು ಎಂದು ಹೇಳುವ ಕಾಯಿಲೆಗಳ ಗುಂಪಿಗೆ Psychosis ಎಂದು ಕರೆಯುತ್ತೇವೆ. Psycho-neurosis ಕಾಯಿಲೆ ಎಂಬ ಕಾಯಿಲೆಗಳ ಗುಂಪಿನಲ್ಲೊಂದು. ಮಾನಸಿಕ ಅಸ್ವಸ್ಥತೆಗಳಲ್ಲೆಲ್ಲಾ ಅತಿ ಹೆಚ್ಚು ಜನರು ನರಳುವ ಕಾಯಿಲೆಯೆಂದರೆ Neurosis. ಆದರೆ ನಮಗೆ ಹೆಚ್ಚಾಗಿ ಗಮನಕ್ಕೆ Psychosis ಬರಬಹುದು. ಏಕೆಂದರೆ ಇವು ತೀವ್ರವಾದ ಕಾಯಿಲೆಗಳು. Neurosisಗಳ ಮೂಲದಲ್ಲಿ ಮನಸ್ಸಿನ ಎರಡು ಭಾಗಗಳಲ್ಲಿ ದ್ವಂದ್ವವಿರುತ್ತದೆ. ಈ ದ್ವಂದ್ವದಿಂದ ಭಯ, ನಡುಕ, ಕೊರಗು ಮುಂತಾದವುಗಳಿಂದಾಗಿ ಅಸ್ವಸ್ಥತೆ ಉಂಟಾಗುತ್ತದೆ. ಇಲ್ಲಿ ಮೋಹನನ ಪ್ರಜ್ಞೆ ಲೈಂಗಿಕ ವಿಷಯಗಳು ಮದುವೆಯಾಗದೇ ಇರುವವನಲ್ಲಿ ಇರಲೇ ಕೂಡದು, ಹಾಗಿರುವುದು ತಪ್ಪು ಎಂಬ ನಂಬಿಕೆಯಿಂದ ಕೂಡಿದ್ದು, ಅವನ ಅಪಪ್ರಜ್ಞೆ ಸಹಜ ಪ್ರವೃತ್ತಿಯನ್ನು ಹತ್ತಿಕ್ಕಲಾರದೇ ಹೋಯಿತು. ಆದುದರಿಂದ ಪ್ರಜ್ಞೆಗೆ ಬೇಡವಾದರೂ ಇದು ಸಹಜ ಪ್ರವೃತ್ತಿಯಾದುದರಿಂದ ಅಪಪ್ರಜ್ಞೆಗೆ ಸಹಕರಿಸಲಾಗಲಿಲ್ಲ. ಪ್ರಜ್ಞೆಗೆ ಬೇಡವಾದದ್ದು ಅಪಪ್ರಜ್ಞೆಗೆ ಬೇಕು. ಇದು ಒಂದು ರೀತಿಯ ಕುಸ್ತಿ ಪಂದ್ಯವಿದ್ದಂತೆ. ಕುಸ್ತಿಯಲ್ಲಿ ಯಾರಾದರೂ ಒಬ್ಬರು ಸೋತರೆ ಮಾತ್ರ ಮುಕ್ತಾಯವಾಗುವುದು. ಯಾರೂ ಸೋಲದಿದ್ದರೆ ಮುಕ್ತಾಯವಾಗುವುದೆಂತು? ಇಲ್ಲಿಯೂ ಅಷ್ಟೆ, ಮನಸ್ಸಿನ ಎರಡು ಭಾಗಗಳಲ್ಲೊಂದು ಸೋತು ಸಹಕರಿಸಬೇಕು. ಆದರೆ ಮೋಹನನ ಯಾವ ಭಾಗದ ಮನಸ್ಸೂ ಸೋಲಲು ತಯಾರಾಗಿರಲಿಲ್ಲ. ಯಾವುದಾದರೂ ಒಂದು ಭಾಗ ಸೋಲಬೇಕಾದರೆ ಅಪಪ್ರಜ್ಞೆಯೇ ಏಕೆ ಸೋಲಕೂಡದು ಎಂಬ ಪ್ರಶ್ನೆ ಸಹಜವಾಗಿ ಏಳುವುದು. ಮೋಹನನು ಕೂಡ ಈ ಪ್ರಶ್ನೆಯನ್ನು ಕೇಳಿ

ದ್ದನು. ಸಹಜ ಪ್ರವೃತ್ತಿಯನ್ನು ಹತ್ತಿಕ್ಕಿಕೊಳ್ಳಲು ಸಾಧ್ಯವೇ? ಹೊಟ್ಟೆಯ ಹಸಿವು ಕೂಡ ಸಹಜ ಪ್ರವೃತ್ತಿಯೆ. ನಮ್ಮಲ್ಲಿ ಆಹಾರ ವಿಲ್ಲದಿದ್ದರಿಂದ ಹೊಟ್ಟೆ ಹಸಿಯಕೂಡದು ಎನ್ನಲು ಸಾಧ್ಯವೇ? ನಾವು ಪ್ರಕೃತಿಗೆ ವಿರುದ್ಧವಾಗಿ ಹೋಗಲು ಸಾಧ್ಯವಿಲ್ಲ. ಅದೇ ರೀತಿ ಲೈಂಗಿಕ ಆಸಕ್ತಿ ಮತ್ತು ಕ್ರಿಯೆಗಳು ಪ್ರಕೃತಿ ಸಹಜವಾದುವು. ಮೋಹನನ ಲೈಂಗಿಕ ಆಸಕ್ತಿ ಮತ್ತು ಕ್ರಿಯೆಗಳು ಮನುಷ್ಯನಿಗೆ ಸಾಮಾನ್ಯವಾದುವೇ ಹೊರತು ಅತಿರೇಕದಿಂದ ಕೂಡಿದುದೇನಲ್ಲ. ಮೋಹನನಿಗೆ ತೊಂದರೆ ಉಂಟಾದುದು ಅವನ ತಪ್ಪು ತಿಳುವಳಿಕೆಯಿಂದ. ಈ ತಪ್ಪು ತಿಳುವಳಿಕೆ ಪ್ರಶ್ನೆಯಲ್ಲುಂಟಾದುದು.

ಈ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿದುದರಿಂದ ಲೈಂಗಿಕ ಆಸಕ್ತಿ ಮತ್ತು ಕ್ರಿಯೆಯನ್ನು ಪ್ರಶ್ನೆ ತಪ್ಪು ಎಂದು ಕರೆಯುವ ಪ್ರಯತ್ನಿಸುವುದನ್ನು ನಿಲ್ಲಿಸಿತು. ಇದರಿಂದ ಅವನ ಮಾನಸಿಕ ದ್ವಂದ್ವ ನಿಂತು ಮನಸ್ಸು ಶಾಂತಿಯುತವಾಯಿತು.

ಈಗ ತನ್ನಿಂದ ದುರ್ವಾಸನೆ ಬರುವ ದೆಂಬ ಭಾವನೆ ಮೋಹನನಿಗಿಲ್ಲ. ಈ ದ್ವಂದ್ವದಿಂದ ಅವನ ಏಕಾಗ್ರತೆ ಕದಡಿ ಪರೀಕ್ಷೆಗೆ ಓದಲು ಆಗುತ್ತಿಲ್ಲವೆಂದು ಹೇಳಿದ್ದನು. ಈಗ ಏಕಾಗ್ರತೆ ಚೆನ್ನಾಗಿದ್ದು ಪರೀಕ್ಷೆಗೆ ಬಿರುಸಾದ ತಯಾರಿ ನಡೆಸುತ್ತಿರುವನು.

✡

ಯುಗದ ಹೆಗಲಿನ ಆಸರೆ ಹಿಡಿದು ಕುಂಟುತ್ತ ನಡೆಯುವವನ ಹಿಂದೆ ಸತ್ಯದ ಬೆಂಗಾವಲಿರುತ್ತದೆ.

—ಬಾಲ್ತಾಜಾರ್ ಗ್ರೇಶಿಯನ್

❂

ಮೊದಲನೆ ಮಹಾಯುದ್ಧದ ಸಮಯ. ಒಂದು ದಿನ ಸಂದರ್ಶಕನೊಬ್ಬ ಬ್ರಿಟಿಶ್ ಸರಕಾರದ ಹಡಗು ಖಾತೆಯಲ್ಲಿ ಸಚಿವನಾಗಿದ್ದ ಜೋಸೆಫ್ ಮ್ಯಾಕ್ಲೆ ಬಳಿಗೆ ಹೋದಾಗ ಯಾವನೋ ಉಚ್ಚ ಅಧಿಕಾರಿಯೊಬ್ಬ ಗಂಭೀರನಾಗಿ ಮ್ಯಾಕ್ಲೆ ಯೊಡನೆ ಚರ್ಚಿಸುತ್ತಿದ್ದ. ಕೊನೆಗೆ, ತನ್ನ ಸಲಹೆಯನ್ನು ಗಂಭೀರವಾಗಿ ಪರಿಗಣಿಸ ದಿದ್ದರೆ ಅದು ಎಂಥಾ ದುರಂತಕ್ಕೆಡೆ ಮಾಡಬಹುದೆಂಬುದನ್ನು ವಿವರಿಸಿ ತನ್ನ ವಾದವನ್ನು ಮುಗಿಸಿದ. ಜೋಸೆಫ್ ಮ್ಯಾಕ್ಲೆ ಎಲ್ಲವನ್ನೂ ಶಾಂತಚಿತ್ತನಾಗಿ ಕೇಳಿ ಕೊಂಡು, ನಂತರ, "ಆದರೆ ಆರನೆಯ ನಿಯಮವನ್ನು ಮಾತ್ರ ಮರೆಯಬೇಡ," ಎಂದು ಹೇಳಿದ. ಅಧಿಕಾರಿ ಸುಮ್ಮನೆ ತಲೆ ತಗ್ಗಿಸಿಕೊಂಡು ಹೊರಟುಹೋದ. ಸಂದರ್ಶಕ ಕುತೂಹಲವನ್ನು ತಡೆಯಲಾರದೆ, "ಆರನೆಯ ನಿಯಮ ಯಾವುದು ಸ್ವಾಮಿ? ಅದನ್ನು ಗೌಪ್ಯವಾಗಿ ಇಡಬೇಕಿದ್ದರೆ ಹೇಳಬೇಡಿ. ಇಲ್ಲದಿದ್ದರೆ ಹೇಳಿ; ಎಂದರೆ ನನ್ನ ಕುತೂಹಲವಾದರೂ ತಣಿಯುತ್ತದೆ," ಎಂದ. "ಓಹೋ ಅದರಲ್ಲೇನು? ಹೇಳಿಯೇ ಬಿಡುತ್ತೇನೆ. ಆರನೆಯ ನಿಯಮವೆಂದರೆ, ಯಾವ ವಿಷಯವನ್ನು ಅಷ್ಟಾಗಿ ತಲೆಗೆ ಹಚ್ಚಿಕೊಳ್ಳಬೇಡ ಎಂಬುದು," ಅಂದ ಜೋಸೆಫ್ ಮ್ಯಾಕ್ಲೆ. "ಹಾಗಾದರೆ ಉಳಿದ ಐದು ನಿಯಮಗಳಾವವು?" ಸಂದರ್ಶಕ ಕೇಳಿದ. "ಅನ? ಅಂಥ ನಿಯಮ ಗಳಾವವೂ ಇಲ್ಲ. ಯುದ್ಧ ಪ್ರಸಂಗದಲ್ಲಿ ಯಾವುದನ್ನೂ ಎದುರಿಸಲು ಇದೊಂದು ನಿಯಮ ಸಾಲದೆ?" ಎಂದ ಜೋಸೆಫ್ ಮ್ಯಾಕ್ಲೆ.

ವಚನವೀಥಿ

- ಅಗ್ನಿಯೊಡನೆ ತೃಣಗಳಿಗೆ ಕಲಹವುಂಟೆ ?
- ಅರಮನೆಯ ಛತ್ರಕ್ಕೆ ಹೆಗ್ಗಣಗಳು ಜಗಳಾಡಿದಂತೆ !
- ಇಲಿಯಂ ಹಿಡಿಯುವುದಕ್ಕೆ ಬೆಟ್ಟವನ್ನಗೆಳ್ವಂತೆ.
- ಕೋಪವಿದ್ದವರಲ್ಲಿ ಆಶ್ರಿತಾಭಿಮಾನವು ದೃಢವಾಗಿರುವುದು.
- ಖಡ್ಗದ ಗಾಯದಲ್ಲಿ ಬಾಣ ಬಂದು ನೆಟ್ಟುಕೊಂಡಂತೆ.
- ದರಿದ್ರಕ್ಕೆ ಕೊರೆ ಹಚ್ಚಿದೆ ಹಾಗೆ.
- ದರ್ಪಿಯಂ ಸಂಪಾದಿಸಿರಲು ಕೈಸುಟ್ಟುಕೊಳ್ಳುವುದೇಕೆ ?
- ಪ್ರವಾಹಕ್ಕೆ ಮಳಲಸೇತುವೆಯಂ ಕಟ್ಟಿದಂತೆ.
- ಬಹು ಜನರಂ ಹುಟ್ಟಿದರೆ ಬಹು ಕ್ಲೇಶವುಂಟು.
- ಮರಿಯಾನೆಯು ಯುದ್ಧಪತಿಯಾದಂತೆ.
- ಲೋಕದಲ್ಲಿ ಬಾಲಕರ ವಾಕ್ಯವೂ ಮುಕ್ಕರ ವಾಕ್ಯವೂ ವಿನೋದಕ್ಕೆ ಯೋಗ್ಯವಲ್ಲದೆ ವಿಷಾದಕ್ಕೆ ಯೋಗ್ಯವಲ್ಲ.
- ಲೋಕದಲ್ಲಿ ವಿಮರ್ಶೆಯಿಲ್ಲದೆ ಮಾಡುವ ಕೋಪವೂ ವ್ಯಸನವೂ ಅನರ್ಥಕ್ಕೆ ಕಾರಣ.
- ವಪನವಂ ಮಾಡಿಕೊಂಡ ಬಳಿಕ "ಆಯುಷ್ಕರ್ಮಕ್ಕೆ ದಿವಸವು ಹೇಗಿರುವುದು ?" ಎಂದು ಕೇಳುವಂತೆ.

—ಕೆಂಪುನಾರಾಯಣನ 'ಮುದ್ರಾಮಂಜೂಷ'ದಿಂದ

ಮುಂಬಯಿ ವಿಶ್ವವಿದ್ಯಾಲಯದ

ನೂರಾ ಇಪ್ಪತ್ತೈದು ವಸಂತಗಳು

ವಸಂತ ಕಲಕೋಟಿ


ಮುಂಬಯಿ ವಿಶ್ವವಿದ್ಯಾಲಯಕ್ಕೀಗ ೧೨೫ ವರುಷ. ೧೮೫೭ ರಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ಸ್ಥಾಪಿಸಲ್ಪಟ್ಟ ಮೂರು ವಿಶ್ವವಿದ್ಯಾಲಯಗಳಲ್ಲಿ ಇದೊಂದು.

ಭಾರತದಲ್ಲಿ ಇಂಗ್ಲಿಷ್ ಶಿಕ್ಷಣ ಪ್ರಸಾರವಾಗಬೇಕೆಂಬ ಹಂಬಲ ರಾಜಾ ರಾಮಮೋಹನ ರಾಯರಂಥ ಮೇಧಾವಿಗಳಿಗೆ ತುಂಬ ಇದ್ದಿತು. ಭಾರತೀಯ ಸಂಸ್ಕೃತಿಯ ಪುನರುತ್ಥಾನಕ್ಕೆ ಆಧುನಿಕ ಶಿಕ್ಷಣ ಅವಶ್ಯವೆಂಬುದು ಅವರ ಅಭಿಪ್ರಾಯ. ಹದಿನೆಂಟನೆಯ ಶತಮಾನದ ಆರಂಭದ ದಶಕಗಳಲ್ಲಿ ಅವರು ಬ್ರಾಹ್ಮ ಸಮಾಜ, ಪ್ರಾರ್ಥನಾ ಸಮಾಜ ಹೀಗೆ ಹಲವು ಸಾಮಾಜಿಕ ಸಂಸ್ಥೆಗಳನ್ನು ಕಟ್ಟಿ ಅವುಗಳ ಮುಖಾಂತರ ಭಾರತೀಯ ಸಮಾಜದ ಲೋಪದೋಷಗಳನ್ನು ಎತ್ತಿ ತೋರಿಸುವ ಪ್ರಯತ್ನ ಮಾಡಿದರು. ಸಮಾನತೆ, ವ್ಯಕ್ತಿ ಸ್ವಾತಂತ್ರ್ಯ, ಸ್ತ್ರೀ ಶಿಕ್ಷಣ, ಅಸ್ಪೃಶ್ಯ ಜಾತಿ ಪದ್ಧತಿ ನಿರ್ಮೂಲನೆ ಮತ್ತು ಬಾಲ ವಿವಾಹ ಪ್ರತಿಬಂಧ ಮುಂತಾದ ವಿಷಯಗಳಲ್ಲಿ ಹೊಸ ಮೌಲ್ಯಗಳ ಬಗೆಗೆ ಸಮಾಜದಲ್ಲಿ ಪ್ರಚಾರ ಮಾಡಲು ಅವರು ಪ್ರಯತ್ನಿಸಿದರು.

ಸಾಮಾನ್ಯ ಜನತೆಗೆ ಶಿಕ್ಷಣ ಸಿಗುವುದು ಆಗ ಸುಲಭವಾಗಿರಲಿಲ್ಲ. ಜನರಲ್ಲಿ ಇಂಗ್ಲಿಷ್ ಆಡಳಿತೆಯ ಬಗೆಗೆ ಕಟು ವಿರೋಧವಿದ್ದಂತೆ ಇಂಗ್ಲಿಷ್ ಶಿಕ್ಷಣದ ಮೇಲೂ ತುಂಬ ವಿರೋಧವಿದ್ದಿತು. ದೇಶದಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸುವ ಮೊದಲು ಅನೇಕರು ಹಲವು ರೀತಿಯಲ್ಲಿ ಕಾರ್ಯ ಮಾಡಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಸೇಂಟ್ ಥಾಮಸ್ ಚರ್ಚಿನ ರೆ. ರಿಚರ್ಡ್ ಕೊಬೆ ಅವರು ಯುರೋಪಿನ ಬಡ ಮಕ್ಕಳಿಗಾಗಿ ಪ್ರಪ್ರಥಮ ಇಂಗ್ಲಿಷ್ ಶಾಲೆಯನ್ನು ಆರಂಭಿಸಿದರು. ಭಾರತದಲ್ಲಿ ಇಂಗ್ಲಿಷ್ ಶಿಕ್ಷಣದ ಜನಕರೆಂದು ಖ್ಯಾತರಾದ ಸರ್ ಜಾನ್ ವಿಲ್ಸನ್ ಅವರು ಮುಂಬಯಿಯಲ್ಲಿ ಪ್ರಪ್ರಥಮ ಇಂಗ್ಲಿಷ್ ಮಾಧ್ಯಮದ ವಿಲ್ಸನ್ ಕಾಲೇಜನ್ನು ಚೌಪಾಟಿಯಲ್ಲಿ ೧೮೩೨ ರಲ್ಲಿ ಸ್ಥಾಪಿಸಿದರು. ಇಂದಿಗೂ ಈ ಕಾಲೇಜು ಮುಂಬಯಿ ಮಹಾನಗರದ ಪ್ರತಿಷ್ಠಿತ ಮಹಾವಿದ್ಯಾಲಯಗಳಲ್ಲಿ ಒಂದು ಎಂಬ ಖ್ಯಾತಿ ಪಡೆದಿದೆ. ೧೮೪೫ ರಲ್ಲಿ ಭಾರತದಲ್ಲಿಯೇ ಪ್ರಪ್ರಥಮ ಮೆಡಿಕಲ್ ಕಾಲೇಜು – ಗ್ರ್ಯಾಂಟ್ ಮೆಡಿಕಲ್ ಕಾಲೇಜು – ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟಿತು. ಆ ವರುಷ ಈ ವೈದ್ಯಕೀಯ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಕೇವಲ ೧೨.

ರಾಜಾಬಾಯಿ ಟಾವರ್



೧೮೬೪ರ ಅಗಸ್ಟ್ ತಿಂಗಳು. ಮುಂಬಯಿಯ ಹಿರಿಯ ವರ್ತಕ ಪ್ರೇಮಚಂದ ರಾಯಚಂದ ಅವರು ಮಹಾನಗರಕ್ಕೆ ಶೋಭೆಯೆನಿಸಬಲ್ಲಂಥ ಒಂದು ಕಟ್ಟಡ ನಿರ್ಮಾಣ ಹಾಗೂ ಮುಂಬಯಿ ವಿಶ್ವವಿದ್ಯಾಲಯದ ಮಹೋನ್ನತ ಸಾಧನೆಗೆ ಅಪೂರ್ವ ಗ್ರಂಥಗಳ ಸಂಗ್ರಹಾಲಯದ ನೆರವು ಸಿಗಲೆಂಬ ಉದ್ದೇಶದಿಂದ ವಿಶ್ವವಿದ್ಯಾಲಯಕ್ಕೆ ಎರಡು ಲಕ್ಷ ರೂಪಾಯಿಗಳನ್ನು ದೇಣಿಗೆ ನೀಡಿದರು. ಎರಡು ತಿಂಗಳ ನಂತರ ಮತ್ತೆ ಎರಡು ಲಕ್ಷ ರೂಪಾಯಿಗಳನ್ನು ನೀಡಿ ಈ ಕಟ್ಟಡದ ಮೇಲೆ ಒಂದು ದೊಡ್ಡ ಗಡಿಯಾರವನ್ನು ಸ್ಥಾಪಿಸಲು ವಿನಂತಿಸಿಕೊಂಡರು. ಪ್ರೇಮಚಂದರ ತಾಯಿ ಶ್ರೀಮತಿ ರಾಜಾಬಾಯಿಯವರ ಸ್ಮರಣಾರ್ಥ ನಿರ್ಮಾಣಗೊಂಡ ಈ ಅಪೂರ್ವ ಕಟ್ಟಡ 'ರಾಜಾಬಾಯಿ ಟಾವರ್' ಎಂದೇ ಪ್ರಸಿದ್ಧವಾಗಿದೆ.

೧೮೬೯ರ ಜುಲೈ ೧ ರಂದು ಈ ಕಟ್ಟಡದ ಕೆಲಸ ಆರಂಭವಾಯಿತು (ಗಿಲ್ಬರ್ಟ್ ಸ್ಕಾಟ್ ಎಂಬ ಆಂಗ್ಲ ಇಂಜಿನಿಯರ್ ರೂಪಿಸಿದ ಮಾದರಿಯ ಆಧಾರದ ಮೇಲೆ). ಲೆ. ಕ. ಫುಲರ್ ಮತ್ತು ಎಚ್. ಹಾರ್ಟ್ ಮೇಲ್ವಿಚಾರಕರಾಗಿದ್ದರು. ಮುಕುಂದ-ರಾಯ್ ಚಂದರ್ ಎಂಬ ಇಂಜಿನಿಯರರು ಕಟ್ಟಡ ನಿರ್ಮಾಣದ ಹೊಣೆ ಹೊತ್ತರು. ೧೮೭೮ರಲ್ಲಿ ಅಂದರೆ ಒಂಬತ್ತು ವರುಷಗಳ ನಂತರ ಕಟ್ಟಡ ಪೂರ್ತಿಯಾಯಿತು. ೨೭-೨-೧೮೮೦ರಂದು ವಿಶ್ವವಿದ್ಯಾಲಯದ ಗ್ರಂಥಾಲಯದೊಂದಿಗೆ ಈ ಕಟ್ಟಡದ ಉದ್ಘಾಟನೆಯಾಯಿತು. ೨೮೦ ಅಡಿ ಎತ್ತರದ ಈ ರಾಜಾಬಾಯಿ ಟಾವರ್ ವಿಶ್ವವಿದ್ಯಾಲಯದ ಕೀರ್ತಿಯನ್ನು ಗಗನಕ್ಕೇರಿಸಿತು. ಈ ಕಟ್ಟಡದ ಕೆಳ ಅಂತಸ್ತು ೧೫೨ ಅಡಿ ಅಗಲವಿದ್ದು ಇಕ್ಕೆಡೆಗಳಲ್ಲಿ ವಿಸ್ತಾರವಾದ

ಒಂದು ಹಾಲನ್ನು ಒಳಗೊಂಡಿದೆ. ಪ್ರಧಾನ ಕಟ್ಟಡ ಎರಡು ಅಂತಸ್ತಿನದು. ಮೇಲ್ಭಾಗದಲ್ಲಿ ವಿಶಾಲವಾದ ಕೊಠಡಿಯಿದೆ. ಈಗ ಇದನ್ನು ವಾಚನಾಲಯವಾಗಿ ಉಪಯೋಗಿಸಲಾಗುತ್ತಿದೆ. ವಿಶಾಲವಾದ ಕಿಟಕಿಗಳಿಗೆ ಜೋಡಿಸಿದ ಅಲಂಕೃತ ವರ್ಣಮಯ ಗಾಜಿನ ಬಾಗಿಲುಗಳು ಇಲ್ಲಿಯ ಮತ್ತೊಂದು ಆಕರ್ಷಣೆ.

ಪಾಶ್ಚಿಮಾತ್ಯ ಮತ್ತು ಪೌರಸ್ತ್ಯ ಶೈಲಿಯ ಸಮ್ಮಿಶ್ರ ಸುಂದರ ಕಟ್ಟಡವಿದು. ಪ್ರಧಾನ ಕಟ್ಟಡದ ಮುಂದಿನ ದ್ವಾರ ಮಂಟಪದ ಮೇಲೆ ಗೋಪುರ ಎದ್ದು ನಿಂತಿದೆ. ಇದು ೬೪ ಅಡಿಗಳಷ್ಟು ಎತ್ತರದ ವರೆಗೆ ಆಯತಾಕೃತಿಯಲ್ಲಿ ಸಾಗಿದೆ. ಇಲ್ಲಿಂದ ೧೧೮ ಅಡಿಗಳಷ್ಟು ಎತ್ತರದ ವರೆಗೆ ಗೋಪುರ ಅಷ್ಟಕೋನಾಕೃತಿಯಲ್ಲಿದೆ. ಕೊನೆಯ ಹಂತ ಕಳಸದಂತಿದ್ದು ೯೪ ಅಡಿಗಳಷ್ಟಿದೆ. ಗೋಪುರದ ನಾಲ್ಕು ದಿಕ್ಕಿಗಿರುವ ಗಡಿಯಾರದ ವ್ಯಾಸ ೧೨॥ ಅಡಿಯಿದೆ. ಮೊದಲು ಗೋಪುರದ ಮೇಲಿರುವ ಗಡಿಯಾರ ಲಂಡನ್ನಿನ ಬಿಗ್‌ಬೆನ್‌ನಂತೆ ಗಂಟೆ ಬಾರಿಸುತ್ತಿತ್ತಂತೆ. ೧೯೩೧ ರಲ್ಲಿ ಆ ಗಡಿಯಾರ ಕೆಟ್ಟು ಹೋಗಿ ವಿದ್ಯುತ್‌ಚಾಲಿತ ಗಡಿಯಾರವೊಂದನ್ನು ಅಲ್ಲಿ ಜೋಡಿಸಲಾಯಿತಂತೆ. ಇದಕ್ಕೂ ಪ್ರೇಮಚಂದ ರಾಯಚಂದ ಅವರ ಮಕ್ಕಳು ೧೦ ಸಾವಿರ ರೂಪಾಯಿ ನೀಡಿದರಂತೆ.

೧೯೭೮ರಲ್ಲಿ ರಾಜಾಬಾಯಿ ಟಾವರಿಗೆ ೧೦೦ ವರ್ಷ ತುಂಬಿತು. ಆದರೆ ಈ ಮಹಾನ್ ಕಟ್ಟಡದ ನಿರ್ಮಾಣಕ್ಕೆ ನಾಲ್ಕು ಲಕ್ಷ ರೂಪಾಯಿಗಳ ದಾನ ನೀಡಿದ ಪ್ರೇಮಚಂದ ರಾಯಚಂದ ಅವರು ಕೊನೆಕೊನೆಗೆ ವ್ಯಾಪಾರದಲ್ಲಿ ಕೈ ಸುಟ್ಟುಕೊಂಡದ್ದು ಖೇದಕರ.

ಇಂದು ಮುಂಬೈಯಲ್ಲಿ ಅನೇಕ ಗಗನ ಚುಂಬಿ ಕಟ್ಟಡಗಳ ನಿರ್ಮಾಣವಾಗಿದೆ, ಆಗುತ್ತಿದೆ. ಆದರೂ ರಾಜಾಬಾಯಿ ಟಾವರಿನ ಸೌಂದರ್ಯ ಗಾಂಭೀರ್ಯಗಳ ಮುಂದೆ ಅವು ತೀರ ಸಪ್ಪೆ.

೧೮೫೩ ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಚಾರ್ಟರನ್ನು ಪುನಃ ಜಾರಿಗೊಳಿಸಬೇಕಿತ್ತು. ಆಗ ಬ್ರಿಟಿಶ್ ಸಂಸತ್ತಿನಲ್ಲಿ ಕಂಪನಿಯ ವಿಧ್ಯಮಾನಗಳ ಬಗೆಗೆ ಸಾಕಷ್ಟು ಚರ್ಚೆ ನಡೆದು ಭಾರತದ ಪ್ರಜೆಗಳ ಸ್ಥಿತಿಗತಿಯನ್ನು ಪರಿಶೀಲಿಸುವದು ಹಾಗೂ ಅವರಿಗೆ ಶಿಕ್ಷಣ ಸೌಲಭ್ಯ ಕಲ್ಪಿಸುವುದಕ್ಕಾಗಿ ಸಂಸತ್ತು ಒಂದು ಸಿಲೆಕ್ಟ್ ಸಮಿತಿಯನ್ನು ನಿಯಮಿಸಿತು. ಸರ್ ಚಾರ್ಲ್ಸ್ ವುಡ್ ಅವರು ಈ ಸಮಿತಿಯ ಅಧ್ಯಕ್ಷರಾಗಿ ನಿಯುಕ್ತಗೊಂಡು ಭಾರತದಲ್ಲಿ ಶಿಕ್ಷಣ ಸುಧಾರಣೆಗಳ ಬಗೆಗೆ ಒಂದು ವಿವರವಾದ ವರದಿಯನ್ನು ಸಿದ್ಧಪಡಿಸಿದರು. ಈಸ್ಟ್ ಇಂಡಿಯಾ ಕಂಪನಿಯ ಬೋರ್ಡ್ ಆಫ್ ಡಾಯರೆಕ್ಟರ್ಸ್ ಈ ವರದಿಯನ್ನು ಸ್ವೀಕರಿಸಿ ಕಲಕತ್ತಾ, ಮುಂಬಯಿ ಮದ್ರಾಸ ಹೀಗೆ ಮೂರು ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಲು ಅನುಮತಿ ನೀಡಿತಲ್ಲದೇ ಪ್ರತಿಯೊಂದು ಇಂಗ್ಲಿಷ್ ಪ್ರಶಾಸಿತ ಪ್ರಾಂತದಲ್ಲಿ ಡಾಯರೆಕ್ಟರ್ ಆಫ್ ಎಜ್ಯುಕೇಶನ್ ಹುದ್ದೆಯನ್ನು ಕಲ್ಪಿಸಿತು. ಸರ್ ಜಾನ್ ಕಾಲ್‌ವಿಲೆ ಅವರ ಅಧ್ಯಕ್ಷತೆಯಲ್ಲಿ ೧೨-೧೨-೧೮೫೫ ರಂದು ಒಂದು ಸಮಿತಿ ರಚಿಸಲ್ಪಟ್ಟು ಅದರ ಸಿಫಾರಸಿನಂತೆ ಸೆಂಟ್ರಲ್ ಅಸೆಂಬ್ಲಿಯು ಮೂರು ಪ್ರತ್ಯೇಕ ಕಾಯ್ದೆಗಳನ್ನು ಪಾಸುಮಾಡಿ ಕಲಕತ್ತಾ ೨೪-೧-೧೮೫೭, ಮುಂಬಯಿ ೧೮-೭-೧೮೫೭ ಮತ್ತು ಮದ್ರಾಸ್ ೫-೧೨-೧೮೫೭ ಹೀಗೆ ಮೂರು ವಿಶ್ವವಿದ್ಯಾಲಯಗಳನ್ನು ೧೮೫೭ ರಲ್ಲಿ ಸ್ಥಾಪಿಸಿತು.

೧೮೫೭ ರ ಬಾಂಬೆ ಯುನಿವರ್ಸಿಟಿ ಆಕ್ಟಿನ ಕೆಲ ಅಂಶಗಳನ್ನು ಗಮನಿಸಬಹುದು. ವಿಶ್ವ ವಿದ್ಯಾಲಯಕ್ಕೆ ಒಂದು ಸಿನೇಟ್ ಕಲ್ಪಿಸಿದ್ದು ೨೬ಕ್ಕಿಂತ ಹೆಚ್ಚಿಲ್ಲದ ಮತ್ತು ಹದಿನಾರಕ್ಕಿಂತ ಕಡಿಮೆ ಯಾಗದಷ್ಟು ಸದಸ್ಯರು ಸಿನೇಟಿಗೆ ನಿಯುಕ್ತಗೊಳ್ಳುವರು ಮತ್ತು ಸಿನೇಟ್ ಸದಸ್ಯರಿಗೆ ಫೆಲೋಸ್ ಎಂದು ಸಂಬೋಧಿಸುವರು. ಆರಂಭದ ೨೬ ಸಿನೇಟ್ ಸದಸ್ಯರ ಹೆಸರುಗಳನ್ನು ಆಕ್ಟಿನಲ್ಲಿಯೇ ನಮೂದಿಸಲಾಗಿತ್ತು. ಆಕ್ಟಿನಲ್ಲಿ ಸಿಂಡಿಕೇಟ್ (ವಿಶ್ವವಿದ್ಯಾಲಯದ ಆಡಳಿತ ಮಂಡಳಿ; ಈಗ ಎಕ್ಸಿಕ್ಯುಟಿವ್ ಕೌನ್ಸಿಲ್ ಎಂದು ಹೆಸರಿಸಲಾಗಿದೆ) ಉಲ್ಲೇಖವಿರಲಿಲ್ಲ. ಆದರೆ

ವಿಶ್ವವಿದ್ಯಾಲಯವು ಒಂದು Statute ಪಾಸು ಮಾಡಿಕೊಂಡು ಸಿಂಡಿಕೇಟ್ ಪ್ರಾರಂಭಿಸಿತು. ಮುಂಬಯಿ ಪ್ರಾಂತದ ಆಗಿನ ಗವರ್ನರ್ ಲಾರ್ಡ್ ಎಲ್‌ಫಿನ್‌ಸ್ಟನ್ ಅವರು ಮುಂಬಯಿ ವಿಶ್ವವಿದ್ಯಾಲಯದ ಪ್ರಪ್ರಥಮ ಕುಲಪತಿಗಳಾಗಿ ಮತ್ತು ಸುಪ್ರಿಂ ಕೋರ್ಟಿನ ನ್ಯಾಯಮೂರ್ತಿ ಸರ್ ವಿಲಿಯಂ ಯಾರ್ಡ್‌ಲೀ ಅವರು ಪ್ರಪ್ರಥಮ ಉಪಕುಲಪತಿಗಳಾಗಿ ನಿಯುಕ್ತಗೊಂಡರು. ಆಗ ಮುಂಬಯಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ವಿಶೇಷವಾಗಿ ಸೇವೆ ಸಲ್ಲಿಸಿದ ಜಗನ್ನಾಥ ಶಂಕರ ಸೇಠ, ಡಾ. ಭಾವು ದಾಜಿ, ಸರ್ ಜಮಶೇಟಜಿ ಜೀಜೀಭಾಯಿ, ಮುಂಬಯಿ ಬಿಷಪ್ಪರಾಗಿದ್ದ ಜಾನ್ ವಿಲಿಯಮ್ಸ್, ಮುಂಬಯಿಯ ಹಾಜಿ ಮೊಹಮ್ಮದ ಯೂಸುಫ್ ಮೊರ್ಗೆ, ಜೊಮಾನ ಜೀಹೊಮರ್ಜಿಸಜೀ ಅವರು ಫೆಲೊಗಳಾಗಿ ಮತ್ತು ಮುಂಬಯಿಯಲ್ಲಿ ಇಂಗ್ಲಿಷ್ ಶಿಕ್ಷಣದ ಜನಕರೆನ್ನಿಸಿದ ಸರ್ ಜಾನ್ ವಿಲ್ಸನ್ ಅವರು ವಿಶ್ವವಿದ್ಯಾಲಯದ ಪ್ರಥಮ ಸಿನೇಟಿನ ಸದಸ್ಯರಾಗಿದ್ದರು.

ಮುಂಬಯಿ ವಿಶ್ವವಿದ್ಯಾಲಯವು ೧೮೫೯ ರಲ್ಲಿ ಮೊಟ್ಟ ಮೊದಲು ಮೆಟ್ರಿಕ್ ಪರೀಕ್ಷೆಯನ್ನು ನಡೆಸಿತು. ೨೨ ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಪಾಸಾದರು. ಇವರಲ್ಲಿ ಹದಿನೈದು ವಿದ್ಯಾರ್ಥಿಗಳು F.Y. ಆರ್ಟ್ಸ್ ಪರೀಕ್ಷೆಗೆ ೧೮೬೧ ರಲ್ಲಿ ಕುಳಿತು ಏಳು ಜನರು ಪಾಸಾದರು. ಮತ್ತೆ ಅವರಲ್ಲಿ ಆರು ವಿದ್ಯಾರ್ಥಿಗಳು ಬಿ. ಎ. ಪರೀಕ್ಷೆಗೆ ಕುಳಿತರು. ಅವರಲ್ಲಿ ಮಹಾದೇವ ಗೋವಿಂದ ರಾನಡೆ, ರಾಮಕೃಷ್ಣ ಗೋಪಾಲ ಭಂಡಾರಕರ, ಮೋಹನ ಆಬಾಜಿ ಮೋಡಕ ಈ ಮೂವರು ಪ್ರಥಮ ತರಗತಿಯಲ್ಲಿ ಮತ್ತು ಬಾಳ ಮಂಗೇಶ ವಾಗಳೆ ಅವರು ಪಾಸು ತರಗತಿಯಲ್ಲಿ ಪಾಸಾಗಿ ಮುಂಬಯಿ ವಿಶ್ವವಿದ್ಯಾಲಯದ ಪ್ರಪ್ರಥಮ ಪದವೀಧರರೆನ್ನಿಸಿಕೊಂಡರು. ೨೦-೪-೧೮೬೧ ರಂದು ವಿಶ್ವವಿದ್ಯಾಲಯ ಪ್ರಥಮ ಕಾನ್ವೋಕೇಶನ್ (ಪದವೀದಾನ ಸಮಾರಂಭ) ಜರುಗಿತು. ವಿಶ್ವವಿದ್ಯಾಲಯದ ನಾಲ್ವರು ಪ್ರಥಮ ಪ್ರಮುಖ ಪದವೀಧರರಲ್ಲಿ ಮಹಾದೇವ ಗೋವಿಂದ ರಾನಡೆ ಮತ್ತು ರಾಮಕೃಷ್ಣ ಗೋಪಾಳ ಭಂಡಾರಕರ ಅವರು ಎಂ. ಎ. ಪರೀಕ್ಷೆಯನ್ನು ಪ್ರಥಮ ತರಗತಿಯಲ್ಲಿ ಪಾಸಾದರು. ರಾನಡೆ ಅವರಿಗೆ ಗೋಲ್ಡ್ ಮೆಡಲ್ ದೊರೆಯಿತು. ಅವರು ಎಲ್‌ಎಲ್. ಬಿ. ಪರೀಕ್ಷೆಯಲ್ಲಿ ಸಹ ಪ್ರಥಮ ತರಗತಿಯಲ್ಲಿ ಪಾಸಾದರು. ರಾನಡೆಯವರ ವಿದ್ವತ್ತನ್ನು ಮೆಚ್ಚಿಕೊಂಡು ಲೋಕಮಾನ್ಯ ಟಿಳಕರು ರಾನಡೆಯವರಿಗೆ "ಸರ್ವಜ್ಞಃ ಸಹಿ ಮಾಧವಃ" ಎಂದು ಕರೆಯುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು. ವಿಶ್ವವಿದ್ಯಾಲಯದಲ್ಲಿ ಆರ್ಟ್ಸ್, ಸಾಯನ್ಸ್, ಕಾಮರ್ಸ್, ಲಾ ಮತ್ತು ಟೆಕ್ನಾಲಜಿ ಫ್ಯಾಕಲ್ಟಿಗಳು ೧೮೬೨ ರಲ್ಲಿ ಆರಂಭಗೊಂಡವು. ೧೮೮೭ ರಲ್ಲಿ ನಡೆದ ಮೊದಲ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಎಲ್. ಎಂ. ಆ್ಯಂಡ್ ಎಸ್. ವೈದ್ಯಕೀಯ ಪರೀಕ್ಷೆಗಳು ೧೮೬೦ ರಲ್ಲಿ ಆರಂಭಗೊಂಡರೂ ಎಂ. ಬಿ. ಬಿ. ಎಸ್. ಪರೀಕ್ಷೆ ಆರಂಭವಾದುದು ೧೯೧೨ ರಲ್ಲಿ. ಅಣ್ಣಾ ಮೋರೇಶ್ವರ ಕುಂಟೆ ಅವರು ಪ್ರಥಮ ವೈದ್ಯಕೀಯ ಪದವೀಧರರು.

ಆರಂಭದ ಹದಿನೇಳು ವರುಷಗಳ ವರೆಗೆ ಮುಂಬಯಿ ವಿಶ್ವವಿದ್ಯಾಲಯಕ್ಕೆ ಪದವೀದಾನ ಸಮಾರಂಭ ನಡೆಸಲು ತನ್ನದೇ ಆದ ಸಭಾಗೃಹವಿರಲಿಲ್ಲ. ಟೌನ್‌ಹಾಲಿನಲ್ಲಿ ಈ ಸಮಾರಂಭ ನಡೆಯುತ್ತಿತ್ತು. ಸರ್ ಕಾವಸಜೀ ಜಹಾಂಗೀರ್ ರೆಡಿಮನಿ ಅವರು ಈ ಸಭಾಗೃಹ ಕಟ್ಟಲು ಒಂದು ಲಕ್ಷ ರೂಪಾಯಿ ದಾನ ನೀಡಿದರು. ಮೊದಲು ತಯಾರಿಸಿದ ಪ್ಲಾನಿನಂತೆ ಈಗ ಶ್ರೇಷ್ಠ ನ್ಯಾಯಾಲಯವಿರುವ ಸ್ಥಳದಲ್ಲಿ ವಿಶ್ವವಿದ್ಯಾಲಯದ ಕಾನ್ವೊಕೇಶನ್ ಹಾಲ್ ಕಟ್ಟಬೇಕಿತ್ತು. ನಂತರ ೫೩೦ ಅಡಿ ಉದ್ದ ೩೭೧ ಅಡಿ ಅಗಲವಿರುವ ಪ್ಲಾಟನ್ನು ಇದಕ್ಕಾಗಿ ನೀಡಲಾಯಿತು. ಆದರೆ ಕಟ್ಟಡ ಕಾರ್ಯವು ತುಂಬ ನಿಧಾನವಾಗಿ ಸಾಗಿದ್ದರಿಂದ ರೆಡಿಮನಿ ಅವರು ಆಗ ರಜಿಸ್ಟ್ರಾರ್ ಆಗಿದ್ದ ಸಿಂಕ್ಲೇರ್ ಅವರಿಗೆ ಕಾಗದ ಬರೆದು ತಾವು ದಾನವಾಗಿ ನೀಡಿದ್ದ ಒಂದು ಲಕ್ಷ ರೂಪಾಯಿಗಳನ್ನು ೫% ಬಡ್ಡಿಯೊಂದಿಗೆ ಮರಳಿ ಕೊಡ

ಬೇಕೆಂದು ಕೇಳಿಕೊಂಡರು.

ಆರಂಭದ ಕೆಲ ವರುಷಗಳ ವರೆಗೆ ಪದವೀದಾನ ಸಮಾರಂಭದ ಮೊದಲು ಗವರ್ನರ್ ಬ್ಯಾಂಡ್ ವಾದ್ಯ ನುಡಿಸಲಾಗುತ್ತಿತ್ತು. ೧೮೬೩ ರಲ್ಲಿ ಸಿನೇಟ್, ಸಿಂಡಿಕೇಟ್ ಸದಸ್ಯರು ಚಾನ್ಸಲರ್, ವ್ಹಾಯಿಸ್ ಚಾನ್ಸಲರ್ ಮತ್ತು ಪದವಿ ಸ್ವೀಕರಿಸುವ ವಿದ್ಯಾರ್ಥಿಗಳು ಗೌನ್ ಧರಿಸುವ ಪದ್ಧತಿ ಆರಂಭವಾಯಿತು. ಒಂದು ಸಲ ಲಾರ್ಡ್ ಸ್ಟಾನ್‌ಫೋರ್ಡ್‌ರು ಗೌನ್ ಧರಿಸದೇ ಬಂದುದಕ್ಕಾಗಿ ಕ್ಷಮೆ ಕೇಳಬೇಕಾಯಿತಂತೆ. ೧೮೮೪ ರಲ್ಲಿ ಕಲಕತ್ತಾ, ಮುಂಬಯಿ, ಮದ್ರಾಸ್ ವಿಶ್ವವಿದ್ಯಾಲಯಗಳಿಗೆ ಗೌರವ ಡಾಕ್ಟರ್ ಆಫ್ ಲಾ ಪದವಿ ನೀಡುವ ಅಧಿಕಾರ ಕೊಡಲಾಯಿತು. ಮುಂಬಯಿ ವಿಶ್ವವಿದ್ಯಾಲಯು ತನ್ನ ೧೨೫ ವರುಷಗಳ ಅವಧಿಯಲ್ಲಿ ಕೇವಲ ಹದಿನೆಂಟು ಪ್ರತಿಷ್ಠಿತ ವ್ಯಕ್ತಿಗಳಿಗೆ ಈ ಗೌರವ ಡಾಕ್ಟರೇಟ್ ಪದವಿ ನೀಡಿದುದನ್ನು ನೋಡಿದರೆ ವಿಶ್ವವಿದ್ಯಾಲಯುದ ಕಟ್ಟುನಿಟ್ಟಿನ ಮತ್ತು ಘನತೆಯು ಅರಿವಾಗದಿರದು. ಕಳೆದ ಶತಮಾನದಲ್ಲಿ ಸರ್ ಫಿರೋಜ ಶಹಾ ಮೆಹತಾ ಮತ್ತು ಎನ್. ಆರ್. ಪಾಠಕ ಅವರಿಗೆ ಗೌರವ ಡಾಕ್ಟರೇಟ್ ಘೋಷಿಸಿದರೂ ಅವರಿಗಾಗಿ ವಿಶೇಷ ಪದವೀದಾನ ಸಮಾರಂಭ ಜರುಗುವ ಮೊದಲೇ ಇಬ್ಬರೂ ನಿಧನರಾಗಿದ್ದರು. ಭಾರತದಲ್ಲಿ ಗ್ರಾಮ ನಗರ ಪಂಚಾಯತಿ ಆಡಳಿತೆಯ ಜನಕ ಲಾರ್ಡ್ ರಿಪ್ಪನ್, ಸುಪ್ರಸಿದ್ಧ ಇಂಗ್ಲಿಷ್ ಕವಿ ವರ್ಡ್ಸ್‌ವರ್ಥ್ ನೊಬೆಲ್ ಪ್ರಶಸ್ತಿ ವಿಜೇತ ಸಿ. ವಿ. ರಾಮನ್, ಸರ್ ಎಂ. ವಿಶ್ವೇಶ್ವರಯ್ಯ, ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ ಜೋಶಿ, ಖ್ಯಾತ ಉದ್ಯೋಗಪತಿ ಜೆ. ಆರ್. ಡಿ. ಟಾಟಾ ಮೊದಲಾದ ಪ್ರತಿಷ್ಠಿತರಿಗೆ ಗೌರವ ಡಾಕ್ಟರೇಟ್ ಸಂದಿದೆ. ೧೮೭೫ ರ ವರೆಗೆ ಮಹಿಳೆಯರಿಗೆ ವಿಶ್ವವಿದ್ಯಾಲಯುದ ಪರೀಕ್ಷೆಗೆ ಕುಳಿತುಕೊಳ್ಳುವ ಅಧಿಕಾರವಿರಲಿಲ್ಲ. ಆದರೆ ಬೆಳಗಾವಿಯ ಪೋಸ್ಟ್ ಮಾಸ್ಟರ್ ಜೆರಸೇಟಜೀ ಅವರ ವಿನಂತಿಯನ್ನು ಪರಿಶೀಲಿಸಿ ಸಿನೇಟು ಅವರ ಮಗಳಿಗೆ ಮೆಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ನಿರಾಕರಿಸಿತು. ಮುಂದೆ ೧೮೮೩ ರಲ್ಲಿ ಮಹಿಳೆಯರಿಗೆ ವಿಶ್ವವಿದ್ಯಾಲಯುವು ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ನೀಡುವ ಠರಾವು ಪಾಸು ಮಾಡಿತು. ಕೊರನಾಲಿಯಾ ಸೊರಾಬಜೀ ಇವರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಅಧ್ಯಯನ ಮಾಡಿ ೧೮೮೮ ರಲ್ಲಿ ಮುಂಬಯಿ ವಿಶ್ವವಿದ್ಯಾಲಯುದ ಬಿ. ಎ. ಪರೀಕ್ಷೆ ಪಾಸು ಮಾಡಿದ ಪ್ರಪ್ರಥಮ ಮಹಿಳೆ ಸ್ವಾತಂತ್ರ್ಯ ಆಂದೋಲನದ ಧೀರ ಮಹಿಳೆ ಮ್ಯಾಡಮ್ ಕಾಮಾ ಸಹ ಮುಂಬಯಿ ವಿಶ್ವವಿದ್ಯಾಲಯುದ ಆರಂಭದ ಪದವೀಧರೆಯರಲ್ಲೊಬ್ಬರು.

೧೮೯೨ ರವರೆಗೆ ಯುರೋಪಿಯನ್ನರೇ ಮುಂಬಯಿ ವಿಶ್ವವಿದ್ಯಾಲಯುದ ಉಪಕುಲಪತಿಗಳಾಗಿದ್ದರು. ೧೮೯೨ ರಲ್ಲಿ ವಿದ್ವಾಂಸ ಕಾಶೀನಾಥ ತ್ರ್ಯಂಬಕ ತೇಲಂಗ್ ಅವರು ಈ ವಿಶ್ವವಿದ್ಯಾಲಯುದ ಪ್ರಪ್ರಥಮ ಭಾರತೀಯ ಉಪಕುಲಪತಿಗಳಾಗಿ ನಿಯುಕ್ತರಾದರು. ಆದರೆ ಅವರ ಅಕಾಲ ನಿಧನದಿಂದಾಗಿ ಸರ್ ರಾಮಕೃಷ್ಣ ಭಂಡಾರಕರ ಅವರು ದ್ವಿತೀಯ ಭಾರತೀಯ ಉಪಕುಲಪತಿಗಳಾಗಿ ನಿಯುಕ್ತರಾದರು. ೧೯೪೭ ರ ವರೆಗೆ ಕೇವಲ ೨೦ ಜನರು ಉಪಕುಲಪತಿಗಳಾಗಿದ್ದರು. ನ್ಯಾಯಮೂರ್ತಿ ವೆಸ್ಟ್ ಅವರು ಮೂರು ಸಲಕ್ಕಿಂತ ಹೆಚ್ಚಾಗಿ ಉಪಕುಲಪತಿಗಳಾಗಿ ನಿಯುಕ್ತರಾದುದು ವಿಶೇಷ. ಸರ್ ನಾರಾಯಣ ಗಣೇಶ ಚಂದಾವರಕರ, ಜಾನ್ ಹೀಟನ್, ಸರ್ ಫಿರೋಜ ಶಹಾ ಮೆಹತಾ, ರೆ. ಡಿ. ಮ್ಯಾಕಿನ್, ಮಿರ್ಜಾ ಅಲಿ ಮೊಹ್ಮದ ಖಾನ್, ರುಸ್ತುಮ್ ಮಸಾನಿ (ಮಿನೂ ಮಸಾನಿ ಅವರ ತಂದೆ), ಬೊಮನ್‌ಜಿ ವಾಡಿಯಾ, ನ್ಯಾಯಮೂರ್ತಿ ಎಂ. ಸಿ. ಛಗಲಾ ಮಹಾಮಹೋಪಾಧ್ಯಾಯ ಪಿ. ವಿ. ಕಾಣೆ, ನ್ಯಾಯಮೂರ್ತಿ ಎನ್. ಎಚ್. ಭಗವತಿ ವರಿಷ್ಠ ನ್ಯಾಯಾಲಯುದ ನಿವೃತ್ತ ಮುಖ್ಯ ನ್ಯಾಯಾಧೀಶ ಡಾ. ಪಿ.ಬಿ.ಗಜೇಂದ್ರಗಡಕರ, ಡಾ. ಖಾನೋಲಕರ, ಡಾ. ಸಾಠೆ, ಡಾ. ಟಿ. ಕೆ. ಟೋಪೆ ಇವರು ಉಪಕುಲಪತಿಗಳಾಗಿ ವಿಶ್ವವಿದ್ಯಾಲಯುದ ಘನತೆಯನ್ನು ಹೆಚ್ಚಿಸಿದ್ದಾರೆ. ಕಳೆದ ನಾಲ್ಕುವರೆ ವರುಷಗಳಿಂದ ಡಾ. ರಾಮ ಜೋಶಿ ಅವರು ಉಪಕುಲಪತಿಗಳಾಗಿ ದಕ್ಷ ಸೇವೆ ಸಲ್ಲಿಸುತ್ತಿದ್ದಾರೆ. ೧೯೮೧ ರಲ್ಲಿ ಕೇವಲ

೯ ಸದಸ್ಯರು ಸಿಂಡಿಕೇಟಿನಲ್ಲಿದ್ದರು. ಆದರೆ ೧೯೭೪ ರಲ್ಲಿ ಪಾಸಾದ ಕಾಯಿದೆಯ ಪ್ರಕಾರ ಈಗ ಎಕ್ಸಿಕ್ಯೂಟಿವ್ ಕೌನ್ಸಿಲ್ಲಿನಲ್ಲಿ ಸದಸ್ಯರ ಸಂಖ್ಯೆ ೨೫. ಹನ್ನೊಂದು ಸದಸ್ಯರು ಆಯ್ಕೆಗೊಂಡವರು. ಹದಿನಾಲ್ಕು ಸದಸ್ಯರು ನಿಯುಕ್ತಗೊಂಡವರು. ಉಪಕುಲಪತಿಗಳು ಎಕ್ಸಿಕ್ಯುಟಿವ್ ಕೌನ್ಸಿಲ್ಲಿನ ಎಕ್ಸ್ ಆಫಿಸಿಯೋ ಚೇರಮನ್ನರು.

ಮೊದಲು ರಜಿಸ್ಟ್ರಾರನನ್ನು ಸಿನೇಟ್ ನಿಯಮಿಸುತ್ತಿತ್ತು. ಅವನ ಕಾರ್ಯಾವಧಿ ಎರಡು ವರುಷ. ರಜಿಸ್ಟ್ರಾರನು ವಿಶ್ವವಿದ್ಯಾಲಯದ ಚೀಫ್ ಎಕ್ಸಿಕ್ಯುಟಿವ್ ಆಫೀಸರ್. ವಿಶ್ವವಿದ್ಯಾಲಯ ಪ್ರಪ್ರಥಮ ರಜಿಸ್ಟ್ರಾರ್ ಆಗಿ ಸರ್ ರಾಬರ್ಟ್ ಸಿಂಕ್ಲೇರ್ ಅವರು ನಿಯುಕ್ತಗೊಂಡಿದ್ದರು. ೧೯೦೨ ರಲ್ಲಿ ಪ್ರಥಮ ಭಾರತೀಯರೊಬ್ಬರು — ಪ್ರಾ. ದಸ್ತೂರ— ರಜಿಸ್ಟ್ರಾರ್ ಆಗಿ ನಿಯಮಿಸಲ್ಪಟ್ಟರು. ಗಣಿತ ವಿಷಯದ ಪ್ರಾಧ್ಯಾಪಕರಾಗಿದ್ದ ಅವರು ೧೯೩೦ ರ ವರೆಗೆ ರಜಿಸ್ಟ್ರಾರ್ ಆಗಿ ಅತ್ಯಂತ ದೀರ್ಘಕಾಲ (೨೮ ವರುಷ) ಕೆಲಸ ಮಾಡಿದರು. ೧೯೩೧ ರಿಂದ ೧೯೫೭ ರ ವರೆಗೆ ಸುಮಾರು ೨೫ ವರುಷ ಕನ್ನಡಿಗರಾದ ಶ್ರೀ ಎಸ್. ಆರ್. ಡೋಂಗರಕೇರಿ ಅವರು ಮುಂಬಯಿ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದರು. ಮುಂದೆ ಅವರು ಔರಂಗಾಬಾದಿನ ಮರಾಠವಾಡಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸಹ ನಿಯುಕ್ತರಾಗಿದ್ದರು. ನಂತರ ಅವರು ಕೆಲ ಸಮಯ ಉಸ್ಮಾನಿಯಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿಯೂ ಕೆಲಸ ಮಾಡಿದರು. ೧೯೫೭ ರಿಂದ ೧೯೭೫ ರ ವರೆಗೆ ಸುಮಾರು ಹದಿನೆಂಟು ವರುಷ ಶ್ರೀ ಚಿದಂಬರಂ ಅವರು ರಜಿಸ್ಟ್ರಾರ್ ಆಗಿದ್ದರು. ಈಗ ಎರಡು ವರುಷಗಳಿಂದ ಪ್ರಾ. ಜಿ. ಎಂ. ರಾಜರ್ಷಿ ಅವರು ರಜಿಸ್ಟ್ರಾರ್ ಆಗಿದ್ದಾರೆ.

೧೮೬೯ ರಲ್ಲಿ ವಿಶ್ವವಿದ್ಯಾಲಯಕ್ಕೆ ಕೇವಲ

ವಿಶ್ವವಿದ್ಯಾಲಯ ಗ್ರಂಥಾಲಯ

೧೮೮೦ ರಲ್ಲಿ ಗ್ರಂಥಾಲಯದ ಕಟ್ಟಡದ ಉದ್ಘಾಟನೆಯಾದರೂ ನಂತರದ ೨೦ ವರ್ಷಗಳಲ್ಲಿ ಕೇವಲ ೪೫೦೪ ಗ್ರಂಥಗಳು ಮತ್ತು ೨೧೪ ಹಸ್ತಪ್ರತಿಗಳ ಸಂಗ್ರಹ ಮಾತ್ರವಿದ್ದಿತು. ೧೯೬೦ ರಲ್ಲಿ ಗ್ರಂಥಾಲಯಕ್ಕೂ ಸರಕಾರದಿಂದ ೫೦ ಸಾವಿರ ರೂಪಾಯಿ ದೇಣಿಗೆ ದೊರೆಯಿತು. ಅಲ್ಲದೆ ಪ್ರತಿ ವರುಷ ಗ್ರ್ಯಾಂಟು ದೊರಕಲಾರಂಭಿಸಿತು. ರಾಷ್ಟ್ರದ ಅತ್ಯುತ್ತಮ ಹಳೆಯ ಮತ್ತು ಹಿರಿಯ ಗ್ರಂಥಾಲಯಗಳಲ್ಲಿ ಒಂದೆನಿಸಿದ ಈ ಗ್ರಂಥಾಲಯದಲ್ಲಿ ೪॥ ಲಕ್ಷ ಗ್ರಂಥಗಳು ಮತ್ತು ರಾಷ್ಟ್ರೀಯ ಅಂತಾರಾಷ್ಟ್ರೀಯ ಭಾಷೆಗಳ ಸುಮಾರು ೮೫೦೦ ಅಪೂರ್ವ ಮಾರ್ಮಿಕ ಹಸ್ತಪ್ರತಿಗಳ ಸಂಗ್ರಹವಿದೆ. ಸುಮಾರು ೪೦೦೦ ಕನ್ನಡ ಪುಸ್ತಕಗಳು ಇಲ್ಲಿವೆ. ಮೊದಲು ಪ್ರಕಟವಾದ ವ್ಯಾಕರಣ ಗ್ರಂಥ ಮತ್ತು ಆರಂಭದ ಕೆಲ ಅಪೂರ್ವ ಕಲ್ಲಚ್ಚಿನ ಕನ್ನಡ ಗ್ರಂಥಗಳೂ ಈ ಸಂಗ್ರಹದಲ್ಲಿವೆ. ವಿಶ್ವವಿದ್ಯಾಲಯ ಈ ಪ್ರಧಾನ ಗ್ರಂಥಾಲಯವಲ್ಲದೇ, ೧೯೬೧ ರಲ್ಲಿ ಕಲೀನಾ (ವಿದ್ಯಾನಗರ) ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ಜವಾಹರಲಾಲ ನೆಹರೂ ಗ್ರಂಥಾಲಯ ಆರಂಭವಾಯಿತು. ಪ್ರತಿ ವರುಷ ಈ ಎರಡೂ ಗ್ರಂಥಾಲಗಳಿಂದ ೧೨ ಸಾವಿರಕ್ಕೂ ಮಿಕ್ಕಿ ಓದುಗರು ನೆರವು ಪಡೆಯುತ್ತಿದ್ದಾರೆ. ೫೦೦ ಜನ ಖಾಯಂ ಸದಸ್ಯರು. ಸುಮಾರು ೨೦ ಲಕ್ಷ ರೂಪಾಯಿ ವಾರ್ಷಿಕ ಬಜೆಟ್ಟು. ಅಲ್ಲದೇ ೧೧೦ ಜನರು ಈ ಗ್ರಂಥಾಲಯಗಳಲ್ಲಿ ದುಡಿಯುತ್ತಿದ್ದಾರೆ. ಮಾತುಂಗಾದ ಡಿಪಾರ್ಟಮೆಂಟ್ ಆಫ್ ಕೆಮಿಕಲ್ ಟೆಕ್ನಾಲಜಿಯಲ್ಲಿ ಸುಮಾರು ೬೦ ಸಾವಿರಕ್ಕೂ ಮಿಕ್ಕಿ ಗ್ರಂಥಗಳಿವೆ.

೧೫೦೦೦ ರೂಪಾಯಿ ಗ್ರ್ಯಾಂಟು ದೊರಕುತ್ತಿತ್ತು. ಇಂದು ವಿಶ್ವವಿದ್ಯಾಲಯದ ವಾರ್ಷಿಕ ವೆಚ್ಚ ನಾಲ್ಕುಕೋಟಿಗೂ ಮಿಕ್ಕಿದೆ. ಯುನಿವರ್ಸಿಟಿ ಗ್ರ್ಯಾಂಟ್ಸ್ ಕಮೀಶನ್, ಕೇಂದ್ರ ಸರಕಾರ, ಮಹಾರಾಷ್ಟ್ರ ಸರಕಾರ, ಹಾಗೂ ಇತರ ಸಂಸ್ಥೆಗಳಿಂದ ಧನ ಸಹಾಯ ಬರುತ್ತಿದೆ.

ವಿಶ್ವವಿದ್ಯಾಲಯದ ಆರಂಭದ ವರುಷಗಳಲ್ಲಿ ಸರಕಾರದ ಹಸ್ತಕ್ಷೇಪ ಪ್ರಬಲವಾಗಿದ್ದಿತು. ಸ್ವಾತಂತ್ರ್ಯ ಆಂದೋಲನದ ಸಮಯದಲ್ಲಿ ಸರಕಾರದ ನಿಯಂತ್ರಣ ಇನ್ನೂ ಹೆಚ್ಚಾಯಿತು. ವಿಶ್ವವಿದ್ಯಾಲಯದ ಸ್ವಾಯತ್ತತೆ ಹಾಗೂ ಅಧಿಕಾರಗಳನ್ನು ಮೊಟಕುಗೊಳಿಸುವ ಅನೇಕ ಪ್ರಯತ್ನಗಳು ನಡೆದವು. ೧೯೦೨ ರಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ೧೯೨ ಕಾಲೇಜುಗಳು ಮತ್ತು ಸುಮಾರು ೨೦ ಸಾವಿರ ವಿದ್ಯಾರ್ಥಿಗಳಿದ್ದರು. ೧೯೧೨ ರಲ್ಲಿ ಕಾಲೇಜುಗಳ ಸಂಖ್ಯೆ ೧೭೦ ಕ್ಕೆ ಇಳಿಯಿತು. ಆದರೆ ವಿದ್ಯಾರ್ಥಿಗಳ ಸಂಖ್ಯೆ ೫೦೦೦೦ ಮುಟ್ಟಿತು. ಸೆಂಟ್ರಲ್ ಅಸೆಂಬ್ಲಿಯಲ್ಲಿ ಗೋಪಾಲ ಕೃಷ್ಣ ಗೋಖಲೆಯವರು ವಿಶ್ವವಿದ್ಯಾಲಯದ ಆಡಳಿತೆಯಲ್ಲಿ ಸರಕಾರದ ಹಸ್ತಕ್ಷೇಪವು ಹೆಚ್ಚಾಗುತ್ತಿದ್ದುದನ್ನು ಬಲವಾಗಿ ಖಂಡಿಸಿದರು. ಮುಂಬಯಿ ವಿಶ್ವವಿದ್ಯಾಲಯವು ಆರಂಭವಾದುದು ಫೆಡರಲ್ ವಿಶ್ವವಿದ್ಯಾಲಯವಾಗಿ. ಈಗ ಪಾಕಿಸ್ತಾನದಲ್ಲಿರುವ ಸಿಂಧ, ಕರಾಚಿ, ಪ್ರದೇಶಗಳಿಂದ ಹಿಡಿದು ಗುಜರಾಥದ ಕೆಲ ಪ್ರದೇಶ, ಮಹಾರಾಷ್ಟ್ರದ ಕೆಲ ಪ್ರದೇಶ, ಹಾಗೂ ಉತ್ತರ ಕರ್ನಾಟಕದ ಧಾರವಾಡ, ವಿಜಾಪುರ, ಬೆಳಗಾವಿ, ಕಾರವಾರ ಜಿಲ್ಲೆಗಳ ವರೆಗೆ ಮುಂಬಯಿ ವಿಶ್ವವಿದ್ಯಾಲಯದ ವ್ಯಾಪ್ತಿಯಿತ್ತು. ೧೯೪೮ರ ವರೆಗೆ ಮುಂಬಯಿ ವಿಶ್ವವಿದ್ಯಾಲಯವೇ ಮೆಟ್ರಿಕ್ ಪರೀಕ್ಷೆ ನಡೆಸುತ್ತಿತ್ತು. ಆದರೆ ಪುಣೆ, ಕರ್ನಾಟಕ, ಗುಜರಾತ, ಬಡೋದಾ, ಸೌರಾಷ್ಟ್ರ, ವಲ್ಲಭ ವಿದ್ಯಾನಗರಗಳಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡ ನಂತರ ಮುಂಬಯಿ ವಿಶ್ವವಿದ್ಯಾಲಯದ ವ್ಯಾಪ್ತಿ ಕಡಿಮೆಯಾಗತೊಡಗಿತು. ೧೯೬೨ ರಲ್ಲಿ ಗೋವೆ ಭಾರತದಲ್ಲಿ ಸೇರಿದ ನಂತರ ಅದನ್ನು ಮುಂಬಯಿ ವಿಶ್ವವಿದ್ಯಾಲಯದ ಕಕ್ಷೆಗೆ ಸೇರಿಸಲಾಯಿತು. ೧೯೬೪ರ ನಂತರ ಠಾಣಾ, ಕುಲಾಬಾ, ರತ್ನಾಗಿರಿ, ಜಿಲ್ಲೆಗಳ ಕಾಲೇಜುಗಳನ್ನು ಮುಂಬಯಿ ವಿಶ್ವವಿದ್ಯಾಲಯಕ್ಕೆ ಜೋಡಿಸಲಾಯಿತು. ಈಗ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ನೂರಕ್ಕೂ ಮಿಕ್ಕ ಕಾಲೇಜುಗಳು, ೩೨ ಸ್ನಾತಕೋತ್ತರ ವಿಭಾಗಗಳು ಹಾಗೂ ಸುಮಾರು ೫೦ ಮನ್ನಣೆ ಪಡೆದ ಸಂಸ್ಥೆಗಳಲ್ಲಿ ಎರಡು ಲಕ್ಷಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. ಭಾಭಾ ಅಣುಶಕ್ತಿ ಕೇಂದ್ರ, ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ, ನೆಹರೂ ಸೆಂಟರ್, ಟಾಟಾ ಕ್ಯಾನ್ಸರ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮುಂತಾದ ಖ್ಯಾತಿ ಪಡೆದ ಸಂಸ್ಥೆಗಳು ವಿಶ್ವವಿದ್ಯಾಲಯದ ಶಿಕ್ಷಣದ ಮನ್ನಣೆ ಪಡೆದ ಶಿಕ್ಷಣ ಕೇಂದ್ರಗಳು. ವಿಶ್ವವಿದ್ಯಾಲಯದಲ್ಲಿ ೨ ಸಾವಿರಕ್ಕೂ ಮಿಕ್ಕಿ ಅಧ್ಯಾಪಕರು ಮತ್ತು ಒಂದೂವರೆ ಸಾವಿರಕ್ಕೂ ಮಿಕ್ಕಿ ಜನರು ಆಡಳಿತ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯವು ಸದ್ಯ ಪ್ರತಿ ವರುಷ ೪೦೦ ಪರೀಕ್ಷೆಗಳನ್ನು ನಡೆಸುತ್ತಿದೆ. ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಸುಮಾರು ಎರಡೂವರೆ ಲಕ್ಷ ವಿದ್ಯಾರ್ಥಿಗಳು ಕುಳಿತುಕೊಳ್ಳುತ್ತಾರೆ.

೧೯೩೩ ರಲ್ಲಿ ಆರಂಭವಾದ ಡಿಪಾರ್ಟಮೆಂಟ್ ಆಫ್ ಕೆಮಿಕಲ್ ಟೆಕ್ನಾಲಜಿ ಬರುವ ವರುಷ ಐವತ್ತು ವರುಷಗಳನ್ನು ಪೂರ್ತಿಗೊಳಿಸುತ್ತದೆ. ಮಾತುಂಗಾದಲ್ಲಿ ತನ್ನದೇ ಆದವಿಶಾಲ ಕಟ್ಟಡದಲ್ಲಿ ಕೆಮಿಕಲ್ ಟೆಕ್ನಾಲಜಿ ಎಲ್ಲ ವಿಭಾಗಗಳ ಮತ್ತು ಕೆಮಿಕಲ್ ಇಂಜಿನಿಯರಿಂಗ್ ಹಾಗೂ ಫಾರ್ಮಾಸುಟಿಕಲ್ ಶಿಕ್ಷಣದ ವಿದ್ಯಾಭ್ಯಾಸದ ಸ್ನಾತಕ ಸ್ನಾತಕೋತ್ತರ ಗ್ರಾಜ್ಯುಯೇಟ ಮತ್ತು ಡಾಕ್ಟರೇಟ್ ಪದವಿಗಳ ವರೆಗೆ ವರ್ಗಗಳು ನಡೆಯುತ್ತಿವೆ. ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ವಿಭಾಗ ಇದಾಗಿದ್ದು. ಪ್ರತಿವರುಷ ವೆಚ್ಚ ಒಂದು ಕೋಟಿಗೂ ಮಿಕ್ಕಿದೆ. ಕೆಮಿಕಲ್ ಟೆಕ್ನಾಲಜಿಯ ವಿವಿಧ ಶಾಖೆಗಳಲ್ಲಿ ಶಿಕ್ಷಣ ಕ್ರಮ ನೀಡುವ ಸಂಸ್ಥೆ ಭಾರತದಲ್ಲಿ ಇದೊಂದೆ ಅಂತೆಯೇ ಇದಕ್ಕೆ ರಾಷ್ಟ್ರೀಯ ಪ್ರಾಮುಖ್ಯ

ದೊಂದಿಗೆ ಅಂತಾರಾಷ್ಟ್ರೀಯ ಮನ್ನಣೆಯೂ ದೊರಕಿದೆ. ೧೪೦೦ ನ್ನು ಮಿಕ್ಕಿ ವಿದ್ಯಾರ್ಥಿ ಸಂಪತ್ತು ಹೊಂದಿದೆ. ಡಿಪಾರ್ಟಮೆಂಟ್ ಆಫ್ ಇಕನಾಮಿಕ್ಸ್, ಡಿಪಾರ್ಟಮೆಂಟ್ ಆಫ್ ಸೋಶಿಯಾಲಜಿ, ಫಿಲಾಸಫಿ, ಲಾ ಇವು ಹಳೆಯ ಡಿಪಾರ್ಟಮೆಂಟುಗಳಾಗಿದ್ದು ರಾಷ್ಟ್ರದಲ್ಲಿ ಸಾಕಷ್ಟು ಮನ್ನಣೆ ಪಡೆದಿವೆ. ಮರಾಠಿ, ಗುಜರಾತಿ, ಹಿಂದಿ, ಸಂಸ್ಕೃತ ಡಿಪಾರ್ಟಮೆಂಟುಗಳೂ ಇವೆ. ೧೯೭೯ರಲ್ಲಿ ಕನ್ನಡ ಅಧ್ಯಯನ ಕೇಂದ್ರ ಆರಂಭವಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಸರಕಾರ ಹಾಗೂ ವಿಶ್ವವಿದ್ಯಾಲಯ ಧನಸಹಾಯ ಆಯೋಗಗಳ ಸಂಯುಕ್ತ ಸಹಕಾರದ ಫಲವೇ ಇಲ್ಲಿಯ ಕನ್ನಡ ಅಧ್ಯಯನ ಕೇಂದ್ರ. ಕನ್ನಡ ವಿಷಯ ತೆಗೆದುಕೊಂಡು ಎಂ. ಎ. ಡಾಕ್ಟರೇಟ್ ಅಧ್ಯಯನಕ್ಕೆ ಇಲ್ಲಿ ಸೌಲಭ್ಯವಿದೆ. ಕಳೆದ ಮೂರು ವರುಷಗಳಲ್ಲಿ ಕನ್ನಡ ಅಧ್ಯಯನ ಕೇಂದ್ರ ತನ್ನ ಚುರುಕು ಚಟುವಟಿಕೆಗಳಿಂದ ಇಲ್ಲಿಯ ಕನ್ನಡಿಗರ ಮತ್ತು ಒಳನಾಡ ಕನ್ನಡಿಗರ ಗಮನ ಸೆಳೆದಿದೆ. ಇತ್ತೀಚೆಗೆ ಸಿಂಧಿ ಡಿಪಾರ್ಟಮೆಂಟೂ ಆರಂಭವಾಗಿದೆ. ವಿದೇಶೀ ಭಾಷೆಗಳಾದ ಪರ್ಶಿಯನ್, ಫ್ರೆಂಚ್, ಜರ್ಮನ್, ಲ್ಯಾಟಿನ್‌ಗಳ ಅಧ್ಯಯನಕ್ಕೂ ಒಂದು ವಿಭಾಗವಿದೆ. ಕೆಮಿಸ್ಟ್ರಿ, ಫಿಜಿಕ್ಸ್, ಎಜ್ಯುಕೇಶನ್, ಕಾಮರ್ಸ್, ಜಿಯಾಗ್ರಫಿ ಡಿಪಾರ್ಟಮೆಂಟುಗಳು ಹೊಸವಾದರೂ ಸಾಕಷ್ಟು ಪ್ರಸಿದ್ಧಿ ಪಡೆದಿವೆ. ಹಿಸ್ಟರಿ, ಪಾಲಿಟಿಕ್ಸ್ ಡಿಪಾರ್ಟಮೆಂಟುಗಳು ಹಳೆಯವು. ಒಳ್ಳೆಯ ಕಾರ್ಯ ಮಾಡಿವೆ.



"ನೋಡಿ ಭಾಗ್ಯಮ್ಮ, ನಮ್ಮೆಜಮಾನ್ರಂದ್ರೆ ದೇವರಂಥವ್ರು…"

ಇಪ್ಪತ್ತು ವರುಷಗಳ ಹಿಂದೆ ಆರಂಭವಾದ ಬಜಾಜ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ರಾಷ್ಟ್ರದಲ್ಲಿ ವಿಖ್ಯಾತಿ ಪಡೆದಿದೆ.

ಸಂಗೀತ, ಲಲಿತ ಕಲೆಗಳ ಅಧ್ಯಯನಕ್ಕೂ ಒಂದು ವಿಭಾಗವಿದೆ.

ಫೋರ್ಟನಲ್ಲಿ, ವಿಶ್ವವಿದ್ಯಾಲಯದ ಪ್ರಧಾನ ಕಟ್ಟಡ, ರಾಜಾಬಾಯಿ ಟಾವರ್, ಗ್ರಂಥಾಲಯ, ಕಟ್ಟಡ, ಚರ್ಚಗೇಟ್‌ನಲ್ಲಿರುವ ಕ್ಲಬ್ ಹೌಸ್, ಬ್ಯಾಕ್ ಬೇಯಲ್ಲಿರುವ ಬಜಾಜ್ ಇನ್‌ಸ್ಟಿಟ್ಯೂಟ್ ಕಟ್ಟಡ, ಮಾತುಂಗಾದಲ್ಲಿಯ ಕೆಮಿಕಲ್ ಟೆಕ್ನಾಲಜಿ ಡಿಪಾರ್ಟಮೆಂಟಿನ ಕಟ್ಟಡ, ಕಮಲ್‌ರಾಯನ್ ಕಟ್ಟಡ ಹೀಗೆ ಹಲವು ಕಡೆ ವಿಶ್ವವಿದ್ಯಾಲಯದ ಶಿಕ್ಷಣ–ಆಡಳಿತಗಳ ಕಾರ್ಯಗಳು ಪಸರಿಸಿವೆ. ೧೯೭೫ರಲ್ಲಿ ಸಾಂತಾಕ್ರೂಜ್ ಕಲಿನಾ ವಿಭಾಗದಲ್ಲಿ ವಿಶ್ವವಿದ್ಯಾಲಯ ಕ್ಯಾಂಪಸ್ಸು ಕಟ್ಟಲಾಗಿದೆ. ಆಡಳಿತ ಕಚೇರಿ, ಹಾಗೂ ಎಲ್ಲ ವಿಭಾಗಗಳೂ ಒಂದೆಡೆಯೇ ಇರಬೇಕೆಂಬ ಉದ್ದೇಶದಿಂದ ಕ್ಯಾಂಪಸ್ ಆರಂಭವಾಯಿತು. ಇದು ಇನ್ನೂ ಪೂರ್ತಿಗೊಂಡಿಲ್ಲ. ಆದರೆ ವಿಶ್ವವಿದ್ಯಾಲಯದ ಆಡಳಿತ ವಿಭಾಗಕ್ಕೆ ಫೋರ್ಟ್ ಕಟ್ಟಡ ಬಿಟ್ಟು ಹೊರಗೆ ಬರುವ ಮನಸ್ಸಿಲ್ಲ. ಲಾ ಡಿಪಾರ್ಟ್‌ಮೆಂಟಿಗೆ ಹಾಯಕೋರ್ಟ್ ಸಮೀಪದಲ್ಲಿಯೆಂಬ ಕಾರಣದಿಂದ ಅದು ಕ್ಯಾಂಪಸ್ಸಿಗೆ ಹೋಗುವಂತಿಲ್ಲ. ಕೋಟ್ಯಾವಧಿ ರೂಪಾಯಿಗಳ ಯಂತ್ರಗಳನ್ನು ಮಾತುಂಗಾದಲ್ಲಿರುವ ಕೆಮಿಕಲ್ ಟೆಕ್ನಾಲಜಿ ಕಟ್ಟಡದಿಂದ ಹೊರತರುವಂತಿಲ್ಲ. ಹೀಗಾಗಿ ವಿಶ್ವವಿದ್ಯಾಲಯದ ಕ್ಯಾಂಪಸ್ ಯೋಜನೆ ಸಫಲವಾಗಿಲ್ಲ. ಕರ್ನಾಟಕ, ಉಸ್ಮಾನಿಯಾ, ಶಿವಾಜಿ, ಪುಣೆ, ಬೆಂಗಳೂರು ವಿಶ್ವವಿದ್ಯಾಲಯಗಳ

ಕ್ಯಾಂಪಸ್ಸ್‌ಗಳಿಗೆ ಮುಂಬಯಿ ವಿಶ್ವವಿದ್ಯಾಲಯದ ಕ್ಯಾಂಪಸ್ಸ್ ಹೋಲಿಸಿದರೆ ಇದು ತೀರ ಕಳಪೆಯಾಗಿ ಕಾಣುತ್ತದೆ. ಅಂತೆಯೇ ಕ್ಯಾಂಪಸ್ ರಚನೆಗೆ ಸಾಕಷ್ಟು ಟೀಕೆಯೂ ಕೇಳಿ ಬರುತ್ತಿದೆ.

ವಿಶ್ವವಿದ್ಯಾಲಯದ ನಾಲ್ಕು ಹಾಸ್ಟೆಲುಗಳು ವಿದ್ಯಾರ್ಥಿಗಳಿಗಾಗಿ, ಒಂದು ಹಾಸ್ಟೆಲಲ್ಲಿ ವಿದ್ಯಾರ್ಥಿನಿಯರಿಗಾಗಿ, ಮತ್ತೊಂದು ಹಾಸ್ಟೆಲಲ್ಲಿ ಪರದೇಶದ ವಿದ್ಯಾರ್ಥಿಗಳಿಗಾಗಿ ಇವೆ. ವಿಶ್ವವಿದ್ಯಾಲಯದ ಶಿಕ್ಷಕರಿಗಾಗಿ ಸ್ವಲ್ಪ ಪ್ರಮಾಣದಲ್ಲಿ ವಸತಿ ಸೌಕರ್ಯವಿದೆ. ಮುಂಬಯಿ ಮಹಾನಗರದ ಪ್ರಮಾಣ ಗಮನಿಸಿದರೆ ಈ ಸೌಕರ್ಯ ಏನೂ ಸಾಲದು. ಅಲ್ಲದೇ ಆಡಳಿತ ವಿಭಾಗದ ಸೇವಕ ವರ್ಗದವರಿಗೆ ವಸತಿ ಸೌಕರ್ಯವಿಲ್ಲ ಎಂಬ ಟೀಕೆಯೂ ಇದೆ.

೧೪–೭–೯೮೨ ರಂದು ವಿಶ್ವವಿದ್ಯಾಲಯವು ತನ್ನ ೧೨೫ ವರುಷಗಳನ್ನು ಪೂರ್ತಿಗೊಳಿಸಿತು. ಈ ಸಮಾರಂಭದ ಸವಿನೆನಪಿನಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ, ಕೊಂಕಣ ಪ್ರದೇಶಕ್ಕೆ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಸ್ನಾತಕೋತ್ತರ ಅಧ್ಯಯನದ ವಿದ್ಯಾರ್ಥಿಗಳಿಗಾಗಿ ದಕ್ಷಿಣ ಮುಂಬಯಿಯಲ್ಲಿ ವಿದ್ಯಾರ್ಥಿ ನಿಲಯ ಕಟ್ಟುವದು, ಫಿಸಿಕ್ಸ್ ಅಡ್ವಾನ್ಸ್ಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆರಂಭಿಸುವದು, ಹಾರ್ಬೋರ್ನಿಯನ್ ಲಿವ್ವಿಂಗ್ ಮತ್ತು ಜಿಯಾಲಾಜಿ ಎಂಡೋವ್‌ಮೆಂಟ್ ಪೀಠ ಆರಂಭಿಸುವದು. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚು ವಿದ್ಯಾರ್ಥಿವೇತನ ನೀಡುವದು, ಹೊರಗಿನಿಂದ ಬಂದ ಶಿಕ್ಷಣ ತಜ್ಞರಿಗೆ ವಸತಿ ಕಲ್ಪಿಸುವದು ಮುಂತಾದ ಬೃಹತ್ ಯೋಜನೆಗಳ ವೆಚ್ಚಕ್ಕಾಗಿ ಈ ಹಣ ಉಪಯೋಗಿಸುವದು. ಎರಡೂವರೆ ಕೋಟಿಗಳಲ್ಲಿ ಅರ್ಧಕ್ಕೆ ಮಿಕ್ಕಿ ಹಣ ವಿಶ್ವವಿದ್ಯಾಲಯ ಧನಸಹಾಯ ಆಯೋಗ, ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳಿಂದ ಬರುವ ನಿರೀಕ್ಷೆಯಿದೆ. ಇನ್ನುಳಿದ ಅರ್ಧದಷ್ಟನ್ನು ಸಾರ್ವಜನಿಕ ಕಾಣಿಕೆಗಳ ಮುಖಾಂತರ ಶೇಖರಿಸುವ ಯೋಜನೆಯಿದೆ.

ಒಂದೂ ಕಾಲು ಶತಮಾನದಷ್ಟು ಹಳೆಯದಾದ ಮುಂಬಯಿ ವಿಶ್ವವಿದ್ಯಾಲಯ ದೇಶದ ಪ್ರಮುಖ ಉಚ್ಚ ವಿದ್ಯಾಸಂಸ್ಥೆಯಾಗಿ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಯತ್ನಿಸುತ್ತಿರುವಂತೆಯೇ ಯುವಜನರಲ್ಲಿ ಹೊಗೆಯಾಡುತ್ತಿರುವ ಅಸಂತೃಪ್ತಿಯು ಒಡ್ಡುವ ಅನೇಕ ಸಮಸ್ಯೆಗಳನ್ನು ಅದು ಎದುರಿಸಬೇಕಾಗಿ ಬಂದುದೂ ಇದೆ. ಆದರೆ ಇಂಥ ಎಲ್ಲ ತತ್ಕಾಲೀನ ಅಡೆತಡೆಗಳನ್ನು ಮೀರಿ ಬೆಳೆಯಬಲ್ಲಷ್ಟು ಭದ್ರ ಬುನಾದಿಯ ಮೇಲೆ ನಿಂತಿದೆಯದು. ✡

ಮುಂಬೈ ಮಳೆಯೆಂದರೆ ಸಾಮಾನ್ಯವಲ್ಲ. ಮಹಾನಗರವಲ್ಲವೆ? ಅಂದ ಮೇಲೆ ಮಹಾ ವೃಷ್ಟಿಯೇ ಆದಾಗಬೇಕು. ಹಾಗಾದಾಗ ಎಲ್ಲೆಲ್ಲೂ ನೀರೇ ನೀರು. ಕೆಲ ವರ್ಷಗಳ ಹಿಂದೆ ಒಂದು ದಿನ ಎಡೆಬಿಡದ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಯಿತು. ಲೋಕಲ್ ಗಾಡಿಗಳು ನಿಂತಲ್ಲಿಯೇ ನಿಂತುಬಿಟ್ಟವು. ಹೀಗಾಗಿ ಅತ್ತಿನವರು ಅತ್ತಲೆ, ಇತ್ತಿನವರು ಇತ್ತಲೇ. ಆರೆಂಟು ಗಂಟೆಗಳ ನಂತರ ನಿಂತ ನೀರು ಹರಿದು ರಸ್ತೆಗಳು, ಓಣಿಗಳು ಮತ್ತೆ ಜೀವಂತಗೊಂಡವು. ಆದರೆ ಒಂದು ರಸ್ತೆಯಲ್ಲಿ ಮಾತ್ರ ಆಳೆತ್ತರ ನೀರು ನಿಂತಂತೆಯೇ ನಿಂತಿತ್ತು. ಅದನ್ನು ಹರಿದುಹೋಗುವಂತೆ ಮಾಡುವ ಬಗ್ಗೆ ಯಾರೂ ಯೋಚಿಸಲಿಲ್ಲ. ಕಾರ್ಪೊರೇಶನ್ನಿನವರೂ ಕಣ್ತೆರೆಯಲಿಲ್ಲ. ಆಗ ಒಬ್ಬ ಬುದ್ಧಿವಂತ ಒಂದು ಉಪಾಯ ಹೂಡಿದ. ಕೆಲವರೊಂದಿಗೆ ಕೂಡಿಕೊಂಡು ದೊಡ್ಡ ಬಟ್ಟೆಯ ಫಲಕವನ್ನು ಎತ್ತರದಲ್ಲಿ ಎರಡು ಕಂಬಗಳಿಗೆ ಕಟ್ಟಿದ.

ಕೆಲ ಗಂಟೆಗಳಲ್ಲಿಯೇ ಕಾರ್ಪೊರೇಶನ್ನಿನವರು ಬಂದು ನೀರು ಹರಿದುಹೋಗುವಂತೆ ಮಾಡಿದರು. ಫಲಕದಲ್ಲಿ ಆತ, "ಈ ರಸ್ತೆಯಲ್ಲಿ ಈಜುವುದಕ್ಕೆ, ನಾವೆ ನಡೆಸುವುದಕ್ಕೆ ಮತ್ತು ಈ ರಸ್ತೆಯ ಮೇಲೆ ಮೀನು ಹಿಡಿಯಲಿಕ್ಕೆ ಸಕ್ತಮನಾಯಿ ಇದೆ," ಎಂದು ಬರೆದಿದ್ದನಾತ.

ಅರಿವಿನ ಆಗರ - ಪುಸ್ತಕ ಭಂಡಾರ

'ದೇಶ ನೋಡು, ಇಲ್ಲವೆ ಕೋಶ ಓದು' ಎಂಬುದು ಒಂದು ಗಾದೆ. ಪ್ರವಾಸದಿಂದ ಲೋಕಾನುಭವ ಎಲ್ಲರಿಗೂ ಸಿಲುಕದ ವಿಷಯ. ಆದರೆ ಇದ್ದಲ್ಲಿಯೇ ಜಗತ್ತಿನ ಆಗುಹೋಗುಗಳು ಹಾಗೂ ವಿವಿಧ ವಿಷಯ ಜ್ಞಾನ, ಪುಸ್ತಕ ಓದುವುದರಿಂದ ಸಿಗುತ್ತದೆ. ಅಂತಹ ಜ್ಞಾನ ಪ್ರಸಾರ ಕೇಂದ್ರ ಪುಸ್ತಕ ಭಂಡಾರ.

* ಕರ್ನಾಟಕದಲ್ಲಿ ಓದುಗರ ಸೇವೆಗಾಗಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಒಂದು ಪುಸ್ತಕ ಭಂಡಾರ, ದೊಡ್ಡ ನಗರಗಳಲ್ಲಿ ೧೦ ನಗರ ಕೇಂದ್ರ ಗ್ರಂಥಾಲಯ ಹಾಗೂ ೬೪ ಪುಸ್ತಕ ಪೂರೈಕೆ ಕೇಂದ್ರಗಳು ಮತ್ತು ೬೩ ಪುಸ್ತಕ ಸೇವಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಇದಲ್ಲದೆ ಒಂದು ಸಂಚಾರಿ ಗ್ರಂಥಾಲಯವೂ ಜ್ಞಾನ ಪ್ರಸಾರದಲ್ಲಿ ನಿರತವಾಗಿದೆ.
* ಬೆಂಗಳೂರಿನಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯ ಈ ಎಲ್ಲ ಪುಸ್ತಕ ಭಂಡಾರಗಳ ಆಡಳಿತ ನಿರ್ವಹಣೆ ಹಾಗೂ ಪುಸ್ತಕ, ನಿಯತಕಾಲಿಕೆಗಳ ಪೂರೈಕೆಯಲ್ಲಿ ನಿರತವಾಗಿದೆ.
* ಗ್ರಾಮಾಂತರ ಪ್ರದೇಶಗಳ ಓದುಗರಿಗೆ ಪುಸ್ತಕ ಪೂರೈಸುವ ರಾಜಾರಾಂ ಮೋಹನ್‌ರಾಯ್ ಪುಸ್ತಕ ಭಂಡಾರ ಪ್ರತಿಷ್ಠಾನ ವಿಸ್ತಾರ ಕಾರ್ಯಕ್ರಮ ಹಾಕಿಕೊಂಡಿದೆ. ಈ ಯೋಜನೆಯಂತೆ ಅಲ್ಪಸ್ವಲ್ಪ ಓದು ಬರಹ ಬಲ್ಲವರಿಗೆ ಅನುಕೂಲವಾಗುವಂತಹ ಪುಸ್ತಕಗಳನ್ನು ಪೂರೈಸಲಾಗುತ್ತಿದೆ.
* ಪ್ರಸ್ತುತ ೧೯೦೫ ಗ್ರಾಮೀಣ ಪುಸ್ತಕ ಕೇಂದ್ರಗಳು ಮತ್ತು ೧೭೫ ತಾಲ್ಲೂಕು ಪುಸ್ತಕ ಕೇಂದ್ರಗಳು ಈ ಸೇವೆ ಸಲ್ಲಿಸುತ್ತಿವೆ.
* ಕೇಂದ್ರ ಗ್ರಂಥಾಲಯದಲ್ಲಿ ಕುರುಡರು ಓದಲು ನೆರವಾಗಲು ೬೫೦ ಬ್ರೈಲ್ ಲಿಪಿ ಪುಸ್ತಕಗಳ ಸಂಗ್ರಹ ಮಾಡಲಾಗಿದೆ. ಅಲ್ಲದೆ ಬ್ರೈಲ್ ಲಿಪಿಯ ೬೦ ನಿಯತ ಕಾಲಿಕೆಗಳನ್ನು ಒದಗಿಸಲಾಗಿದೆ.
* ಇಲಾಖೆಯು ರಾಜ್ಯಾದ್ಯಂತ ಗ್ರಂಥಾಲಯಗಳಲ್ಲಿ ಮಕ್ಕಳ ಪುಸ್ತಕ ಹಾಗೂ ಪಠ್ಯ ಪುಸ್ತಕಗಳಿಗೆ ಪ್ರತ್ಯೇಕ ವಿಭಾಗಗಳನ್ನು ತೆರೆದಿದೆ.
* ಈ ಎಲ್ಲ ಸೌಲಭ್ಯಗಳನ್ನು ಸೂಕ್ತವಾಗಿ ಬಳಸಿಕೊಳ್ಳುವ ಜವಾಬ್ದಾರಿ ನಮ್ಮ ಓದುಗರ ಮೇಲಿದೆ. ನೀವು ಓದಿದ ಮೇಲೂ ಇತರರು ಆ ಪುಸ್ತಕಗಳನ್ನು ಓದುತ್ತಾರೆ ಎಂಬುದನ್ನು ಮರೆಯದಿರಿ.

ಕುಳಿತಲ್ಲೇ ದೇಶ ನೋಡಬೇಕೆಂದರೆ ಪುಸ್ತಕಗಳನ್ನು ಓದಿ

ಪ್ರಕಟಣೆ: **"ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ"**

DIP 236/82-83

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಅರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ಸಂಸರ್ಗ**
(ಅ) ಹತ್ತಿರದ ಸಂಪರ್ಕ (ಆ) ನರಕ (ಇ) ಒಳ್ಳೇತನ (ಈ) ಸಭೆ

೨. **ಮೋದನ**
(ಅ) ಸುಡುವುದು (ಆ) ಕೂಡಿಸುವುದು (ಇ) ಬುದ್ಧಿ (ಈ) ಸಂತೋಷ

೩. **ಮುಕುರ**
(ಅ) ಕನ್ನಡಿ (ಆ) ಮುತ್ತಿಕೊಳ್ಳು (ಇ) ಕವುಚಿಬೀಳು (ಈ) ಆಗಾಗ್ಗೆ

೪. **ನವ್ಯ**
(ಅ) ನೋವುಂಟುಮಾಡುವ (ಆ) ದೋಣಿ (ಇ) ಹೊಸ ತರದ (ಈ) ಆಕಾಶ

೫. **ಮುಕುಲ**
(ಅ) ಮೊಗ್ಗು (ಆ) ಮೇಲ್ಜಾತಿ (ಇ) ಕನ್ನಡಿ (ಈ) ಬೇರು

೬. **ಕೋಲ**
(ಅ) ರೂಮು (ಆ) ಕೊಲೆಗಡಕ (ಇ) ಅಲಂಕಾರ (ಈ) ಗಲಾಟೆ

೭. **ಮೋಜಣಿ**
(ಅ) ತಮಾಷೆ (ಆ) ಭೂಮಿಯ ಅಳತೆ (ಇ) ಸಂದೆ (ಈ) ಔತಣ

೮. **ಕೊಲ್ಲಿ**
(ಅ) ಭೂಮಿಯೊಳನುಗ್ಗಿದ ಸಮುದ್ರ ಭಾಗ (ಆ) ಪತ್ಯೆ (ಇ) ಬಾವಿ (ಈ) ಕಮ್ಮಾರ ಸಾಲೆ

೯. **ಗ್ರಂಥಿ**
(ಅ) ಮುಳ್ಳು ಪೊದೆ (ಆ) ಗಂಟು (ಇ) ಪದಕ (ಈ) ಮಾಲೆ

೧೦. **ನವನೀತ**
(ಅ) ಬೆಣ್ಣೆ (ಆ) ಮದುವಣಿಗ (ಇ) ಒಂದು ಧಾನ್ಯ (ಈ) ಒಂಭತ್ತನೆಯ

೧೧. **ಸಂಸತ್ತು**
(ಅ) ಸಭೆ (ಆ) ಸೋಲು (ಇ) ಐಶ್ವರ್ಯ (ಈ) ಜೋಡಿ

೧೨. **ಗೋಷ್ವಾರೆ**
(ಅ) ಮುಸುಕು (ಆ) ದನಕರುಗಳ ಕೊಟ್ಟಿಗೆ (ಇ) ಲೆಕ್ಕಪತ್ರಗಳ ಸಾರ (ಈ) ಕಾವಲು

ಶಬ್ದಭಾಂಡಾರದ ಸರಿಯಾದ ಅರ್ಥಗಳು

೧. **ಸಂಸರ್ಗ** (ಅ) ಹತ್ತಿರದ ಸಂಪರ್ಕ, ಕೂಡುವಿಕೆ, ಸಂಭೋಗ, ಜತೆಗೂಡುವುದು. ಉದಾ:— ದುಷ್ಟರ ಸಂಸರ್ಗ. [ಸಂ.]

೨. **ಮೋದನ** (ಈ) ಸಂತೋಷ— ಸಂತೋಷಪಡಿಸುವುದು; ಆನಂದ. ಉದಾ:— ಹೃದಯಮೋದನವಾದ ಸಂಗೀತ. [ಸಂ.]

೩. **ಮುಕುರು** (ಅ) ಮುತ್ತಿಕೊಳ್ಳು, ಮುಗಿಬೀಳು, ಮೇಲೆಬೀಳು, ಸುತ್ತಲೂ ಆಕ್ರಮಿಸು. ಉದಾ:— ಬೆಲ್ಲಕ್ಕೆ ಇರುವೆ ಮುಕುರಿದಂತೆ. [ಹಳೆಗನ್ನಡ— ಮುಕ್ಕುರು]

೪. **ನವ್ಯ** ಹೊಸ ತರದ; ತಾಜಾ, ನವೀನ. ಉದಾ:— ನವ್ಯಕುಸುಮ = ತಾಜಾ ಹೂ. [ಸಂ. ನವ = ಹೊಸ]

೫. **ಮುಕುಲ** (ಅ) ಹೂವಿನ ಮೊಗ್ಗು, ಮುಗುಳು, ಇನ್ನೂ ಅರಳದ ಹೂ. ಉದಾ:— ಕಣ್ಣುಗಳು ಮುಕುಲಗಳಂತಾದವು. [ಸಂ.—ಬಹುಶಃ ದೇಶ್ಯ + ಮುಗುಳ್ — ಇಂದ]

೬. **ಕೋಲ** (ಇ) ಅಲಂಕಾರ; ವೇಷ, ಅಣಿ, ಸೋಗು; ಭೂತನೃತ್ಯದ ಅಣಿಕಟ್ಟು. ಉದಾ:— ಮಂಗನಿಗೆ ಕೋಲ ಕಟ್ಟಿದಂತೆ. [ದೇಶ್ಯ]

೭. **ಮೋಜಣಿ** (ಅ) ಭೂಮಿಯು ಅಳೆಯುವಿಕೆ, ಸರ್ವೇ. ಉದಾ:— ಈ ಬಯಲಿನ ಮೋಜಣಿ ಆಗಿಲ್ಲ. [ಮರಾಠಿ = ಲೆಕ್ಕ, ಅಳತೆ]

೮. **ಕೊಲ್ಲಿ** (ಅ) ಭೂಮಿಯೊಳಗೆ ಚಾಚಿದ ಸಮುದ್ರದ ಕೈ, ಚಿಕ್ಕ ಜಲಪ್ರವಾಹ, ಅಖಾತ. ಉದಾ:— ಪರ್ಶಿಯನ್ ಕೊಲ್ಲಿ. [ದೇಶ್ಯ]

೯. **ಗ್ರಂಥಿ** (ಅ) ಗಂಟು; ಕಟ್ಟು; ಗಡ್ಡೆ; ಶರೀರದಲ್ಲಿ ರಸ ಒಸರಿಸುವ ಚಿಕ್ಕ ಅವಯವ. ಉದಾ:— ಕ್ಯಾನ್ಸರಿನ ಗ್ರಂಥಿ; ಪುಸ್ತಕದ ಗ್ರಂಥಿ. [ಸಂ.]

೧೦. **ನವನೀತ** (ಅ) ಬೆಣ್ಣೆ. ಉದಾ:— ಅವಳ ಮನಸ್ಸು ನವನೀತದಂತೆ ಮೃದು. [ಸಂ.]

೧೧. **ಸಂಸತ್ತು** (ಅ) ಸಭೆ; ಸಭೆ ಕೂಡುವ ಭವನ; ಭಾರತದ ಕೇಂದ್ರ ಪ್ರತಿನಿಧಿ ಶಾಸನ ಸಭೆಯ ಹೆಸರು. [ಸಂ. ಸಂಸತ್ = ಸಭೆ, ಕೂಟ]

೧೨. **ಗೋಷ್ವಾರೆ** (ಇ) ಲೆಕ್ಕಪತ್ರಗಳ ಸಾರಾಂಶ ಪತ್ರಿಕೆ; ಸ್ಥೂಲವಾಗಿ ಮಾಡಿದ ಹೇಳಿಕೆ. ಉದಾ:— ಸಭೆಯಲ್ಲಿ ಲೆಕ್ಕಪತ್ರದ ಗೋಷ್ವಾರೆ ಮಂಡಿಸಿದರು. [ಫಾರಸಿ — ಗೋಶ್ — ವಾರಾ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿತಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯-೧೦ ,,	...	ಉತ್ತಮ
೧೧-೧೨ ,,	...	ಅತ್ಯುತ್ತಮ

ಸಾಂತತೆ, ಅಸಂಖ್ಯತೆ, ಅನಂತತೆ, ನಿಸ್ಸಂಖ್ಯತೆ

ಜಿ. ಟಿ. ನಾರಾಯಣರಾವ್

"ಆಕಾಶದಲ್ಲಿ ಬರಿಗಣ್ಣಿಗೆ ಕಾಣುವ ನಕ್ಷತ್ರಗಳ ಸಂಖ್ಯೆ ಎಷ್ಟು?"

ಈ ಪ್ರಶ್ನೆಗೆ ಸಾಧಾರಣವಾಗಿ ದೊರೆಯುವ ಉತ್ತರ "ಅನಂತ." ವಿಜ್ಞಾನಿ, ಸಾಹಿತಿ, ತತ್ತ್ವಶಾಸ್ತ್ರಜ್ಞ, ವಕೀಲ ಮೊದಲಾದ ಪ್ರಾಜ್ಞರಿಂದ ಕೂಡ ಇಂಥ ವಿಚಾರವಿರಳವೂ ಭಾವುಕತಾಪ್ರಧಾನವೂ ಆದ ಉತ್ತರ ದೊರಕುವುದುಂಟು. ಹೆಚ್ಚಿಗೆ ಒಕ್ಕಿದರೆ ಎಣಿಕೆಗೆ ಸಿಲುಕದ ಹಿರಿ ಸಂಖ್ಯೆಯನ್ನು ಇವರು ಅನಂತವೆಂಬುದಾಗಿ ಭ್ರಮಿಸಿರುವುದು ಕಂಡುಬರುತ್ತದೆ.

ಯಾವುದೇ ಗಳಿಗೆ ನಮಗೆ ಗೋಚರವಾಗುವ ನಕ್ಷತ್ರಸಂಖ್ಯೆ ಸುಮಾರು ೩,೦೦೦. ಆದ್ದರಿಂದ ಇವರ ದೃಷ್ಟಿಯಲ್ಲಿ ಇದಕ್ಕಿಂತ ಮಿಗಿಲಾದ ಸಂಖ್ಯೆಗಳು ಅನಂತದ ಸೀಮೆಗೆ ಸೇರಿದವೆಂದಾಯಿತು.

ನೀವು ಅಸಮ್ಮತಿ ಸುಂಯಿಗುಟ್ಟುತ್ತಿರುವುದು ನನಗೆ ಕೇಳಿಸುತ್ತಿದೆ. ಏಕೆಂದರೆ ಕ್ಷುದ್ರ ಮೂರು ಸಾವಿರಕ್ಕಿಂತ ಹಿರಿದಾದ ಅನೇಕ ಬೃಹತ್ಸಂಖ್ಯೆಗಳು ನಿಮ್ಮ ಒಡನಾಡಿಗಳಾಗಿವೆ:

* ನಿಮ್ಮ ನೆರೆಮನೆ ಹೃದಯತಜ್ಞನ ಮಾಹೆಯಾನ ಘೋಷಿತ ವರಮಾನ ರೂ ೨೫.೦೦೦.

* ಭೂಮಿ–ಸೂರ್ಯ ಸರಾಸರಿ ಅಂತರ ೧,೪೯,೬೦೦,೦೦೦ ಕಿಲೊಮೀಟರ್.

* ಪ್ರಪಂಚದ ಹಾಲಿ ಜನಸಂಖ್ಯೆ ೬,೦೦೦,೦೦೦,೦೦೦.

ಹೊಟೆಂಟೊಟ್ ಬುಡಕಟ್ಟಿನ ನಾಯಕನಿಗೆ ಅಸ್ತಿಪಾಸ್ತಿಯಾಗಿ ಎಷ್ಟು ಹೆಂಡಿರು, ಮಕ್ಕಳು ದನಗಳು ಇತ್ಯಾದಿ ಇದ್ದರೂ ಎಣಿಸುವಾಗ ಅವನ ಕಲ್ಪನೆ ಮೂರರ ಗಡಿ ದಾಟಲಾರದಾಗಿತ್ತು. ಕಾರ್ಮಿಕನ ಚಿಂತನೆ ಪ್ರಾಯಶಃ ಸಾವಿರದಿಂದಾಚೆಗೆ ಮಬ್ಬಾಗುತ್ತದೆ. ದಿನವಹಿ ಅಂಕೆ ಸಂಖ್ಯೆಗಳ ವಹಿವಾಟಿನಲ್ಲಿಯೇ ನಿರತರಾಗಿರುವ ಕಾರಕೂನರ, ಲೆಕ್ಕಪತ್ರಗಾರರ ಇಲ್ಲವೇ ಶಿಕ್ಷಣತಜ್ಞರ ವ್ಯಾವಹಾರಿಕ ಗಡಿ ಕೆಲವು ಸಾವಿರಗಳ ಒಳಗೇ ಇರುವುದು. ಹೀಗೆ ಪ್ರತಿಯೊಬ್ಬನಿಗೂ ಒಂದು ಸಂಖ್ಯಾದಿಗಂತ ಉಂಟು. ಇದರಿಂದ ಮುಂದಕ್ಕೆ ಎಲ್ಲವೂ ಮಸಕು. ಗಣಿತದ ಸೂಕ್ಷ್ಮ ಅರಿಯದವರ ಮಾತಿನಲ್ಲಿ ಇದೇ ಅನಂತ, ಅರಿತವರ ಮಾತಿನಲ್ಲಿ ಅಸಂಖ್ಯ.

ಅಸಂಖ್ಯ ಎಂದರೆ ವ್ಯಕ್ತಿಯಿಂದ ಎಣಿಕೆಮಾಡಿ ಪೂರೈಸಲಾಗದ ಸಂಖ್ಯೆ ಎಂದರ್ಥ. ಅಸಂಖ್ಯತೆ ಎಂಬುದು ಆತನ ಮಾನಸಿಕ ಸ್ಥಿತಿಯನ್ನು ಬಿಂಬಿಸುವ ಮಾಪಕ. ಒಬ್ಬನಿಂದ ಇನ್ನೊಬ್ಬನಿಗೆ ಇದು ಬದಲಾಗುತ್ತದೆ—ದಿಗಂತದಂತೆ.

ಬ್ರಹ್ಮಾಂಡೋತ್ಪತ್ತಿ ವಿಜ್ಞಾನ (Cosmogony) ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವ ಪ್ರಾಧ್ಯಾಪಿಕೆ ಬಿನುವರ್ಸ್ಕ ಎಂಬಾಕೆ ಭೂಮಿಯ ಭವಿಷ್ಯದ ಬಗ್ಗೆ ತಜ್ಞರ ಸಭೆಯಲ್ಲಿ ಭಾಷಣ ಮಾಡುತ್ತಿದ್ದರು[೧] "ಇನ್ನು ಸುಮಾರು ಒಂದು ಬಿಲಿಯನ್ ($೧೦^{೯}$) ವರ್ಷಗಳಲ್ಲಿ ಭೂಮಿ ಸೂರ್ಯಾಗ್ನಿಗೆ ಆಹುತಿಯಾಗುವುದೆಂಬುದಾಗಿ ವೈಜ್ಞಾನಿಕ ಗಣನೆಗಳಿಂದ

ತಿಳಿದುಬಂದಿದೆ."

ಸಭಾಂಗಣದ ಕೊನೆ ಸಾಲಿನಿಂದ ಕಂಪಿತ ಸ್ವರ ತೇಲಿ ಬಂತು, "ಕ್ಷಮಿಸಿ ಶ್ರೀಮತಿಯವರೇ! ಇ-ಇ-ಇನ್ನೆಷ್ಟು ವರ್ಷಗಳಲ್ಲಿ ಅದು ಸಂಭವಿಸ ಲಿದೆಯೆಂದು ಹೇಳಿದಿರಿ?"

ಪ್ರಾಧ್ಯಾಪಿಕೆ ತಣ್ಣಗೆ ಮಾರುನುಡಿದರು, "ಸುಮಾರು ಒಂದು ಬಿಲಿಯನ್ ವರ್ಷಗಳಲ್ಲಿ."

"ಸದ್ಯ ಬಚಾವ್! ಒಂದು ಕ್ಷಣ ನಾನು ಭಾವಿಸಿದೆ ನೀವು ಒಂದು ಮಿಲಿಯನ್ ($೧೦^{೬}$) ಅಂದಿದ್ದಿರೆಂದು."

೧ ಬಿಲಿಯನ್ = $೧೦^{೯}$ = ೧,೦೦೦,೦೦೦,೦೦೦

೧ ಮಿಲಿಯನ್ = $೧೦^{೬}$ = ೧,೦೦೦,೦೦೦

೧ ಮಿಲಿಯನ್ × ೧,೦೦೦ = ೧ ಬಿಲಿಯನ್

ಒಂದು ಬಿಲಿಯನ್ ಮತ್ತು ಒಂದು ಮಿಲಿಯನ್ ನಡುವಿನ ವ್ಯತ್ಯಾಸವನ್ನು ಅಷ್ಟೊಂದು ತೀವ್ರವಾಗಿ ಅನುಭವಿಸಿ ಮೊದಲು ಬೇಗುದಿಯನ್ನೂ ಬಳಿಕ ನೆಮ್ಮದಿಯನ್ನೂ ಸೂಚಿಸಿದ ಆ ಕೊನೆ ಸಾಲಿನ ಪ್ರಭೃತಿಯ ಸಂಖ್ಯಾದಿಗಂತ ನಿಜಕ್ಕೂ ಅತಿವಿಸ್ತಾರವಾಗಿರಬೇಕು.

ವಾಲ್ಮೀಕಿ ರಾಮಾಯಣದಲ್ಲಿ ಬರುವ ಎರಡು ಪ್ರಸಂಗಗಳು ವಿಶೇಷವಾಗಿ ಸಂಖ್ಯೆಗಳತ್ತ ನಮ್ಮ ಗಮನ ಸೆಳೆಯುತ್ತವೆ.

ಸುಗ್ರೀವನಿಗೆ ಕೊಟ್ಟಮಾತಿನ ಪ್ರಕಾರ ರಾಮ ವಾಲಿಯನ್ನು ಸಂಹರಿಸಿದ್ದಾನೆ. ರಾಜ್ಯ ಪಡೆದ ಸುಗ್ರೀವ ರುಮ ತಾರೆಯರೊಡಗೂಡಿ ಸುಖಲೋಲುಪನಾಗಿ ರಾಮನಿಗೆ ನೀಡಿದ್ದ ವಚನಪಾಲನೆಯಲ್ಲಿ ಉದಾಸೀನನಾಗಿದ್ದಾನೆ. ಕುಪಿತ ಲಕ್ಷ್ಮಣ ಸುಗ್ರೀವನಿಗೆ ಶಿಕ್ಷೆ ವಿಧಿಸಲು ಇವನ ಅಂತಃಪುರ ಹೊಕ್ಕಿದ್ದಾನೆ. ತಾರೆ ಲಕ್ಷ್ಮಣನಿಗೆ ಸಾಂತ್ವನವೆರೆಯುತ್ತ ಲಂಕಾಧಿಪತಿಯ ಸೇನಾಧಿಕ್ಯ ಎಷ್ಟೆಂದು ವಿವರಿಸುತ್ತಾಳೆ: "ಲಂಕೆಯಲ್ಲಿ ನೂರು ಸಾವಿರಕೋಟಿ ರಾಕ್ಷಸರೂ ಇನ್ನೂ ಮೂವತ್ತಾರು ಹತ್ತು ಸಾವಿರ ರಾಕ್ಷಸರೂ ಇನ್ನೂ ಒಂದು ಲಕ್ಷ ರಾಕ್ಷಸರೂ ಇರುವರಂತೆ."

ಆಧುನಿಕ ಗಣಿತದ ಪರಿಭಾಷೆಯಲ್ಲಿ ರಾವಣ ಸೈನ್ಯದ ಸಂಖ್ಯೆ.

$$೧೦^{೧೨} + ೩೬ \times ೧೦^{೪} + ೧೦^{೫}$$

ಎರಡನೆಯ ಪ್ರಸಂಗ ಘಟಿಸುವ ವೇಳೆಗೆ ರಾಮನ ದಂಡು ಲಂಕೆಯಲ್ಲಿ ಬೀಡುಹೂಡಿದೆ. ರಾವಣನ ಮಂತ್ರಿಗಳಾದ ಶುಕ ಮತ್ತು ಸಾರಣ ವಾನರಸೈನ್ಯದ ಲೆಕ್ಕ ತೀಡಿ ಒಡೆಯನಿಗೆ ಒಪ್ಪಿಸಿದ್ದಾರೆ: "ಸಾವಿರ ಕೋಟಿ ನೂರು ಶಂಖ ಸಾವಿರ ಮಹಾಶಂಖ ನೂರು ಬೃಂದ ಸಾವಿರ ಮಹಾ ಬೃಂದ ನೂರು ಪದ್ಮ ಸಾವಿರ ಮಹಾಪದ್ಮ ನೂರು ಖರ್ವ ನೂರು ಸಮುದ್ರ ನೂರು ಮಹೌಘ."

ಆಧುನಿಕ ಗಣಿತದ ಪರಿಭಾಷೆಯಲ್ಲಿ ವಾನರ ಸೈನ್ಯದ ಸಂಖ್ಯೆ.

$$೧೦^{೧೦} + ೧೦^{೧೪} + ೧೦^{೨೦} + ೧೦^{೨೪} + ೧೦^{೩೦} + ೧೦^{೩೪} + ೧೦^{೪೦} + ೧೦^{೪೪} + ೧೦^{೫೨} + ೧೦^{೬೨}$$

ರಾವಣನ ಸೇನಾಸಂಖ್ಯೆಗಿಂತ ರಾಮನದು ಅಧಿಕವೆಂಬ ಸಂಗತಿ ಒಡನೆ ಹೊಳೆಯುತ್ತದೆ. ಆದರೆ ಒಂದೊಂದರ ನಿಜ ಮೌಲ್ಯ — ಅಂದರೆ ಪ್ರತಿಯೊಂದನ್ನೂ ಘಾತಾಂಕರಹಿತ ಸಂಖ್ಯೆಯಾಗಿ ಪೂರ್ತಿ ಬರೆದು (ಉದಾ $೧೦^{೧೨}$ = ೧,೦೦೦ ೦೦೦,೦೦೦,೦೦೦) ಮೊತ್ತ ಪಡೆದಾಗ ದೊರೆಯುವ ಸಂಖ್ಯೆ — ಯಾವ ಗಾತ್ರದ್ದು ಎಂಬುದು ನನ್ನ ಪ್ರಜ್ಞೆಗಂತೂ ನಿಲುಕದು. ನನಗದು ಅಸಂಖ್ಯ.

ಅಂದ ಹಾಗೆ ರಾಮನ ಸೇನಾಸಂಖ್ಯೆ ರಾವಣನದ್ದಕ್ಕಿಂತ ಸುಮಾರು $೧೦^{೫೦}$ ಪಟ್ಟು ದೊಡ್ಡದು. ಈ ಹೆಚ್ಚಿನ ಮಾಹಿತಿ ಕೂಡ ನನ್ನ ಅರಿವಿನ ಮೇರೆಯನ್ನು ಸಾಂಖ್ಯಿಕವಾಗಿ ವಿಸ್ತರಿಸಿದೆ ಎನ್ನಿಸುವುದಿಲ್ಲ.

ಗುಡ್ಡೆಗೆ ಗುಡ್ಡೆ ಅಡ್ಡ ಎಂಬ ಗಾದೆ ಉಂಟು. ಆದರೆ ಹಿಮಾಲಯ ಬೆಟ್ಟಗಳನ್ನೇ ಪರಿಶೀಲಿಸುತ್ತ ಹೋದರೆ ಮೌಂಟ್ ಎವರೆಸ್ಟಿಗೆ ಅಡ್ಡ ನಿಲ್ಲಬಲ್ಲ ಇನ್ನೊಂದು ಗುಡ್ಡೆ ಇಲ್ಲ. ಆದ್ದರಿಂದ ಗಾದೆಯು ವಾಚ್ಯಾರ್ಥಕ್ಕೆ ಮಿತಿ ಉಂಟು ಎಂದು ತಿಳಿಯುತ್ತದೆ. ಶ್ರೀಮಂತರನ್ನು — ಬಿರ್ಲಾ ಟಾಟಾಗಳಿಂದ ತೊಡಗಿ ರಾಕ್‌ಫೆಲ್ಲರ್ ವರೆಗೆ — ಪರಿಶೀಲಿಸಿದರೂ ಅಷ್ಟೆ. ಆದರೆ ಸಂಖ್ಯಾ ಪ್ರಪಂಚದಲ್ಲಿ ಈ ರಿಕ್ತತೆ ಇಲ್ಲ.

ಆಗ ತಾನೇ ಕೂಡು–ಕಳೆ ಲೆಕ್ಕ ಕಲಿತ ಇಬ್ಬರು ಬಾಲಕರ ನಡುವಿನ ವಾದ ಸ್ವಾರಸ್ಯ ನೋಡಿ:

ಶಿವ: "ಓ ಅಭಯ! ನೀನೆಷ್ಟೇ ದೊಡ್ಡ ಸಂಖ್ಯೆ ಬೇಕಾದರೂ ಬರೆ. ನನಗೆ ಭಯವಾಗದು. ಅದಕ್ಕಿಂತ ದೊಡ್ಡದಾದದ್ದನ್ನು ನಾನು ಬರೆಯುತ್ತೇನೆ."

ಅಭಯ ಬರೆದ: ೯೯೯.೯೯೯,೯೯೯.೯೯೯.೯೯೯.

ಹಾಳೆ ಪೂರ್ಣವಾದ್ದರಿಂದಲೋ ಕೈ ಬಳಲಿದ್ದರಿಂದಲೋ ಕಲ್ಪನೆ ಸೋರಿಹೋದ್ದರಿಂದಲೋ ಒಂದು ಹಂತದಲ್ಲಿ ನಿಲ್ಲಿಸಿದ. ಒಡನೆ ಶಿವ ಅದರ ಮುಂದೆ +೧ ಬರೆದು ಅಭಯನನ್ನು ಸೋಲಿಸಿದ:

೯೯೯.೯೯೯,೯೯೯.೯೯೯.೯೯೯ + ೧ =
೧,೦೦೦.೦೦೦.೦೦೦.೦೦೦.೦೦೦

ಈ ಬೃಹತ್ಸಂಖ್ಯೆಗಳನ್ನು ಹೇಗೆ ಓದುವುದೆಂಬುದು ಅವರಿಗೆ ತಿಳಿದಿರಲಿಲ್ಲ. (ಅಭಯ ಬರೆದ ಸಂಖ್ಯೆ: ಒಂಬೈನೂರತೊಂಬತ್ತೊಂಬತ್ತು ಶಂಖ ತೊಂಬತ್ತೊಂಬತ್ತು ಸಾವಿರದ ಒಂಬೈನೂರ ತೊಂಬತ್ತೊಂಬತ್ತು ಕೋಟಿ ತೊಂಬತ್ತೊಂಬತ್ತು ಲಕ್ಷ ತೊಂಬತ್ತೊಂಬತ್ತುಸಾವಿರ ಒಂಬೈನೂರ ತೊಂಬತ್ತೊಂಬತ್ತು: ಶಿವ ಬರೆದ ಸಂಖ್ಯೆ: ಸಾವಿರ ಶಂಖ.) ಇವುಗಳ ಗಾತ್ರಗಳ ಬಗೆಗೆ ಅವರು ಪೂರ್ಣ ಮುಗ್ಧರಾಗಿದ್ದರು. ಹೀಗಿದ್ದರೂ ಇವು ಎಣಿಕೆಯ ಸೀಮೆಯೊಳಗಿವೆ ಎಂಬ ಭಾವ ಅವರ ಮನದಲ್ಲಿ ಹುದುಗಿತ್ತೆಂಬುದು ಗಮನಾರ್ಹ.

ಹಾಗಾದರೆ ಎಣಿಕೆಗೆ ಅಳವಡುವ ಗರಿಷ್ಠ ಸಂಖ್ಯೆ ಇದೆಯೋ? ಇದ್ದರೆ ಅದು ಯಾವುದು? ಎರಡು ಉದಾಹರಣೆಗಳನ್ನು ಪರಿಶೀಲಿಸೋಣ.

ಸೆಕೆಂಡಿಗೆ ಸರಾಸರಿ ಒಂದು ಸಂಖ್ಯೆಯಂತೆ ೩೬೫ ದಿವಸಗಳ ಒಂದು ವರ್ಷ ಪೂರ್ತಿ ೧,೨,೩, ೪,೫ ಮುಂತಾದ ಪೂರ್ಣಾಂಕ ಸಂಖ್ಯಾನುಕ್ರಮವನ್ನು ಬರೆಯುತ್ತ ಸಾಗಿದ್ದೇವೆಂದು ಭಾವಿಸೋಣ. ವರ್ಷಾಂತ್ಯದಲ್ಲಿ ನಾವೇರಿರುವ ಎತ್ತರ ಮಹಾ ಏನೂ ಆಗಿರುವುದಿಲ್ಲ. ಅದು ಕೇವಲ ೩೧.೫೩೬,೦೦೦ (ಇದು ೧ ವರ್ಷದಲ್ಲಿರುವ ಸೆಕೆಂಡುಗಳ ಸಂಖ್ಯೆ). ಮುಂದೆ ಎಷ್ಟು ವರ್ಷ ಪರ್ಯಂತ ಹೀಗೆಯೇ ಸಾಗಿದರೂ ಎಷ್ಟು ಜನ ಸಹಾಯಕರನ್ನು ನೇಮಿಸಿಕೊಂಡರೂ ಗರಿಷ್ಠ ಸಂಖ್ಯೆಯನ್ನು ತಲಪುವುದಂತೂ ಗಗನಕುಸುಮವೇ ಸರಿ. ಏಕೆ?

ರೂಬಿಕ್ ಘನಾಕೃತಿಯ ಬಣ್ಣಗಳ ತಿರುಗು ಮುಂಚಾಚಿ ದೊಡ್ಡಿ ಇಂದು ಮಕ್ಕಳನ್ನೂ ಮುದುಕರನ್ನೂ ಸಮಾನವಾಗಿಯೇ ಹುಚ್ಚರನ್ನಾಗಿಸಿದೆ. ಇದರ ೬ × ೯ = ೫೪ ಬಣ್ಣ ತುಣುಕುಗಳ ಸಮಸ್ತ ಸಾಧ್ಯ ಜೋಡಣೆಗಳ ಸಂಖ್ಯೆ 'ಕೇವಲ' ೪೩.೨೫೨.೦೦೩.೨೭೪.೪೮೯.೮೫೬.೦೦೦ (ನಾನೂರ ಮೂವತ್ತೆರಡು ಮಹಾಶಂಖ ಐವತ್ತೆರಡು ಸಾವಿರದ ಮೂರು ಶಂಖ ಇಪ್ಪತ್ತೇಳು ಸಾವಿರದ ನಾನೂರ ನಲವತ್ತೆಂಟು ಕೋಟಿ ತೊಂಬತ್ತೆಂಟು ಲಕ್ಷ ಐವತ್ತಾರು ಸಾವಿರ). ವಿಶ್ವದ ವಯಸ್ಸನ್ನು ಸೆಕೆಂಡುಗಳಲ್ಲಿ ಅಳೆದುದಾದರೆ ಅದು ಈ ಮೇಲಿನ ೨೦-ಅಂಕೆ ಸಂಖ್ಯೆಯ ನೂರನೆಯ ಒಂದು ಅಂಶವಾಗುವುದೆಂದು ಬ್ರಹ್ಮಾಂಡವಿಜ್ಞಾನಿಗಳು (Cosmologists) ಅಭ್ಯಾಸಿಸುತ್ತಾರೆ. ಆದರೂ ಅಭಯ ಬರೆಯಬಹುದಾದ ಈ ಸಂಖ್ಯೆಯ ಮುಂದೆ ಶಿವ +೧ ಬರೆದು ಇದನ್ನು ಮೀರಿಸುವ ಸಂಖ್ಯೆಯನ್ನು ರಚಿಸಬಲ್ಲ. ಹಾಗಾದರೆ ಗರಿಷ್ಠ ಸಂಖ್ಯೆಯ



ಅನ್ವೇಷಣೆ ವ್ಯರ್ಥ ಸಾಹಸವೇ?

ಹೌದು. ಎಣಿಕೆಗೆ ಅಳವಡುವ ಗರಿಷ್ಠ ಸಂಖ್ಯೆ ಎಂಬುದೇ ಇಲ್ಲ. ಶಿವ ಬರೆದ ಹಿರಿಸಂಖ್ಯೆಯೇ ಆಗಲಿ, ವಾನರಸೇನಾಸಂಖ್ಯೆಯೇ ಆಗಲಿ, ಮಿದ್ಯ ಗೂಗಾಲ್‌ಪ್ಲೆಕ್ಸೇ* ಆಗಲಿ ಎಲ್ಲವೂ ಸಾಂತ (ಸ+ಅಂತ, finite) ಸಂಖ್ಯೆಗಳೇ.

ಗರಿಷ್ಠ ಸಾಂತ ಸಂಖ್ಯೆ ಇಲ್ಲ. ಅರ್ಥಾತ್, ಸಾಂತಸಂಖ್ಯೆಗಳ ಸಂಖ್ಯೆ ಅನಂತ (infinite). ಅಂದಮೇಲೆ ಒಂದು ಸಂಖ್ಯೆ ನಮ್ಮ ಅಳತೆಗೆ ನಿಲುಕದು ಎಂಬ ಕಾರಣಕ್ಕಾಗಿ ಅದನ್ನು ಅನಂತವೆನ್ನುವುದು ತರವಲ್ಲ (ಗಣಿತವೊಪ್ಪದು ಕಣಾ!).

ಎಣಿಕೆಗೆ ಅಳವಡುವ ಎಲ್ಲ ಸಂಖ್ಯೆಗಳೂ ಸಾಂತಸಂಖ್ಯೆಗಳೇ. ಆದ್ದರಿಂದ ಸಾಂತತೆ ಎಂಬುದು ವ್ಯಕ್ತಿಯ ಸಾಮರ್ಥ್ಯಾಸಾಮರ್ಥ್ಯಾವಲಂಬಿಯಲ್ಲದ ಒಂದು ಗಣಿತ ಪರಿಕಲ್ಪನೆ.

ಸಾಂತ ಸಂಖ್ಯೆಗಳ ಸಂಖ್ಯೆ ಅನಂತವೆಂದಿರುವುದು ಸರಿಯಷ್ಟೆ. ಈ ಅನಂತವೆಂಬುದು ಅಸಂಖ್ಯಕ್ಕಿಂತ ಭಿನ್ನವಾದದ್ದು.♥ ಎರಡು ಉದಾಹರಣೆಗಳನ್ನು ಪರಿಶೀಲಿಸೋಣ.

೧, ೦.೫, ೦.೨೫, ೦.೧೨೫, ೦.೦೬೨೫ ಇತ್ಯಾದಿಯಾಗಿ ಇಳಿಯುವ ಸಂಖ್ಯಾಶ್ರೇಣಿಯನ್ನು ಬರೆಯುತ್ತ ಹೋಗೋಣ. ಇಲ್ಲಿಯ ರೂಪಣ ನಿಯಮ ಅತಿ ಸರಳ: ಯಾವುದೇ ಪದವನ್ನು ೨ರಿಂದ ಭಾಗಿಸಿದಾಗ ಮುಂದಿನ ಪದ ದೊರೆಯುತ್ತದೆ. ಆದ್ದರಿಂದ ೦.೦೬೨೫ರ ಉತ್ತರ ಪದ ೦.೦೩೧೨೫. ಈ ಶ್ರೇಣಿಯಲ್ಲಿರುವ ಪದಗಳ ಸಂಖ್ಯೆ ಅನಂತ. ಹಾಗಿದ್ದರೂ ಇವುಗಳ ಮೊತ್ತ ಅನಂತವಲ್ಲ. ಏಕೆಂದರೆ ಶ್ರೇಣಿಯ ಅಧಿಕಾಧಿಕ ಪದಗಳ ಮೊತ್ತ ಕ್ರಮೇಣ ೨ನ್ನು ಸಮೀಪಿಸುವುದು ಕಂಡುಬರುತ್ತದೆ:

೧ + ೦.೫ + ೦.೨೫ + ೦.೧೨೫ = ೧.೮೭೫

೧ + ೦.೫ + ೦.೨೫ + ೦.೧೨೫ + ೦.೦೬೨೫ = ೧.೯೩೭೫

ಮೊದಲ ೧೦ ಪದಗಳ ಮೊತ್ತ = ೧.೯೯೮೦೪೬೮೭೫

ಮೊದಲ ಪದದಿಂದ ತೊಡಗಿ ಕೋಟಿ ಮಹೌಘ ($೧೦^{೬೨}$). ಗೂಗಾಲ್‌ಪ್ಲೆಕ್ಸ್ ಇನ್ನೇ ಇನ್ನೂ ಅಧಿಕ ಸಂಖ್ಯೆಯಷ್ಟು ಪದ ತೆಗೆದುಕೊಂಡರೂ ಅವುಗಳ ಮೊತ್ತ ಅಷ್ಟಷ್ಟು ೨ನ್ನು ಸಮೀಪಿಸೀತೇ ವಿನಾ ಎಂದೂ ಸಾಕ್ಷಾತ್ ೨ ಆಗದು. ಸಾಮೀಪ್ಯ ಸರಿ, ಸಾಯುಜ್ಯ ಸಲ್ಲ.

ನಿರ್ದಿಷ್ಟ ಸಂಖ್ಯೆಯನ್ನು (ಇದು ಭಾಜ್ಯ) ಬೇರೊಂದು ಸಂಖ್ಯೆಯಿಂದ (ಇದು ಭಾಜಕ) ಭಾಗಿಸಿದಾಗ ದೊರೆಯುವ ಸಂಖ್ಯೆಗೆ ಭಾಗಲಬ್ಧವೆಂದು ಹೆಸರು. ಭಾಜ್ಯವನ್ನು ಬದಲಾಯಿಸದೆ ಭಾಜಕವನ್ನು ಕಿರಿದುಗೊಳಿಸುತ್ತ ಹೋದರೆ ಭಾಗಲಬ್ಧ ಹಿರಿದಾಗುತ್ತ ಹೋಗುತ್ತದೆ:

೧೬ ÷ ೪ = ೪, ೧೬ ÷ ೨ = ೮, ೧೬ ÷ ೦.೫ = ೩೨, ೧೬ ÷ ೦.೦೧ = ೧೬೦೦ ಇತ್ಯಾದಿ.

ಹಾಗಾದರೆ, ಭಾಜ್ಯ ಸೊನ್ನೆಯೇ ಆದಾಗ ಭಾಗಲಬ್ಧ ಏನು? ಕ್ರಿಸ್ತಶಕ ಹನ್ನೆರಡನೆಯ ಶತಮಾನದಲ್ಲಿ ಬಾಳಿದ್ದ ಭಾಸ್ಕರ** ಎಂಬ ಗಣಿತವಿದ ಈ ಸಮಸ್ಯೆಯನ್ನು ಪ್ರಶ್ನಿಸಿದ ಮೊದಲಿಗ. ಆತನ ಪ್ರಕಾರ ಭಾಗಲಬ್ಧ ಅನಂತವಾಗುತ್ತದೆ.

“ನೀವು ಅಸಂಖ್ಯವೆನ್ನಿ, ಸಾಂತವೆನ್ನಿ, ಅನಂತವೆನ್ನಿ, ಅನಂತಕಾಲವೋ ಅಸಂಖ್ಯ ಕಾಲವೋ ಈ ಪದಗಳನ್ನು ಜಪಿಸುತ್ತ ಹೋಗಿ. ನನಗೆ ಇವೆಲ್ಲವೂ ಪದಗಳ ದೊಂಬರಾಟ. ಸಂಖ್ಯೆಗಳೆಂದರೆ ನನಗಾಗದು—ಬಗ್ಗಡಿಕೆ. ಅವುಗಳ ನಡುವಿನ ವ್ಯತ್ಯಾಸವರಿಯುವುದು ನನಗೆ ಅತಿ ಕ್ಲಿಷ್ಟ ಮಾನಸಿಕ ಸಾಹಸ.” ಈ ಧಾಟಿಯಲ್ಲಿ ಮಾತಾಡುವ ಪ್ರಾಮಾಣಿಕ ವ್ಯಕ್ತಿಗಳು ನಮ್ಮ ಸುತ್ತಮುತ್ತ ಕಾಣಸಿಗುತ್ತಾರೆ. ತಮ್ಮ ಸಂಬಳವನ್ನು ಕೂಡ ಇವರು ಎಣಿಸಲಾರರು. ಇವರ ಮನೆವಾರ್ತೆ ನಿಭಾಯಿಸುವುದು ಇವರ ಸಮರ್ಥ ಪತ್ನಿ. ಇವರು ಸಂಖ್ಯಾಶತ್ರುಗಳಲ್ಲ, ಸಂಖ್ಯಾಸಂವೇದನ ಶೂನ್ಯರು, ಸಂಖ್ಯೆಗಳ ಹಿನ್ನೆಲೆಯಲ್ಲಿರುವ ರಾಗಭಾವದಿಂದ ಪ್ರೇರಿತರಾಗದ ಸಂಖ್ಯಾಮಂದಮತಿಗಳು.

ಇಂಟರ್ಮೀಡಿಯೇಟ್ ತರಗತಿಯಲ್ಲಿ ನಮಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದ [illegible] ಪಂಡಿತರು ಇಂಥ ಒಬ್ಬ ಸಂಖ್ಯಾಮಂದಮತಿ. ಪಾಠದಲ್ಲಿ ಸಂಖ್ಯೆಗಳು ಬಂದಾಗ ಇವರು ಗಡಿಬಿಡಿ ಪವರಂತೆ ಗಡಬಡಿಸುತ್ತಿದ್ದುದು [illegible]

ಗಳಾದ ನಮಗೆ ಮೋಜಿನ (ಅವರಿಗೆ ಪೇಚಿನ) ಸಂಗತಿ ಆಗಿತ್ತು.

ಖಗೋಳವಿಜ್ಞಾನಕ್ಕೆ ಸಂಬಂಧಿಸಿದ ಒಂದು ಇಂಗ್ಲಿಷ್ ಪಾಠವನ್ನು ಅವರು "ಬೆಳಕಿನ ವೇಗ"ದಿಂದ ಓದಿ ಮುಗಿಸಿದರು. "ನಮ್ಮ ಆಕಾಶಗಂಗೆಯಲ್ಲಿ ಕೆಲವು ಬಿಲಿಯನ್ ನಕ್ಷತ್ರಗಳಿವೆ. ಇಂಥ ಆಕಾಶಗಂಗೆಗಳ ಸಂಖ್ಯೆ ಎಷ್ಟೆಂದು ಗೊತ್ತಿಲ್ಲ. ಹೀಗಿದ್ದರೂ ವಿಶ್ವದ ಬಹ್ವಂಶ ಖಾಲಿಯಾಗಿಯೇ ಇದೆ. ಇಲ್ಲಿ ಯಾವುವೇ ಎರಡು ಅಕ್ಕಪಕ್ಕದ ನಕ್ಷತ್ರಗಳ ನಡುವಿನ ಸರಾಸರಿ ಅಂತರ ೩೦ ಟ್ರಿಲ್ಲಿಯನ್ ಮೈಲುಗಳು." ಅಡಿಟಿಪ್ಪಣಿಯಲ್ಲಿ ಟ್ರಿಲ್ಲಿಯನ್ ಎಂದರೆ ೧ರ ಬಲಕ್ಕೆ ಹನ್ನೆರಡು ಸೊನ್ನೆಗಳನ್ನು ಬರೆದಾಗ ದೊರೆಯುವ ಸಂಖ್ಯೆ ಎಂಬ ವಿವರಣೆ ಇತ್ತು.

ನಮ್ಮ ಇಂಗ್ಲಿಷ್ ಪ್ರಾಧ್ಯಾಪಕೋತ್ತಮರು ಅಪ್ಪಣೆಕೊಡಿಸಿದರು: "ಈ ಸಂಖ್ಯೆಗಳಿಗೆ ಯಾವ ಮಹತ್ತ್ವವೂ ಇಲ್ಲ. ಇವುಗಳಿಗೆ ಇನ್ನಷ್ಟು ಸೊನ್ನೆ ಸೇರಿಸಿ ಅಥವಾ ಇವುಗಳಿಂದ ಕೆಲವು ಸೊನ್ನೆ ತೆಗೆದುಬಿಡಿ — ವಸ್ತುಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ಕಂಡುಬರದು."

ಈ ಮಹಾಶಯರಿಗೆ ಗಣಿತ–ಗಣಕೆ ಪದಗಳ ನಡುವಿನ ಅರ್ಥವ್ಯತ್ಯಾಸ ತಿಳಿಯದೆಂಬುದು ನಮಗೆ ಚೆನ್ನಾಗಿ ತಿಳಿದಿದ್ದ ರಹಸ್ಯ. ಕಿಲಾಡಿಯೊಬ್ಬ ಮುಗ್ಧ ಪ್ರಶ್ನೆ ಎಸೆದ: "ಅಂದ ಮೇಲೆ ಒಂದು ನಕ್ಷತ್ರದಿಂದ ನೆರೆ ನಕ್ಷತ್ರಕ್ಕಿರುವ ದೂರದಿಂದ ೩೦ ಟ್ರಿಲ್ಲಿಯನ್ ಮೈಲುಗಳನ್ನು ಕಳೆದುಬಿಟ್ಟರೆ ಎರಡೂ ಒಂದಾಗಿ ಬೆಸೆದುಕೊಳ್ಳಬೇಕಲ್ಲವೇ ಸಾರ್? ವಾಸ್ತವವಾಗಿ ಇದು ಹೇಗೆ ಸಾಧ್ಯ?"

ಇಸವಿ ೧೯೪೨. ಪ್ರಾಧ್ಯಾಪಕ ಸರ್ವಾಧಿಕಾರಿ. ಸದ್ಯ ಕಿಲಾಡಿಯು ತಿರಸ್ಕೃತನಾಗದಿದ್ದುದು ಪುಣ್ಯ.

ಇತರ ಕ್ಷೇತ್ರಗಳಲ್ಲಿ ಅತ್ಯಂತ ಸೂಕ್ಷ್ಮ ಸಂವೇದನಶೀಲರಾಗಿರುವ ಪ್ರಬುದ್ಧಮತಿಗಳು ಸಂಖ್ಯಾಕ್ಷೇತ್ರದಲ್ಲಿ ಪ್ರದರ್ಶಿಸುವ ಅಗಾಧ ಅಜ್ಞಾನ — ಸಂಖ್ಯಾಸಂವೇದನಶೂನ್ಯತೆ — ಆಶ್ಚರ್ಯಕರವಾಗಿದೆ. ಮಂತ್ರಿಮಹೋದಯರಲ್ಲಿಯೂ ಉಚ್ಚ ಅಧಿಕಾರಿಗಳಲ್ಲಿಯೂ ಇದು ದೋಷವಿಘಾತಕ ಗುಣವಾಗಿದೆ.

"ಹಾಲಿ ವರ್ಷ ರಸ್ತೆ ಅಪಘಾತಗಳಲ್ಲಿ ಮಡಿದವರ ಸಂಖ್ಯೆ ೫೭.೫೭೫. ಇದು ಹಿಂದಿನ ವರ್ಷಕ್ಕಿಂತ ೪೩೭ ಕಡಿಮೆ ಎಂಬುದು ನೆಮ್ಮದಿಯ ಸಂಗತಿ" ಎನ್ನುವ ಪೊಲೀಸ್ ಅಧಿಕಾರಿಯ ಬಗೆಗೆ, "ಕಳೆದ ವರ್ಷ ರಸ್ತೆ ಸಾರಿಗೆ ಸಂಸ್ಥೆ ಅನುಭವಿಸಿದ ನಷ್ಟ ರೂ ೬.೫೭.೫೭.೩೪೦. ನಮ್ಮ ಸತತ ದಕ್ಷ ಪ್ರಯತ್ನದ ಫಲವಾಗಿ ಈ ವರ್ಷದ ನಷ್ಟ ಅದಕ್ಕಿಂತ ರೂ ೩೭.೫೪೯ ಕಡಿಮೆಯಾಗಿದೆ ಎಂಬುದನ್ನು ತಿಳಿಸಲು ಸಂತೋಷಪಡುತ್ತೇನೆ." ಎಂದು ಆಶ್ವಾಸಿಸುವ ಸಾರಿಗೆ ಮಂತ್ರಿಯ ಬಗೆಗೆ. ಇತ್ಯಾದಿ, ಸಾಮಾನ್ಯ ಪ್ರಜೆಯಾಗಿ ನಮ್ಮ ಪ್ರತಿಕ್ರಿಯೆ ಏನು? "ಸ್ವರ್ಗದಲ್ಲಿರುವ ತಂದೆಯೇ! ಕಾಪಾಡು ನಮ್ಮನ್ನು - ಈ ಸಂಖ್ಯಾಸಂವೇದನಶೂನ್ಯ ಕಬಂಧರ ಆಕ್ಟೋಪಸ್ ಹಿಡಿತಗಳಿಂದ" ಎಂಬುದಾಗಿ ಮೊಳಕಾಲೂರಿ ಮೂಕ ಪ್ರಾರ್ಥನೆ ಸಲ್ಲಿಸುವುದು ಮಾತ್ರ.

ಡೊಗ್ಲಾಸ್ ಆರ್. ಹಾಫ್‌ಸ್ಟ್ಯಾಡ್ಟರ್ ಎಂಬ ಗಣಿತವಿದರು ಈ ಮಾನಸಿಕ ಸ್ಥಿತಿಯನ್ನು ವಿಶ್ಲೇಷಿಸಿದ್ದಾರೆ. ಮೇಲೆ ಉದಾಹರಿಸಿದ ಮನೋರೋಗಿಗಳಿಗೆ number numbness (ಸಂಖ್ಯಾಸ್ಪರ್ಶಜ್ಞಾನರಾಹಿತ್ಯ) ಎಂಬ ವ್ಯಾಧಿ–



"ಇವತ್ತಿನ ಪ್ರಸಾರ ಕಾರ್ಯಕ್ರಮ ಇಲ್ಲಿಗೆ ಮುಕ್ತಾಯವಾಯಿತು. ಮತ್ತೆ ನಾಳೆ ಎಂದಿನಂತೆ.."

ಗ್ರಸ್ತರಾಗಿರುವರೆಂದು ಅವರು ವಿವರಣೆ ನೀಡಿದ್ದಾರೆ. Letter(ಅಕ್ಷರ)ಗಳನ್ನು ನೋಡಿ ಓದಲಾಗದವರು ಅಥವಾ ಓದಿ ಅವುಗಳಲ್ಲಿ ಹುದುಗಿರುವ ಅರ್ಥ ಗ್ರಹಿಸಲಾಗದವರು illiterates (ನಿರಕ್ಷರರು). ಇವರ ಮಾನಸಿಕ ಸ್ಥಿತಿ illiteracy (ನಿರಕ್ಷರತೆ.) ಈ ಸಾದೃಶ್ಯವನ್ನು ಅನುಸರಿಸಿ ಹಾಫ್‌ಸ್ಟ್ಯಾಡ್ಟರ್ number(ಸಂಖ್ಯೆ)ಗಳನ್ನು ನೋಡಿ ಓದಲಾಗದವರಿಗೆ ಅಥವಾ ಓದಿ ಅವುಗಳಲ್ಲಿ ಹುದುಗಿರುವ ಅರ್ಥ ಗ್ರಹಿಸಲಾಗದವರಿಗೆ innumerates (ನಿಸ್ಸಂಖ್ಯರು) ಎಂಬ ಹೆಸರು ಕೊಟ್ಟಿದ್ದಾರೆ. ಇವರ ಮಾನಸಿಕ ಸ್ಥಿತಿ innumeracy (ನಿಸ್ಸಂಖ್ಯತೆ). ಆದ್ದರಿಂದ ನಿಸ್ಸಂಖ್ಯತೆ ಎಂದರೆ ಸಂಖ್ಯೆಗಳನ್ನು ಕುರಿತಂತೆ ಯಾವುದೋ ಗಳಿಯಲ್ಲಿ ವ್ಯಕ್ತಿ ಪ್ರದರ್ಶಿಸುವ ಸಂವೇದನರಾಹಿತ್ಯ. ಇದು ಅಸಂಖ್ಯತೆಗಿಂತ ಭಿನ್ನವಾದ ಮಾನಸಿಕ ಸ್ಥಿತಿ. ಅಸಂಖ್ಯತೆಯ ಮತ್ತು ನಿಸ್ಸಂಖ್ಯತೆಯ ಗಡಿಗಳು ಒಂದೇ ವ್ಯಕ್ತಿಯಲ್ಲಿಯೂ ಬೇರೆ ಬೇರೆ. ಭಿನ್ನ ವ್ಯಕ್ತಿಗಳಲ್ಲಂತೂ ಹೇಗೂ ಬೇರೆ ಬೇರೆಯೇ. "ಡಾ ರಾಜಕುಮಾರರ ಕನ್ನಡ ಜಾಥಾದಲ್ಲಿ ಅಸಂಖ್ಯ ಅಭಿಮಾನಿಗಳು ಭಾಗಿಗಳಾಗಿದ್ದರು" ಎನ್ನುವಾಗ ಪ್ರಕಟವಾಗುವ ಸಂಖ್ಯೆಗಳ ಬಗೆಗಿನ (ಅ)ಜ್ಞಾನವೂ, "ಆಕಾಶಗಂಗೆಯಲ್ಲಿರುವ ನಕ್ಷತ್ರ ಸಂಖ್ಯೆ ಮುನ್ನೂರು ಬಿಲಿಯನ್ (೩×೧೦^{೧೧}) ಎಂದೂ ನಮಗೆ ಗೋಚರವಾಗುವ ವಿಶ್ವಭಾಗದಲ್ಲಿರುವ ನಕ್ಷತ್ರ ಸಂಖ್ಯೆ ಬಿಲಿಯನ್ ಟ್ರಿಲಿಯನ್ ($೧೦^{೨೧}$) ಎಂದೂ ವಿಜ್ಞಾನಿಗಳು ಹೇಳುತ್ತಾರೆ. ಈ ಎರಡು ಹೇಳಿಕೆಗಳೂ ನನಗೆ ಸಮಾನವಾಗಿಯೇ ಅರ್ಥರಹಿತ ವ್ಯರ್ಥಾಲಾಪಗಳು" ಎನ್ನುವಾಗ ಪ್ರಕಟವಾಗುವ ಸಂಖ್ಯೆಗಳ ಬಗೆಗಿನ (ಅ)ಜ್ಞಾನವೂ ಬೇರೆ ಬೇರೆ. ಮೊದಲನೆಯದು ಅಸಂಖ್ಯತೆ, ಎರಡನೆಯದು ನಿಸ್ಸಂಖ್ಯತೆ. ✡

ಗ್ರಂಥಸೂಚಿ *

೧. Methamatical Themes by Douglas R. Hofstadter— 'Scientific American', May 1982.

೨. ಕನ್ನಡ ವಾಲ್ಮೀಕಿರಾಮಾಯಣ—ಸಿ.ಎನ್. ಶ್ರೀನಿವಾಸ ಅಯ್ಯಂಗಾರ್.

೩. ಗೂಗಾಲ್‌ಪ್ಲೆಕ್ಸ್ (googolplex)— ಕನ್ನಡ ವಿಶ್ವಕೋಶ ಸಂಪುಟ ೬. ಅಮೆರಿಕದ ಒಂದು ಪ್ರಾಥಮಿಕ ಶಾಲೆ. ವಿದ್ಯಾರ್ಥಿಗಳನ್ನು ಕುರಿತು ಉಪಾಧ್ಯಾಯರು ವಿವರಣೆ ನೀಡುತ್ತಿದ್ದರು. ಉದಾಹರಣೆಗೆ ೧ರ ಬಲಕ್ಕೆ ನೂರು ಸೊನ್ನೆ ಬರೆದಾಗ ದೊರೆಯುವ ಸಂಖ್ಯೆ. ಇದಕ್ಕೊಂದು ಹೆಸರು ಸೂಚಿಸಬೇಕೆಂದು ತರಗತಿಗೆ ಸವಾಲೊಡ್ಡಿದಾಗ ಮಿಲ್ಟನ್ ಸಿರೋಟ್ ಎಂಬ ಒಂಬತ್ತು ವರ್ಷದ ಅಣುಗ 'ಗೂಗಾಲ್' ಪದ ಹೇಳಿದ (೧೯೫೫). ೧ ಗೂಗಾಲ್ = $೧೦^{೧೦೦}$. ಗೂಗಾಲ್ ಪ್ಲೆಕ್ಸ್ ಪದದ ಕರ್ತೃವೂ ಇವನೇ. ೧ರ ಬಲಕ್ಕೆ ಗೂಗಾಲ್ ಸೊನ್ನೆ ಬರೆದಾಗ ದೊರೆಯುವ ಸಂಖ್ಯೆ ಇದು. ಗೂಗಾಲ್‌ಪ್ಲೆಕ್ಸಿನ ವಿಸ್ತೃತ ರೂಪ ಬರೆಯಲು ಸಮಗ್ರ ವಿಶ್ವದ (universe) ವಿಸ್ತಾರ ಕೂಡ ಸಾಲದು.

೪. ಡೇವಿಡ್ ಹಿಲ್‌ಬರ್ಟ್ (೧೮೬೨–೧೯೪೩) ಎಂಬ ಗಣಿತ ವಿದ್ವಾಂಸರ ಮಾತು "ಪ್ರಾಚೀನ ಕಾಲದಿಂದಲೂ ಮಾನವನ ರಾಗಭಾವಗಳನ್ನು ಅನಂತದಷ್ಟು ಕಲಕಿದ ಪ್ರಶ್ನೆ ಬೇರೊಂದಿಲ್ಲ. ಬೇರಾವ ಭಾವನೆಯೂ ಇಷ್ಟು ಫಲಪ್ರದವಾಗಿ ಅವನನ್ನು ಪ್ರಚೋದಿಸಿರುವುದಿಲ್ಲ. ಹಾಗಿದ್ದರೂ ಬೇರಾವುದಕ್ಕೂ ಸ್ಪಷ್ಟೀಕರಣ ಇದಕ್ಕಿಂತ ಹೆಚ್ಚು ಬೇಡ. ವಾಸ್ತವಿಕ ಪರಿಸ್ಥಿತಿಯಲ್ಲಿಯೂ ಅನಂತವನ್ನು ಅರಿಯಲಾಗುವುದಿಲ್ಲ. ಅದಕ್ಕೆ ನಿಸರ್ಗದಲ್ಲಿ ಅಸ್ತಿತ್ವವಿಲ್ಲ. ಅಥವಾ ಒಂದು ವೈಚಾರಿಕ ಭಾವನೆಗೆ ಅದು ಸಮರ್ಪಕ ತಳಹದಿ ಒದಗಿಸುವುದಿಲ್ಲ. ವಾಸ್ತವತೆಗೂ ಕಲ್ಪನೆಗೂ ನಡುವೆ ಇರುವ ಅದ್ಭುತ ಬಾಂಧವ್ಯ ಅನಂತ. ಅನಂತದ ಸ್ವರ ಮೇಳವೇ ವಿಶ್ಲೇಷಣಗಣಿತ."

೫. ಗಣಿತಶಾಸ್ತ್ರದ ಚರಿತ್ರೆ – ಸಿ. ಎನ್. ಶ್ರೀನಿವಾಸ ಅಯ್ಯಂಗಾರ್.

ಡೊಂಕು

ಮೂರು ವಾರಗಳಲ್ಲೇ ಬರ್ನ್ ಆಗುತ್ತದೆ ಹೊಸ ಬಲ್ಬು,
ಅರ್ಧ ಗಾಳಿಯನ್ನೇ ಹೀರಿಕೊಂಡಿರುತ್ತದೆ
ಶೇವಿಂಗ್ ಕ್ರೀಮ್ ಟೂತ್‌ಪೇಸ್ಟ್ ಇತ್ಯಾದಿಗಳ ಟ್ಯೂಬು.
ಮುಖ ಕೆತ್ತಿಕೊಂಡಾಗ ಗೊತ್ತಾಗುತ್ತದೆ: ನೀಟಾಗಿ ಪ್ಯಾಕೆಟ್ಟಿನಲಿ
ಜೋಡಿಸಿರುವುದು ಆಗಲೆ ಎಂಟು ಸಲ ಉಪಯೋಗಿಸಿದ ಬ್ಲೇಡು.
ಹಾಗೆಂದೇ ಏರುತ್ತಿದೆ ವಿದೇಶೀ ಮಾಲುಗಳೆಂದು ಲೇಬಲ್-
ಹಚ್ಚಿಕೊಂಡಿರುವ ಸ್ವದೇಶೀ ಕಳಪೆ ವಸ್ತುಗಳ ಗ್ರೇಡು.
ನೀರಲ್ಲಿ ಹಾಲೊ, ಹಾಲಲ್ಲಿ ನೀರೊ ?
ಬಾಟಲಿಯಲ್ಲಿ ಬೀರೊ, ಕತ್ತೆ ವಿಸರ್ಜಿಸಿದ ಖೀರೊ ?
ಜೇಬ್ಚಾಕ ಕತ್ತರಿಸಿದರೆ ಜೇಡಿ ಮಣ್ಣು, ಅಹ ! ಎಂಥ ಚಾಕಲೇಟು !
ಎಷ್ಟು ಮೋಹಕ, ಲೇಪಿಸಿದರೆ ಒಣ ಸೆಗಣಿಗೂ ಗಿಲೀಟು.
ಒಂದೇ ಮಳೆ ಅಥವ ಬಿಸಿಲಿಗೆ ಪಂಜರವಾಗುತ್ತದೆ ಕೊಡೆಯ ಟೆಂಟು.
ಬೂದಿ ಹೆಚ್ಚಾದಷ್ಟೂ ಅಪ್ಪಟ ಬಣ್ಣ ಪಡೆಯುತ್ತದೆ ಸಿಮೆಂಟು.
ಇಲ್ಲಿ ಯಾವುದೇ ಉತ್ಪಾದನೆಗೆ ಬೇರೆ ಬೇರೆ ವಿಧಾನಗಳುಂಟು
ಸುಲಭದಲಿ ಪಡೆಯಲು ಮಾರುಕಟ್ಟೆಯ ಪೇಟೆಂಟು.

*

ನಿನ್ನೆ ವರದಿಯಾದದ್ದು ಸುಳ್ಳೆಂದು ಇಂದು ಸುದ್ದಿ
ನಂಬಿದರೂ ಕಷ್ಟ, ನಂಬದಿದ್ದರೂ ಕಷ್ಟ, ಬುದ್ಧಿ !
ಬಸ್ಸಿಗೆ ಟ್ರೇನಿಗೆ ನೇತಾಡದಿದ್ದರೆ ನೌಕರಿ-ಭ್ರಷ್ಟ.
ಇಷ್ಟಾದರೂ ಸಾರಿಗೆ ಸಂಸ್ಥೆಗಳಿಗೆ ಕೋಟಿಗಟ್ಟಲೆ ನಷ್ಟ
ಸ್ಕೂಲು ಕಾಲೇಜುಗಳೊ, ಸಂಸ್ಥೆ ಕಚೇರಿಗಳೊ ?
ಸೀಟು ಹುದ್ದೆಗಳ ಮಾರಿ ಭರ್ತಿಯಾಗುವ ತಿಜೋರಿಗಳೊ?
ಜನರಿಗಿಂತಲೂ ಅಧಿಕ ಶಾಸಕರು, ಶಾಸಕರಿಗಿಂತ ಹೆಚ್ಚು ಮಂತ್ರಿಗಳು
ಏಜೆಂಟುಗಳ ದಲ್ಲಾಳಿಗಳ ಸೇವೆ ಪಡೆಯುವವರು ಕಂತ್ರಿಗಳು.
'ಸದ್ಯ ಹಸಿವಿನಿಂದ ಯಾರೂ ಸಾಯುತ್ತಿಲ್ಲ'—ಸಚಿವರ ಕೊಂಕು.
ಇಲ್ಲಿ ನೇರವಾಗದ್ದು ಒಂದೆ: ನಿರ್ಗತಿಕರ ನಸೀಬದ ಡೊಂಕು !

—ಅಬ್ದುಲ್ ಮಜೀದ್ ಖಾನ್

ಪದಾರ್ಥ ಚಿಂತಾಮಣಿ

೪೪

ಸಾಯೀಬಾಬಾ ಹೆಸರು ಯಾರು ಕೇಳಿಲ್ಲ? ಶಿರಡಿಯ ಮೂಲ ಸಾಯೀಬಾಬಾ, ಪುಟ್ಟಪರ್ತಿಯ ಸಾಯೀಬಾಬಾ ಜಗತ್ಪ್ರಸಿದ್ಧರು. ಇವರಲ್ಲದೆ ಉತ್ತರ ಭಾರತದಲ್ಲಿ ಬೇರೆ ಚಿಕ್ಕಪುಟ್ಟ ಸಾಯೀಬಾಬಾಗಳೂ ಇದ್ದಾರಂತೆ. ಆದರೆ ಸಾಯೀಬಾಬಾ ಅಂದರೇನು ? ಸಾಯೀ ಎಂಬುದು ಸ್ವಾಮೀ ಶಬ್ದದ ಅಪಭ್ರಂಶ; ಬಾಬಾ ಎಂಬುದು ವೃದ್ಧ ಅಥವಾ ಪೂಜ್ಯ ವ್ಯಕ್ತಿಯನ್ನು ಸಂಬೋಧಿಸುವ ಪಾರಸೀಕ ಪದ. ಆದ್ದರಿಂದ ವಿನೋಬಾ ಭಾವೆ ಕೂಡ ಸಾಯಿ ಅಲ್ಲವಿದ್ದರೂ ಬಾಬಾ ಎಂದು ಪ್ರಸಿದ್ಧರಾಗಿದ್ದಾರೆ.

ಬಹುಶಃ ಮಠ ಮಾನ್ಯಾದಿಗಳ ಅಧಿಕಾರವಿಲ್ಲದೆ 'ಸ್ವಯಂಭು'ಗಳಾದ ಅವಧೂತ ಪವಾಡಿಗ ಸಾಧುಗಳು, ಬೈರಾಗಿಗಳೇ ಸಾಯೀಗಳು; ಅವರು ದಕ್ಷಿಣದ ಸ್ವಾಮಿಗಳಂತೆ ಮಂಡೆ ಬೋಳಿಸಿದ ಸ್ವಾಮಿಗಳಾಗಿರಬೇಕಿಲ್ಲ. ಬರೇ ಸಾಯಿಗಳಲ್ಲದೆ ಗೋ-ಸಾಯಿಗಳೂ ಇದ್ದಾರೆ. ಈ ಪದದ ಸಂಸ್ಕೃತ ರೂಪ ಗೋಸ್ವಾಮಿ. ಹಿಂದೀ ರಾಮಾಯಣದ ಸಂತಕವಿ ಗೋಸ್ವಾಮಿ ತುಲಸೀದಾಸರು; ಸಂಸ್ಕೃತ ಭಕ್ತಕವಿ ರೂಪ ಗೋಸ್ವಾಮಿ. ಈ ಗೋ-ಸ್ವಾಮಿಗಳಿಗೂ ಗೋವುಗಳಿಗೂ ಸಂಬಂಧವಿಲ್ಲ. ಗೋ ಅಂದರೆ ಇಂದ್ರಿಯಕ್ಕೂ ಹೆಸರು. ಗೋ-ಸ್ವಾಮಿ ಇಂದ್ರಿಯಗಳನ್ನು ಜಯಿಸಿದ ವಿರಕ್ತ; ಇಂದ್ರಿಯಗಳ ಒಡೆಯ. ಅವನು ಸಂಸಾರಿಯಾಗಿದ್ದೂ ಅನಾಸಕ್ತನಾಗಿರಬಹುದು. ಗೋಜಿತ (ಇಂದ್ರಿಯಗಳನ್ನು ಗೆದ್ದಾತ) ಶಬ್ದವನ್ನು ಬಸವಣ್ಣನವರೂ ಬಳಸಿದ್ದಾರೆ. ಸಾಧಾರಣದ ಮಾತಿನಲ್ಲಿ ಅವನು ಗೋಸಾಯಿ ಅಥವಾ ಗೋಸಾವಿ (ಕನ್ನಡಿಗರಲ್ಲಿ ಗೋಸಾವಿ ಕುಲಗಳುಂಟು).

ಆದರೂ ಸಾಯೀಬಾಬಾ. ಪದಕ್ಕೆ ಸ್ಫೂರ್ತಿ ಇಸ್ಲಾಮಿನದೇ ಎಂದು ಸಂಶಯ ಬರುತ್ತದೆ. ಒಂದು ವಿಶಿಷ್ಟ ತರಹದ ಮುಸಲ್ಮಾನ ಸಾಧು–ಬೈರಾಗಿಗಳಿಗೆ ಸಾಯಿ ಎಂಬ ಅಭಿಧಾನವುಂಟು. ಈ ಅರಬೀ ಶಬ್ದಕ್ಕೆ ಯತ್ನ ಮಾಡುವವ, ಸಾಧಕ ಎಂದು ಅರ್ಥ. ಅಧ್ಯಾತ್ಮ ಸಾಧಕನಾದ್ದರಿಂದ ಅವನು ಸಾಯೀ. ಮೂಲ (ಶಿರಡಿ) ಸಾಯೀಬಾಬಾ ಯಾವ ಜಾತಿಯಲ್ಲಿ ಹುಟ್ಟಿ ಬಂದವರೆಂದು ಗೊತ್ತಿಲ್ಲವಾದರೂ ಅವರು ಮುಸ್ಲಿಂ ಪರಂಪರೆಯ ಫಕೀರ ಅಥವಾ ಅವಧೂತ ಎಂಬುದು ನಿರ್ವಿವಾದ.

ಸ್ವಾಮಿ ಸಾಯಿಯಾಗಿ ಜನಜಂಗುಳಿಯ ಏಕಭಕ್ತಿಗೆ ಪಾತ್ರನಾದರೆ, ಸ್ವಾಮಿನಿ ಸಾನಿಯೆನಿಸಿ ಸಂಶಯಾಸ್ಪದ ಗೌರವಕ್ಕೆ ಭಾಗಿಯಾಗಿದ್ದಾಳೆ. ಆದರೆ ಈಗ ಸೂಳೆಯೆಂದು ತಾತ್ಪರ್ಯ ಕೊಡುವ ಸಾನಿಗೆ ಹಿಂದೆ ಕಳಂಕಿತ ಧ್ವನಿ ಇದ್ದಿಲ್ಲ. ಯುರೋಪಿಯನ್ ಅಧಿಕಾರಿಗಳ ಹೆಂಡಂದಿರಿಗೆ ದೊರೆಸಾನಿ ಅಂತ ಕರೆಯುತ್ತಿದ್ದರು. ಸೂಳೆಯರಿಗೆ ಸಾನಿ ಎಂಬ ಅಭಿಧಾನ ಹೇಗೆ ಬಂತೆಂಬುದು ಸಂದಿಗ್ಧ ವಿಷಯ. ಸಾನಿ ಎಂಬ ಅರಬೀ ಮೂಲದ ಉರ್ದು ಶಬ್ದ ವುಂಟು. ಅದಕ್ಕೆ ಅರ್ಥ ಎರಡನೇ, ಜತೆ, ಸಮಾನ, ಸರೀಕ, ಪ್ರತಿ ಇತ್ಯಾದಿ ಅರ್ಥಗಳಿವೆ ಹೊರತು ವೇಶ್ಯೆಯೆಂದಲ್ಲ. ಹಿಂದಿ, ಮರಾಠಿ ಅಥವಾ ಉರ್ದು ಕೋಶಗಳಲ್ಲಿ ಸಾನಿಗೆ ಈ ನಿಕೃಷ್ಟಾರ್ಥ ಸಿಕ್ಕುವುದೂ ಇಲ್ಲ. ಮೊದಲು ಈ ಶಬ್ದ ಕನ್ನಡದಲ್ಲಿ ನಾಯಕಸಾನಿ ಎಂಬುದಾಗಿ ಆರಂಭವಾಯಿತು. ನಾಯಕಿ (ನಾಯಿಕಾ) ಎಂಬುದು ಯಜಮಾನಿ, ಮುನ್ನಡೆಸುವವಳು ಎಂಬರ್ಥದ ಪದವಾದರೂ ನಾಟ್ಯಶಾಸ್ತ್ರದಲ್ಲಿ ಮುಖ್ಯ ಸ್ತ್ರೀ ಪಾತ್ರಕ್ಕೆ ಆ ಹೆಸರಿದ್ದುದರಿಂದ ಮತ್ತು ನಾಟ್ಯದಲ್ಲಿ ನರ್ತನ ಪ್ರಧಾನವಾದ್ದರಿಂದ ನಾಯಕಿಗೆ ನರ್ತಕಿ ಎಂಬರ್ಥವೂ ಬಂತು. ನರ್ತಕಿಯರು ಬಹುತರವಾಗಿ ಸೂಳೆಯರಾಗಿದ್ದುದರಿಂದ ನಾಯಕಿಯೂ ಅದೇ ಅರ್ಥ ಪಡೆಯಿತು. ಮೊದಲು ನರ್ತಕಿಯರ ತಂಡದ ಒಡತಿ (ಸ್ವಾಮಿನಿ) ಅಥವಾ ಪ್ರಧಾನ ನರ್ತಕಿ ನಾಯಕ–ಸಾನಿ ಎನಿಸಿ ಕಡೆಗೆ ಎಲ್ಲ ನರ್ತಕಿಯರಿಗೂ ಅದು ಅನ್ವಯಿಸಿರಬೇಕು – ಮೊದಲು ವರ್ತಕರ ಮುಂದಾಳಿಗೆ ಶ್ರೇಷ್ಠಿ (ಸೆಟ್ಟಿ) ಎಂಬ ಉಪಾಧಿಯಿದ್ದದ್ದು ಕಡೆಗೆ ಎಲ್ಲ ವರ್ತಕರಿಗೂ ಅದು ಅಂಟಿದ ಹಾಗೆ.

ಸಾಯಿ, ಸಾನಿಯರ ಚರಿತ್ರೆಯಂತೆ ಭಟ್ಟ, ಭಟ್ಟನಿಯರದೂ ಸ್ವಾರಸ್ಯವಾಗಿದೆ. ಭಟ್ಟ (ಭಟ್ಟಾ) ಎಂಬುದು ಸಂಸ್ಕೃತ ಭರ್ತಾದ ಅಪಭ್ರಂಶ. ಭರ್ತಾ ಅಂದರೆ ಪೋಷಕ, ಪಾಲಕ, ಯಜಮಾನ, ಒಡೆಯ. ಸ್ವಾಮಿ (ಒಡೆಯ) ಸಾಯಿ ಆದಾಗ ಸಾಧು, ಸಂತ. ಪವಾಡಿ ಎಂಬ ಅರ್ಥ ಹೊಂದಿದಂತೆ ಭರ್ತಾ (ಭರ್ತೃ) ಭಟ್ಟಾ ಆದಾಗ ಹಿರಿಮೆ, ಗೌರ

ಮಾರ್ಗ ಪೂಜ್ಯ ಎಂಬರ್ಥಕ್ಕೆ ತಿರುಗಿ ಪುನಃ ಸಂಸ್ಕೃತದಲ್ಲಿ ಸೇರಿತು. ಹಳೇ ಶಾಸನಗಳಲ್ಲಿ ಭಟ್ಟಾರಕ, ಭಟ್ಟಾರ ಶಬ್ದಗಳು ದೇವಾಲಯದ ದೇವರಿಗೂ ಅರಸರಿಗೂ (ದೇವರು ಲೋಕದೊಡೆಯ ತಾನೆ) ಪೂಜ್ಯ ಅರ್ಚಕರು, ಪ್ರಧಾನ (ಜೈನ ಮತ್ತು ಹಿಂದೂ) ಆಚಾರ್ಯರು, ಗುರುಗಳು, ಅರ್ಚಕರು ಇವರಿಗೂ ಅನ್ವಯವಾಗಿ ಬಳಸಲ್ಪಟ್ಟಿವೆ. ಭಟ್ಟ ಎಂಬುದು ಮಹಾಪಂಡಿತರಿಗೂ (ಭಟ್ಟ ಬಾಣ, ಭಟ್ಟ ನಾರಾಯಣ) ತಗಲಿತು. ಬಂಗಾಲದ ಭಟ್ಟಾಚಾರ್ಯರು ಮಹಾ ತರ್ಕಶಾಸ್ತ್ರ ಪ್ರತಿಪಾದಕರಾಗಿದ್ದರು. ಗದಾಧರ ಭಟ್ಟಾಚಾರ್ಯ ತರ್ಕಶಾಸ್ತ್ರದಲ್ಲಿ ಅಸಮಾನ ಹೆಸರು. ಕುಮಾರಿಲ ಭಟ್ಟನ ದೆಸೆಯಿಂದ ಮೀಮಾಂಸಾ ತತ್ವಜ್ಞಾನದ ಒಂದು ಪರಂಪರೆಗೆ ಭಾಟ್ಟಮತವೆಂದೇ ಹೆಸರು ಬಿತ್ತು.

ಈ ಉನ್ನತ ಪದವಿಯಿಂದ ಭಟ್ಟರು ಈಗ ಇಳಿಗಾಲ ಕಂಡಿದ್ದಾರೆ. ಆಧುನಿಕ ಲೌಕಿಕರ ದೃಷ್ಟಿಯಲ್ಲಿ ಭಟ್ಟರು ಪೌರೋಹಿತ್ಯ, ಪೂಜಾದಿ ವೃತ್ತಿಗಳಿಂದ ಹೊಟ್ಟೆ ಹೊರೆದು ಕೊಳ್ಳುವವರಾಗಿದ್ದಾರೆ. ಅಡಿಗೆ ವೃತ್ತಿಯವರೂ ಭಟ್ಟರಾಗಿದ್ದಾರೆ. ಉತ್ತರ ಕರ್ನಾಟಕದಲ್ಲಿ ವೈಷ್ಣವರು ಭಟ್ಟತನವನ್ನು ಸ್ಮಾರ್ತರಿಗೆ ಬಿಟ್ಟು ತಾವು ಆಚಾರ್ಯರಾಗಿದ್ದಾರೆ, ಪೌರೋಹಿತ್ಯವಲ್ಲಿದ್ದರೂ! ಅಡಿಗೇ ಆಚಾರ್ರೂ ಉಂಟೆನ್ನಿ.

ಅತ್ತ ಭಟ್ಟ ಶಬ್ದದ ಸ್ತ್ರೀಲಿಂಗವಾಚಿ ಭಟ್ಟಿನಿ ಸಂಸ್ಕೃತ ನಾಟಕಗಳಲ್ಲಂತೂ ಸಂದಿಗ್ಧ ಮರ್ಯಾದೆಯ ಪದವಾಗಿದೆ. ಅದರ ತಾತ್ಪರ್ಯ ಯಜಮಾನಿ ಎಂದಿದ್ದರೂ ಅರಸರು ವಿಧಿವತ್ತಾಗಿ ವಿವಾಹವಾಗದ, ಆದರೆ ಅರಸರ ಅಂತಃಪುರ ಪ್ರಣಯ ಕಟಾಕ್ಷದಿಂದ ಅಂತಸ್ತಿಗೇರಿದ ನಾರಿಯರನ್ನು ದಾಸಿಯರು ಭಟ್ಟಿನಿ ಎಂದು ಸಂಬೋಧಿಸುವುದು ಕಾಣುತ್ತದೆ. ಅರ್ಥಾತ್ ಭಟ್ಟಿನಿ ಗೌರವಾರ್ಹ ಉಪಪತ್ನಿ!

ಭಟ್ಟದಿಂದ ಭಟಕ್ಕೆ ಎಷ್ಟು ದೂರ? ಎರಡೂ ಸಂಸ್ಕೃತದ ಭೃ ಧಾತುವಿನಿಂದ ಹುಟ್ಟಿದವು. ಭರ್ತಾ (= ಭಟ್ಟ) ಅಂದರೆ ಯಜಮಾನ, ಒಡೆಯ; ಭೃತ (= ಭಟ) ಅಂದರೆ ಆಳು; ಆಶ್ರಿತ, ಪೋಷಿತ, ಸೇವಕ. ಯಜಮಾನ ಭಟನನ್ನು ಬೇಕಾದ ಕೆಲಸಗಳಿಗೆ ಅಟ್ಟುತ್ತಾನೆ. ಯಮಭಟ, ರಾಜಭಟ. ಹೊಟ್ಟೇಪಾಡಿಗಾಗಿ ಅವನು ಯಜಮಾನನ ಪರವಾಗಿ ಹೋರಾಟವನ್ನು ಮಾಡಬೇಕಾಗುತ್ತದೆ. ಹೀಗೆ ಜೀವನದ ಹಂಗು ತೊರೆದು ಹೋರಾಡುವ ವೀರನಿಗೆ ಭಟ ಎಂಬ ಪದ ಉಪಯೋಗವಾಯಿತು.


ಅವನು ಹಂಗಿಗೆ ಹೋರಾಡುವವನಲ್ಲದಿದ್ದರೂ ಒಬ್ಬ ವೀರನನ್ನು ಎದುರಿಸಿ ಹೋರುವ ಇನ್ನೊಬ್ಬ ವೀರ ಪ್ರತಿಭಟನಾದ. ಆಮೇಲೆ ಯಾವುದಾದರೂ ಅನ್ಯಾಯವನ್ನು ಧೈರ್ಯದಿಂದ ವಿರೋಧಿಸುವುದು ಪ್ರತಿಭಟನೆ ಆಯಿತು. ಅನ್ನದ ಹಂಗಿಗನಾದ ಭಟ ಪ್ರತಿಭಟನೆಗೆ ಮುಟ್ಟುವಾಗ ಎಷ್ಟು ದೂರ ಸಾಗಿಬಿಟ್ಟಿದ್ದಾನೆ.

ಈ ಭೃತ ಅಥವಾ ಭೃತ್ಯನೇ ಬಂಟನೂ ಆದ. ರಾಮನ ಬಂಟ ಹನುಮಂತ. ಬಲಗೈ ಬಂಟ. ಸದಾಕಾಲ ಯಜಮಾನನ ಜತೆ ತಿರುಗುತ್ತ ಕಾವಲು ಕೊಡುವಾತ ಭಂಟ. ಇವನೂ ಶೂರನೇ ಇರಬೇಕಲ್ಲವೆ? ಬಂಟನೆಂದರೆ ಯೋಧ. ದಕ್ಷಿಣ ಕನ್ನಡದಲ್ಲಿ ನಾಡವರ ಜಾತಿ ಬಂಟ ಜಾತಿ ಎನಿಸುತ್ತದೆ. ಇವರಿಂದು ಜಿಲ್ಲೆಯ ಪ್ರಧಾನ ಭೂಮಾಲಿಕರಾದರೂ ಅವರ ಜಾತಿಯ ಹೆಸರು ಅವರ ಮೂಲ ಉದ್ಯೋಗ ಯುದ್ಧ ಎಂದು ಸೂಚಿಸುತ್ತದೆ. ಅವರು ಬಂಟ ಶಬ್ದದ ಮೂಲ ರೂಪ ಸೂಚಿಸುವ ಭೃತ್ಯರಾಗುವ ಬದಲು ಅನೇಕ ಭೃತ್ಯರನ್ನು ಇಟ್ಟುಕೊಳ್ಳುವ ಅಭಿಮಾನಿ ಜನಾಂಗವಾದರು. ಶೌರ್ಯಕ್ಕೆ ಆ ಜಿಲ್ಲೆಯಲ್ಲಿ ಬಂಟು ಎಂಬ ಪದ ಇದೆ. "ಅವನ ಬಂಟು ನೋಡಯ್ಯ" ಎಂಬಲ್ಲಿ ಅದು ಹುಚ್ಚು ಸಾಹಸವನ್ನು ಧ್ವನಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಹಂಟು ಕೂಡ ಬಂಟುವಿನ ಒಂದು ರೂಪವಿರಬಹುದು. "ಹಂಟು ಬಡಿಯುತ್ತಾನೆ" ಎಂದರೆ ವ್ಯರ್ಥ ಪೌರುಷ ಹೇಳಿಕೊಳ್ಳುತ್ತಾನೆ.

ಅರಸರೂ ಸಾಮಂತರೂ ತಮ್ಮನ್ನು ತಮ್ಮ ಸಂಮುಖದಲ್ಲೇ ಹೊಗಳುವುದಕ್ಕೆ ಸಂಬಳ ಕೊಟ್ಟು ಹೊಗಳು ಭಟ್ಟರನ್ನು ಸಾಕುತ್ತಿದ್ದರು. ಅವರೂ ಭೃತಕರು. ಭಟ್ಟಂಗಿಗಳೂ ಅವರೇ.

ಸಂಬಳಕ್ಕೆ ಹೋರಾಡುವ ಭಟರ ವಿಚಾರ ಹೇಳುವಾಗ ಹಳೆಗನ್ನಡ ಶಾಸನಗಳಲ್ಲಿ ಬರುವ ಮಗ ಶಬ್ದ ನೆನಪಿಗೆ ಬರುತ್ತದೆ. ಅನೇಕ ವೀರಗಲ್ಲುಗಳಲ್ಲಿ ಇಂಥವರ "ಮಗನ್ ಇರಿದು ಸ್ವರ್ಗಕ್ಕೇರಿದೋನ್," ಇಂಥವರ ಮನೆಮಗನ್ ಇತ್ಯಾದಿ ಪ್ರಯೋಗಗಳು ಕಾಣಿಸುತ್ತವೆ. ಈ ಮಗ ಶಬ್ದಕ್ಕೆ ಬಹುಶಃ ಬಂಟ, ಭಟ ಎಂದೇ ಅರ್ಥವೆಂದು ಅನಿಸುತ್ತದೆ. ಮಗ ಶಬ್ದಕ್ಕೆ ತೆಲುಗಿನಲ್ಲಿ ಗಂಡು ಎಂದಲ್ಲದೆ ವೀರ ಎಂಬರ್ಥವೂ ಇದೆ. ಮಗತನಮು ಅಂದರೆ ಪೌರುಷ. ಪ್ರೀತಿಯಿಂದ ಪೋಷಿಸಿದ, ಜೀವಕ್ಕೆ ಜೀವ ಕೊಡುವ ಬಂಟರ ಬಗ್ಗೆ ಯಜಮಾನನ ಪ್ರೀತಿಗೆ ಇದು ದ್ಯೋತಕವಾಗಿದ್ದಿತು.

—ಹಾವೆಂ.



ಅಣುಶಕ್ತಿ ರಹಸ್ಯ

ಎ. ಕೆ.

ಮಹಾ ವಿನಾಶಕರವಾದ ಪರಮಾಣುವಿನ ಬಗ್ಗೆ ನಾವು ಆಗಾಗ ಕೇಳುತ್ತಲೇ ಇರುತ್ತೇವೆ. ಆದರೆ ಸೂಕ್ಷ್ಮಾತಿಸೂಕ್ಷ್ಮವಾದ ಮೈಕ್ರೋಸ್ಕೋಪಿನಲ್ಲಿಯೂ ಕಾಣದ ಪರಮಾಣುವಿಗೆ ಇಂಥಾ ಅದ್ಭುತ ಶಕ್ತಿ ಹೇಗೆ ಬಂತು?

ಇದನ್ನು ತಿಳಿದುಕೊಳ್ಳುವುದು ಅಷ್ಟೇನೂ ಕಷ್ಟವಲ್ಲ– ಪರಮಾಣು ಶಕ್ತಿಯ ಹಿಂದಿರುವ ತತ್ವ ಈಗ ಸಾಧಾರಣವಾಗಿ ಚಿಕ್ಕ ಚಿಕ್ಕ ಬಾಲಕರಿಗೂ ತಿಳಿದೇ ಇರುತ್ತದೆ.

ಆದರೆ ವಿಧ್ವಂಸಕವಾದ ಪರಮಾಣುಬಾಂಬಿನಲ್ಲಾಗಲಿ ಶಾಂತಿಯುತ ಉದ್ದೇಶಗಳಿಗಾಗಿ ಬಳಕೆಯಾಗುವ ಅಣು ರಿಯಾಕ್ಟರಿನಲ್ಲಾಗಲಿ ಕೆಲಸ ಮಾಡುವುದು ಒಂದೇ ಒಂದು ಪರಮಾಣುವಲ್ಲ; ಬದಲು ಕೊಟ್ಯನುಕೋಟಿ ಪರಮಾಣುಗಳು ಎಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು.

ಪರಮಾಣುಬಾಂಬು ಅಥವಾ ರಿಯಾಕ್ಟರು ಉತ್ಪಾದಿಸುವ ಶಕ್ತಿಯ ತತ್ವವನ್ನು ಕಂಡು ಹಿಡಿದಾತ ಆಲ್ಬರ್ಟ್ ಐನ್‌ಸ್ಟೈನ್.

ಶಕ್ತಿಯೂ ದ್ರವ್ಯವೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ದ್ರವ್ಯವನ್ನು ಪ್ರಕಾಶ, ಉಷ್ಣತೆ, ವಿಕಿರಣ ಇತ್ಯಾದಿಯಾಗಿ ಶಕ್ತಿಯ ರೂಪದಲ್ಲಿ ಪರಿವರ್ತಿಸಬಹುದು. ಹಾಗೆಯೇ ಶಕ್ತಿಯನ್ನು ದ್ರವ್ಯವನ್ನಾಗಿ ಪರಿವರ್ತಿಸಬಹುದೆಂಬ ತತ್ವವೇ ಅದು.

ಐನ್‌ಸ್ಟೈನನ ತತ್ವ ಇವೆರಡರ ಸಂಬಂಧವನ್ನು ನಿಗದಿತಪಡಿಸುತ್ತಿದೆ. ಪರಮಾಣುಬಾಂಬಿನಿಂದ ಅಷ್ಟೊಂದು ಶಕ್ತಿ ಹೇಗೆ ಹೊರಬರುತ್ತದೆಂಬುದನ್ನು ಐನ್‌ಸ್ಟೈನನ ಸೂತ್ರ ಮೇಲುನೋಟಕ್ಕೇ ತೋರಿಸಿಕೊಡುತ್ತದೆ: ದ್ರವ್ಯದಿಂದ ಉತ್ಪಾದಿತವಾಗುವ ಶಕ್ತಿಯನ್ನು ಅಳೆಯಬೇಕೆಂದರೆ ಗ್ರಾಮಿನ ಲೆಕ್ಕದಲ್ಲಿ ದ್ರವ್ಯದ ತೂಕವನ್ನು ಪ್ರಕಾಶದ ವೇಗವನ್ನು ಒಂದಲ್ಲ ಎರಡು ಬಾರಿ ಗುಣಿಸಬೇಕು.

ಮತ್ತೆ ಎಲ್ಲರಿಗೂ ತಿಳಿಸುವ ಹಾಗೆ ಪ್ರಕಾಶ ಒಂದು ಸೆಕೆಂಡಿಗೆ ೩೦,೦೦೦,೦೦೦,೦೦೦ ಸೆಂಟಿಮೀಟರಿನ ವೇಗದಲ್ಲಿ ಕ್ರಮಿಸುತ್ತದೆ. ದ್ರವ್ಯವನ್ನು ಈ ವೇಗದಿಂದ ಇಮ್ಮಡಿ ಗುಣಿಸಿದಾಗ ಬರುವ ಮೊತ್ತ ಅಗಾಧವಾದುದೆಯೆನ್ನುವುದು ಸ್ಪಷ್ಟವೇ ಇದೆ.

ಹೌದು, ದ್ರವ್ಯವನ್ನು ಶಕ್ತಿಯಾಗಿ ಪರಿವರ್ತಿಸಿದಾಗ ಅದು ಅಗಾಧವಾದ ಪ್ರಮಾಣದಲ್ಲಿ ದೊರೆಯುವುದು. ಪರಮಾಣುಶಕ್ತಿಯ ರಹಸ್ಯ ಇದೇ.

ಎರಡನೆ ಮಹಾಯುದ್ಧ ಕೊನೆಗೊಳ್ಳುವ ಹೊತ್ತಿಗೆ ಅಮೇರಿಕದವರು ಜಪಾನಿನ ಹಿರೋಶಿಮಾ ನಗರದ ಮೇಲೆ ಪರಮಾಣುಬಾಂಬನ್ನು ಎಸೆದಾಗ ಮಹಾ ಅನಾಹುತ ಸಂಭವಿಸಿದ್ದು ಅಷ್ಟು ಶಕ್ತಿ ಉತ್ಪನ್ನವಾದದ್ದರಿಂದಲೆ. [illegible] ನಷ್ಟು ಯುರೇನಿಯಮ್ಮನ್ನು ಆಗ [illegible]

ಸಾವಿರ ಟನ್ ಡೈನಮೈಟನ್ನು ಸ್ಫೋಟಿಸುವು ದರಿಂದಾಗುವ ಅನಾಹುತಕ್ಕೆ ಸಮವಾಗಿತ್ತು.

ಕಳೆದ ಮಹಾಯುದ್ಧದಲ್ಲಿ ಎರಡೇ ಎರಡು ಪರಮಾಣುಬಾಂಬುಗಳನ್ನು ಉಪಯೋಗಿಸಲಾ ಯಿತೆನ್ನುವುದಾಗಲಿ, ತದನಂತರ ನಿರ್ಜನ ಪ್ರದೇ ಶದಲ್ಲಿ ಪ್ರಯೋಗಾರ್ಥವಾಗಿ ಪರಮಾಣು ಬಾಂಬುಗಳನ್ನು ಸ್ಫೋಟಿಸಿ ಕೆಲವೇ ದೇಶಗಳು ತಮ್ಮ ಬತ್ತಳಿಕೆಯಲ್ಲಿ ಸಾವಿರಾರು ಪರಮಾಣು ಬಾಂಬುಗಳನ್ನು ಸಂಗ್ರಹಿಸಿದ್ದರೂ ಒಂದ ನ್ನಾದರೂ ಈ ವರೆಗೆ ಯುದ್ಧ ಪ್ರಸಂಗಗಳಲ್ಲಿ ಉಪಯೋಗಿಸಲಿಲ್ಲವೆನ್ನುವುದಾಗಲಿ ನಮ್ಮ ಪುಣ್ಯ.

ಕೆಟ್ಟದ್ದರಿಂದ ಒಳ್ಳೆಯದು ಹೊರಬರುತ್ತ ದೆನ್ನುವ ಒಂದು ಹಳೇ ಗಾದೆಯುಂಟು. ಪರಮಾಣು ಬಾಂಬಿನ ವಿಷಯದಲ್ಲಿ ಆದದ್ದೂ ಹಾಗೆಯೇ.

ಈಗ ಬಹುತರವಾಗಿ ಪರಮಾಣುವನ್ನು ಶಾಂತಿಯುತ ಉದ್ದೇಶಗಳಿಗಾಗಿ, ಅದರಲ್ಲೂ ರಿಯಾಕ್ಟರಿನಿಂದ ವಿದ್ಯುತ್ತನ್ನು ಉತ್ಪಾದಿಸುವು ದಕ್ಕಾಗಿ ಬಳಸಲಾಗುತ್ತಿದೆ. ಈಗ ಪಾಕಿಸ್ತಾನದ ಬಳಿಯೂ ಒಂದು ಪರಮಾಣು ರಿಯಾಕ್ಟರು ಉಂಟು.

ಪರಮಾಣುಬಾಂಬಿನಿಂದ ಶಕ್ತಿಯು ಒಮ್ಮಿಂ ದೊಮ್ಮೆಲೆ ಅನಿಯಂತ್ರಿತವಾಗಿ ಹೊರಹೊ- ಮ್ಮಿದರೆ ಪರಮಾಣು ರಿಯಾಕ್ಟರಿನಲ್ಲಿ ಈ ಕೆಲಸ ನಮ್ಮ ಅವಶ್ಯಕತೆಗನುಗುಣವಾಗಿ ನಿಯಂತ್ರಿತ ವಾಗಿ ನಡೆಯುತ್ತದೆ.

ಆದರೆ ಇನ್ನೂ ಒಂದು ಪ್ರಶ್ನೆ: ಪರಮಾಣು ಬಾಂಬಿನಲ್ಲಾಗಲಿ ರಿಯಾಕ್ಟರಿನಲ್ಲಾಗಲಿ ಉಪ ಯೋಗಿಸಲ್ಪಡುವ ಅಣುವಿಗೆ ಏನಾಗುತ್ತವೆ ?

ಇದಕ್ಕೆ ಉತ್ತರ ಸ್ಪಷ್ಟ: ಅಣುವು ವಿಭಜನೆ ಗೊಳ್ಳುತ್ತದೆ.

ಪೃಥ್ವಿಯ ಮೇಲೆ ಈ ವರೆಗೆ ದೊರಕಿದ ಕೊಂಭತ್ತೆರಡು ಮೂಲಧಾತುಗಳ ಪೈಕಿ ಯುರೇ ನಿಯಂ ಒಂದು. ಅದು ಉಳಿದೆಲ್ಲಕ್ಕಿಂತಲೂ ಭಾರವಾದದ್ದು. ಈ ಭಾರವಾದ ಪರಮಾಣು ಒಂದಕ್ಕೆ ಎರಡಾಗಿ ಒಡೆದು ಕಡಿಮೆ ಭಾರದ ಎರಡು ಹೊಸ ಮೂಲಕಣಗಳು ಹುಟ್ಟಿಕೊಳ್ಳು ತ್ತವೆ. ಹೀಗಾಗುವಾಗ ಸ್ವಲ್ಪ ದ್ರವ್ಯನಾಶವಾ ಗುತ್ತದೆ. ಹೀಗೆ ನಾಶವಾದ ದ್ರವ್ಯ ಶಕ್ತಿಯ ರೂಪವನ್ನು ತಾಳುತ್ತದೆ.

ಪರಮಾಣುವನ್ನು ವಿಭಜಿಸುವ ಮೊದ ಲೊಮ್ಮೆ ಹಾಗೂ ವಿಭಜದ ನಂತರ ಒಮ್ಮೆ ಹೀಗೆ ಎರಡು ಸಲ ದ್ರವ್ಯವನ್ನು ತೂಗಿ ನೋಡಿದಾಗ ಎರಡನೆ ಸಲದ ತೂಕ ಸ್ವಲ್ಪ ಕಡಿಮೆಯಾದದ್ದು ಕಂಡುಬರುತ್ತದೆ. ನಿಜ ವಾಗಿಯೆಂದರೆ ಈ ದ್ರವ್ಯನಾಶ ಐನ್‌ಸ್ಟೈನನ ಸೂತ್ರ ವಿವರಿಸಿದ ಹಾಗೆ ಅಗಾಧವಾದ ಶಕ್ತಿಯ ರೂಪವನ್ನು ತಾಳಿರುತ್ತದೆ. ✡

(ಪಾಕಿಸ್ತಾನದ 'ಡಾನ್' ಪತ್ರಿಕೆಯಿಂದ)



ವಯಸ್ಸಿಗೂ ತತ್ವಜ್ಞಾನಕ್ಕೂ ತಳಕುಹಾಕುವುದು. ತಪ್ಪೇ ತಪ್ಪು. ತುಂಬು ವಯಸ್ಸು ಜಾಣ್ಮೆಯನ್ನು ತಂದುಕೊಟ್ಟೀತು; ಆದರೆ ಜ್ಞಾನದಾಹ ಅಮಿತವಾಗಿರುವುದು ತಾರುಣ್ಯದಲ್ಲೆ. ಸೋಜಿಗದ ಪ್ರಜ್ಞೆಯಿರುವುದು ಅವರಲ್ಲೆ. ದೃಷ್ಟಿಕೋನ ವಿಶಾಲ ಗೊಳ್ಳುವುದೂ ತಾರುಣ್ಯದಲ್ಲೆ. ಈ ವಿಶಾಲ ಜಗತ್ತಿನಲ್ಲಿ ಏನಾದರೂ ಸಾಧಿಸಬೇಕೆಂದು ಛಲವಿರುವುದೂ ತರುಣರಲ್ಲಿ ಮಾತ್ರ. ಹೀಗಿರುವಾಗ ಯುವಜನಾಂಗದಲ್ಲಿ ಹೊಸ ಹುರುಪನ್ನು ತುಂಬುವುದನ್ನು ಬಿಟ್ಟು ಬೇರೆ ಯಾವ ಧ್ಯೇಯ ಈ ತತ್ವಜ್ಞಾನ ಗಳಿಗಿದೆಯೊ ನಾನು ಕಾಣೆ.

—ಅಬ್ರಹಾಮ್ ಕಪ್ಲಾನ್

'ಇತ್ಯಾದಿ'ಯ ಆತ್ಮವೃತ್ತ!

ಶ್ರೀ ಗದಿಗೆಯ್ಯ ಹೊನ್ನಾಪುರಮಠರು ಹೊರಡಿಸುತ್ತಿದ್ದ 'ವಾಗ್ದೇವಿ' ಪತ್ರಿಕೆಯಲ್ಲಿ (೧೯೦೭) ಬಂದ ರೋಚಕ ಹಾಗೂ ನಾವೀನ್ಯಪೂರ್ಣ ಲೇಖನವಿದಂ. ಆದರೆ ರಚಯಿತರ ಹೆಸರಿಲ್ಲ!

ಪರಿಷ್ಕೃತ ಸಂಪಾದನೆ :
ಶ್ರೀ. ಹಾ.

ಶಿಷ್ಟ ಸಮಾಜದಲ್ಲಿ ನನಗಿದ್ದಷ್ಟು ಮಾನವು ಮತ್ತಾರಿಗೂ ಇಲ್ಲ. ಲೇಖಕರೂ ಭಾಷಣಕಾರರೂ ನನ್ನನ್ನು ಬಿಟ್ಟು ಎಂದೂ ತಮ್ಮ ಕಾರ್ಯದಲ್ಲಿ ತೊಡಗುವುದಿಲ್ಲ. ಅವರು ಆಗ್ರಹಪೂರ್ವಕವಾಗಿ ನನ್ನನ್ನು ತಮ್ಮ ಸಂಗಡ ಕರಕೊಂಡು ಹೋಗುತ್ತಾರೆ. ದಿನಾಲು ನನಗೆ ಸಾವಿರಾರು ಆಮಂತ್ರಣಗಳು ಬರುವವು. ನಾನು ಯಾರಿಗೂ ಇಲ್ಲೆನ್ನುವದಿಲ್ಲ. ಸಭೆಗಳೂ ಪರಿಷತ್ತುಗಳೂ ಆಗುವ ಕಾಲಕ್ಕೆ ನನಗೆ ಒಂದು ಕ್ಷಣದ ವಿಶ್ರಾಂತಿಗೂ ಸಹ ಅವಕಾಶ ದೊರೆಯುವದಿಲ್ಲ. ಇನ್ನು ಆಮಂತ್ರಣವಿಲ್ಲದೆ ನಾನು ಹೋದಾಗ್ಯೂ ನನಗೆ ಉಚಿತವಾದ ಆದರಾತಿಥ್ಯಗಳು ನಡೆಯುವವು. ಶಿಷ್ಟ ಸಮಾಜದಲ್ಲಿ ನಾನಿಲ್ಲದೆ ಹೋದ್ದರೆ ಈ ಬರಹಗಾರರ ಮತ್ತು ಭಾಷಣಕಾರರ ಅವಸ್ಥೆಯು ಏನಾಗುತ್ತಿತ್ತೆಂಬುದಕ್ಕೆ ಅವರವರ ಆತ್ಮವೇ ಸಾಕ್ಷಿ!

ಹೀಗಿದ್ದಾಗ್ಯೂ ಈ ಲೇಖಕರು ಎಂಥ ಕೃತಘ್ನರು! ಜಗತ್ತಿನಲ್ಲಿ ಯಾವನಾದರೂ ಸ್ವಲ್ಪ ಲೋಕೋಪಕಾರದ ಕೆಲಸವನ್ನು ಮಾಡಿದರೆ ಆ ಕೂಡಲೇ ಈ ಲೇಖಕರು ಅವನ ಚರಿತ್ರೆಯನ್ನು ಬರೆದೇಬಿಡುವರು. ಹೀಗಿದ್ದು ಅವರಲ್ಲಿ ಒಬ್ಬನಾದರೂ, ತನ್ನ ಸ್ವಂತಕ್ಕೇ ಪ್ರಯೋಜನ ಬೀಳುವ ನನ್ನಂಥವರ ಚರಿತ್ರವನ್ನು ಇದುವರೆಗೆ ಬರೆದಿಲ್ಲ. ಇನ್ನೊಂದು ದೃಷ್ಟಿಯಿಂದ ವಿಚಾರ ಮಾಡಿದರೆ, ಅವರು ನನ್ನ ಗುಣಗಳನ್ನು ಸರ್ವಸಾಧಾರಣ ಜನರಿಗೆ ತಿಳಿಸಿದರೆ ತಮ್ಮ ದಾರಿದ್ರ್ಯವನ್ನೇ ಜಗತ್ತಿಗೆ ಇಟ್ಟಂತೆ ಆಗುವದೆಂದು ಹೆದರಿ ಬಿಟ್ಟುಕೊಟ್ಟಿರುವರೆಂದು ಕಾಣುತ್ತದೆ. ಹಾಗಾದರೂ ಆಗಲಿ. ನಾನೇ ಈಗ ನನ್ನ ಚರಿತ್ರವನ್ನು ಹೇಳಿಕೊಳ್ಳಬೇಕೆಂದು ಪ್ರೇರಣೆಯಾಗುತ್ತಲಿದೆ.

ನನ್ನ ಜನ್ಮಕಾಲದ ಇಸವಿ ಸನ್, ಶಕೆ, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ಹೋರಾ, ಲಗ್ನ ಮೊದಲಾದದ್ದನ್ನು ನನ್ನ ತಂದೆ ತಾಯಿಗಳು ಬರೆದಿಟ್ಟಿಲ್ಲ. (ಹಾಗಾಗಿ ನನ್ನ ಜಾತಕವನ್ನು ಯಾರೂ [illegible]! [illegible] ನನ್ನ ತಂದೆಯ ಹೆಸರು 'ಇತಿ' [illegible]

'ಆದಿ' ನಮ್ಮದು 'ಅವ್ಯಯ' ವೆಂಬ ಸುಪ್ರಸಿದ್ಧ ವಂಶ. ನಮ್ಮ ಶಬ್ದಸಮಾಜದಲ್ಲಿ 'ಅವ್ಯಯ' ಮನೆತನದ ಕೂಡ ಶರೀರ ಸಂಬಂಧ ಮಾಡುವದು ಬಹು ಗೌರವವಾದದ್ದೆಂದು ಎಣಿಸಲ್ಪಡುತ್ತವೆ. ಯಾಕಂದರೆ ಅವ್ಯಯ ಮನೆತನದವರು ನೃಪತುಂಗ ಸಮ್ರಾಟನ ಕಾಲದಿಂದಲೂ ಶೂರರಾಗಿ ಬಾಳಿದ್ದಾರೆ. ಅವರು 'ಪ್ರತ್ಯಯ' ರಾಜರಿಗೆ ಎಂದೂ ಅಂಕಿತರಾಗಲಿಲ್ಲ. ಮುಂದೂ ಕೂಡ ಸ್ವತಂತ್ರರಾಗಿ ಬಾಳುವುದರಲ್ಲಿ ಸಂದೇಹವಿಲ್ಲ.

ಇನ್ನು ನನ್ನ ಹೆಸರು 'ಇತ್ಯಾದಿ' ಎಂದು ಏಕೆ ಬಂದಿತೆಂಬುದನ್ನು ಹೇಳುವೆ. ನಾನು ಹುಟ್ಟಿದೊಡನೆ ನಮ್ಮ ತಂದೆ ಒಬ್ಬ ಜ್ಯೋತಿಷಿಯನ್ನು ಕರೆಸಿ ಜಾತಕ ಬರೆಯಿಸಿದನು. ಅದರಲ್ಲಿಯ ಒಂದು ವಿಷಯ ಹೀಗಿದೆ:

"ಈ ಹುಡುಗನು ದೀರ್ಘಾಯುಷಿಯೂ ಬಹು ಪ್ರಖ್ಯಾತನೂ ಆಗುವನು. ಬಹು ಜನರ ಮರ್ಯಾದೆಯನ್ನು ಕಾಯುವನು. ಆದರೆ ಇವನಿಗೆ ಭಾರ್ಯಾಯೋಗವು ಮಾತ್ರ ಇಲ್ಲ."

ಭಾರ್ಯೆ ಇಲ್ಲೆಂದ ಬಳಿಕ ಸಂತತಿ ಇಲ್ಲೆಂಬುದು ಸಹಜವೇ. ಈ ವಿಷಯ ತಿಳಿದು ನನ್ನ ತಂದೆ-ತಾಯಿಗಳಿಗೆ ತುಂಬಾ ಖೇದವಾಯಿತು. ಆದರೆ ಮಾಡುವದೇನು? 'ಭವಿತವ್ಯತಾ ಬಲೀಯಸೀ' ಎಂಬ ಉಕ್ತಿಯನ್ನು ಲಕ್ಷ್ಯಕ್ಕೆ ತಂದು ಸಮಾಧಾನ ಮಾಡಿಕೊಂಡರು. ಆದರೆ ತಮ್ಮ ಪಶ್ಚಾತ್, ವಂಶವು ಮುಗ್ಗರಿಸಿದರೂ ತಮ್ಮ ಹೆಸರಾದರೂ ಸ್ಥಿರವಾಗಿ ಉಳಿಯಬೇಕೆಂದು ಆಲೋಚಿಸಿ, ತಮ್ಮ ಎರಡೂ ಹೆಸರುಗಳನ್ನು ಜೋಡಿಸಿ ನನಗೆ ಇತ್ಯಾದಿ- ಎಂದು ನಾಮಕರಣ ಮಾಡಿದರು.

ಪೂರ್ವದಲ್ಲಿ ನಾನು ವಿಶೇಷ ಖ್ಯಾತಿ ಹೊಂದಿದ್ದಿಲ್ಲ. ಆ ಕಾಲದ ಬುದ್ಧಿವಂತರ ಶಬ್ದ ಭಂಡಾರ ಭರ್ತಿ ಇದ್ದುದರ ಕಾರಣ ಜನರಿಗೆ ನನ್ನ ಆವಶ್ಯಕತೆ ತೋರಿರಲಿಕ್ಕಿಲ್ಲ. ಶಬ್ದ ದಾರಿದ್ರ್ಯ ಹೆಚ್ಚೆಚ್ಚಾದಂತೆ ನನ್ನ ಮರ್ಯಾದೆಯಾದರೂ ಅದೇ ಪ್ರಮಾಣದಿಂದ ಬೆಳೆಯಹತ್ತಿತು. ಇತ್ತಿತ್ತಲಾಗಂತೂ ನನ್ನ ಪ್ರತಿಷ್ಠೆ ಮಿತಿ ಮೀರಿ ಬೆಳೆದಿದೆ. ಅದು ಬೆಳೆದಂತೆ ನನಗೆ ಬೇರೆ ಬೇರೆ ಹೆಸರುಗಳೂ ಬರಹತ್ತಿದವು. ವಿಸ್ತಾರವಾಗುತ್ತ ಸಾಗಿದ ನನ್ನ ವ್ಯಾಪ್ತಿಯಿಂದಾಗಿ ಇದು ಸಹಜವಾದದ್ದೇ. ನಾನು ದೇಶ ಕಾಲ ಭೇದಕ್ಕೆ ತಕ್ಕಂತೆ ವೇಷ ಧರಿಸಿ ಎಲ್ಲ ಕಡೆಗೂ ಸಂಚಾರ ಮಾಡುತ್ತಿರುತ್ತೇನೆ. ಶಬ್ದಸಮಾಜಕ್ಕೇನೆ ದೇವರು ಸರ್ವವ್ಯಾಪಕತ್ವವನ್ನು ದಯಪಾಲಿಸಿರುವನಷ್ಟೆ. ಅಂತೂ ನಾನು ಒಂದೇ ಕಾಲಕ್ಕೆ ಬೇರೆ ಬೇರೆ ಸ್ಥಳಗಳಲ್ಲಿದ್ದು ಕೆಲಸ ಮಾಡಬಲ್ಲೆನು. ವಿಲಾಯತಿಯ ಪಾರ್ಲಿಮೆಂಟಿನಲ್ಲಿದ್ದ ನಾನು ಅದೇ ಗಳಿಗೆಯಲ್ಲಿ ಹಿಂದೂಸ್ತಾನದ ಧಾರ್ಮಿಕ ಸಭೆಯಲ್ಲಿಯೂ ಇರಬಲ್ಲೆನು. ನನಗೆ ಗರ್ವವೆಂಬುದು ಎಳ್ಳುಕಾಳಷ್ಟೂ ಇಲ್ಲ. ಇಂಥಲ್ಲಿ ಹೋಗಬೇಕು. ಇಂಥಲ್ಲಿ ಹೋಗಬಾರದು – ಎಂಬ ವಿಧಿನಿಷೇಧವು ನನಗಿಲ್ಲ. ಶ್ರೀಮಂತನಿರಲಿ, ದರಿದ್ರನಿರಲಿ; ಪಂಡಿತನಿರಲಿ, ಮೂರ್ಖನಿರಲಿ; ಮುದುಕನಿರಲಿ, ತರುಣನಿರಲಿ– ಅವರೆಲ್ಲರ ಬಳಿಗೆ ನಿಷ್ಕಾಪಟ್ಯದಿಂದ ಹೋಗುತ್ತೇನೆ.

ಈ ಗುಣವು ಬೇರೆ ಶಬ್ದಗಳಿಗೆ ಇಲ್ಲ. ಆ ಶಬ್ದಗಳನ್ನು ಬಹು ಆದರದಿಂದ ಕರೆದೊಯ್ದಾಗ್ಯೂ, ಅವನ್ನು ಕರೆಯುವವನ ಉಚ್ಚತನ, ಕೀಳ್ತನವನ್ನು ಪರೀಕ್ಷಿಸಿ ಅವನ ಬಳಿಗೆ ಹೋಗುತ್ತವೆ. ಒಂದು ವೇಳೆ, ಅವಕ್ಕೆ ತಕ್ಕಂಥ ಮಾನವು ದೊರೆಯದಿದ್ದರೆ ಥಟ್ಟನೆ ಎದ್ದು ಹೋಗುತ್ತವೆ. ಆದರೆ ಅಂಥ ಸೊಕ್ಕು ನನಗಿಲ್ಲ.

ನನ್ನ ಮುಖ್ಯ ವೃತ್ತಿ ಎಂದರೆ ಪರೋಪಕಾರ, ಎಂದರೆ ಪರರ ಮಾನ ಕಾಯುವುದು. ಅದರಲ್ಲಿ ತೊಡಗದೆ ಒಂದು ದಿವಸವಾದರೂ, ನನಗೆ ಸಮಾಧಾನವಿಲ್ಲ. ಇತ್ತ ಅನೇಕರು ನನ್ನ ಸಹಾಯಕ್ಕಾಗಿ ಕಾದು ನಿಂತಿರುತ್ತಾರೆ. ದಾರಿದ್ರ್ಯದಿಂದ ಪೀಡಿತರಾಗಿ ವಿಲಾಸಕ್ಕೆ ಮೆಚ್ಚಿದ ಜನರು ಬಾಡಿಗೆಯ ಉಡಿಗೆತೊಡಿಗೆಗಳನ್ನು ಧರಿಸಿಕೊಂಡು ಸಿರಿವಂತರೊಳಗೆ ಬೆರೆತರೆ ಹೇಗೆ ಅವರ ದಾರಿದ್ರ್ಯವು ಮುಚ್ಚುವದೋ ಹಾಗೆ ಹುಸಿಬಿಸಿ ಪಂಡಿತರಾದ ಲೇಖಕರೂ ಮಾತುಗಾರರೂ ನನ್ನನ್ನು ಆಶ್ರಯಿಸಿದರೆ ಅವರ ದಡ್ಡತನವು ಮರೆಯಾಗುವುದು. ಇದಕ್ಕೆ

ಎರಡೇ ಉದಾಹರಣೆಗಳನ್ನು ಹೇಳುವೆನು.

ಒಂದು ಸಾರೆ ಒಬ್ಬ ವ್ಯಾಖ್ಯಾನಕಾರನು ವ್ಯಾಖ್ಯಾನ ಕೊಡಬೇಕಾಗಿತ್ತು. ತನಗೆ ಎಲ್ಲ ಶಾಸ್ತ್ರಗಳಲ್ಲಿ ಪಾಂಡಿತ್ಯವಿದೆಯೆಂದು, ಅವನಿಗೆ ತೋರಿಸಿಕೊಳ್ಳಬೇಕೆಂದಿತ್ತು. ಆದರೆ ಅವನಿಗೆ ಆ ಶಾಸ್ತ್ರಗಳ ಜ್ಞಾನ, ಓದದೇ ತಿಳಕೊಳ್ಳದೇ ಬರುವದೆಂತು? ಅವನಿಗೆ ಕೆಲವು ಶಾಸ್ತ್ರಗಳ ಮತ್ತು ಶಾಸ್ತ್ರಕಾರರ ಹೆಸರುಗಳಷ್ಟೇ ಗೊತ್ತಿದ್ದವು. ಇಷ್ಟು ಬಂಡವಲದಿಂದ ಮಾತಾಡಲು ಎದ್ದು ನಿಂತನು. ಆದರೆ ಏನು ಮಾತಾಡಬೇಕೆಂದು ಗೊತ್ತಾಗದೇ ಚಿಂತಿತನಾದನು. ತನ್ನ ಕಿಸೆಯೊಳಗಿಂದ ಕರವಸ್ತ್ರವನ್ನು ತೆಗೆದು, ಬಾಯಿಯ ಮುಂದೆ ಹಿಡಿದು ಕೆಮ್ಮುತ್ತಲೂ ಕ್ಯಾಕರಿಸುತ್ತಲೂ ತುಸು ಹೊತ್ತುಗಳೆದನು. ಹೋರೆಯ ಮೇಲೆ ಬೆವರ ಹನಿಗಳು ಮಿಂಚಿದುವಾದರೆ ದೃಷ್ಟಿಯು ಮಂಜಾಯಿತು. ಅವನ ಪೂರ್ವೋತ್ಸಾಹವೆಲ್ಲ ಸೋರಿಹೋಯಿತು. ಅವನ ದುಃಸ್ಥಿತಿಯನ್ನು ಕಂಡು ನಾನು ಮಮ್ಮಲ ಮರುಗಿದೆ. ಅವನ ಆಮಂತ್ರಣ ನನಗೆ ಬಂದಿರದಿದ್ದರೂ, ಧಾವಿಸಿ ಅವನಲ್ಲಿಗೆ ಹೋಗಿ, ಯಾರಿಗೂ ಕೇಳಿಸದಂತೆ ಅವನ ಕಿವಿಯಲ್ಲುಸುರಿದೆ: "ನಾನು ಇತ್ಯಾದಿ. ನೀವು ಚಿಂತೆ ಮಾಡಬೇಡಿರಿ. ನಿಮ್ಮ ಮನಸ್ಸಿಗೆ ತೋಚಿದಂತೆ ಭಾಷಣ ಆರಂಭಮಾಡಿರಿ. ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ." ಈ ಆಶ್ವಾಸನದಿಂದ ಅವನಿಗೆ ತುಸು ಧೈರ್ಯ ಹುಟ್ಟಿ ಭಾಷಣವನ್ನು ಹೀಗೆ ಆರಂಭಿಸಿದನು.

"ಸಭ್ಯಗೃಹಸ್ಥರೇ, ಮನು ಮುಂತಾದ ಧರ್ಮಶಾಸ್ತ್ರಕಾರರೂ, ವ್ಯಾಸ ಇತ್ಯಾದಿ ಪುರಾಣಕಾರರೂ, ಕಪಿಲನೇ ಮೊದಲಾದ ದರ್ಶನಕಾರರೂ, ಕರ್ಮವಾದ, ಪುನರ್ಜನ್ಮವಾದ ಇತ್ಯಾದಿ ತತ್ವರತ್ನಗಳನ್ನು ಈ ಭರತಭೂಮಿಯ ಬೊಕ್ಕಸದಲ್ಲಿ ಸಂಗ್ರಹಿಸಿದರು. ಇದನ್ನು ಕಂಡು ಮ್ಯಾಕ್ಸ್ ಮುಲ್ಲರ್ ಇತ್ಯಾದಿ ಪಾಶ್ಚಾತ್ಯ ಪಂಡಿತರು ಬೆಕ್ಕಸಬೆರಗಾಗಿ ಬಿಟ್ಟರು..."

ಇನ್ನೊಂದು ಸಾರೆ, ಒಬ್ಬ ಗ್ರಂಥ ಪರೀಕ್ಷಕ (ವಿಮರ್ಶಕ)ನಿಗೆ, ತನ್ನ ಕೂಡ ಬಹು ದಿವಸದಿಂದ ಹಗೆತನವಿದ್ದಂಥ ಒಬ್ಬ ಗ್ರಂಥಕಾರನ ಪುಸ್ತಕದ ವಿಮರ್ಶೆ ಮಾಡುವ ಪ್ರಸಂಗ ಬಂದಿತು. ಆದರೆ ಆ ಗ್ರಂಥದಲ್ಲಿ ಅಚ್ಚಿನ ದೋಷಗಳ ಹೊರತು ಬೇರಾವ ತಪ್ಪುಗಳು ಸಿಕ್ಕಲಿಲ್ಲ. (ಆ ವಿಚಕ್ಷಣತೆಯೂ ಅವನಲ್ಲಿರಲಿಲ್ಲ!) ಆಗ ಅವನು ನನ್ನ ಸ್ಮರಣ ಮಾಡಿದೊಡನೆ ಹೋಗಿ ಅವನಿಗೆ ತಕ್ಷಣ ಸಹಾಯ ಸಲ್ಲಿಸಿದೆ. ಆಗ ಹೊರಬಂದ ವಿಮರ್ಶಾವೈಖರಿ ಇಂತಿದೆ.

"ಈ ಪುಸ್ತಕದಲ್ಲಿನ ದೋಷಗಳನ್ನು ಬೈಲಿಗೆಡವಿದೆಂದರೆ, ಗ್ರಂಥಕಾರನ ಅಯೋಗ್ಯತೆಯನ್ನೆಲ್ಲ ಬೈಲಿಗಿಟ್ಟಂತೆಯೇ ಆಗುವುದು. ಹಾಗೆ ಮಾಡಿ ಈ ಪತ್ರಿಕೆಯ ಸ್ಥಳವನ್ನೂ ನಿಮ್ಮ ವೇಳೆಯನ್ನೂ ಹಾಳು ಮಾಡಲಾರೆವು. ಒಂದೆರಡನ್ನು ಮಾತ್ರ ಹೇಳುವೆವು. ಏನೆಂದರೆ... ಇತ್ಯಾದಿ, ಇತ್ಯಾದಿ."

ಯಾವದೊಂದು ಪುಸ್ತಕದ ವಿಷಯವಾಗಿ ಕೆಟ್ಟ ಮಾತು ಬರೆಯುವರಿಗೆ ಮಾತ್ರ ನಾನು ನೆರವಾಗುತ್ತೇನೆಂದು ತಿಳಿಯಬೇಡಿರಿ. ತನ್ನವರನ್ನು ವಿನಾಕಾರಣ ಹೊಗಳಬಯಸುವ ವಿಮರ್ಶಕರಿಗೂ ನಾನು ಅಷ್ಟೇ ಮುಕ್ತಮನದಿಂದ ಸಹಾಯ ಮಾಡುವೆನು! ಒಂದೇ ಮಾತಿನಲ್ಲಿ ಹೇಳುವುದಾದರೆ ವಿಚಾರದ — ಆ ಮೂಲಕ ಶಬ್ದದ — ದಾರಿದ್ರ್ಯವುಳ್ಳ ಯಾವದೇ ಬರಹಗಾರನ ಮಾತುಗಾರನ ಸಮಸ್ತ ನ್ಯೂನತೆಗಳನ್ನೂ ಮುಚ್ಚಿ ಅವನ ಬರಹವನ್ನು ಮಾತನ್ನು ಚೆಂದಗಾಣಿಸಿಕೊಡುತ್ತೇನೆ. ✡

ಶ್ರೀಮಂತರು ಸ್ವರ್ಗಕ್ಕೆ ಹೋಗುವುದು ಎಷ್ಟು ಕಠಿಣವೆಂದು ಧರ್ಮಗ್ರಂಥಗಳು ಹೇಳುತ್ತವೆಯೆ ಹೊರತು ಬಡವರು ಈ ಜಗತ್ತಿನಲ್ಲಿ ಜೀವಿಸುವುದು ಎಷ್ಟು ದುರ್ಭರವಾಗಿದೆಯೆಂಬುದನ್ನು ಹೇಳುತ್ತವೆಯೆ?

— ಆಶಾರಾಣಿ


ಪ್ರತಿಧ್ವನಿಗಳನ್ನು ಸಾರುವನು

ಉಮಾ ರಾವ್

ಬೆಳಿಗ್ಗೆ ಐದು ಗಂಟೆಗೆ ಸರಿಯಾಗಿ ನಿದ್ದೆಯ ಮಂಪರಿನಿಂದ ಹೊಡೆದೆಬ್ಬಿಸುವ ದೂಧ್‌ವಾಲಾನ ಕರೆಗಂಟೆಯ ಚೀರಾಟಕ್ಕೆ ಎದ್ದು, ಪಕ್ಕದ ಸಿಂಧಿಗಳ ಫ್ಲಾಟ್‌ನಿಂದ ಅರಚುವ ವಿವಿಧ ಭಾರತಿಯ ಹಿನ್ನೆಲೆ ಸಂಗೀತದೊಡನೆ ಸ್ನಾನ, ಬ್ರೆಕ್‌ಫಾಸ್ಟ್ (ನಾನು ಚಹದ ಜೊತೆ ತಿನ್ನುವ ಎರಡು ತುಣುಕು ಬ್ರೆಡ್ಡನ್ನು ಹಾಗೆ ಕರೆಯಬಹುದಾದರೆ) ಮುಗಿಸಿ, ಆ ಮೇಲೆ ನೂರಾರು ಉತ್ಸಾಹವಿಲ್ಲದ ೮ ಗಂಟೆಯ ಮುಖಗಳೊಡನೆ ಒಂದಾಗಿ, ನುಗ್ಗಾಡಿ ಕೆಂಪು ಬಸ್ಸು ಹತ್ತಿ ಆಫೀಸು ಸೇರಿ, ಸಂಜೆ ಆರರ ವರೆಗೂ ಫೈಲುಗಳ ರಾಶಿಯೊಡನೆ ಜಂಜಾಟ ನಡೆಸಿ, ವಾಪಸ್ಸು ಬರುತ್ತಾ ದಾರಿಯಲ್ಲೇ ನಾಯಕ್ ಹೋಟೆಲಿನಲ್ಲಿ ಒಂದು ತಟ್ಟೆ ಐದು ಪಾಟಿಯ, ರುಚಿಯಲ್ಲಿ ಯಾವ ವೈವಿಧ್ಯವೂ ಇಲ್ಲದ ಊಟ ಮಾಡಿ. ನಾನು ಇದುವರೆಗೂ ಮನೆಯೆಂದು ಕರೆದ ಒಂದು ರೂಮಿನ ಗೂಡು ಸೇರಿ, ರಾತ್ರಿ ಹತ್ತಕ್ಕೆ ದಣಿದು ಹಾಸಿಗೆ ಸೇರುತ್ತಾ ದಿನಗಳನ್ನು ಕೊಲ್ಲುವ, ಮುಂಬೈಯ ಯಾಂತ್ರಿಕ ಜೀವನದ ಜಡತೆಯನ್ನು ಕೊಡವಿ, ಹೊಸ ಮನುಷ್ಯನಾಗಿ ಹಿಂದಿರುಗುವ ಆಸೆಯಿಂದ ಈ ಗಿರಿಧಾಮಕ್ಕೆ ಬರುತ್ತೇನೆ; ಅಲ್ಲಿಯ ದಟ್ಟವಾದ ಕಾಡುಗಳು, ಧಡಗುಟ್ಟಿಸುವ ಪ್ರಪಾತಗಳು, ಸುತ್ತುವರಿದ ಸುಂದರ ಕಣಿವೆ – ಮಾಥೇರಾನ್, ಸಹ್ಯಾದ್ರಿಯ ಶ್ರೇಣಿಗಳು, ಶುಭ್ರ ವಾತಾವರಣ ನನ್ನಲ್ಲಿ ಮತ್ತೆ ಉಲ್ಲಾಸ ತುಂಬಬಹುದೆಂಬ ಕನಸನ್ನು ಹೊತ್ತು.

ಅಲ್ಲಿಗೆ ನಮ್ಮನ್ನು ಹೊತ್ತು ತಂದ 'ಬೆಂಕಿ ಪೆಟ್ಟಣದ ರೈಲಿ'ನಿಂದ ಇಳಿದು, ರೇಲ್ವೆ ಸ್ಟೇಶನ್ನಿನಿಂದ ಹೊರಗೆ ಬರುತ್ತಿದ್ದಂತೆಯೇ, ಕುದುರೆಗಳು, ರಿಕ್ಷಾಗಳು, ಕೈಯಲ್ಲಿ ಬೆತ್ತಗಳನ್ನು ಹಿಡಿದು ಬಣ್ಣ ಬಣ್ಣದ ಟೋಪಿಗಳೊಂದಿಗೆ ನಗು ನಗುತ್ತಾ ಓಡಾಡುತ್ತಿರುವ ಯಾತ್ರಿಕರ ಗುಂಪುಗಳು ಎದುರಾಗುತ್ತವೆ. "ಯಾವ ಹೋಟೆಲ್ ಸಾಬ್?" "ರಿಕ್ಷಾ ಬೇಕೇ?" ಎಂದು ಮುತ್ತಿಕೊಳ್ಳುವ ರಿಕ್ಷಾ ಹುಡುಗರನ್ನು ಪಕ್ಕಕ್ಕೆ ಸರಿಸಿ, ರಸ್ತೆಯ ಎರಡೂ ಕಡೆಯಲ್ಲಿ ಸಾಲುಗಟ್ಟಿದ್ದ ಅಲ್ಲಿನ ಪ್ರಖ್ಯಾತ 'ಚಿಕ್ಕಿ' ಮಾರುವ ಸಿಹಿಯಂಗಡಿಗಳು, ಚಪ್ಪಲಿ ಅಂಗಡಿಗಳು, ಪ್ರತಿವರ್ಷದ ೨೫೦ ಇಂಚು ಮಳೆಗೆ ಸಿಕ್ಕು ಜರ್ಜರಿತವಾದ ಆಸ್‌ಬೆಸ್ಟಾಸ್ ಛಾವಣಿಗಳುಳ್ಳ ಹೋಟೆಲ್ ಕಟ್ಟಡಗಳು, ಇರುವ ಮಾರ್ಕೆಟ್ ರಸ್ತೆಯ ಮೂಲಕ ನಡೆದೇ ತಿಂಗಳುಗಳ ಹಿಂದೆಯೇ ರಿಸರ್ವ್ ಮಾಡಿಸಿದ್ದ ಹೋಟೆಲ್ ತಲುಪುತ್ತೇನೆ.

ಊಟ ಮಾಡಿ, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಅಲ್ಲಿ ಒಂದು ಗಳಿಗೆಯನ್ನೂ ಸೋಮಾರಿತನದಲ್ಲಿ ಹಾಳು ಮಾಡುವ ಮನಸ್ಸಿಲ್ಲದೆ, ಆ ಸಂಜೆಯೇ ಉತ್ಸಾಹದಿಂದ ತಿರುಗಾಡಲು ಹೊರಡುತ್ತೇನೆ. ಬರಿಯ ಹೋಟೆಲುಗಳಿಂದ ತುಂಬಿ ಹೋದ ಊರನ್ನು ಕೆಲವೇ ನಿಮಿಷಗಳಲ್ಲಿ ದೂರ ಮಾಡಿ ಸಾಗುತ್ತೇನೆ. ಸ್ವಲ್ಪ ದೂರ ನಡೆದ ನಂತರ ಕಂಡ 'Echo point' ಎಂಬ ಕೈಮರದತ್ತ ದೃಷ್ಟಿ ಹರಿಯುತ್ತೆ. ಟೂರಿಸ್ಟ್



ಗೈಡಿನಲ್ಲಿ ಇದು ಅಲ್ಲಿಯ ನೋಡಲೇ ಬೇಕಾದ ಸ್ಥಳಗಳಲ್ಲಿ ಒಂದು ಎಂದು ಓದಿದ ನೆನಪಾಗಿ, ದಿಕ್ಕಿನಲ್ಲೇ ಹೆಜ್ಜೆ ಹಾಕುತ್ತೇನೆ.

ದಟ್ಟವಾದ ಮರಗಳನ್ನು ಸೀಳಿ, ಅವುಗಳಿಂದ ಕವಿದ ಮಬ್ಬಿನ ಮಧ್ಯೆ ಮೂಡಿರುವ, ಸೀಳ ಕೆಂಪು ದಾರಿಯಲ್ಲಿ ನಿಧಾನವಾಗಿ ನಡೆಯುತ್ತೇನೆ. ಮೆಲ್ಲನೆ ಚಿಲಿಪಿಲಿಗುಟ್ಟುತ್ತಿದ್ದ ಹಕ್ಕಿಗಳು, ಗಾಳಿಗೆ ತೂಗಿ ಶಬ್ದ ಮಾಡುವ ಮರದೆಲೆಗಳು ಈ ಸ್ತಬ್ಧ ವಾತಾವರಣದ ಸೊಬಗನ್ನು ಹೆಚ್ಚಿಸುತ್ತವೆ. ಮರಗಳಿಂದ ಸುತ್ತುವರಿಯಲ್ಪಟ್ಟು ನಾನು ಮುಂದುವರಿದಂತೆ, ನನ್ನ ಮೇಲೆ ಒಂದು ಜಾಲ ಹಾಕಿ, ಬೇರೆ ಪ್ರಪಂಚಕ್ಕೇ ಕರೆದೊಯ್ಯುತ್ತದೆ.

ನೂರಾರು ವರ್ಷಗಳ ಹಿಂದೆ, ಶಿವಾಜಿಗೆ ಅವಿತುಕೊಳ್ಳಲು ಆಸರೆ ಕೊಡುತ್ತಿದ್ದ ಆ ಪರ್ವತ ಶ್ರೇಣಿಯ ಅನೇಕ ಬೆಟ್ಟಗಳಲ್ಲಿ ಒಂದಾದ 'ಮರಗಳ ಛಾವಣಿ' ಹೊದ್ದ ಮಾಥೇರಾನ್, ನಮಗೇ ಕಳೆದುಹೋಗಿ, ಕೇವಲ ೧೩೦ ವರ್ಷಗಳ ಹಿಂದೆ, ಅದೂ ಒಬ್ಬ ಆಂಗ್ಲ ಅಧಿಕಾರಿಯ ಕಣ್ಣಿಗೆ ಅಕಸ್ಮಾತ್ ಬಿದ್ದು, ಜೀವ ತಳೆಯಿತೆಂದರೆ ನಂಬುವುದೇ ಕಷ್ಟವಾಗುತ್ತದೆ. ಆಗ ಮನ ತುಂಬಿ, ಅಷ್ಟು ವರ್ಷಗಳ ಹಿಂದೆ, ಚಿರತೆಗಳಿಂದ ತುಂಬಿ ಹೋದ ದಟ್ಟವಾದ

ಕಾಡುಗಳುಳ್ಳ ಆ ಬೆಟ್ಟವನ್ನು 'ಒಂಟಿ ಮರದ ಗುಡ್ಡ'ದ ಕಡಿದಾದ ದಾರಿಯ ಮೂಲಕ ಮೊದಲ ಬಾರಿ ತಲುಪಿದ ಪ್ರಕೃತಿಯ ಉಪಾಸಕ ಆಂಗ್ಲ ಅಧಿಕಾರಿ ಮ್ಯಾಲೆ ಅವರನ್ನು ಸ್ಮರಿಸುತ್ತೇನೆ. ಹಾಗೇ ನಾನು ಮುಂದೆ ನಡೆದಂತೆ, ಅಜಾನುಬಾಹು, ಬಿಳಿಯ ಚರ್ಮದ ಮ್ಯಾಲೆ ನನ್ನ ಮನಸ್ಸಿನಲ್ಲಿ ರೂಪುಗೊಂಡು, ಜೇವತಾಳಿ, ಖಾಕಿ ಚಡ್ಡಿ–ಶರಟು, ಹ್ಯಾಟು–ಬೂಟುಗಳು, ಹೆಗಲಿನಿಂದ ತೂಗುತ್ತಿದ್ದ ಬಂದೂಕು, ಕೈಯಲ್ಲೊಂದು ಉದ್ದನೆಯ ಕೋಲಿನೊಂದಿಗೆ, ಮುಳ್ಳು ಗಿಡಗಳನ್ನು ತಳ್ಳುತ್ತಾ, ದಾರಿ ಮಾಡಿಕೊಳ್ಳುತ್ತಾ ನಡೆಯ ತೊಡಗುತ್ತಾನೆ. ಅಲ್ಲಿ ತುಂಬಿ ಹೋಗಿರುವ ಹಾವುಗಳಿಗೆ ಸ್ವಲ್ಪವೂ ಅಂಜದೆ, ಮೈಯೆಲ್ಲಾ ಕಣ್ಣಾಗಿ ಆ ಸೌಂದರ್ಯವನ್ನು ಹೀರುತ್ತಾ, ಅವನು ಮುಂದುವರೆದಂತೆ, ಇದನ್ನು ಜನಗಳಿಗೆ ಹೇಗೆ ತಲುಪುವಹಾಗೆ ಮಾಡಬಹುದೆಂದು ಲೆಕ್ಕಹಾಕುತ್ತಾ, ಎಲ್ಲಿ ಕಾಲುದಾರಿಗಳನ್ನು ಮಾಡಬೇಕೆಂದು ತನ್ನ ಜೇಬಿನಲ್ಲಿದ್ದ ಪುಟ್ಟ ಪಾಕೆಟ್ ಡೈರಿಯಲ್ಲಿ ಗುರುತು ಮಾಡಿಕೊಳ್ಳುತ್ತಾನೆ. ಆ ಕ್ಷಣದಲ್ಲಿ ನನ್ನ, ಮ್ಯಾಲೇಯ ಮಧ್ಯದ ಒಂದು ಶತಮಾನ ಕರಗಿ ಹೋಗಿ, ಅವನು ನನಗಿಂತ ಕೆಲವೇ ಹೆಜ್ಜೆಗಳು ಮುಂದೆ ಸಾಗುತ್ತಿರುತ್ತಾನೆ— ತನಗೆ ದಾರಿ ತೋರಿಸಲು ಜೊತೆಗೆ ಬಂದಿರುವ, ಎಷ್ಟೋ ವರ್ಷಗಳಿಂದ ಆ ಕಾಡುಗಳಲ್ಲಿ ನೆಲೆಸಿರುವ ಅರೆ ನಗ್ನ ಆದಿವಾಸಿಗಳ ಸಹಿತ. ಅದೇ ಗುಂಗಿನಲ್ಲೇ ನಾವು ಮುನ್ನಡೆದಂತೆ, ಇದ್ದಕ್ಕಿದ್ದಂತೆ ಹತ್ತಿರವಾದ ಗೊರಸುಗಳ ಸಪ್ಪಳ ನನ್ನನ್ನು ಬೆಚ್ಚಿ ಬೀಳುವಂತೆ ಮಾಡುತ್ತದೆ. ಜೊತೆಗೇ ತೂಗಿ ಬಂದ "ಬಾತ್ ಬನ್ ಜಾಯೇ..." ಹಾಡು ಹತ್ತಿರ ಬಂದಂತೆ ಕಿವಿಯ ಮೇಲೆ ರಾಚುತ್ತದೆ.

ಆಗ ಕುದುರೆಗಳ ಮೇಲೆ ವೇಗವಾಗಿ ಬಂದ ಉದ್ದ ಕೂದಲಿನ ಎಂಟುಹತ್ತು ಗುಜರಾತಿ ಹುಡುಗರು ಹೆಗಲ ಮೇಲಿಂದ ತೂಗಿ ಬಿದ್ದ "ಟೂ–ಇನ್ ಒನ್"ನ ಸಂಗೀತದಲ್ಲಿ ಮೈ ಮರೆತು. ತಾವೂ ಜೊತೆಗೇ ಜೋರಾಗಿ ಹಾಡುತ್ತಾ ಧೂಳೆಬ್ಬಿಸುತ್ತಾ ಹತ್ತಿರವಾಗುತ್ತಾರೆ. ಅವರಿಗೆ ಜಾಗ ಕೊಡಲು ಪಕ್ಕಕ್ಕೆ ಸರಿದು ನಿಂತು ಕಣ್ಣಲ್ಲಿ ಬಿದ್ದ ಮಣ್ಣೊರೆಸಿಕೊಂಡಂತೆ ಅವರು ಹಿಂದಿರುಗಿ ನನ್ನತ್ತ ನೋಡಿ ಒಂದು ರೀತಿಯ ಗೆಲುವಿನ ನಗೆ ನಕ್ಕು "ಚಲ್, ಬೇಟಿ ಚಲ್" ಎನ್ನುತ್ತಾ ತಮ್ಮ ಕುದುರೆಗಳ ಬೆನ್ನು ಚಪ್ಪರಿಸುತ್ತಾರೆ.

ಆ ಕ್ಷಣದಲ್ಲಿ ಮ್ಯಾಲೇ ಅಲ್ಲಿಂದ ಮಾಯವಾಗಿ ೨೦ನೇ ಶತಮಾನದ ಅಸಭ್ಯತೆ ನನ್ನ ಮುಂದೆ ಬೆತ್ತಲೆಯಾಗಿ ನಿಲ್ಲುತ್ತದೆ. ಆದರೆ ಅವರು ಸ್ವಲ್ಪ ದೂರ ಹೋಗುತ್ತಲೇ, ಆ ಕಾಡು ತನ್ನ ದೊಡ್ಡ ತನದಿಂದಲೋ ಎಂಬಂತೆ ಆ ಶಬ್ದವನ್ನೆಲ್ಲಾ ಹೀರಿಕೊಂಡು, ಮತ್ತೆ ಶಾಂತಿಯ ಮುಸುಕನ್ನು ಹೊದ್ದಿಸುತ್ತದೆ. ಹಾಗೇ ನಾನು ನಡೆದಂತೆ, ಆಧುನಿಕ ಡ್ರಾಯಿಂಗ್ ರೂಮುಗಳ ಅಲಂಕಾರಕ್ಕಾಗಿ ಮಾರುವ, ಅಲ್ಲಿ ಬೆಳೆಯುವ ಮೋಹಕ ಒಣಗಿದ ಗಿಡ–ಗರಿಕೆಗಳ ಗೊಂಚಲುಗಳನ್ನು ಹೊತ್ತು, ರಂಗು ರಂಗಿನ, ರವಿಕೆ, ಬೆಳ್ಳಿಯ ಒಡವೆಗಳನ್ನು ತೊಟ್ಟು, ಮಾತಿಲ್ಲದೆ ಸಾಗುವ ಆದಿವಾಸಿ ಹೆಂಗಸರು ಎದುರಾಗುತ್ತಾರೆ. ನಾನು ಮತ್ತೆ ಪ್ರಕೃತಿಯಲ್ಲಿ ಲೀನನಾಗಿ ಕಾಲು ಹಾಕಿದಂತೆ, ನನಗೆ ಅರಿವಿಲ್ಲದೆಯೇ ಕಿಲೋ ಮೀಟರುಗಳು ಉರುಳುತ್ತವೆ.

ಇದ್ದಕ್ಕಿದ್ದಂತೆ ಎದುರಿಗೆ ಕಂಡ ಶುಭ್ರ ನೀಲ ಆಕಾಶವನ್ನು ನೋಡಿ ನಾನು ಬೆಚ್ಚಿಬೀಳುತ್ತೇನೆ. ನಾನು ಮುಂದೆ ಹೋದಂತೆ, ಮರಗಳ ತೆರೆ ನಿಧಾನವಾಗಿ ಸರಿದು, ತ್ರಿಕೋಣಾಕಾರದ ಕೆಂಪು ಬಂಜರು ಭೂಮಿ ಕಾಣಬರುತ್ತದೆ. ನಿಧಾನವಾಗಿ ನಡೆದು, ಆ ಕಡಿದಾದ ಜಾಗದ ತುದಿಯಲ್ಲಿ ನಿಂತು ನೋಡಿದಂತೆ, ಇದ್ದಕ್ಕಿದ್ದಂತೆ ಎದುರಾಗುವ ಸಾವಿರಾರು ಅಡಿಯ ಪ್ರಪಾತ ನನ್ನಲ್ಲಿ ನಡುಕ ಹುಟ್ಟಿಸಿ, ಕಾಲುಗಳಲ್ಲಿ ಜೋಮು ಹರಿಯುತ್ತದೆ. ಹಾಗೇ ಸುತ್ತಲೂ ದೃಷ್ಟಿ ಹಾಯಿಸಿದಾಗ, ಪಕ್ಕದಲ್ಲೇ ಇದ್ದ ಸಿಮೆಂಟಿನ ಬೆಂಚು ನನ್ನ ದಣಿದ ದೇಹಕ್ಕೆ ಆಹ್ವಾನ ಕೊಡುತ್ತದೆ. ನಾನು ಅದರ ಮೇಲೆ ಧೊಪ್ಪನೆ ಕುಕ್ಕರಿಸಿ. ಬೆರಗುಗಣ್ಣಿಂದ ನೋಟ ನಿಲುಕದವರೆಗೂ ಸುತ್ತುವರಿದಿದ್ದ ಕಾಣುವ ಆ ಶ್ರೇಣಿಯ ಬೆಟ್ಟಗಳನ್ನು ದಿಟ್ಟಿಸಿದಂತೆ ಅದ್ಭುತ ಸೌಂದರ್ಯ ನನ್ನನ್ನು ಉಸಿರುಗಟ್ಟಿಸುತ್ತದೆ.

ಆಗ ಅಲ್ಲಿಂದ ಸ್ವಲ್ಪ ದೂರದಲ್ಲೇ ಕುಳಿತಿದ 'ಅವನು' ಕಂಡುಬರುತ್ತಾನೆ. ನಾನು ಅಚ್ಚರಿಯಿಂದ ಅವನತ್ತ ನೋಡುತ್ತೇನೆ. ಆದರೆ ನೇರ ದಿಗಂತದಲ್ಲಿನ ಸೂರ್ಯಾಸ್ತದಲ್ಲೇ ನೋಟ ನೆಟ್ಟು ಮೈಮರೆತು ಕುಳಿತಿರುವ ಅವನಿಗೆ ನನ್ನ ಅರಿವೇ ಇದ್ದಂತೆ ಕಾಣಬರುವುದಿಲ್ಲ. ಕೊಳಕು ಪಂಚೆ, ಶರಟು, ಅಲ್ಲಲ್ಲಿ ಹರಿದ ಕಪ್ಪು ಕೋಟು, ತಲೆಯ ಮೇಲೊಂದು ಟೋಪಿ, ಹೆಗಲಿನಿಂದ ಜೋತು ಬಿದ್ದ ಒಂದು ಬಣ್ಣ ಹೋದ ತೂಗು ಚೀಲ, ಸುಮಾರು ೬೦ ವರ್ಷ ವಯಸ್ಸಿನ ಅವನು ತನ್ನ ಸುಕ್ಕುಗಟ್ಟಿದ ದೇಹವನ್ನು ಮುದುಡಿ, ತನ್ನೆದುರಿಗೇ ದಿಟ್ಟಿಸುತ್ತಾ, ಪಕ್ಷಿಗಳ ಧ್ವನಿಗಳನ್ನು ಮೈಮರೆತು ಆಲಿಸುತ್ತಾ ಕುಳಿತಿರುತ್ತಾನೆ.

೨೪ ಗಂಟೆಗಳೂ ಕಿವಿಗೆ ಗಂಟೆಗಳನ್ನು ಕಟ್ಟಿಕೊಂಡೇ ಬದುಕುವ ನನ್ನನ್ನು ಅವನ ತನ್ಮಯತೆ ಮುಟ್ಟುತ್ತದೆ. ಆ ಇಳಿವಯಸ್ಸಿನಲ್ಲಿ ಪ್ರಕೃತಿಯಲ್ಲಿ ಲೀನನಾಗಿ ತನ್ನ ಕೊನೆಯ ದಿನಗಳನ್ನು ಕಳೆಯುತ್ತಿರುವ, ಈ ಬಡ ಮುದುಕನ ಸಂಸ್ಕಾರವನ್ನು ಕಂಡು ನನ್ನ ಹೃದಯ ತುಂಬಿ ಬರುತ್ತದೆ. ಆದರೆ ಜೊತೆಗೇ ನೂರಾರು ಪ್ರಶ್ನೆಗಳು ತಲೆ ಹಾಕುತ್ತವೆ. ಇವನು ತನ್ನ ಎಲ್ಲಾ ದಿನಗಳನ್ನೂ ಹೀಗೇ ಕಳೆಯುತ್ತಾನೆಯೇ? ಅಥವಾ ಇವನೂ ಇಲ್ಲಿಯ ಅನೇಕರಂತೆ, ದಿನವೂ ಸಂಜೆ ಬೆಟ್ಟ ಇಳಿದು ಹೋಗಿ, ಕೆಳಗಡೆಯೇ ಕಣಿವೆಯಲ್ಲಿನ ಚಾಕ್ ಹಳ್ಳಿಯಲ್ಲಿರುವ ತನ್ನ ಮನೆಯಲ್ಲಿ ಮಕ್ಕಳು, ಸೊಸೆಯರು ಮೊಮ್ಮಕ್ಕಳ ತುಂಬು ಸಂಸಾರದ ಕಲಕಲ ಮಾತಿನಿಂದ ಸುತ್ತುಗಟ್ಟಲ್ಪಟ್ಟು, ನೆಮ್ಮದಿಯಿಂದ ಊಟ ಮಾಡಿ ಮಲಗುತ್ತಾನೆಯೇ? ತಾನು ಜೀವಮಾನವೆಲ್ಲಾ ಕಷ್ಟಪಟ್ಟು ದುಡಿದುಕೊಂಡು ಚೂರು ಹೊಲವನ್ನು ಮಗನಿಗೆ ಕೊಟ್ಟು, ತನ್ನ ಸ್ವಾಭಿಮಾನಕ್ಕೆ ಯಾವ ಕುಂದೂ ಬಾರದಂತೆ, ಈ ವಯಸ್ಸಿನಲ್ಲಿ ತನ್ನ ಮನಸ್ಸಿಗೆ ಬಂದಂತೆ ಕಾಲ ಕಳೆಯುತ್ತಿದ್ದಾನೆಯೇ? ಆದರೂ ಈ ರೀತಿ ಆ ಪ್ರಪಾತದ ಅಂಚಿನಲ್ಲಿ ಮೈಮರೆತು ಪ್ರತಿಯೊಂದು ಸೂರ್ಯಾಸ್ತವನ್ನೂ ಅನುಭವಿಸುವ ಅವನ ತನ್ಮಯತೆ, ಪ್ರಕೃತಿ ಪ್ರೇಮ, ನನ್ನನ್ನು, ವ್ಯಾಲೇಯನ್ನು, ಇಲ್ಲಿಗೆ ಬಂದ ಎಲ್ಲಾ ಯಾತ್ರಿಕರನ್ನೂ, ಆ ಕ್ಷಣದಲ್ಲಿ ಅವನಿಗಿಂತ ತುಂಬಾ ಚಿಕ್ಕವರನ್ನಾಗಿ ಮಾಡುತ್ತದೆ.

ಆಗ ತಟಕ್ಕನೇ ನನೆಸಿ ಅದೇ 'Echo point' ಎಂದು ನೆನಪಾಗುತ್ತದೆ. ನನ್ನ ಪ್ರತಿಧ್ವನಿಯನ್ನು ನಾನೇ ಕೇಳುವ ಕಾತರದಲ್ಲಿ, ಧಡಬಡನೆ ಆ ಬೆಂಚಿನಿಂದ ಎದ್ದು ನಿಂತು, ಆ ಬೆಟ್ಟಗಳತ್ತ ತಿರುಗಿ, "ಆಹಾ..." ಎಂದು ಕಿರುಚುತ್ತೇನೆ... ಪ್ರತಿಕ್ರಿಯೆಗಾಗಿ ಕಾಯುತ್ತೇನೆ. ಆದರೆ ಏನೂ ಕೇಳಬರದಾಗ ಮತ್ತೊಮ್ಮೆ ಕೂಗುತ್ತೇನೆ... ನನ್ನ ಪ್ರತಿಧ್ವನಿಯನ್ನು ಕೇಳದೆ, ನಿರಾಸೆಯಿಂದ ಮನಸ್ಸು ಮುದುಡುತ್ತದೆ. ಹಾಗಾದರೆ ಆ ಗೈಡಿನಲ್ಲಿ ಬರೆದದ್ದೆಲ್ಲಾ ಸುಳ್ಳೇ ಎಂದು ಒಂದು ನಿಮಿಷ ಆಶ್ಚರ್ಯವಾಗುತ್ತದೆ. ಆಗ ಹಿಂದಿನಿಂದ ಆ ಮುದುಕ ನಿಧಾನವಾಗಿ ಎದ್ದು, ನನ್ನ ಕಣ್ಣಿನಲ್ಲೇ ನೋಟ ನೆಟ್ಟು, ನನ್ನತ್ತ ನಡೆದು ಬರುತ್ತಿರುವುದು ಕಾಣಿಸುತ್ತದೆ. ಅವನು ಹತ್ತಿರ ಬಂದು ನಿಂತು, "ಹಾಗಲ್ಲ ಸಾಬ್. ನಾನು ತೋರಿಸುತ್ತೇನೆ..." ಎಂದು ಹೇಳುತ್ತಾನೆ. ನಾನು ಅನುಮಾನಿಸುತ್ತಿರುವುದನ್ನು ನೋಡಿ, ಕಿರುನಗೆ ನಕ್ಕು, "ನೀವು ನನಗೆ ದುಡ್ಡೇನೂ ಕೊಡಬೇಕಾಗಿಲ್ಲ... ನಾನು ತೋರಿಸುತ್ತೇನೆ..." ಎನ್ನುತ್ತಾನೆ. ನಾನು ಮುಖದ ಮೇಲೆ ಹೊಡೆದಂತಾಗಿ, "ಇಲ್ಲ, ಇಲ್ಲ... ನಾನೇ ಪ್ರಯತ್ನ ಮಾಡುತ್ತೇನೆ." ಎಂದರೂ ಕೇಳದೆ, ದೃಢವಾಗಿ, "ಸ್ವಲ್ಪ ಇರಿ ಸಾಬ್... ಇಲ್ಲಿ ನೋಡಿ..." ಎನ್ನುತ್ತಾ ಹೋಗಿ, ನೆಟ್ಟಗೆ ಬೆಟ್ಟಗಳನ್ನು ಎದುರಿಗೆ, ಎದೆ ಚಾಚಿ ನಿಲ್ಲುತ್ತಾನೆ. ಅವನನ್ನು ಪ್ರತಿಭಟಿಸಲಾರದೆ, ಮೆಲ್ಲನೆ ನಾನೂ ನಡೆದು ಹೋಗಿ ಅವನ ಪಕ್ಕದಲ್ಲಿ ನಿಲ್ಲುತ್ತೇನೆ. ಅವನು ತಲೆ ಎತ್ತಿ, ಎರಡೂ ಕೈಗಳಿಂದ ಬಾಯ ಸುತ್ತಲೂ ಉಂಗುರ ಮಾಡಿ, ಜೋರಾದ, ತುಂಬು ಕಂಠದಿಂದ ನೀಳವಾಗಿ, ಕೂಗುತ್ತಾನೆ,

"ಬಾಬಾ......"

ಕೆಲವು ಕ್ಷಣಗಳ ನಂತರ, ಆ ಬೆಟ್ಟಗಳು ಅದನ್ನು ಮಸುಕಾಗಿ, ಆದರೆ ಸ್ಪಷ್ಟವಾಗಿ ಮರಳಿ ನಮಗೇ ಎಸೆಯುತ್ತವೆ,

"ಬಾಬಾ...ಬಾಬಾ..."

ಮತ್ತೆ ಅವನು ಕೂಗುತ್ತಾನೆ,

"ಕಾಕಾ..."

"ಕಾಕಾ... ಕಾಕಾ..."

ಗೆಲುವಿನ ಮುಖ ಮಾಡಿ, ನನ್ನತ್ತ ನೋಡಿ ನಗುತ್ತಾನೆ. ಆ ಗಾಂಭೀರ್ಯತೆಯನ್ನು ಸೀಳಿ ಬಂದ, ಆತುಂಬು ಕಂಠದ ಕೂಗು ನನ್ನನ್ನು ಸುತ್ತು ವರಿದು ಅಲ್ಲೆಲ್ಲಾ ಆವರಿಸುತ್ತದೆ. ನನ್ನನ್ನು ಅಚ್ಚರಿ ಯಿಂದ ಮೂಕನನ್ನಾಗಿ ಮಾಡುತ್ತದೆ.

ನಾನು ನನ್ನ ಜೇಬಿನಲ್ಲಿ ೫೦ ಪೈಸೆಗಾಗಿ ತಡ ಕಾಡುತ್ತೇನೆ. ತಕ್ಷಣ ಅವನು ಕೈ ಅಡ್ಡ ತಂದು ಹೇಳುತ್ತಾನೆ, "ಇಲ್ಲ... ಇಲ್ಲ... ಇದಕ್ಕೆ ನೀವು ದುಡ್ಡು ಕೊಡಬೇಕಾಗಿಲ್ಲ..."

ಎಲ್ಲವನ್ನೂ ದುಡ್ಡಿಗೆ ಕೊಳ್ಳುವ ಅಭ್ಯಾಸ ವಾಗಿ ಹೋಗಿರುವ ನಾನು ಏನು ಹೇಳಲೂ ತೋಚದೆ ತಬ್ಬಿಬ್ಬಾಗುತ್ತೇನೆ, "ಪರವಾಗಿಲ್ಲ... ...ತಗೋ..." ಎಂದು ಗೊಣಗುತ್ತೇನೆ.

ಅವನು ಉತ್ತರಿಸುವುದೆ, ತನ್ನ ಕೊಳಕು ಚೀಲ ದಲ್ಲಿ ಕೈಹಾಕಿ ಒಂದು ಚಿಂದಿ ಕಾಗದದಲ್ಲಿ ಸುತ್ತಿದ ಪೊಟ್ಟಣ ಹೊರಗೆ ತೆಗೆಯುತ್ತಾನೆ, "ತಗೊಳ್ಳಿ ... ಈ ಚಿಕ್ಕಿ ತಿನ್ನಿ... ಮಥೇರಾನ ದ ಚಿಕ್ಕಿ... ಅಷ್ಟು ದೂರದಿಂದ ಬಂದಿ..."

"ಬೇಡ... ಬೇಡ..." ನಾನು ಬಡಬಡಿಸು ತ್ತೇನೆ.

"ಇಲ್ಲ ಸಾಬ್, ಬೇಡ ಎನ್ನಬೇಡಿ, ಈ ಹವಾ ದಲ್ಲಿ ಬೆಲ್ಲ ಗಂಟಲಿಗೆ ಒಳ್ಳೆಯದು ಸಾಬ್... ತಿನ್ನಿ ತಿನ್ನಿ..."

ನಾನು ಮತ್ತಷ್ಟು ಹಿಂಜರಿಯುವುದನ್ನು ನೋಡಿ ಕಟುವಾಗಿ ಹೇಳುತ್ತಾನೆ, "ನಿಮಗೆ ಬೇಡ ದಿದ್ದರೆ ಬೇಚಾರಾ ನಿಮ್ಮ ಘೋಡಾವಾಲಾನಿಗೆ ಕೊಡಿ ಅಥವಾ ನಿಮ್ಮ ಕುದುರೆಗಾದರೂ ಕೊಡಿ... ಅದೂ ಮೂಕಪ್ರಾಣಿ... ದಣಿದಿರುತ್ತದೆ."

"ನಾನು ನಡೆದೇ ಬಂದಿದ್ದೇನೆ..." ಎಂದು ಹೇಳುತ್ತಿರುವುದನ್ನೂ ಕೇಳಿಸಿಕೊಳ್ಳದೆ, ನನ್ನ ಕೈಯಲ್ಲಿ ಆ ಪೊಟ್ಟಣವನ್ನು ಬಲವಂತವಾಗಿ ತುರುಕುತ್ತಾನೆ. ನಾನು ಮಾತಿಲ್ಲದೆ ಅದನ್ನು ತೆಸಿದುಕೊಂಡು, ಹಿಂದೆ ಮುಂದೆ ತಿರುಗಿಸಿ ನೋಡಿದಾಗ, ಅವನು ಕೆಲವು ಹೆಜ್ಜೆ ದೂರ ನಡೆದು, ನನಗೆ ಬೆನ್ನು ತಿರುಗಿಸಿ ನಿಂತಿರುತ್ತಾನೆ. ಆಗ ನನಗೆ ಪೊಟ್ಟಣದ ಇನ್ನೊಂದು ಕಡೆ ಅಂಟಿ ಸಿರುವ, ಪ್ರಿಂಟ್ ಮಾಡಿದ ಲೇಬಲ್ ಕಂಡು ಬರುತ್ತದೆ. ಅದರ ಮೇಲೆ ದೊಡ್ಡ ಅಕ್ಷರಗಳಲ್ಲಿ ಬರೆದಿರುತ್ತದೆ:

BUY OUR FAMOUS
KWALITY CHKKI
SHOP NO. 11, K. B.
ROAD, MATHERAN

ಕೆಳಗಡೆ ಚಿಕ್ಕದಾಗಿ ಬರೆದಿರುತ್ತದೆ,

CRUSHED GROUND NUTS–
100 GMS. Rs. 1-20.

ನಾನು ಮಾತಿಲ್ಲದೆ ಜೇಬಿನಿಂದ ರೂ. ೧.೨೦ ತೆಗೆದು ಅವನಿಗೆ ಕೊಟ್ಟಾಗ, ಅವನು ಸಲಾಂ ಹೊಡೆಯುತ್ತಾ, ನಗುತ್ತಾ ಕೇಳುತ್ತಾನೆ, "ಎಲ್ಲಾ ಪಾಯಿಂಟ್‌ಗಳೂ ನೋಡಿಯಾಯ್ತಾ ಸಾಬ್...?" ನಾನು ತಲೆ ಹಾಕಿದಂತೆ, "ಬೊಂಬಾಯಿಗೆ ವಾಪಸು ಹೋಗುವಾಗ ನಮ್ಮ ಅಂಗಡಿಯಿಂದಲೇ ಚಿಕ್ಕಿ ಕೊಂಡುಕೊಳ್ಳಿ. ಅಡ್ರೆಸ್ ಇದರಲ್ಲಿದೆ..." ಎಂದು ಬೊಟ್ಟು ಮಾಡಿ ಆ ಪೊಟ್ಟಣದತ್ತ ತೋರಿಸಿ ಮತ್ತೆ ಹಲ್ಲು ಕಿರಿಯುತ್ತಾ ಸಲಾಂ ಹೊಡೆಯು ತ್ತಾನೆ. ಅವನು ನನಗೆ ಮಾರಿದ್ದೇನು ಎಂದು ಅರ್ಥ ವಾಗದೆ, ನಾನು ತಲೆ ಕೆರೆದುಕೊಳ್ಳುತ್ತಾ, ನಿಧಾನ ವಾಗಿ ವಾಪಸು ಕಾಲು ಹಾಕುತ್ತೇನೆ. ✡

ಫಿಲಿಪ್ಪೈನ್ಸ್ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿಭಾಗದ ಹೊಸದೊಂದು ವಾತಾವರಣವನ್ನು ತಂಪುಗೊಳಿಸುವಂಥ ಯಂತ್ರವನ್ನು ಕಂಡುಹಿಡಿದಿದೆ. ಇದಕ್ಕೆ ಬೇಕಾದ ಇಂಧನವೆಂದರೆ ಕೊಬ್ಬರಿ ಎಣ್ಣೆ. ಫಿಲಿಪ್ಪೈನ್ಸ್‌ನಲ್ಲಿ ಕೊಬ್ಬರಿ ಎಣ್ಣೆಗೇನು ಕೊರತೆ ?

ಹದಿನಾರರ ಆ ಹರೆಯದಲ್ಲಿ

ಡಾ. ಎಸ್. ಬಿ. ವಸಂತಕುಮಾರ

ಹದಿನಾರರ ಆ ಹರೆಯ ಮಾನವ ಜೀವನದ ಚಿಗುರು ಹಸಿರಾದ ಕಾಲ. ಷೋಡಶ ವರ್ಷದಲ್ಲಿ ಉಕ್ಕುವ ಪ್ರೇಮ, ಪ್ರಣಯಗಳ ಚಿತ್ರಣವಂತೂ ಅನುಭವಿಸಿದವರ ಕೈಯಲ್ಲಿ ರಾಸಗೀತೆಯಾಗಿ ಹರಿದುಬಿಡುತ್ತದೆ. ಸುಂದರವಾಗಿ ಅರಳಿದ ಆ ದೇಹದಲ್ಲಿ ಒಡಮೂಡುವ ಭಾವನೆಗಳಿಗೆ, ಭಾವೋದ್ವೇಗಗಳಿಗೆ ಪುಳಕಿತವಾಗುವ ಸನ್ನಿವೇಶಗಳಿಗೆ ಸಿಕ್ಕ ಮನಸ್ಸಿನ ತುಮುಲಕ್ಕೆ ಲಗಾಮೇ ಇರುವುದಿಲ್ಲ. ಈ ಬದಲಾವಣೆಗಳಿಗೆ ಅರ್ಥಪೂರ್ಣ ವಿವೇಚನೆ ಇದ್ದರೆ ಮಾತ್ರ ಸೊಗಸು. ಕ್ಷಣಿಕ ಸುಖಕ್ಕೆ ಅವಕಾಶ ಆಯಿತೆಂದರೆ ಜೀವನವಿಡೀ ಹೊಲಸು. ಅತ್ಯಂತ ಪ್ರಕೃತಿ ಸಹಜವಾಗಿ ಸಂದು ಹೋಗುವ ಬದಲಾವಣೆಗಳಾದರೂ ಆಗುವುದು ಗಂಡು–ಹೆಣ್ಣುಗಳ ದೇಹದಲ್ಲಿ ಉತ್ಪತ್ತಿಯಾಗುವ ವಿಶೇಷ ರಸಗಳಿಂದ. ಇವುಗಳ ಕಾರ್ಯಕ್ಕೆ ತಕ್ಕಂತೆ ಚೋದನ(ಹಾರ್ಮೋನ್)ಗಳೆಂದು ಕರೆಯಲಾಗಿದೆ.

ಚೋದನಗಳು ದೈಹಿಕ ಬದಲಾವಣೆಗೆ ಕಾರಣವಾದರೆ, ಈ ಬದಲಾವಣೆಗಳನ್ನು ಅರಿತು ಅನುಭವಿಸಲು ಮನಸ್ಸು ಹಾತೊರೆಯುತ್ತಿರುತ್ತದೆ; ಈ ಮಧ್ಯೆ ಸಾಮಾಜಿಕ ಮತ್ತು ನೈತಿಕ ಕಟ್ಟುಪಾಡುಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಹರೆಯದ ಬದಲಾವಣೆಗಳು ಗಂಡಸಿನಲ್ಲಿ ಒಂದು ತೆರನಾದರೆ ಹೆಣ್ಣಿನಲ್ಲಿ ಮತ್ತೊಂದು ತೆರ, ವೈಶಿಷ್ಟ್ಯಪೂರ್ಣ, ಚಿತ್ತಾಕರ್ಷಕ ಕೂಡ. ಹರೆಯ ಮೈದೋರಿದ ಹುಡುಗನಿಗೆ ಗಡ್ಡ, ಚಿಗುರು ಮೀಸೆ ಕಾಣಿಸಿಕೊಂಡು ಸಂತಾನೋತ್ಪತ್ತಿಗೆ ಸಾಧಕವಾದ ವೀರ್ಯದ ಉತ್ಪಾದನೆ ಪ್ರಾರಂಭವಾಗುತ್ತದೆ. ಹೆಣ್ಣಿನ ದೇಹ ಕೊಬ್ಬು–ಗೂಡಿಕೊಂಡು ದುಂಡಗೆ ಕಾಣುವುದರ ಜೊತೆಗೆ ಚೆಲುವನ್ನು ನೀಡುವಂತಹ ಉಬ್ಬು ತಗ್ಗುಗಳೂ ಕಾಣಿಸಿಕೊಳ್ಳುತ್ತವೆ. ನಡವಳಿಕೆಯಲ್ಲಿ ನಾಚುವುದು ಸ್ವಭಾವವಾದರೂ ಅನೇಕ ವೇಳೆ ಆಕೆಗೆ ಅರಿವಿಲ್ಲದಂತೆಯೇ ಹರೆಯದ ಹುಡುಗರ ಕಡೆಗೆ ಮನಸ್ಸು ಎಳೆಸುತ್ತದೆ. ಇದೆಲ್ಲಕ್ಕೂ ಪೂರಕವಾದ ಮತ್ತೊಂದು ಗಣನೀಯ ಬದಲಾವಣೆ ಎಂದರೆ ತಿಂಗಳಿಗೊಮ್ಮೆ ಆಗುವ ರಕ್ತಸ್ರಾವ ಮತ್ತು ಪ್ರಜನನಕ್ಕೆ ಸಿದ್ಧಗೊಳ್ಳುವ ಜನನಾಂಗಗಳ ಕಾರ್ಯ ಚಟುವಟಿಕೆ.

ಹರೆಯದ ಹೆಣ್ಣು ಮದುವೆಯಾದ ನಂತರ ತಾಯಿಯಾಗಲು ಸಾಧಕವಾದ ಅಂಗವೊಂದಿದೆ. ಅದೇ ಗರ್ಭಕೋಶ (ಚಿತ್ರ ೨ ರಲ್ಲಿ ೩). ಋತುಮತಿಯಾದಂದಿನಿಂದ ತಿಂಗಳಿಗೊಂದಾವರ್ತಿಯಂತೆ ಸುಮಾರು ೪೫–೫೦ ವಯಸ್ಸಿನವರೆಗೆ ಮಾಸಿಕ ಸ್ರಾವ ಆಗುತ್ತಿರುತ್ತದೆ. ಈ ಸ್ರಾವ ಗರ್ಭಕೋಶದ ಒಳಮೈಯಿಂದ ಬರುವ ರಕ್ತ ಮತ್ತು ಇತರ ಊತಕಾಂಶ, ಯೋನಿಯ ಮೂಲಕ ಹೊರಗೆ ಹರಿಯುತ್ತದೆ. ಲೈಂಗಿಕ ಸಂಭೋಗಕ್ಕೆ, ಒಂಭತ್ತು ತಿಂಗಳ ಕಾಲ ಕೂಸು ಸುಖವಾಗಿ ಬೆಳೆಯಲಿಕ್ಕೆ, ನಂತರ ಪ್ರಸವದ ಕಾಲದಲ್ಲಿ ಕೂಸನ್ನು ಸುರಕ್ಷಿತವಾಗಿ ಹೊರಗೆ ಕಳಿಸುವುದಕ್ಕೆ ಬಹಳ ಯೋಜಿತವಾಗಿ ನಿರ್ಮಾಣವಾಗಿರುವ ಸ್ತ್ರೀಯರ ಜನನಾಂಗಗಳಲ್ಲಿ ದುರದೃಷ್ಟವಶಾತ್ ಕೆಲವೊಂದು ಊನಗಳು ಕಂಡುಬರುತ್ತವೆ. ಬೆಳವಣಿಗೆಯ ದೋಷಗಳು ಯಾರಲ್ಲಿ ಹೇಗೆ ತೋರ್ಪಡುತ್ತವೆಂಬುದು ಅಷ್ಟು ಸುಲಭವಾಗಿ ಗೊತ್ತಾಗದೆ ಇರಬಹುದು. ಆದರೆ ಹುಡುಗಿ ಮೈ–ನೆರೆಯುವ ವಯಸ್ಸಿಗೆ ಬಂದರೂ ಆಕೆ



ಚಿತ್ರ ೧.

ದಪ್ಪನಾಗಿರುವ ಯೋನಿಪರೆ. ಗರ್ಭಕೋಶಕ್ಕೆ ಅಂಟಿಕೊಂಡಿರುವ ಎರಡೂ ಅಂಡನಾಳಗಳನ್ನು ಕತ್ತರಿಸಿದಂತೆ ತೋರಿಸಲಾಗಿದೆ.

ರಜಸ್ವಲೆಯಾಗದಿರುವುದನ್ನು ಕಂಡು ಯಾವ ತಾಯಿಯಾದರೂ ದಿಗಿಲು ಬೀಳುವುದು ಅಸಹಜ ವೇನಲ್ಲ. ಇದಕ್ಕೆ ಕಾರಣವಾದ ಸ್ಥಿತಿ ಹದಿವಯ ದಲ್ಲೇ ಕಂಡುಬರುತ್ತದೆ.

ಮಾಸಿಕ ಸ್ರಾವದ ರಕ್ತ ಸಲೀಸಾಗಿ ಹರಿದು ಹೋಗಲು ಸಾಮಾನ್ಯವಾಗಿ ಎಲ್ಲ ಹುಡುಗಿ ಯರಲ್ಲೂ ಅವಕಾಶ ಇರುತ್ತದೆ. ಬೆಳವಣಿಗೆಯ ಹಾಗೂ ಮಾರ್ಪಾಡಿನ ಒಂದು ಹಂತವಾಗಿ ಯೋನಿಯ ಕೆಳ ಅಂಚಿನಲ್ಲಿ ತಮಟೆಯಂತಹ, ತೆಳುವಾದ ಒಂದು ಪರೆ ಇರುತ್ತದೆ. ಇದಕ್ಕೆ ಯೋನಿಪರೆ ಎಂದು ಹೆಸರು. ಈ ಯೋನಿಪರೆ ಯಲ್ಲಿ ರಕ್ತ ಹರಿಯಲು ಒಂದು ತೂತು ಇದ್ದೇ ಇರುತ್ತದೆ. ಕೆಲವು ಹುಡುಗಿಯರಲ್ಲಿ ಈ ತೆರ ನಾದ ತೂತು ಇರದೆ, ಯೋನಿಪರೆ ತುಸು ದಪ್ಪನಾಗಿರುವುದುಂಟು (ಚಿತ್ರ ೧). ಹೀಗಾದಾಗ ರಕ್ತ ಹೊರ ಬರುವುದೆಲ್ಲಿ? ಈ ಅಂಶ ಗಮನಕ್ಕೆ ಬರುವುದು ಕೆಲವು ತಿಂಗಳು ಅಥವಾ ವರ್ಷ ಗಳಾದ ನಂತರವೇ. ಹುಡುಗಿ ಋತುಮತಿಯಾ ಗುವ ಸಾಮಾನ್ಯ ವಯಸ್ಸೆಂದರೆ ೧೨ ರಿಂದ ೧೪ ವರ್ಷಗಳಲ್ಲಿ. ಹಾಗಾಗಿದ್ದಾಳೆಂದು ತಿಳಿಯುವುದು ಮೊದಲ ಋತುಸ್ರಾವ ಆದ ಮೇಲೆ. ಒಂದು ವೇಳೆ ಹುಡುಗಿಯೊಬ್ಬಳು ೧೫, ೧೬ ಅಥವಾ ೧೭ ವರ್ಷಗಳು ತುಂಬಿದರೂ ಋತುಮತಿಯಾಗದಿದ್ದರೆ ಹೆತ್ತವರಿಗೆ ಯೋಚನೆ. ಹೀಗಾಗಲು ದೈಹಿಕ ಕಾರಣಗಳು ಅನೇಕವಿದೆಯಾದರೂ ರಂಧ್ರವೂ ಇರದೆ ದಪ್ಪವಾಗಿರುವ ಯೋನಿ ಪರೆ ಮುಖ್ಯ ವಾದುದು.

ಹುಡುಗಿಯೂ ಆರೋಗ್ಯವಾಗಿದ್ದು ೧೪ ವರ್ಷ ಗಳು ತುಂಬಿದುವೆಂದರೆ ಆಕೆ ಇತರರಂತೆ ಋತು ಮತಿಯಾಗುತ್ತಾಳೆ. ರಕ್ತಸ್ರಾವ ಮಾತ್ರ ತೋರ್ಪ ಡುವುದಿಲ್ಲ ಅಷ್ಟೆ. ಹರೆಯದ ಇತರ ಬದ ಲಾವಣೆಗಳಾದ ಮೈ ಕೊಬ್ಬು ತುಂಬಿಕೊಳ್ಳುವಿಕೆ, ಮೊಲೆಗಳು ದಪ್ಪವಾಗುವುದು ಎಲ್ಲವೂ ಕಂಡು ಬರುತ್ತವೆ. ಹೀಗಿದ್ದರೂ ತಾನು ಮೈ-ನೆರೆದವ ಳೆಂಬ ಪ್ರಜ್ಞೆ ಹುಡುಗಿಗೆ ಬಂದಿಲ್ಲದೆ ಇರಬಹುದು. ಏಕೆಂದರೆ ಇದರ ಗುರುತಾದ ಮುಟ್ಟಿನ ಸ್ರಾವ ಆಗುತ್ತಿದ್ದರೂ ಬಟ್ಟೆ ಕಲೆಯಾಗುವ ಮೂಲಕ ತೋರುವುದಿಲ್ಲ.

ಹಾಗಾದರೆ ತಿಂಗಳು ತಿಂಗಳು ಹರಿದ ರಕ್ತ ಏನಾಗುತ್ತದೆ ? ಅದು ಗೋಡೆಯಂತೆ ದಪ್ಪ ನಾಗಿರುವ ಯೋನಿ ಪರೆಯಿಂದಾಗಿ ಯೋನಿನಾಳ ಒಂದು ಚೀಲವಾಗುತ್ತದೆ: ಪ್ರತಿ ತಿಂಗಳು ಸ್ರವಿಸಲ್ಪಟ್ಟ ರಕ್ತ ಚೀಲದಲ್ಲಿ ಶೇಖರವಾಗುತ್ತಾ ಹೋಗುತ್ತದೆ. ಒಮ್ಮೆ ಆದ ಮುಟ್ಟಿನಲ್ಲಿ ಸರಾ ಸರಿ ೫೦ ಮಿಲಿ ಲೀಟರಿನಷ್ಟು ರಕ್ತ ಬರುತ್ತದೆ.

ಹೀಗೆ ಬಂದು ಮಲೆತ ರಕ್ತದಲ್ಲಿರುವ ದ್ರವಾಂಶವೆಲ್ಲ ಯೋನಿಯ ಒಳಪ್ಪೈಯಿಂದ ಪುನಃ ದೇಹದೊಳಕ್ಕೆ ಹೀರಲ್ಪಡುತ್ತದೆ, ರಕ್ತ ಸ್ನಿಗ್ಧವಾಗುತ್ತದೆ. ತನ್ನ ಶಕ್ತಿ ಮೀರಿ ತುಂಬಿಕೊಂಡ ಯೋನಿ ಹಿಗ್ಗಲು ಶುರುವಾಗುತ್ತದೆ. ಇಲ್ಲಿಯವರೆಗೆ ತನ್ನ ದೈನಂದಿನ ಚಟುವಟಿಕೆಗಳಲ್ಲಿ ಯಾವ ಕೊರತೆಗಳನ್ನು ಕಾಣದಿದ್ದ ಹುಡುಗಿಗೆ ತೊಂದರೆಗಳು ಪ್ರಾರಂಭವಾಗುತ್ತವೆ. ಚಿತ್ರ ೨ನ್ನು ಗಮನಿಸಿ. ಯೋನಿಯ ಮುಂದುಗಡೆ ಮೂತ್ರಕೋಶ ಇದೆ ಮತ್ತು ಹಿಂದುಗಡೆ ನೆಟ್ಟಗರುಳು ಇದೆ.

ರಕ್ತದ ಶೇಖರಣೆ ಹೆಚ್ಚಾದಂತೆಲ್ಲ ಹಿಗ್ಗಿದ ಯೋನಿ ಹಿಂದುಗಡೆ ಇರುವ ನೆಟ್ಟಗರುಳನ್ನು ಅಮುಕುತ್ತದೆ. ಆದ್ದರಿಂದ ಹುಡುಗಿಗೆ ಮಲಬದ್ಧತೆ ಕಾಣಿಸಿಕೊಳ್ಳುತ್ತದೆ. ಮುಂದುಗಡೆ ಇರುವ ಮೂತ್ರಕೋಶದ ಹೊರ ದ್ವಾರವಾದ ಮೂತ್ರನಾಳ ಅಮುಕಲ್ಪಟ್ಟು ಮೂತ್ರ ವಿಸರ್ಜನೆ ತಡವಾಗಿ, ಯಾತನೆಯಿಂದ ಆಗುತ್ತದೆ. ಜೊತೆಗೆ ಕೆಳಹೊಟ್ಟೆಯಲ್ಲಿ ನೋವು ಒಂದು ತೆರನಾದ ಅವರ್ಣನೀಯ ಮುಜುಗರ, ಬೇಸರ, ತಲೆ ನೋವು ಕಾಣಿಸಿಕೊಳ್ಳುತ್ತದೆ. ಹುಡುಗಿಯಲ್ಲಿ ಆ ವಯಸ್ಸಿಗೆ ಸಹಜವಾದ ಬೆಳವಣಿಗೆ ಇರುವುದಿಲ್ಲ. ಈ ಚಿಹ್ನೆಗಳ ಜೊತೆಗೆ ಮುಟ್ಟು ಆಗದಿದ್ದುದು ಕಂಡುಬಂದರೆ (ಸಾಮಾನ್ಯವಾಗಿ) ತಪ್ಪದೆ ವೈದ್ಯರನ್ನು ಕಾಣಿರಿ.

ಹುಡುಗಿ ಅಥವಾ ಆಕೆಯನ್ನು ವೈದ್ಯರೆಡೆಗೆ ಒಯ್ದ ತಾಯಿ ನೀಡುವ ಮಾಹಿತಿಯಿಂದ ವೈದ್ಯ ಪರಿಸ್ಥಿತಿಯನ್ನು ಗ್ರಹಿಸಿ ಚಿಕಿತ್ಸೆ ನೀಡುತ್ತಾನೆ. ಈ ಯೋನಿಪರೆಯನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆಯುವುದರ ಮೂಲಕ ಮಲೆತಿದ್ದ ರಕ್ತವೆಲ್ಲ ಖಾಲಿಯಾಗಿ ಮುಂದಿನ ಮುಟ್ಟು ಮಾಮೂಲಾಗಿ ಆಗಲು ಅವಕಾಶ ಆಗುತ್ತದೆ. ಆ ಮೂಲಕ ಇತರ ಹುಡುಗಿಯರಂತೆ ಇವಳೂ ಲಗುಬಗೆಯಿಂದ ಇರಬಹುದು. ತನ್ನ ಲೈಂಗಿಕ ಜೀವನಕ್ಕೆ ಯಾವ ಕೊರತೆಯೂ ಇಲ್ಲದಂತೆ

ಯೋನಿಯೊಳಗೆ ಶೇಖರಗೊಳ್ಳುತ್ತಿರುವ ಋತುಸ್ರಾವದ ರಕ್ತ.

೧. ಗುಂಜೆಲು ಕೂಡೇಗು


೨. ಮೂತ್ರಕೋಶ

೩. ರಕ್ತ ತುಂಬಿಕೊಂಡು ಉಬ್ಬಿದ ಯೋನಿಯಿಂದ ಮೇಲೆ ತಳ್ಳಲ್ಪಟ್ಟಿರುವ ಗರ್ಭಕೋಶ.

೪. ದಪ್ಪನಾದ ಯೋನಿಪರೆಯಿಂದಾಗಿ ರಕ್ತ ತುಂಬಿಕೊಂಡಿರುವ ಯೋನಿ.

೫. ನೆಟ್ಟಗರುಳು.

೬. ಪಾವನಿ ಮೂಳೆ



ಮುಂದೆ ಮದುವೆಯಾಗಿ ಮಮತೆಯ ಮಾತೆಯಾಗಬಹುದು. ಹದಿನಾರು ಹರಿದು ೧೭ ಅಥವಾ ೧೮ ವರ್ಷಗಳೂ ದಾಟಲು ಬಿಡದೆ ಮಗಳು ಋತುಸ್ರಾವದ ಗತಿಯನ್ನು ತೋರ್ಪಡಿಸದಿದ್ದರೆ ವೈದ್ಯರ ಹತ್ತಿರ ಹೋಗಬೇಕೆಂದು ಸದಾ ನೆನಪಿರಲಿ. ಯಾವುದೇ ಕಾರಣದಿಂದ ಉದಾಸೀನ ಮಾಡಿದಲ್ಲಿ ಅಪಾಯ. ಏಕೆಂದರೆ, ಕೂಡಿಕೊಳ್ಳುತ್ತಾ ಹೋದ ರಕ್ತ ಗರ್ಭಕೋಶ ಮತ್ತು ಅಂಡನಾಳಗಳಲ್ಲಿ ಮಲೆತು ಅವನ್ನೂ ಹಿಗ್ಗಿಸಬಹುದು. ಇಲ್ಲವೆ ರಕ್ತವಿದ್ದ ಕಡೆ ರೋಗಕಾರಕ ಸೂಕ್ಷ್ಮಾಣುಗಳು ಬಹು ಬೇಗ ಬೆಳೆದು ಇಡೀ ರಕ್ತ ಕೀವಾಗುವಂತೆಮಾಡಿ ಮಾರಕ ಸ್ಥಿತಿಗೆ ಎಡೆಮಾಡಿ ಕೊಡಬಹುದು.

ಯೋನಿಪರೆಯ ಬಗ್ಗೆ ತಪ್ಪು ಕಲ್ಪನೆಗಳು ಸಲ್ಲ. ಇದು ಅತ್ಯಂತ ತೆಳ್ಳಗಿದ್ದು ಹುಡುಗಿ ಚಿಕ್ಕವಳಿದ್ದಾಗಲೇ ಓಡಾಟದಿಂದ ಹರಿದು ಹೋಗಿರಬಹುದು. ಹರೆಯದ ಯುವತಿಯರು ಆಟಗಾರ್ತಿಯರಾಗಿದ್ದರೆ ಅವರಲ್ಲೂ ಅದು ಹರಿದುಹೋಗಿರುವ ಸಾಧ್ಯತೆ ಇದೆ. ಮತ್ತು ಕೆಲವು ಮಹಿಳೆಯರು ತಮ್ಮ ಉದ್ಯೋಗಕ್ಕೆ ಅಡ್ಡಿ ಬರದಂತೆ ೨–೩ ದಿನಗಳು ಆಗುವ ಸ್ರಾವವನ್ನು ಹೀರಲು ಯೋನಿಯೊಳಕ್ಕೆ ಗಿಡುಗು ಬಿಡದೆ (ಟ್ಯಾಂಪಾನ್) ಇಡುವುದರಿಂದ ಯೋನಿಪರೆ ಹರಿದಿರಬಹುದು. ಆದ್ದರಿಂದ ಯೋನಿಪರೆ ಪ್ರಥಮ ರಾತ್ರಿಯಲ್ಲಿ ಮದುವೆಯಾದ ಲೈಂಗಿಕ ಸಂಭೋಗದ ಸಮಯದಲ್ಲಿ ಹರಿದದ್ದು ಅರಿವಾಗದಿದ್ದರೆ ಆಕೆ ಕನ್ಯತ್ವವನ್ನು ಕಳೆದುಕೊಂಡಿದ್ದಾಳೆ ಅಥವಾ ಪಾತಿವ್ರತ್ಯಹೀನಳಾಗಿದ್ದಾಳೆ ಎನ್ನುವುದು ತಪ್ಪು. ಯೋನಿಪರೆ ಇಲ್ಲದಿರಬಹುದಾದ ಸಾಧ್ಯತೆಗಳನ್ನು ಅರಿತಿರಬೇಕು. ಒಂದು ವೇಳೆ ಮೊದಲ ಸಂಭೋಗದಲ್ಲಿ ಯೋನಿಪರೆ ನೋವು ಕೊಡುವಷ್ಟು ಮಟ್ಟಕ್ಕೆ ಇದ್ದರೆ ನಾಚದೆ ವೈದ್ಯರನ್ನು ಕಂಡು ಚಿಕಿತ್ಸೆ ಪಡೆಯಬೇಕು. ತೆಳುವಾಗಿರುವ ಯೋನಿಪರೆ ಮೊದಲ ಸಂಭೋಗದಲ್ಲಿ ಹರಿದುಕೊಳ್ಳುತ್ತದೆ, ತುಸು ರಕ್ತ ಅಥವಾ ನೋವು ಕಾಣಿಸಿಕೊಳ್ಳುವುದು ಇಂತಹ ಸಂದರ್ಭದಲ್ಲಿ ಅಸಹಜವೇನಲ್ಲ. ✡

ಸುಲಭೋಪಾಯ

"ನಾವು ವಿವಾಹವಾಗಿ ನಾಳೆಗೆ ಇಪ್ಪತ್ತೈದು ವರ್ಷಗಳಾಗುತ್ತವೆ. ಬೆಳ್ಳಿಹಬ್ಬವನ್ನು ಹೇಗೆ ಆಚರಿಸಬೇಕೆನ್ನುತ್ತೀರಾ ?"

"ಅಂ ? ಹೌದು. ಅಂದಹಾಗೆ ಎರಡು ನಿಮಿಷ ಮೌನವಾಚರಿಸಿದರೆ ಹೇಗಾದೀತು ?"

* * *

ರೂಪಾಯಿಯನ್ನು ಉಳಿಸಬೇಕೆನ್ನುವಿರಾ? ಹಾಗಾದರೆ ಕೈಗೆ ಬಂದ ಕೂಡಲೆ ಅದನ್ನು ಖರ್ಚು ಮಾಡಿಬಿಡಿ. ಅತಿಪ್ರಸರಣದ ಈ ದಿನಗಳಲ್ಲಿ ಒಂದು ರೂಪಾಯಿಯನ್ನು ಒಂದು ವರ್ಷದವರೆಗೆ ಕೂಡಿಡುವುದೂ ಒಂದೆ, ಅಂದಿನಿಂದ ಹದಿನೆಂಟು ಪೈಸೆಗಳನ್ನು ಕಳೆದುಕೊಳ್ಳುವುದೂ ಒಂದೆ. —ಎಸ್ ಡಿ.ಎಂ.

* * *

'ಒಂದುವೇಳೆ ಈ ಜಗತ್ತಿನಲ್ಲಿ ಹೆಂಗಸರು ಇರದೇ ಹೋಗಿದ್ದರೆ ಗಂಡಸರ ಸ್ಥಿತಿ ಏನಾಗುತ್ತಿತ್ತು?' ಎಂದು ಯಾರೋ ಒಬ್ಬರು ಮಾರ್ಕ್ ಟ್ವೇನನನ್ನು ಪ್ರಶ್ನಿಸಿದಾಗ ಆತ, 'ಏನಾಗುತ್ತಿತ್ತು ? ಏನೂ ಆಗುತ್ತಿರಲಿಲ್ಲ. ಆಗ ಗಂಡಸರು ಇದ್ದರೆ ತಾನೆ ಏನಾದರೂ ಆಗುವುದು?' ಎಂದು ಉತ್ತರಿಸಿದನಂತೆ.



ತೆರೆಯ ಮರೆಯಲ್ಲಿ

ಕೆ. ಟಿ. ಕೃಷ್ಣಕಾಂತ

ಉದ್ಘೋಷಕ:

ಆಕಾಶವಾಣಿ. (ಸಮುದ್ರದ ಮೊರೆತಕ್ಕೆ ಸರಿ ಹೊಂದುವ ತುಂಬು ಧ್ವನಿಯಲ್ಲಿ ಕ್ಷಣ ಸಮುದ್ರ ತೀರಕ್ಕೆ ಅಪ್ಪಳಿಸಿ ಜೀವಂತವಾಗುತ್ತದೆ. ಜೊತೆ ಜೊತೆಯಲ್ಲಿಯೇ ಮಕ್ಕಳ ಕಿಲಕಿಲ ನಗು. ಈ ಹಿನ್ನೆಲೆಯಲ್ಲಿ ನಿರೂಪಣೆ ಆರಂಭವಾಗುತ್ತದೆ.)

ನಿರೂಪಕಿ:

ನಾವೆಲ್ಲ ಕಡಲ ತಡಿಯ ಮಕ್ಕಳು. ಭೂಮಿಯ ಮೇಲ್ಮೈಯ ಬಹು ಭಾಗವನ್ನು ತುಂಬಿರುವ ಸಾಗರದಿಂದ ಉಪ್ಪನ್ನು ಪಡೆದಿದ್ದೇವೆ, ತೆರೆಗಳ ಮೇಲೆ ತೇಲಿ ದೂರ ದೇಶಗಳಿಗೆ ಹೋಗಿದ್ದೇವೆ, ಮೀನು ಹಿಡಿದ್ದೇವೆ.

(ಮಕ್ಕಳ ಮಾತು: ಏ ಕಿಟ್ಟಿ ಇಲ್ಲಿ ನೋಡೋ, ಕಪ್ಪೆ ಚಿಪ್ಪು–ಏನದು ನೋಡು... ಮಕ್ಕಳ ಮಾತು ಹಿನ್ನೆಲೆಯಾಗಿ ನಿರೂಪಣೆ ಮುಂದುವರೆಯುತ್ತದೆ.)

ನಿರೂಪಕಿ:

ತೀರದಲ್ಲಿ ಅಲೆಗಳ ಅಬ್ಬರ ನೋಡುತ್ತಾ ಅನಂತ ಎನಿಸುವ ಅಪಾರ ಜಲರಾಶಿ ಎದುರು ಅದರ ಮಹತ್ತು ಬೃಹತ್ತುಗಳ ಪ್ರಭಾವದಲ್ಲಿ ಬಂದಿಗಳಾಗಿ ಕುಳಿತು ಕೊನೆಗೆ ಧನ್ಯ ಮನೋಭಾವದಿಂದ ಹಿಂದಿರುಗಿದ್ದೇವೆ – ಕಪ್ಪೆ ಚಿಪ್ಪು ಹೊತ್ತು.

(ಮತ್ತೆ ಸಮುದ್ರದ ಮೊರೆತದ ಧ್ವನಿ)

ನಿರೂಪಕಿ:

ಸಮುದ್ರವನ್ನು ಪ್ರೀತಿಸದ ಕವಿಗಳು ವಿರಳ ಅನಿಸುತ್ತದೆ. ಅವರು ತೆರೆಗಳ ರುದ್ರ ರಮಣೀಯತೆಯನ್ನು ಕಣ್ಣಲ್ಲಿ ಕಂಡಿದ್ದಾರೆ, ಬಣ್ಣದಲ್ಲಿ ಬಣ್ಣಿಸಿದ್ದಾರೆ, (ಸಮುದ್ರದ ಅಬ್ಬರವನ್ನು ಪ್ರತಿಬಿಂಬಿಸುವ ರಿಮ್ಸ್ಕಿ ಕೊರ್ಸಕೋವ್ ಅವರ ಸಿನ್ ಬಾದ್ ಮತ್ತು ಸಮುದ್ರ ಎಂಬ ಸಂಗೀತ ಸಂಯೋಜನೆಯ ಒಂದು ಭಾಗ ಕೇಳಿ ಬರುತ್ತದೆ. ಈ ಸಂಗೀತದ ಹಿನ್ನೆಲೆಯಲ್ಲಿ ನಿರೂಪಣೆ ಮುಂದುವರಿಯುತ್ತದೆ.)

ನಿರೂಪಕ:

ಸಂಗೀತದಲ್ಲಿ ಸೆರೆ ಹಿಡಿದಿದ್ದಾರೆ.

(ಸಂಗೀತ ಮುಂದುವರೆಯುತ್ತದೆ. ಇದಕ್ಕೆ ಪೂರಕವಾಗಿ ತೆರೆಗಳ ಅಬ್ಬರ ಸೇರಿ ಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಹೆಸರಿನ ಉದ್ಘೋಷಣ)

ಉದ್ಘೋಷಕ:

ರೂಪಕ "ತೆರೆಯ ಮರೆಯಲ್ಲಿ" (ಸಂಗೀತ ಮುಂದುವರೆಯುತ್ತದೆ, ಅಲೆಗಳ ಅಬ್ಬರ ದೊಂದಿಗೆ. ಇದು ನಿಧಾನವಾಗಿ ಕರಗು ಆಗುತ್ತದೆ.)

(ಇಲ್ಲಿಯವರೆಗೆ ಬಂದಿರುವ ನಿರೂಪಣೆಯ ಉದ್ದೇಶ. ಸಮುದ್ರದಿಂದ ನಾವು ಭಾವನಾತ್ಮಕ ಆನಂದವನ್ನು ಪಡೆಯುವುದೇ ಹೆಚ್ಚಾಗಿ ಅದರಲ್ಲಿರುವ ಅಪಾರ ಸಂಪತ್ತಿನ ಉಪಯೋಗ [illegible] ಎಂದು [illegible] ಭೂಮಿಯ [illegible] ಭಾಗವನ್ನು [illegible] ಸಮುದ್ರ ಆಕ್ರಮಿಸಿ [illegible] ಭೂಭಾಗದಲ್ಲಿ [illegible] [illegible] ಅಲ್ಲಿಂದ [illegible] ಆದರೆ [illegible] ಸಂಶೋಧನೆ [illegible] ದೃಷ್ಟಿಯಿಂದ [illegible] ಯೋಗವನ್ನು [illegible] [illegible] ಸಾಧ್ಯತೆಗಳನ್ನು [illegible] [illegible]

[illegible] ನಿರೂಪಕಿ ಹೇಳುವ ವಾಕ್ಯಗಳನ್ನು ರಚಿಸಲಾಗಿದೆ. ಸಮುದ್ರದ ಸಾಧ್ಯತೆಗಳು ಇನ್ನು ಮುಂದೆ ತೆರೆದು ಕೊಳ್ಳುತ್ತವೆ ಎಂದು ಸೂಚಿಸುವುದಕ್ಕಾಗಿ ರೂಪಕದ ಹೆಸರಿನ ಉದ್ಘೋಷಣೆಯನ್ನು ಆರಂಭದ ನಿರೂಪಣೆಯ ಕೊನೆಯಲ್ಲಿ ಕೊಡಲಾಗಿದೆ. ಸಮುದ್ರವನ್ನು ನೋಡುವ ದೃಷ್ಟಿಯು ಇಲ್ಲಿಂದ ಬೇರೆ ಆಗುವುದರಿಂದ ಮುಂದಿನ ನಿರೂಪಣೆ ಬೇರೆಯೊಂದು ರೂಪ ಧ್ವನಿಯಲ್ಲಿ ಬರುತ್ತದೆ. ಸಮುದ್ರದ ಸಂಪನ್ಮೂಲಗಳ ಮಹತ್ವವನ್ನು ಸೂಚಿಸುವುದಕ್ಕಾಗಿ ನಾವು ಎದುರಿಸುತ್ತಿರುವ ಸಮಸ್ಯೆಗಳ ಪರಿಚಯ ಆರಂಭ ಆಗುತ್ತದೆ.)

ನಿರೂಪಕ:

ಭೂಮಿಯ ವಯಸ್ಸು ಸುಮಾರು ೫೦೦ ಕೋಟಿ ವರ್ಷಗಳು ಅಂತ ಒಂದು ಅಂದಾಜು. ಮನುಷ್ಯ ಇಲ್ಲಿ ಬಂದದ್ದಂತೂ ಹೊಸ್ತೆ ಹೊಸ್ತೆ. ಎಲ್ಲ ಜೀವಿಗಳಿಗಿಂತ ಕೊನೆಯಲ್ಲಿ – ಒಂದು ಹತ್ತು ಲಕ್ಷ ವರ್ಷಗಳ ಕೆಳಗೆ. [illegible] ಆಗಿ ಅನಂತರ ನಾಗರಿಕ ಜೀವನವನ್ನು [illegible] ಆರಂಭ [illegible] ಸಾವಿರ ವರ್ಷಗಳ [illegible].

([illegible] ಕೇಳಿ ಬರುತ್ತದೆ. [illegible])

ನಿರೂಪಕ:

[illegible]

ಮೊದಲ ಬಾರಿ ಒಬ್ಬರು, ಎರಡನೆ ಬಾರಿ ಇಬ್ಬರು, ಮೂರನೆ ಬಾರಿ ಮೂವರು ಬೇಕು ಎಂದು ಹೇಳುತ್ತಾರೆ)

ನಿರೂಪಕ:

ಆದರೆ ಖನಿಜಗಳು, ತೈಲ, ಇತರ ಎಷ್ಟೋ ಸಂಪನ್ಮೂಲಗಳು ಸಾಲದೆ ಹೋಗ್ತಾ ಇವೆ: ಅಥವಾ

('ಕರಗುತ್ತಿವೆ' ಎಂಬ ಪದ ಮೂರು ಬಾರಿ ಬರುತ್ತದೆ. ಸಂಪನ್ಮೂಲಗಳು ನಶಿಸಿ ಹೋಗುತ್ತಿವೆ ಎಂಬುದನ್ನು ಸೂಚಿಸಲು ಧ್ವನಿ ಪ್ರತಿಬಾರಿಯೂ ಕಡಿಮೆ ಆಗುತ್ತಹೋಗುತ್ತದೆ.) ಇಷ್ಟೇ ಅಲ್ಲ, (ಮಗು ಅಳುವ ಸದ್ದು. ಅನಂತರ ವಿವಿಧ ಧ್ವನಿಗಳಲ್ಲಿ ಒಂದು ಘೋಷಣೆ– ಒಬ್ಬನೇ ಇದ್ದ ಅಂದು, ನಾನೂರು ಕೋಟಿ ಇಂದು – ಸಾವಿರ ಕೋಟಿ ಮುಂದು, ನೆನಪಿರಲಿ ನಮಗಿದು, ಭೂಮಿ ಅಗಲಿ ಅಷ್ಟೇ ಎಂದೆಂದೂ ಭೂಮಿ ಅಗಲ ಅಷ್ಟೇ ಎಂದೆಂದೂ)

(ಇದು ಕಡಿಮೆ ಆಗುತ್ತಿದ್ದಂತೆಯೇ ಸ್ವಲ್ಪವೇ ಪ್ರತಿಧ್ವನಿ ಬರುವಂತೆ ಧ್ವನಿ ಮುದ್ರಿಸಿರುವ ಅಧಿಕಾರಯುತವಾಣಿ ಕೇಳಿ ಬರುತ್ತದೆ.)

ಧ್ವನಿ:

ಹದಿನಂಟನೆಯ ಶತಮಾನದಲ್ಲಿ ಉದ್ಯಮ ಕ್ರಾಂತಿಯ ನಂತರ ವೈಜ್ಞಾನಿಕ ಸಂಶೋಧನೆ ಅವಿಷ್ಕಾರಗಳಿಂದ ಬಲವಾಗಿ ಬೆಳೆದ ಆ ನಾಗರಿಕತೆ ಅನಂತರ ಸಂಪನ್ಮೂಲಗಳ ತೀವ್ರ ಕೊರತೆ ಹಾಗೂ ಜನಸಂಖ್ಯಾ ಬಾಹುಳ್ಯದಿಂದಾಗಿ ಇಪ್ಪತ್ತೊಂದನೇ ಶತಮಾನದಲ್ಲಿ ಅಳಿದುಹೋಯಿತು.

ನಿರೂಪಕ:

ಮುಂದಿನ ಶತಮಾನದ ಚಿತ್ರಕಾರರು ನಮ್ಮ ಕಾಲವನ್ನು ಕುರಿತು ಹೀಗೇ ಬರೀತಾರೆ ಅನ್ನೋದು ಕೆಲವರ ಅಭಿಪ್ರಾಯ. ಹಾಗಾದರೆ ಇನ್ನೇನು ಗತಿ? ಬೆಳೆಯುವುದು ಇರಲಿ ಉಳಿಯುವುದೇ ಕಷ್ಟ ಆಗ್ತಿದೆಯಲ್ಲ. ಈ ಅಕ್ಷಯ ಹಸಿವನ್ನು ತಣಿಸೋ ಅಕ್ಷಯ ಪಾತ್ರೆಗಳೆಲ್ಲಿ? ಆಕಾಶಕ್ಕೆ ಕೈ ಎತ್ತುತ್ತೀರೇನು? ಅಲ್ಲಿ ಯಾರಾದರೂ ಇದ್ದಿದ್ದರೆ ಅವರೂ ಕೆಳಕ್ಕೆ ಕೈ ತೋರಿಸ್ತಾ ಇದ್ದರು–ಭೂಮಿ ಮೇಲಿರೋ ಉಪ್ಪು ನೀರಿನ ರಾಕ್ಷಸ ಹೊಂಡಗಳ ಕಡೆಗೆ, ಹೆದರಬೇಡಿ; ಸಮುದ್ರಕ್ಕೆ ಹೋಗಿ ಬೀಳಬೇಕು ಅಂತಲ್ಲ; ಸಮುದ್ರವನ್ನು ಆಶ್ರಯಿಸಿ ಅಂತ. ಯಾಕೆಂದರೆ... (ಕೊನೆಯ ಪದಗಳನ್ನು ಹೇಳುತ್ತಿರುವಂತೆಯೇ ಬಿರುಗಾಳಿ ಅಲೆಗಳ ಮೊರೆತ ಚೆಂಡೆ ಬಡಿಯುವ ಸದ್ದು ಒಟ್ಟಿಗೆ ಕೇಳಿಬರುತ್ತದೆ. ಈ ಹಿನ್ನೆಲೆಯಲ್ಲಿ ನಿರೂಪಣೆ)

ನಿರೂಪಕ:

ಅವರು ತೆಗೆದುಕೊಂಡು ಹೋದದ್ದೂ ಅಲ್ಲಿಂದ ಅಂತ್ಲೇ ಅಲ್ಲವೆ ಕತೆ ಇರೋದು?

(ಸಮುದ್ರ ಮಂಥನ ಕಾಲದಲ್ಲಿ ಸಿಕ್ಕಿತೆಂದು ಹೇಳುವ ವಸ್ತುಗಳನ್ನು ಕುರಿತ ಯಕ್ಷಗಾನದ ಹಾಡು ಆರಂಭವಾಗುತ್ತದೆ.) ಜಲಧಿಯನು ಕಡೆದಾಗ ಕಲ್ಪತರು, ಶಶಿ, ಲಕ್ಷ್ಮಿ ಒಡನೆ ಕೌಸ್ತುಭ ರತ್ನ ಪಾರಿಜಾತಾದಿ ಸಡಗರದಿ ಮೇಲೆದ್ದು [illegible] ಪಡೆಯಲು ಆ ಕ್ಷಣ ಮುಂದೆ ಬಂದವರೆಲ್ಲ.

(ಚೆಂಡೆಯ ಸದ್ದು ಸಮುದ್ರ ಮಂಥನವನ್ನು ಸೂಚಿಸುವ ರೀತಿಯಲ್ಲಿ ಮುಂದುವರೆಯುತ್ತಾ ಕಡಿಮೆ ಆಗುತ್ತದೆ.)

(ಇಲ್ಲಿಂದ ಮುಂದಕ್ಕೆ ತಜ್ಞರ ಅಭಿಪ್ರಾಯಗಳು ಆರಂಭ ಆಗುತ್ತವೆ.)

ತಜ್ಞ:

ಸಮುದ್ರ ಒಂದು ಕೌತುಕಮಯ ಜಗತ್ತು. ಅದರ ಸರಾಸರಿ ಆಳ ಹನ್ನೆರಡು ಸಾವಿರ ಅಡಿಗಳು. ಕೆಲವು ಕಡೆ ಮೂವತ್ತೇಳು ಸಾವಿರ ಅಡಿಗಳಿಗೂ ಹೆಚ್ಚು ಆಳದ ಪ್ರದೇಶಗಳೂ ಉಂಟು. ಅಂದರೆ, ಹಿಮಾಲಯ ಪರ್ವತಶ್ರೇಣಿಯನ್ನು ಎತ್ತಿಕೊಂಡು ಹೋಗಿ ಸುಲಭವಾಗಿ ಅಡಗಿಸಿ ಇಡಬಹುದು.

ನಿರೂಪಕ:

ಮಂಗಳೂರು ಫಿಶರೀಸ್ ಕಾಲೇಜಿನ ಶ್ರೀ ಎಸ್. ಬೆನಕಪ್ಪ.

ತಜ್ಞ:

೬೦೦ ಅಡಿಗಳ ಕೆಳಗೆ ಸಂಪೂರ್ಣ ಕತ್ತಲು ಆವರಿಸಿದೆ. ಸಮುದ್ರದ ತಳ ಸಮತಲವಾಗಿರದೆ ಏರಿಳಿತದಿಂದ ಕೂಡಿದೆ. ಸಾವಿರಾರು ಮೈಲು ಉದ್ದದ ಪರ್ವತ ಶ್ರೇಣಿಗಳಲ್ಲದೆ ಕಂದಕಗಳು, ಕಣಿವೆಗಳು ಜ್ವಾಲಾಮುಖಿ ಮತ್ತು ಕಮರಿಗಳು ಕಂಡು ಬರುತ್ತವೆ. ಸಮುದ್ರದಲ್ಲಿನ ಸಸ್ಯ ಮತ್ತು ಪ್ರಾಣಿಗಳು ನಮ್ಮ ಊಹೆಗೂ ನಿಲುಕ ದಷ್ಟು ವಿಸ್ಮಯಕರವಾಗಿವೆ. ಲಕ್ಷಾಂತರ ವಿಧಗಳಿಗೆ ಸೇರಿದ ಕೋಟ್ಯಂತರ ಜೀವಿ ಗಳು ಇವೆ. ಏಳು ಕೋಟಿ ವರ್ಷಗಳ ಹಿಂದೆಯೇ ನಶಿಸಿಹೋಗಿದೆ ಎಂದು ನಂಬ ಲಾಗಿದ್ದ 'ಸೀಲೋಕ್ಯಾಂತ್' ಎಂಬ ಮೀನನ್ನು ೧೯೩೮ರಲ್ಲಿ ಹಿಡಿಯಲಾಯಿತು. ಇಷ್ಟೇ ಅಲ್ಲದೆ ಭೂಮಿಯ ಜೀವವಿಕಾಸದ ಬಗೆಗೆ ಸ್ಪಷ್ಟ ಸುಳಿವು ಕೊಡಬಲ್ಲ ಎಷ್ಟೋ ವಸ್ತುಗಳು ಸಮುದ್ರದಲ್ಲಿ ಅಡಗಿವೆ.

ನಿರೂಪಕ:

ಸಮುದ್ರವನ್ನು ವೈಜ್ಞಾನಿಕವಾಗಿ ಅರ್ಥ ಮಾಡಿಕೊಳ್ಳೋ ಪ್ರಯತ್ನಗಳು ಎರಡು ಸಾವಿರ ವರ್ಷಗಳ ಹಿಂದೇನೇ ಪುರಾತನ ಗ್ರೀಕರಿಂದ ನಡೆದವು. ಅನಂತರ ಸಮು ದ್ರದ ಅಲ್ಪ ಸ್ವಲ್ಪ ಉಪಯೋಗ ಪಡೆದೆ ವಾದರೂ ಅನ್ವೇಷಣೆ ನಡೆದದ್ದು ಕಡಿಮೆ. ಸಮುದ್ರದ ಆಳವನ್ನು ಕಂಡುಹಿಡಿಯುವ ಮೊದಲ ಯತ್ನ ನಡೆದದ್ದು ನಾಲ್ಕುನೂರ ಐವತ್ತು ವರ್ಷಗಳ ಕೆಳಗೆ. ಆ ನಂತರದ ಕಾಲದಲ್ಲಿ ಆಳವನ್ನೇನೂ ಅಳೆದೆವು, ಆದರೆ ಆಳ ಅರಿಯಲಿಲ್ಲ. ತಳ ಮುಟ್ಟಿ ದೆವು, ತಳ ಸೋಸಲಿಲ್ಲ. ಬಾನಂಗಳಕ್ಕೆ ಕೈಚಾಚಿ ಮನೆ ಅಂಗಳವನ್ನೇ ಮರೆತು ಬಿಟ್ಟಿದ್ದೆವು. ನಮ್ಮನ್ನು ಉಪಯೋಗಿಸಿಕೊಳ್ಳಿ ಅನ್ನೋ ಸಮುದ್ರ ಸಂಪನ್ಮೂಲಗಳ ಕೂಗು ಅರಣ್ಯರೋದನ ಆಗಿತ್ತು. (ಪ್ರತಿಭಟಿ ಸುವಂತೆ ಸಮುದ್ರದ ಅಬ್ಬರ ಕೇಳಿ ಬರುತ್ತದೆ.) ಅಲ್ಲ, ಸಮುದ್ರ ರೋದನ ಆಗಿತ್ತು.

ತಜ್ಞ:

ಸಮುದ್ರ ವಿಜ್ಞಾನದ ಬೆಳವಣಿಗೆಯಲ್ಲಿ ನಡೆದ ಒಂದು ಮುಖ್ಯ ಘಟನೆ ಎಂದರೆ ೧೮೭೨ರಲ್ಲಿ ಆರಂಭವಾದ ಎಚ್. ಎಂ. ಎಸ್. ಛಾಲೆಂಜರ್ ಅನ್ವೇಷಕ ಸಮುದ್ರಯಾನ. ನಾಲ್ಕು ವರ್ಷಗಳ ನಿರಂತರ ಪ್ರಯತ್ನದಿಂದ ಆ ಹಡಗಿನಲ್ಲಿ ಇದ್ದ ವಿಜ್ಞಾನಿಗಳು ಎಲ್ಲಾ ಸಮುದ್ರ ಭಾಗಗಳಿಗೂ ಪ್ರಯಾಣ ಮಾಡಿ ಅಪಾರ ಮಾಹಿತಿ ಸಂಗ್ರಹಿಸಿದರು. ಈ ಮಾಹಿತಿ ಯನ್ನು ಐವತ್ತು ಸಂಪುಟಗಳಾಗಿ ತಯಾರು ಮಾಡುವುದಕ್ಕೆ ೨೦ ವರ್ಷಗಳೇ ಹಿಡಿದವು. ಆದರೆ ಆಸಕ್ತಿ ಮತ್ತೆ ತಣ್ಣಗಾಯಿತು. ವಿಜ್ಞಾನದ ಇತರ ಶಾಖೆಗಳು ಬಲವಾಗಿ ಬೆಳೆಯುತ್ತಿದ್ದಾಗ ಸಮುದ್ರವಿಜ್ಞಾನ ಸಿಂಡ್ರೆಲಾ ಆಯಿತು.

ನಿರೂಪಕ:

ಫಿಶರೀಸ್ ಕಾಲೇಜಿನ ಶ್ರೀ ವಿ. ಹರಿಹರನ್.

ತಜ್ಞ:

ಮತ್ತೆ ಸಾಗರಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿ ಉಂಟಾಗಿದ್ದು ೧೯೪೫ರ ನಂತರವೇ. ಸಾಗರದಲ್ಲಿ ಉಪಯುಕ್ತವಾದ ಸಜೀವ ಮತ್ತು ನಿರ್ಜೀವ ವಸ್ತುಗಳಿವೆ. ಸರಿಯಾಗಿ ಉಪಯೋಗಿಸಿಕೊಂಡರೆ ನಮ್ಮ ಅನೇಕ ಸಮಸ್ಯೆಗಳನ್ನು ಕಡಿಮೆ ಮಾಡಬಲ್ಲ ಒಂದು ಅಕ್ಷಯ ಪಾತ್ರೆ ಅದು ಎನ್ನುವ ಅರಿವು ಬೆಳೆದ ಹಾಗೆ ಸಮುದ್ರ ವಿಜ್ಞಾನದ ಶಾಖೋಪಶಾಖೆಗಳಲ್ಲಿ ತೀವ್ರ ಸಂಶೋಧನೆ ಆರಂಭವಾಯಿತು. ಈ ಎಂಭತ್ತರ ದಶಕವನ್ನು 'ಸಮುದ್ರ ತಂತ್ರ ಜ್ಞಾನ ದಶಕ' ಎಂದು ನಿರ್ಧರಿಸಿದ್ದಾರೆ. ನಿಜವಾದ ಸಮುದ್ರ ಮಂಥನ ಆರಂಭ ವಾಗಿದೆ. ಸಮುದ್ರವಿಜ್ಞಾನ ಎನ್ನುವ

ಕಡೆಗೋಲಿಗೆ ಹಲ್ಲುಗಳು ಹಲವಾರು. ಸಮುದ್ರ ಜೀವಶಾಸ್ತ್ರ, ಸಮುದ್ರ ರಸಾಯನಶಾಸ್ತ್ರ, ಸಮುದ್ರ ಪರಿಸರಶಾಸ್ತ್ರ ಇತ್ಯಾದಿ ಇತ್ಯಾದಿ. ೨೦ನೆ ಶತಮಾನದಲ್ಲಿ ಉದ್ಯಮ ಮತ್ತು ಕೃಷಿಯಲ್ಲಿ ವಿಜ್ಞಾನದಿಂದ ಪಡೆದ ಯಶಸ್ಸಿಗಿಂತ ಹೆಚ್ಚು ಕ್ರಾಂತಿಕಾರಕ ಯಶಸ್ಸನ್ನು ೨೧ನೇ ಶತಮಾನದಲ್ಲಿ ಸಮುದ್ರ ವಿಜ್ಞಾನದಿಂದ ಪಡೆಯಬಹುದೆಂದು ವಿಜ್ಞಾನಿಗಳ ಅಭಿಪ್ರಾಯ.

(ತಜ್ಞರ ಕೊನೆ ಮಾತು ಬರುತ್ತಿದ್ದ ಹಾಗೆ ಅಲೆಗಳ ಸದ್ದು ಮತ್ತು ಮಕ್ಕಳು ಆಟ ಆಡುತ್ತಿರುವ ಸದ್ದು ಕೇಳಿಬರುತ್ತದೆ.)

(ಮಕ್ಕಳ ತಂದೆ ಕೂಗುತ್ತಾನೆ—ಏ ಕಿಟ್ಟಿ ಗೊತ್ತೇನೋ ನಿನಗೆ, ಇಂಡಿಯಾ ದೇಶದ ಕೊನೇಲಿ ನಿಂತಿದೀಯ)

ಕಿಟ್ಟಿ :
ಹೌದಾ?

ನಿರೂಪಕ:
ಹೌದಾ ಸರ್!

ತಜ್ಞ :
ಸಮುದ್ರ ತೀರ ಇರುವ ಯಾವುದೇ ದೇಶದ ಗಡಿ ಅದರ ಭೂಪ್ರದೇಶಕ್ಕೆ ಮಾತ್ರ ಸೀಮಿತ ಆಗುವುದಿಲ್ಲ.

ನಿರೂಪಕ:
ಮಂಗಳೂರು ಎಸ್. ಡಿ. ಎಂ. ಲಾ ಕಾಲೇಜಿನ ಶ್ರೀ ಎ. ರಾಜೇಂದ್ರ ಶೆಟ್ಟಿ.

ತಜ್ಞ :
ತೀರ ಪ್ರದೇಶದಿಂದ ಹನ್ನೆರಡು ಮೈಲಿಗಳ ವರೆಗೂ ಸಮುದ್ರದ ಮೇಲೆ ಆ ದೇಶದ ಸಾರ್ವಭೌಮ ಅಧಿಕಾರ ಇರುತ್ತದೆ. ಅಲ್ಲದೆ ೨೦೦ ಮೈಲಿಗಳ ವರೆಗೆ ಆರ್ಥಿಕ ವಲಯ ಇದ್ದು ಈ ಸಮುದ್ರ ಭಾಗದ ಸಂಪನ್ಮೂಲಗಳ ಮೇಲೆ ಆ ದೇಶಕ್ಕೆ ಸಂಪೂರ್ಣ ಹಕ್ಕು ಇರುತ್ತದೆ. ಆದರೆ ಅಲ್ಲಿಂದ ಆಚೆಗೆ ಇರುವ ವಿಶಾಲ ಸಮುದ್ರ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ತುಂಬಾ ವಿವಾದ ನಡೆಯುತ್ತಾ ಇದೆ. ಸಮುದ್ರ ತೀರ ಇಲ್ಲದೆ ಇರುವ ದೇಶಗಳು ಕೂಡ ಸಮುದ್ರ ಸಂಪನ್ಮೂಲಗಳಲ್ಲಿ ಪಾಲು ಕೇಳ್ತಾ ಇವೆ. ಸಮುದ್ರ ಕಾನೂನಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಸಮ್ಮೇಳನ ಕಳೆದ ೯ ವರ್ಷಗಳಿಂದ ಪ್ರಯತ್ನಿಸುತ್ತಾ ಇದ್ದರೂ ಈ ವಿಷಯದಲ್ಲಿ ತೀರ್ಮಾನಕ್ಕೆ ಬರುವುದು ಆಗಿಲ್ಲ.

ನಿರೂಪಕ:
ಇದಕ್ಕೆ ಮುಖ್ಯ ಕಾರಣ ಅಂದರೆ ಕಂದು ಬಣ್ಣದಿಂದ ಕಪ್ಪಿನವರೆಗೆ ನಾನಾ ಬಣ್ಣಗಳಲ್ಲಿ ಮೂರರಿಂದ ಹತ್ತು ಸೆಂಟಿಮೀಟರ್ ವರೆಗೆ ನಾನಾ ಗಾತ್ರಗಳಲ್ಲಿ, ಗೋಳದಿಂದ ಬಟಾಟೆವರೆಗೆ ನಾನಾ ಆಕಾರಗಳಲ್ಲಿ ಇದ್ದು, ಈರುಳ್ಳಿ ಹಾಗೆ ಪದರ ಪದರುಗಳನ್ನು ಹೊಂದಿರುವ ಬಹು ಲೋಹದ ಗಡ್ಡೆಗಳು. ಸಮುದ್ರದ ತಳದಲ್ಲಿ ಹರಡಿರುವ ಈ ಕುರೂಪದ ಮೊಟ್ಟೆಗಳು ಇವತ್ತು ಆಕರ್ಷಣೆಯ ಕೇಂದ್ರ, ಅಂತಾರಾಷ್ಟ್ರೀಯ ವಿವಾದದ ಮೂಲ; ಇವುಗಳಲ್ಲಿ ಇದೆ ಆದರೂ ಏನು?

ತಜ್ಞ :
ಮ್ಯಾಂಗನೀಸ್, ಕಾಪ್ಪರ್, ನಿಕ್ಕಲ್, ಕೊಬಾಲ್ಟ್ ಅಲ್ಲದೆ ಸಣ್ಣ ಪ್ರಮಾಣದಲ್ಲಿ ವೆನಿಡಿಯಂ, ಲೆಡ್ ಮುಂತಾದುವೆಲ್ಲ ಈ ಗಡ್ಡೆಗಳಲ್ಲಿ ಇವೆ.

ನಿರೂಪಕ
ಜಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾದ ಶ್ರೀ ಕೆ. ವಿ. ವೆಂಕಟೇಶ್.

ತಜ್ಞ :
ಕೋಟ್ಯಂತರ ವರ್ಷಗಳಿಂದ ಸಮುದ್ರ ತಳದಲ್ಲಿ ತಣ್ಣಗೆ ಮಲಗಿದ್ದ ಈ ಗಡ್ಡೆಗಳನ್ನು ಎಚ್. ಎಂ. ಎಸ್. ಛಾಲೆಂಜರ್ ಅನ್ವೇಷಕ ನೌಕೆ ಸುಮಾರು ನೂರು ವರ್ಷದ ಕೆಳಗೆ ೧೮೭೩ರಲ್ಲಿ ಪತ್ತೆ ಹಚ್ಚಿತು. ಆದರೆ ಇವುಗಳಲ್ಲಿ ಅಡಗಿರುವ ಸಂಪತ್ತಿನ ಅರಿವು ನಮಗಾಗಿದ್ದು ಬರೀ ಇಪ್ಪತ್ತೈದು ವರ್ಷಗಳ ಕೆಳಗೆ. ನಮ್ಮದು ಖನಿಜಗಳ

ಗಾಗಿ ಹಸಿದಿರುವ ನಾಗರಿಕತೆ. ಒಂದು ಸಣ್ಣ ಸೂಜಿಯಿಂದ ಹಿಡಿದು ಅಂತರಿಕ್ಷ ನೌಕೆಯವರೆಗೆ ನಮಗೆ ಎಲ್ಲದಕ್ಕೂ ಖನಿಜಗಳು ಬೇಕು. ಹಿಂದಿನ ಸಾವಿರಾರು ವರ್ಷಗಳಲ್ಲಿ ಉಪಯೋಗಿಸಿರುವ ಲೋಹಗಳಿಗಿಂತ ಹೆಚ್ಚಿನ ಪ್ರಮಾಣವನ್ನು ಕಳೆದ ಬರೀ ೫೦ ವರ್ಷಗಳಲ್ಲಿ ಉಪಯೋಗಿಸಿದ್ದೇವೆ. ಆದರೆ ಭೂಭಾಗದಲ್ಲಿರುವ ಕಾಪ್ಪರ್, ನಿಕ್ಕೆಲ್, ಕೊಬಾಲ್ಟ್ ಮುಂತಾದ ನಿಕ್ಷೇಪಗಳು ಇನ್ನು ೧೦೦ ವರ್ಷಗಳಲ್ಲೇ ಮುಗಿದು ಹೋಗುವುವು. ಇಂತಹ ಕಷ್ಟ ಸಮಯದಲ್ಲಿ, ಶತಕೋಟಿ ಟನ್ನುಗಳಷ್ಟು ಹರಡಿಕೊಂಡಿರುವ ಈ ಸಮುದ್ರ ಫಲಗಳ ಕಡೆ ಆಸೆಗಣ್ಣಿಂದ ನೋಡ್ತಾ ಇದ್ದೀವಿ. ಈ ಗಡ್ಡೆಗಳನ್ನು ಸಮುದ್ರ ನಿರಂತರವಾಗಿ ಉತ್ಪಾದನೆ ಮಾಡ್ತಾನೇ ಇರುತ್ತೆ. ಈ ಗಡ್ಡೆಗಳನ್ನು ಹೊರ ತೆಗೆಯುವ ತಾಂತ್ರಿಕತೆ ಸಾಕಷ್ಟು ಸುಧಾರಿಸಿದ ಮೇಲೆ ಅದು ವಿಶ್ವದ ಆರ್ಥಿಕತೆಯ ಮೇಲೆ ವಿಶೇಷವಾದ ಪರಿಣಾಮ ಬೀರಬಹುದು.

ನಿರೂಪಕ:
ಈ ಸಮುದ್ರ ಫಲಗಳೇ ಅಲ್ಲದೆ ಸಮುದ್ರದ ಇತರ ಭಾಗಗಳಲ್ಲಿ ಕೂಡ ಖನಿಜಗಳು ಸಿಕ್ಕುತ್ತವೆ.

ತಜ್ಞ:
ತೀರ ಪ್ರದೇಶಕ್ಕೆ ಹತ್ತಿರ ಇರುವ ಅಷ್ಟು ಆಳ ಇಲ್ಲದ ಸಮುದ್ರ ಭಾಗದಲ್ಲಿ ಖನಿಜ ಸತ್ವ ಇರುವ ಪ್ಲೇಸರ್ ಎನ್ನುವ ಸಂಯುಕ್ತ ವಸ್ತು ಸಿಕ್ಕುತ್ತವೆ. ಅಲ್ಲದೆ ಫಾಸ್ಫರೈಟ್, ಕಲ್ಲಿದ್ದಲು ಮತ್ತು ಭಾರವಾದ ಖನಿಜಗಳ ನಿಕ್ಷೇಪಗಳೂ ಇವೆ. ಆಳ ಸಮುದ್ರದ ತಳದಲ್ಲಿ ಸಾವಿರಾರು ಅಡಿಗಳಷ್ಟು ಶೇಖರಣೆ ಆಗಿರುವ ಚೆರಟು, ಅಂಟು ಮಣ್ಣು, ಮತ್ತು ಅಲ್ಲಲ್ಲಿ ಇರುವ [illegible] ಅಪಾರ ಪ್ರಮಾಣದ ಖನಿಜಗಳು ಇವೆ. ಇವನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಳ್ಳುವುದು ಸಾಧ್ಯವಾದರೆ ಸಾವಿರಾರು ವರ್ಷಗಳ ಕಾಲ ನಮಗೆ ಖನಿಜಗಳ ಸಮಸ್ಯೆ ಇರಲಾರದು.

ನಿರೂಪಕ:
ಆದರೆ ಉರೀತಾ ಇರೋ ಇನ್ನೊಂದು ಸಮಸ್ಯೆ ಇದೆಯಲ್ಲ– ತೈಲದ ಸಮಸ್ಯೆ.

ತಜ್ಞ:
ಭೂಭಾಗದ ತೈಲ ನಿಕ್ಷೇಪ ಕರಗ್ತಾ ಇದ್ದ ಹಾಗೇನೇ ವಿಜ್ಞಾನಿಗಳು ಸಮುದ್ರ ಭಾಗದಿಂದ ತೈಲ ಕಾರಂಜಿಗಳನ್ನು ಚಿಮ್ಮಿಸುತ್ತಿದ್ದಾರೆ. ತೈಲ ಮತ್ತು ಅನಿಲ ನಿಕ್ಷೇಪಗಳು ಶಾಂತಸಾಗರ, ಹಿಂದೂ ಮಹಾಸಾಗರ, ಅಟ್ಲಾಂಟಿಕ್, ಆರ್ಕ್‌ಟಿಕ್ ಹಾಗೂ ಇತರ ಸಮುದ್ರಗಳಲ್ಲಿ ದೊರೆಯುತ್ತವೆ. ಐವತ್ತರ ದಶಕದಲ್ಲಿ ಸಮುದ್ರದಿಂದ, ತೈಲ ಉತ್ಪಾದನೆ ಏನೇನೂ ಇಲ್ಲ ಎನ್ನುವಷ್ಟಿತ್ತು. ಆದರೆ ಮುಂದಿನ ೧೦ ವರ್ಷಗಳಲ್ಲಿ ಅದು ಜಗತ್ತಿನ ಒಟ್ಟು ತೈಲೋತ್ಪಾದನೆಯ ಶೇಕಡ ೫೦ರಷ್ಟು ಆಗಬಹುದು.

ನಿರೂಪಕ:
ಇವರು, ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಟಿ. ಆರ್. ಶ್ರೀಧರಮೂರ್ತಿ. ಆದರೆ ಎಲ್ಲ ರಾಷ್ಟ್ರಗಳ ಹಣೆಯಲ್ಲೂ ತೈಲ ಬರೆದಿಲ್ಲ. ತೈಲದ ಬೆಲೆಯಿಂದಾಗಿ ಹಿಂದುಳಿದ ದೇಶಗಳ ಆರ್ಥಿಕ ಸ್ಥಿತಿ ಅಸ್ತವ್ಯಸ್ತ ಆಗಿದೆ. ಭಾರತ ಅಂತೂ ಐದು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ತೆರ್ತಾ ಇದೆ. ಆದರೆ ಈಚೆಗೆ ಬೆಳ್ಳಿ ಹಬ್ಬ ಆಚರಿಸಿಕೊಂಡ ಭಾರತದ ತೈಲ ಮತ್ತು ನೈಸರ್ಗಿಕ ಅನಿಲ ಮಂಡಳಿಯ ಘೋಷಣಾ ವಾಕ್ಯ ಏನು ಗೊತ್ತೆ? 'ಬೆಳ್ಳಿಯ ಹಿನ್ನೆಲೆ ಬಂಗಾರದ ಭವಿಷ್ಯ.' ಮಧ್ಯರಾತ್ರಿಯಲ್ಲಿ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದ ಭಾರತಕ್ಕೆ ಸಮುದ್ರ ಮಧ್ಯದಲ್ಲಿ ತೈಲ ಸ್ವಾತಂತ್ರ್ಯ ಸಿಕ್ಕಬಹುದೆ?

ತಜ್ಞ:
ಈಗಾಗಲೇ ಮುಂಬಯಿ ಬಳಿ ಬಾಂಬೆ ಹೈ ಮತ್ತು ಇತರ ನಿಕ್ಷೇಪಗಳು [illegible]

ಹಾಗೆ ತೈಲ ಮತ್ತು ಅನಿಲವನ್ನು ನೀಡುತ್ತಿವೆ. ಮಂಡಳಿ ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯಲ್ಲಿ ತೈಲ ಮತ್ತು ಅನಿಲ ನಿಕ್ಷೇಪಗಳು ಇರಬಹುದಾದ ಜಾಗಗಳನ್ನು ಗುರುತಿಸಿದೆ. ಈ ಪ್ರದೇಶಗಳೆಲ್ಲಾ ತೈಲ ನಿಕ್ಷೇಪಗಳು ದೊರೆತಲ್ಲಿ ಪೂರ್ಣ ತೈಲ ಸ್ವಾತಂತ್ರ್ಯ ಸಿಕ್ಕದಿದ್ದರೂ ತೈಲ ಮತ್ತು ಅನಿಲದ ಸಮಸ್ಯೆ ಸಾಕಷ್ಟು ಕಡಿಮೆ ಆಗಿ ಮುಂದಿನ ವರ್ಷಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ವಿದೇಶೀ ವಿನಿಮಯ ಉಳಿತಾಯ ಆಗಬಹುದು.

ನಿರೂಪಕ:

ಈ ಠೇವಣಿ ಉರಿದು ಹೋಗುತ್ತೆ. ಕರಗಿ ಹೋಗುತ್ತೆ. ತೈಲಕ್ಕಾಗಿ ನಾವು ಕೊಡುವ ಚೆಕ್ ನಮಗೆ ವಾಪಸ್ಸು ಬರುತ್ತೆ ಒಂದಲ್ಲ ಒಂದು ದಿನ. ಆದರೆ ನಮ್ಮ ಇಂಧನ ದಾಹ ಶಕ್ತಿದಾಹ ಹೆಚ್ಚಾಗುತ್ತಾನೇ ಇದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಬರಿ ವಿದ್ಯುಚ್ಛಕ್ತಿ ಒಂದರ ಉಪಯೋಗವೇ ಏಳು ಪಟ್ಟು ಹೆಚ್ಚಿದೆ. (ಇಂಧನ ಸಮಸ್ಯೆಯ ತೀವ್ರತೆಯ ಸುದ್ದಿ ಒಳಗೊಂಡಿರುವ ಆಕಾಶವಾಣಿಯ ವಾರ್ತಾಪ್ರಸಾರ ಇಲ್ಲಿ ಆರಂಭ ಆಗುತ್ತದೆ. ಇದು ದೆಹಲಿಯಿಂದ ಪ್ರಸಾರ ಆಗಿರುವ ಕನ್ನಡ ವಾರ್ತೆಯ ಧ್ವನಿಮುದ್ರಣ)

ವಾರ್ತೆ:

ಆಕಾಶವಾಣಿ, ವಾರ್ತೆಗಳು ......

ನಿರೂಪಕ :

೧೧–೮–೮೧ರಂದು ಪ್ರಸಾರವಾದ ವಾರ್ತೆ.

ವಾರ್ತೆ:

ಕೀನ್ಯದ ರಾಜಧಾನಿ ನೈರೋಬಿಯಲ್ಲಿನ ಇಂಧನ ಸಮ್ಮೇಳನದಲ್ಲಿ ಭಾಗ ವಹಿಸುತ್ತಿರುವ ಸರಕಾರೇತರ ಪ್ರತಿನಿಧಿಗಳು ಇಂದು ಅಲ್ಲಿಯ ಬೀದಿಗಳಲ್ಲಿ ಮೆರವಣಿಗೆ ಹೋದರು. ಇಂದಿನ ಇಂಧನ ಬಿಕ್ಕಟ್ಟಿನತ್ತ ಗಮನ ಸೆಳೆಯುವ ಸಲುವಾಗಿ ಅವರು ತಮ್ಮ ತಲೆಯ ಮೇಲೆ ಉರುವಲು ಕಟ್ಟಿಗೆಯನ್ನು ಹೊತ್ತಿದ್ದರು. ಶ್ರೀ ಟೊರ್ರೆಡೋ ಅವರು ಅನಂತರ ವಿಶ್ವಸಂಸ್ಥೆಯ ಸಮ್ಮೇಳನ ಉದ್ದೇಶಿಸಿ ಮಾತನಾಡುತ್ತ ಇಂಧನದ ಬಿಕ್ಕಟ್ಟಿನಿಂದಾಗಿ ವಿಶ್ವದ ಬಡವರ ಆಶೋತ್ತರಗಳು ಮಣ್ಣುಗೂಡಿವೆ ಎಂದು ಹೇಳಿದರು. ಇಂಧನದ ಬದಲಿ ಮೂಲಗಳನ್ನು ಕಂಡು ಹಿಡಿಯಲು ಒಟ್ಟಾರೆ ಅಂತಾರಾಷ್ಟ್ರೀಯ ...(ವಾರ್ತಾ ಪ್ರಸಾರ ಮುಂದುವರೆಯುತ್ತಿದ್ದ ಹಾಗೆ ಧ್ವನಿ ಕಡಿಮೆ ಆಗುತ್ತಾ ಹೋಗಿ ಅದನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ನಿರೂಪಣೆ ಆರಂಭವಾಗುತ್ತದೆ.)

ನಿರೂಪಕ:

ಹಿಂದುಳಿದ ರಾಷ್ಟ್ರಗಳ ಆರ್ಥಿಕ ಸ್ಥಿತಿ ಕನಿಷ್ಠ ಮಟ್ಟ ಮುಟ್ಟಬೇಕಾದರೂ ಶಕ್ತಿಯ ಉಪಯೋಗ ಈ ಕ್ಷಣ ನಾಲ್ಕು ಪಟ್ಟು ಹೆಚ್ಚಾಗಬೇಕಂತೆ; ಮುಂದೆ ಇನ್ನೆಷ್ಟು ಪಟ್ಟೋ! ಆದರೆ ಈ ಶಕ್ತಿ ಬರಬೇಕು ಎಲ್ಲಿಂದ? ವಿಜ್ಞಾನಿಗಳು ಉತ್ತರ ಹೇಳ್ತಾರೆ: ಸೌರಶಕ್ತಿ, ವಾಯುಶಕ್ತಿ; ಅಣುಶಕ್ತಿ (ನನ್ನನ್ನು ಮರೆತಿದ್ದೀರಿ ಎಂದು ಪ್ರತಿಭಟಿಸುವಂತೆ ಸಮುದ್ರ ಮೊರೆಯುತ್ತದೆ)

ನಿರೂಪಕ:

ಹುಂ, ನಿನ್ನನ್ನು ಮರೆತಿಲ್ಲ.

ತಜ್ಞ:

ಸಮುದ್ರದಿಂದ ಮುಖ್ಯವಾಗಿ ನಾಲ್ಕು ವಿಧಾನಗಳಲ್ಲಿ ಶಕ್ತಿಯನ್ನು ಪಡೆಯಬಹುದು. ಸಾಗರ ಜಲೋಷ್ಣ ಶಕ್ತಿ, ಉಬ್ಬರವಿಳಿತಗಳ ಶಕ್ತಿ, ತೆರೆಗಳ ಶಕ್ತಿ ಮತ್ತು ಸಾಗರ ಪ್ರವಾಹಶಕ್ತಿ.

ನಿರೂಪಕ:

ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಡಾ.ಐ.ವಿ. ನಾಯಕ್.

ತಜ್ಞ:

ಸಮುದ್ರದ ಮೇಲ್ಭಾಗದಲ್ಲೂ ಕೆಳಭಾಗದಲ್ಲೂ ಇರುವ ಉಷ್ಣತೆಯಲ್ಲಿ ಬಹು ವ್ಯತ್ಯಾಸ ಇದೆ. ಕಡಿಮೆ ಉಷ್ಣತೆಯಲ್ಲಿ

ಕುದಿಯುವ ಅಮೋನಿಯಾ, ಫ್ರಿಯಾನ್ ಮುಂತಾದ ದ್ರವಗಳನ್ನು ಈ ಉಷ್ಣತೆಯು ಸಂಪರ್ಕಕ್ಕೆ ತಂದಾಗ ಅವು ಆವಿ ಆಗುತ್ತವೆ. ಅಂದರೆ ವಿಸ್ತರಿಸಿ ಒತ್ತಡ ಉಂಟು ಮಾಡುತ್ತವೆ. ಈ ಶಕ್ತಿ ಒತ್ತಡದಿಂದ ಟರ್ಬೈನುಗಳನ್ನು ಚಲಿಸಿ ವಿದ್ಯುತ್ತನ್ನು ಉತ್ಪಾದಿಸಬಹುದು. ಉಬ್ಬರವಿಳಿತಗಳಿಂದ ಶಕ್ತಿ ಪಡೆಯಬೇಕಾದರೆ ಉಬ್ಬರದ ಸಮಯದಲ್ಲಿ ಸಮುದ್ರದ ನೀರನ್ನು ಎತ್ತರದ ಸ್ಥಳದಲ್ಲಿ ಸಂಗ್ರಹಿಸಿಟ್ಟು ಆ ನಂತರ ಈ ನೀರನ್ನು ಕೊಳವೆಗಳ ಮೂಲಕ ಹರಿಸಿ ಟರ್ಬೈನುಗಳನ್ನು ಚಲಿಸಿ ವಿದ್ಯುತ್ತನ್ನು ಪಡೆಯಬಹುದು. ಭಾರತದಲ್ಲಿ ಗುಜರಾತ್ ಕರಾವಳಿಯ ಕಚ್ ಸಮೀಪ ಉಬ್ಬರವಿಳಿತ ಹೆಚ್ಚಿಗೆ ಇರುವುದರಿಂದ ಈ ರೀತಿ ಶಕ್ತಿ ಪಡೆಯಲು ಸಾಧ್ಯ ಇದೆ. ಈ ಬಗ್ಗೆ ಸಂಶೋಧನೆ ನಡೆಸಲು ಭಾರತ ಸರಕಾರ ಮೂರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ಬೀಸುವ ಗಾಳಿಯಿಂದಾಗಿ ಸಮುದ್ರದ ಮೇಲ್ಭಾಗದಲ್ಲಿ ಉಂಟಾಗುವ ತೆರೆಗಳಿಂದಲೂ ಶಕ್ತಿ ಪಡೆಯಬಹುದು. ಎಲ್ಲೋ ಒಂದು ಕಡೆ ಗಾಳಿ ಬೀಸಿದರೂ ತೆರೆಗಳು ಉಂಟಾಗಿ ಸಾವಿರಾರು ಮೈಲಿಗಳವರೆಗೆ ತಮ್ಮ ಶಕ್ತಿಯನ್ನು ಕಳೆದುಕೊಳ್ಳದೆ ಪ್ರಯಾಣ ಮಾಡುತ್ತವೆ. ತೆರೆಗಳ ಶಕ್ತಿ ಪಡೆಯಲು ಅನೇಕ ವಿಧಾನಗಳ ಪ್ರಯತ್ನ ನಡೆದಿದೆ. ಸೂರ್ಯ–ಚಂದ್ರರ ಗುರುತ್ವಾಕರ್ಷಣೆಯಿಂದ ಮತ್ತು ಗಾಳಿಯಿಂದ ಸಮುದ್ರದಲ್ಲಿ ಪ್ರವಾಹಗಳು ಉಂಟಾಗುತ್ತವೆ. ಈ ಪ್ರವಾಹಗಳ ಹಾದಿಯಲ್ಲಿ ಟರ್ಬೈನುಗಳನ್ನಿಟ್ಟು ವಿದ್ಯುತ್ತನ್ನು ಉತ್ಪಾದಿಸಬಹುದು. ಅಮೇರಿಕದ ಫ್ಲಾರಿಡಾದಲ್ಲಿ ಕೋರಿಯಾಲಿಸ್ ಪ್ರಾಜೆಕ್ಟ್ ಹೆಸರಿನಲ್ಲಿ ಇಂತಹ ಪ್ರಯತ್ನಗಳು ನಡೆಯುತ್ತಿವೆ. ಆದರೆ ಸಮಸ್ಯೆ ಎಂದರೆ ಇತರ ಮೂಲಗಳಿಂದ ಪಡೆಯುವ ವಿದ್ಯುತ್ತಿಗಿಂತ ಸಮುದ್ರದಿಂದ ಪಡೆಯುವ ವಿದ್ಯುತ್ತಿಗೆ ತುಂಬಾ ಖರ್ಚು ತಗಲುತ್ತದೆ. ಹೆಚ್ಚು ವಿದ್ಯುತ್ ಬೇಕಾದರೆ ಯಂತ್ರಗಳ ಗಾತ್ರವೂ ಹೆಚ್ಚಾಗಬೇಕಾಗುತ್ತದೆ. ಏಕೆಂದರೆ ಸಮುದ್ರದಲ್ಲಿ ಶಕ್ತಿಯ ಸಾಂದ್ರತೆ ವಿರಳವಾಗಿರುತ್ತದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ತಂತ್ರಜ್ಞಾನ ತುಂಬಾ ಸುಧಾರಿಸಬೇಕಾಗಿದೆ. ಏನಾದರೂ ಮಾಡಿ ಸಮುದ್ರದಿಂದ ನಿರಂತರವಾಗಿ ಶಕ್ತಿ ಪಡೆಯಬಹುದು ಮತ್ತು ಇದು ಪರಿಸರ ಮಾಲಿನ್ಯಕ್ಕೆ ಕಾರಣ ಆಗುವುದಿಲ್ಲ. ಆದ್ದರಿಂದ ಹೆಚ್ಚು ಹಣ ತೊಡಗಿಸಿ ಸಂಶೋಧನೆ ನಡೆಸುವ ಅಗತ್ಯ ತುಂಬಾ ಇದೆ. (ಅಲೆಗಳ ಸದ್ದು)

ಮಗು:

ಥೂ ಅಮ್ಮ, ಈ ನೀರು ಬರೀ ಉಪ್ಪು. (ಅಲೆಗಳ ಸದ್ದು ಕೇಳಿಬರುತ್ತಿದ್ದ ಹಾಗೇ ನಿರೂಪಣೆ ಮುಂದುವರಿಯುತ್ತದೆ.)

ನಿರೂಪಕ:

ಸಮುದ್ರದ ನೀರು ಉಪ್ಪಾಗಿ ಇಲ್ಲದಿದ್ದರೆ ನೀವು ನಾನು ಈಗ ಇರುವ ಹಾಗೆ ಇರ್ತಾನೆ ಇರಲಿಲ್ಲ. ಯಾಕೆಂದರೆ ಜೀವವಿಕಾಸಕ್ಕೆ ಮೂಲವಾದ ರಾಸಾಯನಿಕ ವಿಕಾಸ ನಡೆದದ್ದು ಸಮುದ್ರದಲ್ಲೇ. ಜೀವದ ಮೊದಲ ಮಾದರಿಗಳು ಉದ್ಭವ ಆದದ್ದೂ ಅಲ್ಲಿಯೇ. ಮನುಷ್ಯನ ದೇಹದಲ್ಲಿರೋ ದ್ರವಗಳ ಶೇಕಡಾವಾರು ಲವಣ ಪ್ರಮಾಣ ಪುರಾತನ ಸಾಗರಗಳ ಲವಣ ಪ್ರಮಾಣಕ್ಕೆ ಹೊಂದಿಕೆ ಆಗುತ್ತೆ ಅಂತಾರೆ. ಸಮುದ್ರದ ನೀರಿನಲ್ಲಿ ಈಗ ಈ ಪ್ರಮಾಣ ವ್ಯತ್ಯಾಸ ಆಗಿದ್ದರೂ ಲವಣಗಳು ಸಮೃದ್ಧವಾಗಿ ಇದ್ದೇ ಇವೆ.

ತಜ್ಞ:

ಸಮುದ್ರದ ನೀರು ಕರಗಿರುವ ಅನಿಲಗಳು, ಲವಣಗಳು, ಖನಿಜಗಳು, ತೇಲುತ್ತಿರುವ ಘನಪದಾರ್ಥಗಳ ಕಣಗಳು ಇವೆಲ್ಲವನ್ನೂ ಹೊಂದಿರುವ ಒಂದು ದ್ರಾವಣ ಎನ್ನಬಹುದು. ಸಮುದ್ರದ ನೀರಿನಲ್ಲಿ ಒಕ್ಕೊಂತಲೂ ಹೆಚ್ಚು ಮೂಲ

ವಸ್ತುಗಳನ್ನು ಪತ್ತೆ ಹಚ್ಚಿದ್ದಾರೆ.

ನಿರೂಪಕ:

ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಶ್ರೀ ಎಸ್. ಜಯದೇವ್ ಭಟ್.

ತಜ್ಞ:

ಸೋಡಿಯಮ್, ಮೆಗ್ನೇಶಿಯಂ, ಪೊಟ್ಯಾಶಿಯಂ, ಕ್ಯಾಲ್ಸಿಯಂ, ಫ್ಲೋರಿನ್, ಬ್ರೊಮಿನ್, ಬೋರಾನ್ ಇತ್ಯಾದಿಗಳೆಲ್ಲ ಅಲ್ಲದೆ ಬಂಗಾರದ ಕೂಡ ಅತಿ ಸಣ್ಣ ಪ್ರಮಾಣದಲ್ಲಿದೆ. ಪ್ರಥಮ ವಿಶ್ವಯುದ್ಧದ ಅನಂತರ ಜರ್ಮನಿಯ ಯುದ್ಧ ಸಾಲಗಳನ್ನು ತೀರಿಸಲು ಸಮುದ್ರದ ನೀರಿನಿಂದ ಬಂಗಾರ ಪಡೆಯುವುದಕ್ಕೆ ಅಲ್ಲಿನ ಒಬ್ಬ ವಿಜ್ಞಾನಿ ತುಂಬ ಪ್ರಯತ್ನಿಸಿದ್ದ. ವಿಪರೀತ ಖರ್ಚು ತಗಲುತ್ತಿದ್ದುದರಿಂದ ಈ ಯೋಜನೆಯನ್ನು ಕೈಬಿಡಲಾಯಿತು. ಆದರೆ ಇತರ ವಸ್ತುಗಳನ್ನು ಲಾಭದಾಯಕವಾಗಿ ಪಡೆಯಬಹುದು. ಅಡಿಗೆ ಉಪ್ಪನ್ನು ನಾಲ್ಕು ಸಾವಿರ ವರ್ಷಗಳಿಂದಲೂ ಪಡೆಯುತ್ತಿದ್ದೇವೆ. ಉಳಿದ ಹಾಗೆ ಕೆಲವು ವಸ್ತುಗಳನ್ನು ಮಾತ್ರ ವಿಶ್ವದಲ್ಲಿ ಈಗ ವಾಣಿಜ್ಯ ಮಟ್ಟದಲ್ಲಿ ಪಡೆಯಲಾಗುತ್ತಿದೆ. ಉಳಿದವುಗಳನ್ನು ಪಡೆಯಲು ತೀವ್ರ ಪ್ರಯತ್ನ ನಡೆಯಬೇಕಾಗಿದೆ.

ನಿರೂಪಕ:

ಈ ಭೂಗ್ರಹವನ್ನು (ಪ್ರತಿಭಟಿಸುವಂತೆ ಸಮುದ್ರ ಮೊರೆತ) ಅಲ್ಲ, ಅಲ್ಲ, ಈ ಜಲಗ್ರಹವನ್ನು ಶೇಕಡ ೭೦ಕ್ಕೂ ಹೆಚ್ಚು ಭಾಗ ನೀರು ಆವರಿಸಿದೆ. ಆದರೆ ವಿಚಿತ್ರ ಅಂದರೆ ಈ ನೀರಿನಲ್ಲಿ ಶೇಕಡ ೯೫ಕ್ಕೂ ಹೆಚ್ಚು ಭಾಗ ಸಮುದ್ರದಲ್ಲಿದೆ. ಬರ್ಫ, ಅಂತರ್ಜಲ ಇವೆಲ್ಲವನ್ನು ಬಿಟ್ಟರೆ ನಮ್ಮ ನದಿಗಳು, ಸರೋವರಗಳಲ್ಲಿ ಇರುವ ನೀರು ಶೇಕಡಾ ಒಂದರಷ್ಟು ಇಲ್ಲ. ಈ ಶುದ್ಧ ನೀರು ಕೂಡ ಎಷ್ಟು ಮಲಿನ ಆಗಿದೆ ಅಂದರೆ ಪ್ರತಿ ಸಾವಿರ ಗ್ಯಾಲನ್ನಿನಲ್ಲಿ ಬರಿ ಮೂರು ಗ್ಯಾಲನ್ ಮಾತ್ರ ಕುಡಿಯೋದಕ್ಕೆ ಯೋಗ್ಯ ಆಗಿದೆ. ಕುಡಿಯೋದಕ್ಕೆ ಅಲ್ಲದೆ ಕೃಷಿಗೆ, ಉದ್ಯಮಗಳಿಗೆ, ನೈರ್ಮಲ್ಯಕ್ಕೆ ಎಲ್ಲದಕ್ಕೂ ಈ ನೀರೇ ಗತಿ. ಈ ನೀರು ಸಾಕಷ್ಟಿದ್ದರೂ ಇದನ್ನು ಪೂರ್ಣ ಪ್ರಮಾದಲ್ಲಿ ಉಪಯೋಗಿಸಿಕೊಳ್ಳೋದು ನಮಗೆ ಆಗ್ತಾ ಇಲ್ಲ.

ತಜ್ಞ:

ಇನ್ನು ಇಪ್ಪತ್ತು ವರ್ಷಗಳಲ್ಲಿ ಜಗತ್ತಿನ ಜನಸಂಖ್ಯೆ ಆರುನೂರು ಕೋಟಿ ತಲುಪಿ ಇದರಲ್ಲಿ ಅರ್ಧದಷ್ಟು ಜನ ಪಟ್ಟಣಗಳಲ್ಲಿ ವಾಸಮಾಡುತ್ತಾರೆ ಎನ್ನುವ ಅಂದಾಜಿದೆ. ಇದರಿಂದ ನಮಗೆ ಬೇಕಾದ ನೀರಿನ ಪ್ರಮಾಣ ವಿಪರೀತವಾಗಿ ಹೆಚ್ಚುತ್ತದೆ. ಅಲ್ಲದೆ ವ್ಯವಸಾಯಕ್ಕೆ ಬೇಕಾದ ನೀರಿನ ಪ್ರಮಾಣ ಇಪ್ಪತ್ತು ಪಟ್ಟು ಹೆಚ್ಚಾಗಬಹುದು.

ನಿರೂಪಕ:

ನೀರಿಗಾಗಿ ಕಣ್ಣೀರಿಡೋ ಪರಿಸ್ಥಿತಿ. ನಮಗೆಂದೂ ಇಷ್ಟು ದಾಹ ಆಗಿರಲಿಲ್ಲ. ದಾರಿ ಯಾವುದಯ್ಯಾ ಸಮುದ್ರಕ್ಕೆ–

ತಜ್ಞ:

ಸಮುದ್ರದ ನೀರನ್ನು ಕಾಯಿಸಿ ಶುದ್ಧ ಮಾಡುವ ವಿಧಾನವನ್ನು ಎರಡು ಸಾವಿರ ವರ್ಷಗಳ ಹಿಂದೆಯೇ ಅರಿಸ್ಟಾಟಲ್ ವಿವರಿಸಿದ್ದಾನೆ. ಶುದ್ಧ ಮಾಡುವ ತತ್ವ ಸರಳವಾದರೂ ಅಪಾರ ಪ್ರಮಾಣದಲ್ಲಿ ನೀರು ಪಡೆಯಬೇಕಾದರೆ ಅಗತ್ಯವಾದ ತಾಂತ್ರಿಕತೆ ಕ್ಲಿಷ್ಟವಾದದ್ದು ಹಾಗೂ ತುಂಬ ಖರ್ಚು ತಗಲುವಂಥದ್ದು. ಈಗ ಡಿಸ್ಟಿಲೇಷನ್, ಫ್ರೀಜಿಂಗ್, ಎಲೆಕ್ಟ್ರೋ ಡಯಾಲಿಸಿಸ್, ರಿವರ್ಸ್ ಆಸ್ಮೋಸಿಸ್ ಮುಂತಾದ ವಿಧಾನಗಳ ಪ್ರಯತ್ನ ನಡೆಯುತ್ತದೆ. ವಿಶ್ವದ ಕೆಲವೆಡೆಗಳಲ್ಲಿ ಈಗಾಗಲೇ ಪ್ರತಿದಿನ ಕೋಟ್ಯಂತರ ಗ್ಯಾಲನ್ ಶುದ್ಧ ನೀರನ್ನು ಸಮುದ್ರದಿಂದ ಪಡೆಯುತ್ತಿದ್ದಾರೆ.

ನಿರೂಪಕ:

ನೀರು, ಎಲ್ಲೆಲ್ಲೂ ನೀರು. ಕುಡಿಯಲು ಮಾತ್ರ ಹನಿಯಿಲ್ಲ, ಇದು ಕೋಲೆರಿಡ್ಜ್ ಕವಿಯ ಕವನದಲ್ಲಿ ಬರುವ ನಾವಿಕನ ಪಾಡಾಗಿತ್ತು. ನಿಜವಾದ ಕಾರಣ ಏನೆಂದರೆ ಸಮುದ್ರದ ನೀರಿನಲ್ಲಿರುವ ಲವಣಗಳ ಪ್ರಮಾಣ ಶೇ. ೩.೫. ಆದರೆ ಮನುಷ್ಯನ ದೇಹ ಶೇ. ೦.೨ ರಷ್ಟು ಮಾತ್ರ ತಡೆದು ಕೊಳ್ಳುತ್ತೆ. ಆದ್ದರಿಂದ ಸಮುದ್ರ ನೀರನ್ನು ಶುದ್ಧ ಮಾಡದೆ ಹೆಚ್ಚು ಕಾಲ ಸೇವಿಸಲಾರೆವು. ಆದರೆ ಈ ವಿಷಯದಲ್ಲಿ ನಮಗಿಂತ ಮುಂದುವರಿದ ಜೀವಿಗಳು ಭೂಭಾಗದಲ್ಲಿ ಇವೆ ಅನ್ನೋದು ನಾವು ದುಃಖಪಡಬೇಕಾದ ವಿಷಯ ಅಲ್ಲವೇ ಅಲ್ಲ.

ತಜ್ಞ:

ರಷ್ಯದ ಸಮುದ್ರ ತೀರದಲ್ಲಿ ಒಂದು ತೋಟವನ್ನು ಬೆಳೆಸಿದ್ದಾರೆ. ಈ ಪ್ರಯತ್ನವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಢಗೆಸ್ತಾನ್ ಹೊಲಗಳಲ್ಲಿ ಆಹಾರಧಾನ್ಯ ಬೆಳೆಯುವ ಪ್ರಯತ್ನಗಳು ನಡೆಯುತ್ತಿವೆ. ಅಜರ್‌ಬೈಗಾನ್‌ನಲ್ಲಿ ಈ ರೀತಿ ಬೆಳೆದ ಗಿಡಗಳು ಫಲ ಬಿಡಲು ಪ್ರಾರಂಭಿಸಿವೆ.

ನಿರೂಪಕ:

ಬೆಂಗಳೂರು ನ್ಯಾಷನಲ್ ಕಾಲೇಜಿನ ಶ್ರೀ ಕೆ. ವಿ. ಘನಶ್ಯಾಂ.

ತಜ್ಞ:

ಸಿಹಿ ನೀರಿನಿಂದ ಬೆಳೆದ ಗಿಡಗಳಿಗೂ ಸಮುದ್ರ ನೀರಿನಿಂದ ಬೆಳೆದ ಗಿಡಗಳಿಗೂ ಅಂತಹ ವ್ಯತ್ಯಾಸವೇನೂ ಕಂಡುಬಂದಿಲ್ಲ ಎಂದು ಹೇಳುತ್ತಾರೆ. ಅದರಲ್ಲೂ ದೇವದಾರು ಜಾತಿಯ ಮರ ಸಮುದ್ರ ನೀರಿಗೆ ಪೂರ್ಣವಾಗಿ ಒಗ್ಗಿ ಹೋಗಿದೆ ಎನ್ನುತ್ತಾರೆ ಇದರ ಸಹಾಯಕರಾದ ಅಲೆಕ್ಸಾಂಡರ್ ಶೆಡ್ರಿನ್. ಅಜರ್‌ಬೈಗಾನ್ ಸಮುದ್ರ ತೀರಕ್ಕೆ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿದೆ. ಇಲ್ಲಿಯ ಭೂಮಿಗೆ ಸಮುದ್ರ ನೀರಿನಲ್ಲಿರುವ ಉಪ್ಪನ್ನು ಪೂರ್ಣವಾಗಿ ಆಳಕ್ಕೆ ಸೆಳೆದುಕೊಳ್ಳುವ ಶಕ್ತಿ ಇದೆ. ಹೀಗಾಗಿ ಉಪ್ಪು ಭೂಮಿಯ ಮೇಲ್ಪದರುಗಳಲ್ಲಿ ನಿಂತು ಗಿಡಗಳಿಗೆ ಹಾನಿ ಮಾಡುವ ಸಂಭವ ಕಡಿಮೆ. ಸಮುದ್ರ ನೀರಿಗೆ ಸ್ವಲ್ಪ ಸಿಹಿ ನೀರನ್ನು ಬೆರೆಸಿ ಉಪ್ಪಿನಂಶ ಕಡಿಮೆ ಮಾಡಿದರೆ ಬೇರೆ ಬೇರೆ ರೀತಿಯ ಬೆಳೆಯನ್ನೂ ತೆಗೆಯಬಹುದು ಎನ್ನುತ್ತಾರೆ ಅವರು. ಇವರ ಇನ್ನೊಂದು ವಾದವೆಂದರೆ ಸಮುದ್ರ ನೀರಿನಲ್ಲಿ ಗಿಡಗಳಿಗೆ ಬೇಕಾದ ಅನೇಕ ಖನಿಜಗಳು ಅಡಗಿವೆ ಎಂಬುದು. ಸಮುದ್ರ ನೀರನ್ನು ಅಯಸ್ಕಾಂತೀಕರಿಸಿದರೆ ಇಳುವರಿ ಜಾಸ್ತಿ ಆಗುತ್ತದೆ ಎಂಬುದು ಬಹಳ ಸೋಜಿಗದ ಸಂಗತಿ. ಸಮುದ್ರ ನೀರಿಗೆ ಅಷ್ಟೇ ಸಿಹಿನೀರನ್ನು ಬೆರೆಸಿ ಅಯಸ್ಕಾಂತೀಕರಿಸಿದರೆ ಇದರ ಇಳುವರಿ ಎರಡರಷ್ಟಾಗುತ್ತಿದೆ ಎಂಬುದು ಹರ್ಷದಾಯಕವಾದ ಸಂಗತಿ. ಇವೆಲ್ಲ ಎಷ್ಟರ ಮಟ್ಟಿಗೆ ಸಾಧ್ಯವಾದಾವು. ಇದರಿಂದ ಎಷ್ಟರ ಮಟ್ಟಿಗೆ ಆಹಾರ ಕೊರತೆ ನೀಗಬಹುದು ಎಂಬುದನ್ನು ಕಾದು ನೋಡಬೇಕು.

(ತೆರೆಯ ಮೊರೆತ ಮತ್ತು ಮಕ್ಕಳು ಆಡುತ್ತಿರುವ ಸದ್ದು ಕೇಳುತ್ತದೆ, ತಾಯಿ ಕೂಗುತ್ತಿದ್ದಾಳೆ:)

ತಾಯಿ:

ಏ ಕಿಟ್ಟಿ– ಪುಟ್ಟಿ, ಆಟ ಆಡಿದ್ದು ಸಾಕು ತಿಂಡಿ ತಿನ್ನೋಣ ಬನ್ನಿ.........(ಮಕ್ಕಳು ಕೂಗುತ್ತಾ ಓಡುತ್ತಿರುವ ಹಿನ್ನೆಲೆಯಲ್ಲಿ ನಿರೂಪಣೆ ಆರಂಭವಾಗುತ್ತದೆ).

ನಿರೂಪಕ:

ನೀವು ದಿನಾ ತಿನ್ನುತ್ತಾ ಇರೋ ಆಹಾರದ ಬಗ್ಗೆ ಸ್ವಲ್ಪ ಯೋಚಿಸಿ ನೋಡಿ. ಅಕ್ಕಿ, ಗೋದಿ, ರಾಗಿ, ಜೋಳ, ಮೀನು, ಕುರಿ, ಕೋಳಿ, ಅಕ್ಕಿ, ರಾಗಿ, ಗೋದಿ ಅದೇ ಅದೇ. ಶತಮಾನಗಳಿಂದ ಅದೇ ಆಹಾರದ ವಿಷಯದಲ್ಲಿ ಎಷ್ಟು ಅರಸಿಕರಾಗಿದ್ದೇವೆ ನಾವು. ವಿಶ್ವ... ಕೋಟ್ಯಂತರ ಮಕ್ಕಳು ಹಸಿದ ತ...

ಯಲ್ಲಿ ಹಾಸಿಗೆಗೆ ಹೋಗ್ತಾ ಇರುವಾಗ, ಪ್ರತಿ ವರ್ಷ ಲಕ್ಷಾಂತರ ಮಕ್ಕಳು ಪ್ರೋಟೀನ್ ಕೊರತೆಯಿಂದ ರೋಗಪೀಡಿತರಾಗಿ ಸಾಯುತ್ತಾ ಇರುವಾಗ ಆಹಾರದಲ್ಲಿ ವೈವಿಧ್ಯದ ಬಗ್ಗೆ ಮಾತಾಡೋದು ಮೇಲುನೋಟಕ್ಕೆ ಕ್ರೂರ ಎನ್ನಿಸಬಹುದು. ಆದರೆ ನಿಜವಾಗಿ ಇದು ನಮ್ಮ ಸಮಸ್ಯೆಗೆ ಉತ್ತರ ಆಗಬಹುದು. ಇದಕ್ಕಾಗಿ ಭೂಮಿ ಮೇಲೆ ಕೃಷಿ ವಿಸ್ತರಿಸಬೇಕು; ಹಾಗೆ ವಿಸ್ತರಿಸಬೇಕು (ಇಲ್ಲಿ ಮೀನುಗಾರರು ದೋಣಿಯನ್ನು ನೂಕುತ್ತಿರುವ ಸದ್ದು ಕೇಳುತ್ತದೆ ಇವನ್ನು ಬಿನ್ನೆಲೆಯಾಗಿಟ್ಟು ನಿರೂಪಕ ವಾಕ್ಯ ಪೂರ್ತಿ ಮಾಡುತ್ತಾನೆ. ಸಮುದ್ರ ಕೃಷಿ.

(ಮೀನುಗಾರರ ಹಾಡು ತೆರೆಗಳ ಸದ್ದಿನೊಂದಿಗೆ ಕೇಳಿ ಬರುತ್ತದೆ. ಮೀನುಗಾರಿಕೆಯಲ್ಲಿ ಹಳೆಯ ಪದ್ಧತಿಗಳನ್ನೇ ಬಹುಮಟ್ಟಿಗೆ ಅನೇಕ ದೇಶಗಳಲ್ಲಿ ಉಪಯೋಗಿಸುತ್ತಿರುವುದನ್ನು ಸೂಚಿಸಲು ಮೀನುಗಾರರ ಹಾಡನ್ನು ಇಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಈ ಹಾಡಿಗೆ ಪ್ರತಿಕ್ರಿಯೆ ಎನ್ನುವಂತೆ ತಜ್ಞರ ಮುಂದಿನ ಮಾತು ಬರುತ್ತದೆ.)

ತಜ್ಞ :

ಮೀನುಗಾರಿಕೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತರಬೇಕಾಗಿದೆ. ಪ್ರಪಂಚದ ವಾರ್ಷಿಕ ಮೀನು ಉತ್ಪಾದನೆ ಈಗ ಸುಮಾರು ಏಳು ಕೋಟಿ ಟನ್ನುಗಳು. ಇವನ್ನು ಬಹುಪಾಲು ಹೆಚ್ಚಿಸಬಹುದು; ಇದಕ್ಕಾಗಿ ಮೀನುಗಾರಿಕೆಯ ಆಧುನಿಕ ತಂತ್ರಗಳನ್ನು ಅನುಸರಿಸಬೇಕು. ದೂರ ಸಮುದ್ರದಲ್ಲಿ ಮೀನು ಹಿಡಿಯುವಾಗ ಯತ್ನ ಹೆಚ್ಚಾಗಬೇಕು ಮತ್ತು ಈ ಹಿಡಿಯದೇ ಇರುವ ವಿವಿಧ ರೀತಿಯ ಮೀನುಗಳನ್ನು ಹಿಡಿಯಬೇಕು. ಮೀನು ಒಂದು ರುಚಿಯಾದ ಪ್ರೊಟೀನ್ ಭರಿತವಾದ ಸುಲಭವಾಗಿ ಜೀರ್ಣವಾಗುವ ಮತ್ತು ಕಡಿಮೆ ಬೆಲೆಯಲ್ಲೇ ಸಿಕ್ಕುವ ಆಹಾರವಾಗಿದೆ.

ನಿರೂಪಕ:

ಸೆಂಟ್ರಲ್ ಮರೀನ್ ಫಿಶರೀಸ್ ರೀಸರ್ಚ್ ಸೆಂಟರಿನ ಅಧಿಕಾರಿ ಡಾ. ಕೆ. ಸತ್ಯನಾರಾಯಣರಾವ್.

ತಜ್ಞ :

ಸಮುದ್ರದಲ್ಲಿ ಮೀನು ಮಾತ್ರವೇ ಅಲ್ಲದೆ ಇತರ ಅನೇಕ ರೀತಿಯ ಪ್ರಾಣಿಗಳೂ ಇವೆ. ಸೀಗಡಿ, ಪೆರಂಗವಟ್ಟೆ, ಸ್ಕ್ವಿಡ್ಸ್, ಕಟ್ಲಫಿಶ್ ಅಂದರೆ ಬೋಂಡಾಗಳು ಮತ್ತು ಅನೇಕ ರೀತಿಯ ಚಿಪ್ಪಿನ ಪ್ರಾಣಿಗಳೂ ಇವೆ. ಇವನ್ನೆಲ್ಲ ಸಮುದ್ರ ಕೃಷಿ ಮಾಡಿ ಬೆಳೆಸಬಹುದು ಹಾಗೂ ಆಹಾರಕ್ಕಾಗಿ ಹಿಡಿಯಬಹುದು.

ನಿರೂಪಕ:

ಇದೇನು ಬರೀ ಮಾಂಸಾಹಾರದ ವಿಷಯವಾನೇ ಆಯ್ತಲ್ಲ ಅಂತ ಮೂಗು ಮುರೀತಾ ಇರುವವರಿಗೆ 'ನೋರಿ'ಯ ಸುವಾಸನೆ ಬರ್ತಾ ಇರಬೇಕಲ್ಲ.

ತಜ್ಞ :

ಜಪಾನಿನಲ್ಲಿ ನೋರಿ ಎಂಬ ರುಚಿಯಾದ ಖಾದ್ಯವನ್ನು ತಯಾರಿಸಲು ಬಳಸುವ ಪೋರ್ಫೈರಾ ಎಂಬ ಜಾತಿಯ ಸಸ್ಯ ಬೆಳೆಯುವುದು ಸಮುದ್ರದಲ್ಲೇ.

ನಿರೂಪಕ:

ಫಿಶರೀಸ್ ಕಾಲೇಜಿನ ಶ್ರೀ ಆರ್. ಜೆ. ಕಟ್ಟಿ.

ತಜ್ಞ :

ಸಮುದ್ರ ಸಸ್ಯಗಳಿಂದ ಪಡೆಯುವ ಅಗಾರ್ ಎಂಬ ವಸ್ತುವನ್ನು ಐಸ್‌ಕ್ರೀಂ, ಪುಡಿಂಗ್ ಕೇಕ್ ಇತ್ಯಾದಿಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಸಮುದ್ರ ಸಸ್ಯಗಳನ್ನು ಮನುಷ್ಯ ಮತ್ತು ಪಶುಗಳ ಆಹಾರವಾಗಿ ಹಿಂದಿನಿಂದಲೂ ಉಪಯೋಗಿಸಲಾಗುತ್ತಿದೆ. ಆದರೆ ಪೂರ್ಣ ಪ್ರಮಾಣದ ಉಪಯೋಗ ಇನ್ನೂ ಆಗಿಲ್ಲ. ಹಲವು ಜಾತಿಯ ಸಮುದ್ರ ಸಸ್ಯಗಳು

ಪ್ರೊಟೀನ್, ಪಿಷ್ಟ, ಲವಣ ಮತ್ತು ಜೀವಸತ್ವಗಳನ್ನು ಸಮೃದ್ಧವಾಗಿ ಹೊಂದಿರುವುದರಿಂದ ಮಾನವನ ಆಹಾರವಾಗಿ ಇವುಗಳನ್ನು ವಿಪುಲವಾಗಿ ಉಪಯೋಗಿಸಬಹುದು. ಅನೇಕ ಜಾತಿಯ ಸಮುದ್ರ ಸಸ್ಯಗಳ ಉಪಯೋಗದತ್ತ ನಾವು ತೀವ್ರ ಗಮನ ಹರಿಸಿದಲ್ಲಿ ನಮ್ಮ ಆಹಾರ ಸಮಸ್ಯೆಯನ್ನು ಕೆಲ ಮಟ್ಟಿಗೆ ಕಡಿಮೆಮಾಡಬಹುದು. ಇದಕ್ಕಾಗಿ ನಮ್ಮ ರುಚಿ ಆಹಾರ ವಿಧಾನಗಳನ್ನು ಬದಲಾಯಿಸಿಕೊಳ್ಳಬೇಕು.

ನಿರೂಪಕ:
ಸಮುದ್ರ ಆಹಾರದ ದೊಡ್ಡ ಕಣಜ ಹೌದಾದರೂ ಇದಕ್ಕೆ ಕೆಲವು ಮಿತಿಗಳಿವೆ. ನಿರಾಶೆ ಹೊಂದಬೇಕಾಗಿಲ್ಲ. ಆಹಾರದ ಸಾಧ್ಯತೆ ಕೊನೆಗೊಳ್ಳುವಲ್ಲಿ ಹೊಸ ಅವಕಾಶ ಒಂದರ ಆರಂಭ ಆಗುತ್ತೆ. ಜೀವ ಕೊಟ್ಟ ಸಮುದ್ರ ಜೀವ ಉಳಿಸುತ್ತೆ.

ತಜ್ಞ:
ಸಾಗರವು ಒಂದು ದೊಡ್ಡ ಔಷಧಾಲಯ ಎಂದು ತಿಳಿದುಬಂದಿದೆ. ಸಾಗರ ಜೀವಿಗಳೆಲ್ಲವನ್ನೂ ಆಹಾರ ಎಂದು ಪರಿಗಣಿಸಲಾಗುವುದಿಲ್ಲ. ಅನೇಕ ಸಾಗರ ಜೀವಿಗಳಲ್ಲಿ ಅತಿ ಕಟುವಾದ ವಿಷ ಇದೆ. ಇವುಗಳಲ್ಲಿ ಕೆಲವು ವಿಷಗಳು ಸೈನೈಡಿಗಿಂತ ಹತ್ತು ಸಾವಿರ ಪಟ್ಟು ತೀಕ್ಷ್ಣವಾಗಿವೆ. ಆದರೆ ಈ ವಿಷವೇ ಅಂತಿಮವಾಗಿ ಹೊಸ ಔಷಧಗಳ ಸಂಶೋಧನೆಗೆ ನೆರವಾಗಬಹುದು.

ನಿರೂಪಕ:
ಹೌದು, ನಮಗೆ ಹೊಸ ಔಷಧಗಳು ಬೇಕು. ಯಾಕೆಂದರೆ ಈಗ ಇರೋ ಔಷಧಿಗಳಿಂದ ಕಾಯಿಲೆ ವಾಸಿ ಆಗದೆ ಇರಬಹುದು, ರೋಗಾಣುಗಳು ಹೊಂದಿಕೊಂಡು ಬಿಡಬಹುದು. ಅನಪೇಕ್ಷಿತವಾದ ಉಪಪರಿಣಾಮಗಳು ಆಗಬಹುದು. ಹೊಸ ಕಾಯಿಲೆಗಳೇ ಶುರು ಆಗಬಹುದು. ಆದರೆ ಸಮುದ್ರ ಪ್ರಾಣಿಗಳ ಈ ಜೈವಿಕ ವಿಷದಿಂದ ಹೊಸ ಔಷಧಗಳು ಹೇಗೆ ಸಿಗುತ್ತವೆ? ಮಣಿಪಾಲ ಫಾರ್ಮಸಿ ಕಾಲೇಜಿನ ಡಾ. ಎ. ಆರ್. ಭಟ್ ಅವರನ್ನೇ ಕೇಳೋಣ.

ತಜ್ಞ:
ಅನೇಕ ಜೈವಿಕ ವಿಷಯಗಳು ಅಮೈನ್ಸ್, ಎಂಜೈಮ್ಸ್, ಪ್ರೊಟೀನ್, ಪೆಪ್ಟೈಡ್ ಮುಂತಾದವುಗಳ ಸಂಕೀರ್ಣ ಮಿಶ್ರಣವಾಗಿವೆ ಮತ್ತು ಇವುಗಳನ್ನು ಸಣ್ಣ ಪ್ರಮಾಣದಲ್ಲಿ ಉಪಯೋಗಿಸಿದರೆ ಇವೇ ಅತಿ ಪ್ರಯೋಜನಕಾರಿ ಔಷಧಿಗಳಾಗಿ ಪರಿಣಮಿಸಬಹುದು. ಆದರೆ ಈ ಜೈವಿಕ ವಿಷಗಳ ಬಗ್ಗೆ ತೀವ್ರ ಸಂಶೋಧನೆ ನಡೆಯುವುದು ಅಗತ್ಯವಿದೆ. ಈಗಾಗಲೇ ಸಮುದ್ರ ಕಳೆ, ಹವಳ ಇವುಗಳಿಂದ ಐಯೋಡಿನ್ ಮತ್ತು ಪ್ರೋಸ್ಟೊಗ್ಲಾಂಡಿನ್ ಸಂಯೋಜನೆಯ ಮೂಲವಸ್ತುಗಳನ್ನು ಪಡೆಯುತ್ತಿದ್ದಾರೆ. ಸಮುದ್ರ ಸಸ್ಯಗಳ ಉಪಯುಕ್ತತೆಯನ್ನು ಇನ್ನೂ ಕಂಡುಹಿಡಿಯಬೇಕಾಗಿದೆ. ಸಮುದ್ರ ಔಷಧಶಾಸ್ತ್ರ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಇದು ಬೆಳೆಯಬೇಕಾಗಿದೆ. ಸಾಕಷ್ಟು ಸಂಶೋಧನೆ ನಡೆಯಬೇಕಾಗಿದೆ.

ನಿರೂಪಕ:
ಜಪಾನಿನ ಮಿನಿಮಾಟ ಸಮುದ್ರ ಭಾಗದಲ್ಲಿ ಹಿಡಿದ ಮೀನುಗಳನ್ನು ತಿಂದವರಲ್ಲಿ ಕೆಲವರಿಗೆ ಪಾರ್ಶ್ವವಾಯು ಬಡಿಯಿತು. ಇನ್ನು ಕೆಲವರು ಸತ್ತೇ ಹೋದರು. ಇದಕ್ಕೆ ಕಾರಣ ಆ ಮೀನುಗಳ ದೇಹದಲ್ಲಿದ್ದ ಪಾದರಸದ ಅಂಶ. ಈ ವಿಷ ಅವುಗಳ ದೇಹದಲ್ಲಿ ಉತ್ಪತ್ತಿ ಆದದ್ದಲ್ಲ. ಹೊರಗಿನಿಂದಲೆ ಬಂದು ಸೇರಿದ್ದು.

ತಜ್ಞ:
ಸಮುದ್ರದಿಂದ ಹಾಲಾಹಲ ಬಂದ ಕತೆಯನ್ನು ನಾವೆಲ್ಲ ಕೇಳಿದ್ದೇವೆ. ಆದರೆ ನಿಜ ಸಂಗತಿ ಎಂದರೆ ಸಮುದ್ರವು ಮೇಲೆ ಸೇಡು ತೀರಿಸಿಕೊಳ್ಳುವ ಹಾಗೆ ವಿಷ

ವನ್ನು ಅದರ ಹೊಟ್ಟೆಗೆ ತುಂಬಿಸುತ್ತಾ ಇದ್ದೇವೆ.

ನಿರೂಪಕ:

ಫಿಶರೀಸ್ ಕಾಲೇಜಿನ ಡಾ. ಟಿ. ಆರ್. ಚಂದ್ರಶೇಖರ ಗುಪ್ತ

ತಜ್ಞ:

ಕಚ್ಚಾ ಎಣ್ಣೆ, ಪೆಟ್ರೋಲಿಯಂ, ನದಿಗಳು ಅಪಾರ ಪ್ರಮಾಣದಲ್ಲಿ ಹೊತ್ತು ತರುತ್ತಿರುವ ರಾಸಾಯನಿಕ ಕಶ್ಮಲ, ಅಣು ಸ್ಫೋಟದಿಂದ ಆಗುವ ಅಣುವಿಕಿರಣ ಇವೆಲ್ಲಾ ಸಮುದ್ರವನ್ನು ಮಲಿನಗೊಳಿಸುತ್ತವೆ. ಅಲ್ಲದೆ ಜಗತ್ತಿನ ಯಾವ ಭಾಗದಲ್ಲಿಯಾದರೂ ವಾತಾವರಣ ಕಲುಷಿತವಾದರೆ ಅದರ ಪರಿಣಾಮ ಒಂದಲ್ಲ ಒಂದು ರೀತಿಯಲ್ಲಿ ಸಮುದ್ರದ ಮೇಲೆ ಆಗುತ್ತದೆ. ವಿಷಕಾರಕ ವಸ್ತುಗಳಿಂದ ಮೀನು ಮತ್ತಿತರ ಸಮುದ್ರ ಜೀವಿಗಳ ವಿನಾಶವಾಗುತ್ತದೆ. ಇತರ ವಸ್ತುಗಳಿಂದ ಮಂದಗತಿಯಲ್ಲಿ ಪರೋಕ್ಷ ಪರಿಣಾಮ ಆಗುತ್ತದೆ. ಹೀಗೆ ಕಲುಷಿತ ವಾತಾವರಣದಲ್ಲಿ ಬೆಳೆದ ಜೀವಿಗಳನ್ನು ನಾವು ಉಪಯೋಗಿಸುವಾಗ ಆ ವಿಷ ನೇರವಾಗಿ ನಮ್ಮ ಹೊಟ್ಟೆಗೇ ಹೋಗುತ್ತದೆ. ಏಕೆಂದರೆ ನಾವು ಯಾರೂ ವಿಷಕಂಠರಲ್ಲ.

ನಿರೂಪಕ:

ಸಂಶೋಧನೆ ನಡೆದ ಹಾಗೆ ಸಮುದ್ರದ ಸಾಧ್ಯತೆಗಳು ಇನ್ನೆಷ್ಟು ತೆರೆದುಕೊಳ್ಳುತ್ತವೋ ಹೇಳುವುದಕ್ಕಾಗುವುದಿಲ್ಲ. ಆದರೆ ಸಮುದ್ರವಿದೆಯಲ್ಲ; ಇನ್ನು ಪರವಾ ಇಲ್ಲ ಎನ್ನುವ ಅತಿ ಉತ್ಸಾಹ ಸಲ್ಲದು ಅಂತಾರೆ ವಿಜ್ಞಾನಿಗಳು. ನಮ್ಮ [illegible]ಯಿಂದಾಗಿ ಸಮುದ್ರದ ಸೂಕ್ಷ್ಮ ಸಮತೋಲಗಳು ಹಾಳಾದರೆ ಪರಿಣಾಮ ವಿಪರೀತ ಆಗಬಹುದು. ನಮಗಿರೋದು ಒಂದೇ ಭೂಮಿ. ಒಂದೇ ಸಮುದ್ರ. ಭೂಮಿಯನ್ನು ಸಾಕಷ್ಟು ಹಾಳು ಮಾಡಿದ್ದೇವೆ (ಅಲೆಗಳ ಸದ್ದು) ಸಮುದ್ರವನ್ನಾದರೂ ಸರಿಯಾಗಿ ಉಳಿಸಿಕೊಳ್ಳೋಣ. ಯಾಕೆಂದರೆ ನಮ್ಮ ಭೂತಕಾಲ ಅಡಗಿರೋ ಸಮುದ್ರದಲ್ಲೇ ನಮ್ಮ ಭವಿಷ್ಯದ ಬಹುಪಾಲು ಇದೆ.

(ಸಮುದ್ರದ ಮೊರೆತದ ಹಿನ್ನೆಲೆಯಲ್ಲಿ ನಿರೂಪಕ ಕೊನೆಯ ವಾಕ್ಯ ಹೇಳುತ್ತಾನೆ)

ನಿರೂಪಕ:

ಉಪ್ಪು ಕೊಡುವ ಮನೆಗೆ ಎರಡು ಬಗೆಯುವುದು ಬೇಡ. (ಸಾಗರದ ಮೊರೆತದೊಂದಿಗೆ ಮಕ್ಕಳ ನಗು ಸೇರುತ್ತದೆ. ಮುಕ್ತಾಯದ ನಿವೇದನೆ ಆರಂಭ ಆಗುತ್ತದೆ. ಸಮುದ್ರ ಮತ್ತೆ ಜೋರಾಗಿ ಮೊರೆಯುತ್ತದೆ. ಮಕ್ಕಳ ಕಿಲ ಕಿಲ ನಗು ಸೇರಿಕೊಳ್ಳುತ್ತದೆ – ಎಷ್ಟಾದರೂ ನಾವು ಕಡಲಿನ ಮಕ್ಕಳು ಕಡಲತಡಿಯ ಮಕ್ಕಳು ಎಂದು ಧ್ವನಿಸಲಿ. ಇದು ನಿಧಾನವಾಗಿ ಕಡಿಮೆ ಆಗುತ್ತದೆ.) ★

(ಮಂಗಳೂರು 'ಆಕಾಶವಾಣಿ'ಯ ವಿಜ್ಞಾನ ಭಾರತಿಯಲ್ಲಿ ಪ್ರಸಾರವಾದ ರೂಪಕವಿದು. ಇದನ್ನು ರಚಿಸಿದವರು ಶ್ರೀ ಕೆ. ಟಿ. ಕೃಷ್ಣ ಕಾಂತ್ ಅವರು.)

ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯಾ !
ಆ ಕೂಸು ಬೀದಿಯಲ್ಲಿ ಒತ್ತೆಗೊಳ್ಳಲು ನಿಂದಿತ್ತಯ್ಯಾ !
ಇದರ ಸಂಗಸುಖದನುಭಾವವನು
ಕೂಡಲ ಸಂಗಮದೇವ ತಾನೇ ಬಲ್ಲ !

— ಬಸವೇಶ್ವರ

ಕ್ಯಾನ್ಸರ್ ವಿಮುಕ್ತಿ

ಸುಮಿತ್ರ ಎಂಬ ೨೧ ವಯಸ್ಸಿನ ನನಗೆ ೩ ಜನ ಮಕ್ಕಳು, ನನ್ನ ಮೊದಲ ಹೆರಿಗೆಯ ಪ್ರಾರಂಭದಲ್ಲಿ ನನ್ನ ಎರಡೂ ಸ್ತನಗಳ ಮೂಲಕ ಕೀವು ಮತ್ತು ರಕ್ತ ಸೋರಲು ಪ್ರಾರಂಭವಾಯಿತು. ನಾನು ಕ್ಯಾನ್ಸರ್ ತಜ್ಞರನ್ನು ಭೇಟಿ ಮಾಡಿದೆ. ಅವರು ನನ್ನನ್ನು ಪರೀಕ್ಷಿಸಿ ನನಗೆ ಎದೆಯ ಕ್ಯಾನ್ಸರ್ ಇದೆಯೆಂದು ತಿಳಿಸಿದರು. ಮತ್ತು ಶಸ್ತ್ರಚಿಕಿತ್ಸೆಮಾಡಿ ಎರಡೂ ಸ್ತನಗಳನ್ನು ತೆಗೆದುಹಾಕಬೇಕೆಂದು ಹೇಳಿದರು. ನಾನು ಇದಕ್ಕೆ ಒಪ್ಪದೆ ಚಿಕ್ಕಡಪಲ್ಲಿ (ಹೈದರಾಬಾದ್)ಯಲ್ಲಿರುವ ಆಯುರ್ವೇದಿಕ್ ಕ್ಯಾನ್ಸರ್ ತಜ್ಞ ಡಾ|| ಎಂ. ಬಾಬುರಾವ್‌ರವರ ಬಳಿ ಹೋಗಿ ಅವರು ಕೊಟ್ಟ ಆಯುರ್ವೇದಿಯ ಔಷಧಿಯನ್ನು ಸೇವಿಸತೊಡಗಿದೆ.

ಹನ್ನೆರಡು ವಾರಗಳ ಔಷಧಿ ಸೇವನೆಯಿಂದ ಕೀವು ಮತ್ತು ರಕ್ತ ಸೋರುವಿಕೆ ಪೂರ್ಣ ನಿಂತುಹೋಯಿತು ಹಾಗೂ ಕ್ಯಾನ್ಸರ್ ರೋಗವು ಪೂರ್ಣ ಗುಣವಾಗಿದೆಯೆಂದು ನನ್ನನ್ನು ನಂತರ ಪರೀಕ್ಷಿಸಿದ ತಜ್ಞರು ಖಚಿತಪಡಿಸಿದರು. ಈಗ ನಾನು ನನ್ನ ಮಕ್ಕಳೊಡನೆ ಸುಖವಾಗಿದ್ದೇನೆ. ನಾನು ಇದಕ್ಕಾಗಿ ಆಯುರ್ವೇದಿಕ್ ಕ್ಯಾನ್ಸರ್ ತಜ್ಞ ಡಾ|| ಎಂ. ಬಾಬುರಾವ್‌ರವರಿಗೆ ಚಿರಋಣಿ.

ಸುಮಿತ್ರದೇವಿ,
೧೨-೬-೫೧೩/೮, ಬೇಗಂ ಬಜಾರ್ ಹೈದರಾಬಾದ್

ಡಾ|| ಎಂ. ಬಾಬುರಾವ್‌ರ ವಿಳಾಸ ಹಾಗೂ ಸಂದರ್ಶನ ಕಾರ್ಯಕ್ರಮ

೧. **ಕ್ಯಾನ್ಸರ್ ಇನ್‌ಫರ್ಮರಿ** ೬೨೬೫೫ **ಪ್ರತಿ ಗುರುವಾರ**
೧೧.೨೬೧/೩, **ಹೈದರಾಬಾದ್-೨೦.** ಮತ್ತು **ಶುಕ್ರವಾರ**

೨. C/o. ಹೋಟೆಲ್ ಸುಧಾರ ೪೪೫೧೬೪
ಉಸ್ಮಾನ್‌ರೋಡ್,
ಟಿ.ನಗರ ಮದ್ರಾಸ್-೬೦೦ ೦೧೭ ಪ್ರತಿ ಶನಿವಾರ

೩. C/o. ಬೃಂದಾವನ್ ಹೋಟೆಲ್
ಎಂ.ಜಿ.ರಸ್ತೆ **ಬೆಂಗಳೂರು-೫೬೦೦೦೧ ೫೩೨೬೧ ಪ್ರತಿ ಭಾನುವಾರ**

೪. C/o. ಮಿಡ್ ಟೌನ್ ಹೋಟೆಲ್
ರೈಲ್ವೆ ಸ್ಟೇಷನ್ ಎದುರು ೫೬೫೬೩೪ **ಪ್ರತಿ ಬುಧವಾರ**
ಅಂಧೇರಿ ವೆಸ್ಟ್ **ಬೊಂಬಾಯಿ.**

ವಿಧಿವೈಪರೀತ್ಯದ ಎರಡು ಅರಳುಗಳು

ಮೂಲ : 'ಲಕ್ಷ್ಮಿ'

ಅನುವಾದ : ಬಿ. ಆರ್. ಶಂಕರ್

ಮಹಾಲಕ್ಷ್ಮಿ ಮತ್ತು ರಾಜಾತ್ತಿ ಎಂಬ ಗೆಳತಿಯರು ಸಿನಿಮಾಕ್ಕೆ ಹೋದರು. ಮಧ್ಯಂತರದ ಬಳಿಕ ಮಹಾಲಕ್ಷ್ಮಿಗೆ 'ಹೊರಗೆ' ಹೋಗಬೇಕಾದ ಅವಸರವಾಯಿತು. ಗೆಳತಿಯನ್ನು ತನ್ನೊಡನೆ ಬರಲು ಕರೆದಳು ಮಹಾಲಕ್ಷ್ಮಿ. ಆದರೆ ಚಿತ್ರವನ್ನು ನೋಡುವ ಸ್ವಾರಸ್ಯದಲ್ಲಿ ರಾಜಾತ್ತಿ ತನ್ನ ಜಾಗವನ್ನು ಬಿಟ್ಟು ಕದಲಲಿಲ್ಲ. ತುಸು ಸಮಯಕ್ಕೆಲ್ಲ ಚಿತ್ರಮಂದಿರದಲ್ಲಿ ಬೆಂಕಿ ಹತ್ತಿಕೊಂಡಿತು. ಸುದೈವಕ್ಕೆ ಹೊರಗೆ ಹೋದ ಮಹಾಲಕ್ಷ್ಮಿ ಬದುಕಿಕೊಂಡಳು. ಒಳಗೆ ಸಿಕ್ಕ ರಾಜಾತ್ತಿ ಸತ್ತಳು. ಸ್ವಲ್ಪ ಕಾಲದ ಹಿಂದೆ ತೂತ್ತುಕುಡಿಯಲ್ಲಿ ನಡೆದ ಈ ದುರಂತದ ವಿವರಗಳನ್ನು ಪತ್ರಿಕೆಗಳಲ್ಲಿ ಓದಿ "ವಿಧಿ, ಹೇಗೆಲ್ಲ ತನ್ನ ಕೈಚಳಕ ತೋರಿಸುತ್ತೆ ಅಂತ ನೋಡಿದೆಯಾ?" ಎಂದಳು ನನ್ನ ಗೆಳತಿ. ನಾನು ಮೌನವಾಗಿ ಗೋಣು ಹಾಕಿದೆ. ಹಲವಾರು ವರ್ಷಗಳ ಅನುಭವದಲ್ಲಿ ನಾನು ನನ್ನ ಮನಸ್ಸಿನಲ್ಲಿ ನಿರ್ಧರಿಸಿ ಆಚರಣೆಗೆ ತಂದಿದ್ದ ಅಭಿಪ್ರಾಯಗಳಲ್ಲಿ ಹಲವು ಸಂಗತಿಗಳು ಬದಲಾಗಿವೆ. ಈಗ ಗೆಳತಿ ಅಂದ ಮಾತನ್ನು ಆಗ ಅಂದಿದ್ದರೆ...ನಾನು ನನ್ನ ವೈದ್ಯವೃತ್ತಿಯನ್ನು ಪ್ರಾರಂಭಿಸಿದ ದಿನಗಳಲ್ಲಿ ಈ ಮಾತನ್ನು ಹೇಳಿದ್ದರೆ ನಾನ್‌ಸೆನ್ಸ್! ವಿಧಿಯಂತೆ! ಹಾಗೊಂದಿದೆಯೆ? ಇವೆಲ್ಲ ಅನಿರೀಕ್ಷಿತ ಘಟನೆಗಳು" ಎಂದು ವಿತಂಡವಾದ ಮಾಡುತ್ತಿದ್ದೆ......

ಬಹಳ ವರ್ಷಗಳ ಹಿಂದೆ ಒಂದು ದಿನ ಬೆಳಗ್ಗೆ ಒಬ್ಬ ಬಸುರಿ ಹೆಣ್ಣು ನನ್ನನ್ನು ಕಾಣಲು ಬಂದಿದ್ದಳು. ತುಂಬು ದೇಹ, ಎಂಟು ತಿಂಗಳು ತುಂಬಿತ್ತು. ಬೇರೆ ಊರಿನಿಂದ ಬಂದವಳೆಂದು ಮಾತಿನಿಂದ ಗ್ರಹಿಸಿದೆ; ಸಿಂಗಪುರದಿಂದ ಬಂದಿದ್ದಳು.

"ಹೆರಿಗೆಗೆ ಸಿಂಗಪುರದಿಂದ ಇಲ್ಲಿಗೆ ಬರಬೇಕೆ? ಅದೂ ದಿನ ತುಂಬಿದ ದಿನಗಳಲ್ಲಿ ಒಬ್ಬಳೇ ಪ್ರಯಾಣ ಮಾಡಿದುದು ತಪ್ಪು," ಅಂದೆ.

"ಬಂಧುವರ್ಗದವರನ್ನು ನೋಡಿಕೊಂಡು ಹೋಗಲು ಬಂದೆ," ಎಂದಳು.

ಆಕೆ ಆಧುನಿಕ ರೀತಿಯಲ್ಲಿ ಸೀರೆಯನ್ನು ಉಟ್ಟಿದ್ದಳು. ಹಿಡಿದಿದ್ದ ಕೈಚೀಲದಲ್ಲಿ ನೋಟಿನ ಕಂತೆಗಳು, ವೈಮೋಲೆ ಆಭರಣಗಳು. ವಿದೇಶದಲ್ಲಿ ಸುಖವಾಗಿರುವಳೆಂದು ಗ್ರಹಿಸಿದೆ. ಆಕೆಯನ್ನು ಅವಳ ವಾರಗಿತ್ತಿ ಕರೆದುಕೊಂಡು ಬಂದಿದ್ದಳು.

ಬಸುರಿ ಹೆಂಗಸನ್ನು ಪರೀಕ್ಷಿಸಿದ ನಾನು ಜತೆಗೆ ಬಂದವಳೊಡನೆ ಏಕಾಂತದಲ್ಲಿ, "ಮೈಯಲ್ಲಿ ನೀರು ತುಂಬಿದೆ. ರಕ್ತದ ಒತ್ತಡ ವಿಪರೀತವಾಗಿದೆ. ಇನ್ನೂ ಹಲವು ಬಗೆಯ ದೇಹ ಬಾಧೆ

(ಶಿವಶೀಲ 'ವೈದ್ಯರ ಕೈಗೆ ಬಂದ ಹೂಗಳು'ದಿಂದ)

ಗಳಿವೆ. ಸಾಲದುದಕ್ಕೆ ದಿನ ತುಂಬಿದೆ. ಈ ಪರಿಸ್ಥಿತಿಯಲ್ಲಿ ಈಕೆ ಒಬ್ಬಳೇ ಹೋಗಬಾರದು. ಅವಸರವಾಗಿ ಆಸ್ಪತ್ರೆಗೆ ಸೇರಿಸಿ," ಎಂದೆ.

"ಮನೆಯಲ್ಲೇ ಹೆರಿಗೆ ಆಗಲಿ. ನೀವೇ ನೋಡಿಕೊಳ್ಳಿ," ಎಂದು ಅವಳು ಕೇಳಿಕೊಂಡಳು. ಜತೆಗೆ, "ಫೀಜು ಎಷ್ಟು ಬೇಕಾದರೂ ಕೊಡ್ತೀನಿ ಆಸ್ಪತ್ರೆ ಅಂದರೆ ನನಗೆ ಅಲರ್ಜಿ ಅಂದಳು," ಆ ವಿದೇಶೀ ಹೆಣ್ಣು.

"ಈ ವಿಚಾರ ಫೀಜಿನದಲ್ಲ. ನಿಮ್ಮ ಆರೋಗ್ಯದ ಪ್ರಶ್ನೆ. ನುರಿತ ವೈದ್ಯರ ನೇತೃತ್ವದಲ್ಲಿ ನಡೆಯುವ ನರ್ಸಿಂಗ್ ಹೋಮಿಗೆ ನಿಮ್ಮನ್ನು ಸೇರಿಸುತ್ತೇನೆ. ಖಂಡಿತ ನೀವು ಆಸ್ಪತ್ರೆಯಲ್ಲೇ ಇರಬೇಕು...ಇಲ್ಲದಿದ್ದರೆ..." ಎಂದೆ.

ಹೆಸರಾಂತ ನರ್ಸಿಂಗ್ ಹೋಮಿನಲ್ಲಿ ಆಕೆಯನ್ನು ಸೇರಿಸಿದೆವು. ನಾನು ನಿರೀಕ್ಷಿಸಿದ್ದಂತೆ ಕೆಲವೇ ದಿನಗಳಲ್ಲಿ ಆಕೆಯ ದೇಹ ಸ್ಥಿತಿ ಉಲ್ಬಣಗೊಂಡಿತು. ತಾಯಿ ಮಗುವನ್ನು ಕಾಪಾಡಲು ಸಿಸೇರಿಯನ್ ಚಿಕಿತ್ಸೆ ಮಾಡಬೇಕಾಯಿತು. ನನಗೆ ಹೇಳಿ ಕಳುಹಿಸಿದುದರಿಂದ ನಾನು ಧಾವಿಸಿದೆ.

ದಿನವಾಗಿಲ್ಲದಿದ್ದರಿಂದ ಕೊರೆ ಪ್ರಸವವಾಯಿತು. ಮಗು ಚೆನ್ನಾಗಿತ್ತು. ಆರೋಗ್ಯವಾಗಿತ್ತು. ಹೆಣ್ಣು ಮಗು. ಮಗುವನ್ನು ಎತ್ತಿಕೊಂಡು ನಾವು ಸಂತೋಷಪಟ್ಟೆವು.

ತಾಯಿಗೆ ಸ್ಮರಣೆ ಬಂದ ಮೇಲೆ ಜ್ವರ ಕಾಣಿಸಿಕೊಂಡಿತು. ಜ್ವರ ತಾಪದಲ್ಲಿ ಬಾಯಿಗೆ ಬಂದಂತೆ ಬಡಬಡಿಸುತ್ತಿದ್ದಳು. ಮಗುವನ್ನು ಎತ್ತಿಕೊಳ್ಳಲು ಆಕೆಗೆ ಅವಕಾಶವೇ ಇರಲಿಲ್ಲ. ಒಂದಾದಮೇಲೊಂದರಂತೆ ಬಗೆಬಗೆಯ ನೋವುಗಳು ಪ್ರಾರಂಭವಾಗಲು ಆಕೆಯ ಪತಿಯನ್ನು ಕೂಡಲೇ ಬರಮಾಡಬೇಕೆಂದು ವೈದ್ಯರು ಹೇಳಿಬಿಟ್ಟರು.

ತಾರುಗಳು, ಕೇಬಲ್‌ಗಳು ಧಾವಿಸಿದವು. ನೆಂಟರಿಷ್ಟರು ಹತಾಶರಾದರು. ನನ್ನ ಹೃದಯದಲ್ಲಿ ಕಳವಳ. ದಿನವೂ ನರ್ಸಿಂಗ್ ಹೋಮಿಗೆ ಹೋಗಿ ಬರುತ್ತಿದ್ದೆ.

ಆಕೆಯ ಪತಿ ತಡ ಮಾಡದೆ ಎರಡೇ ದಿನಗಳಲ್ಲಿ ಬಂದರು. ತಮ್ಮ ಪ್ರಿಯ (ಮಡದಿಯನ್ನು ಕಾಣಲು ಅವರು ನರ್ಸಿಂಗ್ ಹೋಂ ಮುಟ್ಟುವಷ್ಟರಲ್ಲಿ ಸಾವು ಆಕೆಯನ್ನು ಅಪ್ಪಿಸಿತ್ತು! ತಾಯ್ನಾಡಿನಲ್ಲಿ ತನ್ನ ಬಂಧುಮಿತ್ರರನ್ನು ಕಾಣಲು ಬಂದಾಕೆಗೆ ಇಂಥ ಅಂತ್ಯ ಬರಬೇಕಾಗಿತ್ತೆ?

ಕರ್ಮ ದಿನಗಳು ಪ್ರಾರಂಭವಾದವು. ಸ್ಮಶಾನಕ್ಕೆ ಹೋಗಿ ವಾಪಸು ಬರುವಾಗ ಮೃತಳ ಪತಿಗೆ ಹೃದಯಾಘಾತವಾಯಿತು. ಕುಸಿದು ಬಿದ್ದವರು ಮತ್ತೆ ಮೇಲೇಳಲಿಲ್ಲ.

ಬಂಧುವರ್ಗದವರಿಗೆಲ್ಲ ಹೊಡೆತದ ಮೇಲೆ ಹೊಡೆತ. ನಾನೂ ಕುಸಿದುಹೋದೆ.

ಹುಟ್ಟಿದ ಕೆಲವೇ ದಿನಗಳಲ್ಲಿ ತಾಯಿ ತಂದೆಯನ್ನು ಕಳೆದುಕೊಂಡ ಮಗುವಿನ ಭವಿಷ್ಯ? ವಿದೇಶದಲ್ಲಿ ಬೇಕಾದಷ್ಟು ಆಸ್ತಿ ಇತ್ತು. ಆದರೆ ಅದನ್ನು ತರುವಂತಿಲ್ಲ. ಹತ್ತಿರವರಿಲ್ಲದೆ ಬಂಧುಗಳ ಆಶ್ರಯದಲ್ಲಿ ಅನಾಥೆಯಾಗಿ ಬದುಕಬೇಕಾಗಿ ಬಂದ ಮಗುವಿನ ಮುಖವನ್ನು ಕಂಡಾಗ ನನಗಾದ ಸಂಕಟ ವಿವರಿಸಲಳವಲ್ಲ.

ಅದೇ ಮೊದಲಿಗೆ ಒಂದು ಸತ್ಯದ ಅರಿವಾಯಿತು ನನಗೆ. ವೈದ್ಯರು ಕೆಲವು ಸಾಮಾನ್ಯ ಬಗೆಯ ರೋಗಗಳನ್ನು ತಾವು ಪಡೆದುಕೊಂಡಿರುವ ವಿದ್ಯೆಯ ಜ್ಞಾನದಿಂದ ಗುಣಪಡಿಸಬಲ್ಲರು. ಕೆಲವು ಕಾಯಿಲೆಗಳನ್ನು ವಾಸಿಮಾಡಲು ಹೊಸ ಔಷಧಿಗಳನ್ನು ಕಂಡುಹಿಡಿಯಲಾಗುತ್ತಿದೆ. ನಿಜ: ವೈಜ್ಞಾನಿಕ ಜ್ಞಾನ ಬೆಳೆಯುತ್ತಿದೆ. ಆದರೆ ಜರಾಮರಣದಿಂದ ದೇಹಕ್ಕೆ ಚಿರಂಜೀವತ್ವವನ್ನು ತಂದುಕೊಡಬಲ್ಲ ಔಷಧಿಯನ್ನು ಕಂಡುಹಿಡಿಯಲಾಗಿಲ್ಲ.

ಅದ್ಯಾಪಿ ವೈದ್ಯರ ಕೈಗೆ ಸಿಕ್ಕದ ಕೆಲವು ಘಟನೆಗಳು ನಡೆದುಹೋಗುತ್ತವೆ. ಸಾವು ಜಯಭೇರಿ ಹೊಡೆಯುತ್ತದೆ. ನಿನ್ನೆ ವರೆಗೆ ಸುಖವಾಗಿದ್ದವರು ಇಂದು ಅನಾಥರಾಗಿ ರಸ್ತೆಯ ಬದಿಯಲ್ಲಿ ನಿಲ್ಲುವಂತಾಗಿಬಿಡುತ್ತದೆ. ಹೀಗೇಕೆ? ಇದೇ ವಿಧಿಯೆ? ಈ ಪ್ರಶ್ನೆಗೆ ನಾನಿನ್ನೂ ಉತ್ತರವನ್ನು ಹುಡುಕುತ್ತಿದ್ದೇನೆ.

●


ವಾರ್ಷಿಕ ರಜೆಯಲ್ಲಿ ಆಫ್ರಿಕದಿಂದ ತಾಯ್ನಾಡಿಗೆ ಬರುವುದನ್ನು ನಾನು ಅಭ್ಯಾಸ ಮಾಡಿಕೊಂಡಿದ್ದೆ. ಹೀಗೆ ಬಂದ ಸಂದರ್ಭದಲ್ಲಿ ಒಮ್ಮೆ ಮುಂಬೈಯಿಂದ ಮದರಾಸಿಗೆ ಹೋಗಲು ವಿಮಾನದಲ್ಲಿ ಸ್ಥಳ ಸಿಗಲಿಲ್ಲ. ಆದ್ದರಿಂದ ಒಂದು ದಿನವನ್ನು ಮುಂಬೈಯಲ್ಲೆ ಕಳೆಯಬೇಕಾಗಿ ಬಂತು.

ಪಂಚತಾರಾ ಹೋಟಲ್ ಆದರೂ ಸ್ವಾಗತದ ಹಾಲಿನಲ್ಲಿ ಬರಹೋಗುವವರನ್ನು ನೋಡುತ್ತ ಕುಳಿತು ಬೇಸರ ಬಂತು; ಆಗ ನೆನಪಾಯಿತು.

ಪರಿಚಿತ ಮಿತ್ರರೊಬ್ಬರು ತಮ್ಮ ಸಂಸಾರದೊಡನೆ ಮುಂಬೈಯಲ್ಲಿ ವಾಸಿಸುತ್ತಿದ್ದರು. ದೂರವಾಣಿಯಲ್ಲಿ ಸಂಪರ್ಕ ಪಡೆದೆ. ಮಿತ್ರರು ಬಂದು ನನ್ನನ್ನು ತಮ್ಮ ಮನೆಗೆ ಭೋಜನಕ್ಕೆ ಕರೆದುಕೊಂಡು ಹೋದರು.

ಔತಣಕ್ಕೆ ಏರ್ಪಾಟು ಮಾಡಿದ್ದರು. ಅದರಲ್ಲಿ ಭಾಗವಹಿಸಲು ಒಂದು ತರುಣ ದಂಪತಿಯೂ ಬಂದಿತ್ತು. ಊಟದ ನಂತರ ಹೊಸ ಜೋಡಿಯ ಪರಿಚಯವಾಯಿತು.

"ನನಗೆ ನೀವು ಗೊತ್ತು; ಎದುರಿಗೆ ನೋಡಿಲ್ಲ ಅಷ್ಟೇ," ಎಂದು ಹೇಳಿದ ಆ ಹುಡುಗಿ ಭಾವನಾ



"ಕ್ಷಮಿಸಿ ಮಿನಿಸ್ಟ್ರೆ... ಇದು ಈವತ್ತಿನ ಭಾಷಣದ ಪ್ರತಿ... ಈಗ ನೀವು ಓದ್ತಾ ಇರೋದು ಶ್ರದ್ಧಾಂಜಲಿಯ ಭಾಷಣ."

ಪರಿಚಿತಳಾದವಳಂತೆ ನನ್ನ ಮಗ್ಗುಲಲ್ಲೆ ಬಂದು ಕುಳಿತುಕೊಂಡಳು.

ಅವಳ ವಯಸ್ಸು ಇಪ್ಪತ್ತು ಇರಬಹುದು. ಕೆಂದಿಗೆ ಬಣ್ಣ, ಅಗಲವಾದ ಕಣ್ಣುಗಳು, ಅಂಥ ಗಾತ್ರವಲ್ಲದ ದೇಹ. ಎಲ್ಲಿ ನೋಡಿದ್ದೇನೆ? ಎಂದು ಚಿಂತಿಸಿದೆ.

ಅವಳಿಗೆ ಲಗ್ನವಾಗಿ ಕೆಲವೇ ತಿಂಗಳಾಗಿದ್ದುವು. ಅವಳ ಗಂಡನೂ ಮುಂಬೈಯಲ್ಲೆ ಕೆಲಸ ಮಾಡು ತ್ತಿದ್ದ. ನಮ್ಮ ಮಿತ್ರರ ಆಫೀಸಿನಲ್ಲಿ ಪರಿಚಿತ ನಾದವನು. ಆ ಸ್ನೇಹದಲ್ಲಿ ಅವರು ಬಂದಿದ್ದರು.

"ನಮ್ಮ ತಾಯಿ ಹೃದ್ರೋಗಿ. ನೀವೇ ಆಕೆಯ ಹೆರಿಗೆ ಮಾಡಿಸಿದರಂತೆ. ಆಗ ಹುಟ್ಟಿದವಳೇ ನಾನು," ಎಂದಾಗ ಅವಳ ಕಂಠ ಗದ್ಗದಿತವಾಗಿತ್ತು.

ನನ್ನ ಬಳಿ ಬಂದವರಲ್ಲಿ ಕೆಲವರು ಹೃದ್ರೋಗಿ ಗಳಿದ್ದರು. ಯಾರಿರಬಹುದು? ನಡುವೆ ಹಲ ವಾರು ವರ್ಷಗಳು ಉರುಳಿವೆ. ನೆನಪಿಗೆ ಬರಲಿಲ್ಲ.

ತನ್ನ ತಾಯಿಯ ಹೆಸರು, ಅವರಿದ್ದ ವಿಳಾಸ, ವರ್ಷ, ತಾರೀಖು ಎಲ್ಲವನ್ನೂ ಹೇಳಿ ಕೆಲವು ಮುಖ್ಯ ಘಟನೆಗಳನ್ನು ಆಕೆ ನೆನಪಿಸಿದಾಗ ಹೃದಯದಾಳದಲ್ಲಿ ಹುದುಗಿದ್ದ ನೆನಪು ಮೆಲ್ಲನೆ ಗರಿಯೊಡೆಯಿತು.

"ಓಹೋ ಈಗ ನೆನಪಿಗೆ ಬರುತ್ತಿದೆ," ಎಂದು ನಾನು ಆ ಹೆಣ್ಣನ್ನು ಪ್ರೀತಿಯಿಂದ ನೋಡಿದೆ. ಅವಳು ಹುಟ್ಟಿದಾಗ ಅವಳನ್ನು ಎತ್ತಿಕೊಂಡ ಸಂದರ್ಭದಲ್ಲಿ ಮೂಡಿದ್ದ ಭಾವನೆಗಳ ನೆನಪು ಹೃದಯವನ್ನು ಭಾರ ಮಾಡಿತು.

•

ಆ ದಿನಗಳಲ್ಲಿ ನಾನು ಮಲಗುವುದಕ್ಕೆ ಮುಂಚೆ ಒಂದೇ ಚಿಂತನೆಯಲ್ಲಿರುತ್ತಿದ್ದೆ. 'ನಾನು ಎತ್ತಿಕೊಂ ಡಿರುವ ಕೇಸುಗಳಲ್ಲಿ ಯಾವ ರೋಗಿಗೂ ಇಂದು ರಾತ್ರಿ ನೋವು ಕಾಣಿಸಿಕೊಳ್ಳಬಾರದು. ಊಹುಂ… ನನ್ನ ಕೈಲಿನ್ನು ನಿದ್ದೆ ಕೆಡಲು ಸಾಧ್ಯವಾಗುವದಿಲ್ಲ.'

ಮೂರು ದಿನಗಳು ಸತತವಾಗಿ ಇಡೀ ರಾತ್ರಿ ಹೆರಿಗೆಯ ಕೇಸುಗಳನ್ನೇ ಗಮನಿಸಿದ್ದ ನಾನು ಸೋತುಹೋಗಿದ್ದೆ. ನನ್ನನ್ನು ಮೀರಿ ಅಂದು ಸುಖನಿದ್ರೆಯಲ್ಲಿ ಲೀನಳಾಗಿದ್ದೆ. ಆಗ ಕರೆ ಗಂಟೆ ಸದ್ದು ಮಾಡಿತು. ಎಚ್ಚರವಾಯಿತು. ತಂದೆಯ ವರು ಕದವನ್ನು ತೆರೆದರು.

"ಬೇಗ ಬಂದು ಉಪಕರಿಸಬೇಕು; ಕಾರು ತಂದಿ ದ್ದೀನಿ" ಎಂದು ಜಿದಪಡಿಸುತ್ತಿದ್ದ ತರುಣ. ನನಗೆ ಪರಿಚಿತರ ಮನೆಯವನು. ಅವನ ಅಕ್ಕ ತಾನು ಗರ್ಭಿಣಿಯಾಗಿದ್ದಾಗ ನನ್ನ ಬಳಿಗೇ ಬಂದಿದ್ದಳು.

ಪರೀಕ್ಷೆ ನಡೆಸಿದಾಗ ಅವಳಿಗೆ ಹೃದಯ ದೌರ್ಬಲ್ಯವಿರುವುದನ್ನು ಕಂಡು ಆತಂಕವಾಯಿತು. ಅವಳಿಗೆ ಮದುವೆ ಮಾಡಿದುದೇ ತಪ್ಪು. ಅದರ ಮೇಲೆ ಅವಳಿಗೆ ತಾಯ್ತನ ಬಂದುದು ಇನ್ನೂ ತಪ್ಪು. ಅಂಥ ಪರಿಸ್ಥಿತಿಯಲ್ಲಿ ಅವಳನ್ನು ಎಚ್ಚರ ದಿಂದ ಆಸ್ಪತ್ರೆಯಲ್ಲಿ ನೋಡಿಕೊಳ್ಳಬೇಕು. ಮನೆ ಯಲ್ಲಿ ಹೆರಿಗೆಯಾಗುವುದು ದೊಡ್ಡ ತಪ್ಪಾಗುತ್ತ ದೆಂದು ಮೊದಲೇ ಎಚ್ಚರಿಸಿದ್ದೆ. ಮತ್ತೆ ಆ ಹುಡುಗಿ ಬಂದಿರಲಿಲ್ಲ. ನಾನು ಬರೆದುಕೊಟ್ಟ ಪತ್ರದ ಮೇಲೆ ಆಸ್ಪತ್ರೆಯಲ್ಲಿ ದಾಖಲಾಗಿರಬಹುದೆಂದು ಭಾವಿಸಿದ್ದೆ.

ಸೂಲಗಿತ್ತಿಯನ್ನು ಇಟ್ಟುಕೊಂಡು ಮನೆಯಲ್ಲೆ ಹೆರಿಗೆ ಮಾಡಿಸುವುದೆಂದು ಮನೆಯವರು ನಿರ್ಧರಿಸಿದ್ದರು. ಉಸಿರಾಡಲು ಕಷ್ಟಪಡುತ್ತ, ನೋವು ತಿನ್ನುತ್ತ ಯಾತನೆಪಡುವುದನ್ನು ಕಂಡು ಅಂಜಿದ ಸೂಲಗಿತ್ತಿ ನನಗೆ ಹೇಳಿ ಕಳುಹಿದ್ದಳು.

ಆಗುವುದಿಲ್ಲವೆಂದು ಹೇಳಲಾಗದೆ ಹೊರಗೆ ಹೊರಡುವ ಮುನ್ನ ನಮ್ಮ ತಂದೆಯವರೊಡನೆ (ಅವರೂ ಒಬ್ಬ ನುರಿತ ವೈದ್ಯರು) ಸಮಾಲೋಚನೆ ನಡೆಸಿ ಅವರ ಸಲಹೆ ಪಡೆದುಕೊಂಡು ಹೊರಟೆ.

ಮನೆಯಲ್ಲಿನ ಪರಿಸ್ಥಿತಿ ಶೋಚನೀಯವಾ ಗಿತ್ತು. ಸಂದಿಗ್ಧ ಸ್ಥಿತಿಯಲ್ಲಿ ಹೆರಿಗೆಯಾಗಬೇಕಾ ಗಿದ್ದುದರಿಂದ ಆ ಹೆಣ್ಣು ಮಗಳನ್ನು ನರ್ಸಿಂಗ್ ಹೋಮಿಗೆ ಕರೆದುಕೊಂಡು ಹೋಗಲಾಗಲಿಲ್ಲ.

ಹೆರಿಗೆಯಾದ ಕೂಡಲೇ ಅವಳು ಸಾಯಬಹು ದೆಂಬ ಅಂಜಿಕೆ. ನಾನು ಮುಟ್ಟಿದ ಕೇಸುಗಳಲ್ಲಿ ಇದುವರೆಗೆ ಯಾವುದು ಅಹಿತಕರವಾಗಿ ಮುಗಿದಿಲ್ಲ ಅಂತಿರುವಾಗ ಈಕೆಗೇನಾದರೂ ಆದರೆ… ನನ್ನ ಹೆಸರು ಸಾಯುವುದಲ್ಲ ಎಂದು ಅಂಜಿದೆ.

ಲಕ್ಷಣವಂತ ಹೆಣ್ಣು ಮಗು ಜನಿಸಿತು. ಹೆರಿಗೆಯ ಕಷ್ಟದಲ್ಲಿ ನರಳಿ ನಿಂತಿಲ್ಲ… ತೀವ್ರವಾಗಿದ್ದ ಹೃದಯ ದೌರ್ಬಲ್ಯದಿಂದ ಬಳಲು ತ್ತಿದ್ದ ಆ ತಾಯಿಯನ್ನು ನಾನು ಮತ್ತು ವಾದಿ

ಸ್ವಚ್ಛ, ಆಹ್ಲಾದಕರ ಶ್ವಾಸ
ಆರೋಗ್ಯಕರ, ಗಟ್ಟಿ ಹಲ್ಲುಗಳು



ಕೋಲ್ಗೇಟ್ ಡೆಂಟಲ್ ಕ್ರೀಮ್‌ನ ಕೊಡುಗೆ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಇದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.

ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ– ಆಮೇಲೆ ಕೊಳೆಯುವ ದಂತ ಕ್ಷಯವನ್ನುಂಟುಮಾಡುತ್ತವೆ.

ಆದುದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ಶುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಅದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ.

ಕೋಲ್ಗೇಟ್‌ನಲ್ಲಿ ಆಹ್ಲಾದಕರವಾದ ಪೆಪ್ಪರ್‌ಮಿಂಟ್‌ನ ರುಚಿಯಿದೆ. ಆದ್ದರಿಂದ, ಅದರಿಂದ ಹಲ್ಲುಜ್ಜುವುದು ಆನಂದದಾಯಕವಾಗುತ್ತದೆ.

ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ:

ಉಸಿರಿನ ದುರ್ವಾಸನೆಯನ್ನು ಮತ್ತು ದಂತಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.

ಕೋಲ್ಗೇಟ್‌ನ ಅಪೂರ್ವವಾದ ಕಾರ್ಯಶೀಲ ನೊರೆ ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿಸುತ್ತದೆ ಮತ್ತು ಅಪಾಯಕರವಾದ ಆಹಾರ ಕಣಗಳನ್ನೂ, ರೋಗಾಣುಗಳನ್ನೂ ಹೋಗಲಾಡಿಸುತ್ತದೆ.

ಫಲಿತಾಂಶ: ಆಕರ್ಷಕವಾದ, ಬಿಳುಪಾದ ಹಲ್ಲುಗಳು. ಆತ್ಮವಿಶ್ವಾಸವನ್ನುಂಟುಮಾಡುವ ಶುಚಿಯಾದ ಉಸಿರು ಮತ್ತು ದಂತಕ್ಷಯದ ವಿರುದ್ಧ ರಕ್ಷಣೆ.

ಕೋಲ್ಗೇಟ್ ಡೆಂಟಲ್ ಕ್ರೀಮ್‌ನಿಂದ ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಂತಕ್ಷಯವನ್ನು ಎದುರಿಸಿರಿ.



ಹಲ್ಲುಗಳ ಸಂಪೂರ್ಣ ರಕ್ಷಣೆಗಾಗಿ ಕೋಲ್ಗೇಟ್ ಟ್ವಿಗಾರ್ಡ್ ಟೂತ್‌ಬ್ರಶ್‌ಗಳನ್ನು ಉಪಯೋಗಿಸಿರಿ .. ಅವು ಮೂರು ಪಟ್ಟು ಅಧಿಕ ಉಪಯುಕ್ತವಾಗಿರುತ್ತವೆ. ಹಲ್ಲಿನ ಎನಾಮಲನ್ನು ರಕ್ಷಿಸುತ್ತವೆ.

ಹಲ್ಲುಗಳ ಪ್ಲಾಕ್‌ನ ವಿರುದ್ಧ ರಕ್ಷಣೆ ನೀಡುತ್ತವೆ.
ಒಸಡುಗಳನ್ನು ರಕ್ಷಿಸುತ್ತವೆ.

DC.G.74 KN

ಅಂದು ರಾತ್ರಿಯೆಲ್ಲ ಜತೆಗೆ ಇದ್ದು ಸೂಜಿ ಮದ್ದುಕೊಟ್ಟು ನೋಡಿಕೊಂಡೆವು.

ಇನ್ನಾದರೂ ಆ ಹೆಣ್ಣು ಮಗಳನ್ನು ಆಗಿಂದಾಗಲೇ ಒಂದು ನರ್ಸಿಂಗ್ ಹೋಮಿಗೆ ದಾಖಲು ಮಾಡಬೇಕೆಂದು ಬಲವಂತಪಡಿಸಿ ಅದಕ್ಕಾಗಿ ಒಂದು ಕಾಗದವನ್ನು ಬರೆದುಕೊಟ್ಟು ಅಲ್ಲಿಂದ ಹೊರಟೆವು.

ಅವಳು ನರ್ಸಿಂಗ್ ಹೋಮಿಗೆ ಹೋಗಲಿಲ್ಲವೆಂದು ಹಿಂದಿನಿಂದ ಗೊತ್ತಾಯಿತು.

ಕೆಲವು ದಿನಗಳ ಬಳಿಕ ಒಂದು ರಾತ್ರಿ ಆಕೆಯ ತಮ್ಮ ಮತ್ತೆ ಓಡಿ ಬಂದ.

"ಅಕ್ಕನಿಗೆ ಉಸಿರಾಡಲೂ ಆಗುತ್ತಿಲ್ಲವಂತೆ..." ಎಂದ.

ನನಗೆ ತಾಳಲಾಗದ ಸಿಟ್ಟು. ಒಬ್ಬ ಹೆಣ್ಣು ಹೀಗೂ ಹಟಮಾಡುತ್ತಾಳೇನು? ಆದರೂ ಹೊರಟೆ. ಪರಿಸ್ಥಿತಿ ಹದಗೆಟ್ಟಿತ್ತು. ಅವಳನ್ನು ಮನೆಯಲ್ಲಿಟ್ಟುಕೊಂಡಿರುವುದು ತಪ್ಪು ಎಂದು ಬಲವಂತಮಾಡಿ ಅವಳನ್ನು ಆಗಿಂದಾಗಲೇ ನರ್ಸಿಂಗ್ ಹೋಮಿಗೆ ಕಳುಹಿಸಿ ಬಂದೆ. ಪಾಪ! ಅವಳು ವಾಪಸು ಬರಲಿಲ್ಲ. ಕೈಮೀರಿದ್ದ ಕೇಸು. ದಿನೂ ಮಾಡುವಂತಿಲ್ಲ.

■

"ಅಜ್ಜಿ ಎಲ್ಲವನ್ನೂ ಹೇಳಿದರು. ಅವರೇ ನನ್ನನ್ನು ಆಡಿಸಿ ಬೆಳೆಸಿದರು" ಎಂದಳು.

ಚಿಂತನೆ ತುಂಡಾಗಿ ಅವಳನ್ನು ನೋಡಿದೆ.

"ಜಾತಕವನ್ನು ನೋಡಿಸಿಯೇ ಅಮ್ಮನಿಗೆ ಮದುವೆ ಮಾಡಿದರಂತೆ. ಅದರ ಜತೆಗೇ ವೈದ್ಯ ಪರೀಕ್ಷೆಯನ್ನು ಮಾಡಿಸಿದ್ದರೆ..." ಅವಳು ವಿಷಾದದಿಂದ ನಕ್ಕಳು.

ನಾನು ಮೌನವಾಗಿ ನೋಡಿದೆ. ಕಲಿತವಳು. ಸಮಸ್ಯೆಯನ್ನು ವಿವಿಧ ಕೋನಗಳಿಂದ ವಿಮರ್ಶಿಸಬಲ್ಲವಳು.

"ಹಿರಿಯರು ನೋಡಿ, ಜಾತಕದ ಹೊಂದಾಣಿಕೆಯಾದ ಮೇಲೆ ಮದುವೆ. ಆದರೆ ನನ್ನ ವಿಚಾರದಲ್ಲಿ ಒಂದು ವ್ಯತ್ಯಾಸ. ಈ ಸಂಬಂಧವಾಗಿ ಮಾತಾಡಲು ನನಗೆ ಮೊದಲು ಧೈರ್ಯವಿರಲಿಲ್ಲ. ಮದುವೆಯಾದ ಮೇಲೆ ಅವರನ್ನು ಒಪ್ಪಿಸಿದೆ. ನಾವಿಬ್ಬರೂ ಹೃದಯ, ಶ್ವಾಸಕೋಶ, ರಕ್ತಪರೀಕ್ಷೆ ನಡೆಸಿ ನಾವು ಆರೋಗ್ಯವಾಗಿದ್ದೇವೆ ಎಂದು ತಿಳಿದುಕೊಂಡೆವು. ನನಗೀಗ ನೆಮ್ಮದಿಯಾಗಿದೆ. "ನನಗೀಗ ಮೂರು ತಿಂಗಳಂತೆ..."

"ಸಂತೋಷ ಕಣಮ್ಮಾ," ಅಂದೆ.

"ಅಮ್ಮನಂತೆ ನಾನು ಹೃದ್ರೋಗಿಯಾಗಿದ್ದು ಒಂದು ಮಗುವನ್ನು ಹೆತ್ತು ಅದನ್ನು ಅನಾಥವಾಗಿ ಬಿಟ್ಟು ಹೋಗಬಾರದೆಂಬುದು ನನ್ನ ಉದ್ದೇಶ. ತಾಯಿಯ ಪ್ರೀತಿಗಾಗಿ ಹಂಬಲಿಸಿ ನಿರಾಶಳಾದವಳು ನಾನು," ಎಂದು ಅವಳು ನನ್ನ ಕೈಯನ್ನು ಅದುಮಿದಳು.

"ನಮ್ಮ ತಾಯಿಯನ್ನು ನೀವು ನೋಡಿದ್ದೀರಿ ಎನ್ನುವ ಕಾರಣದಿಂದಲೇನೋ ನಿಮ್ಮನ್ನು ನೋಡಿದಾಗ ನನ್ನ ತಾಯಿಯನ್ನು ಕಂಡ ಭ್ರಮೆ."

"ಹಾಗೇ ಭಾವಿಸು ವಿಳಾಸ ಕೊಡೋಣ; ಸಮಯ ಬಂದಾಗ ಸಂಧಿಸೋಣ," ಎಂದೆ.

"ಹಾಗೆ ಅಂದುಕೋತೀನಿ," ಎಂದು ನಕ್ಕಳು. ಹೃದಯ ತುಂಬಿ ಬಂದ ನಗೆ.

ನನ್ನ ಹೊಟ್ಟೆಯಲ್ಲಿ ಹುಟ್ಟದ ಮಗಳನ್ನು ನಾನು, ಹೆತ್ತು ಹೊರದ ತಾಯಿಯನ್ನು ಅವಳು, ಪ್ರೀತಿಯಿಂದ ನೋಡಿ ಆನಂದಪಟ್ಟೆವು. ✡

~~~~~~~~

ಎಷ್ಟೋ ವರ್ಷಗಳ ಹಿಂದೆ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ರುಡ್‌ಯಾರ್ಡ್ ಕಿಪ್ಲಿಂಗನು ಧನ, ಅಧಿಕಾರ ಹಾಗೂ ಕೀರ್ತಿಗಳ ಬಗೆಗೆ, ವಿದ್ಯಾರ್ಥಿಗಳಲ್ಲಿರುವ ಅತಿಯಾದ ಮೋಹದ ಬಗ್ಗೆ ಹೇಳಿದ ಮಾತು ಇಂದಿಗೂ ಮನನೀಯವಾಗಿದೆ: "ನಿಮ್ಮ ಆಯುಷ್ಯದಲ್ಲಿ ನೀವು ಒಂದಲ್ಲ ಒಂದು ಬಾರಿ ಇದಾವುದನ್ನೂ ಲಕ್ಷಿಸದ ಮನುಷ್ಯನನ್ನು ಖಂಡಿತವಾಗಿಯೂ ಸಂಧಿಸುತ್ತೀರಿ. ಆಗ ಇಷ್ಟೆಲ್ಲಾ ವರ್ಷ ನಿಜವಾಗಿಯೂ ನೀವು ಎಷ್ಟು ಬಡವರಾಗಿದ್ದೀರಿ ಎಂಬುದು ಗೊತ್ತಾಗಿ ಉಳಿದ ಆಯುಷ್ಯವಿಡೀ ಮರಗುತ್ತೀರಿ."

—ಹಾಲ್‌ಫೋರ್ಡ್ ಲೂಕಾಕ್
~~~~~~~~

ಇದುವೇ ಜೀವ ಇದು ಜೀವನ

ನನ್ನ ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನು ಒಂದೇ ಸಲ ಮಾಡಿ ಮುಗಿಸುವ ಯೋಗ ಕೂಡಿಬಂದಾಗ ನನ್ನ ಹೆಂಡತಿ ನಾನು ಯೋಚಿಸಿದ್ದಕ್ಕೆಲ್ಲ 'ಸೈ'ಯೆಂದು ಬಿಟ್ಟಳು. ಹೀಗಾಗಿ ನಾನು ಎಲ್ಲವನ್ನೂ 'ಹಿಡಿತ'ದಲ್ಲಿ ಹೊಂದಿಸಿಕೊಳ್ಳುತ್ತಿದ್ದೆ. ಮದುವೆ ಚನ್ನಾಗಿ ಆಗಬೇಕು; ಯಾವುದಕ್ಕೂ ಕೊರತೆಯಾಗಬಾರದೆಂಬುದೇ ನಮ್ಮಿಬ್ಬರ ಆಶಯವಾಗಿತ್ತು. ಲಗ್ನ ಹತ್ತಿರ ಬಂದಾಗ ನನ್ನವಳು, "ನೋಡ್ರಿ, ಇಲ್ಲಿಯವರೆಗೆ ನಾನು ನಿಮ್ಮ ಯಾವ ಕೆಲಸಗಳಲ್ಲಿಯೂ ತಲೆ ಹಾಕದೆ ಸುಮ್ಮನಿದ್ದೇನೆ. ಈಗ ಮಾತ್ರ ನನ್ನದೊಂದು ಮಾತನ್ನು ನಡೆಸಲೇಬೇಕು," ಎಂದು ಮೆತ್ತಗೆ ಹೇಳಿದರೂ ಮಾತು ಭಾರವಾಗಿತ್ತು. "ಅಯ್ಯೋ! ಅದೇನು ಹಾಗೆ ಹೇಳುತ್ತೀ? ಹೆಣ್ಣುಮಕ್ಕಳ ಮದುವೆಯಲ್ಲಿ ತಾಯಿಯ ಮಾತು ನಡೆಯುವದಿಲ್ಲ ಅಂದರೆ ಏನು? ಹೇಳು, ಖಂಡಿತ ನಡೆಯಿಸಿ ಕೊಡುತ್ತೇನೆ," ಎಂದು ಥಟ್ಟನೆ ಹೇಳಿದರೂ ಎದೆ ಢವ ಢವ ಅನ್ನುತ್ತಿತ್ತು, ತನಗೆಲ್ಲಿ ಸೀರೆಯನ್ನು ಕೇಳುತ್ತಾಳೊ, ಅದೂ ಭರ್ಜರೀ ಸೀರೆಯೇ ಆಗಬೇಕೆಂದು ಹಟ ಮಾಡುತ್ತಾಳೋ ಎಂದು. ಆಕೆ ಹೇಳಿದಳು, "ನೋಡಿರಿ! ನೀವು ಹೇಳುವಂತೆ ಪ್ರೀತಿ, ಅಂತಃಕರಣ, ಆತ್ಮೀಯತೆ ಇವೆಲ್ಲವುಗಳನ್ನು ದುಡ್ಡಿನಿಂದ ಅಳೆಯುತ್ತಾರೆ. ಅವು ದುಡ್ಡಿದ್ದವರಿಗೇ ಅನ್ವಯಿಸುತ್ತವೆ. ನನ್ನ ಬಳಗದವರಲ್ಲಿಯೂ ಕೆಲವರು ಶ್ರೀಮಂತರಿದ್ದಾರೆ, ಅವರನ್ನು ಕರೆದು ಉಪಚರಿಸಲು ನಮ್ಮಲ್ಲಿ ಯೋಗ್ಯತೆ ಇಲ್ಲ. ಅವರ ಬಗ್ಗೆ ಪ್ರೀತಿ, ಅಂತಃಕರಣ ಬಹಳವಿದೆ. ಅದನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಕಾರಣ, ಅವರಿಗೆಲ್ಲ ಉಳಿದವರಿಗೆ ಲಗ್ನಪತ್ರಿಕೆ ಕಳುಹಿಸಿದಂತೆ ಕಳುಹಿಸಬೇಡಿರಿ; ವಕೀಲರಿಗೆ-ಡಾಕ್ಟರಿಗೆ-ಶ್ರೀಮಂತರಿಗೆ ೨೫-೫೦ರಂತೆ ಲಗ್ನಪತ್ರಿಕೆ ಕಳುಹಿಸಿರಿ. ಯಾಕೆಂದರೆ ಅವರು ದೊಡ್ಡವರು."

—ಎಸ್. ಎಮ್. ಹುಲಮನಿ

ನಾನು ಆಗ ಮೈಸೂರು ಸೇಂಟ್ ಮೇರೀಸ್ ಕಾನ್ವೆಂಟ್‌ನಲ್ಲಿ ೬ ನೆಯ ತರಗತಿ ಓದುತ್ತಿದ್ದೆ. ತಿಂಗಳು ತಿಂಗಳೂ ಟೆಸ್ಟ್ ಮಾಡ್ತಿದ್ದರು. ನಾನು ತರಗತಿಗೆ ೪, ೫ ನೇ ರ್‍ಯಾಂಕ್ ಬರ್ತಿದ್ದೆ. ಒಂದು ಸಲ ಟೆಸ್ಟ್ ನಡೀತು. ಅದೇ ದಿನಾ ಹೋಂ ವರ್ಕ್ ಪುಸ್ತಕಾನೂ ನಮ್ಮ ಟೀಚರ್ ಕರೆಕ್ಷನ್ ಮಾಡಿ ನಮಗೆ ಕೊಟ್ಟಿದ್ದರು. ಎರಡಕ್ಕೂ, ಅಂದ್ರೆ ಟೆಸ್ಟ್ ಪುಸ್ತಕಕ್ಕೂ ಹೋಂ ವರ್ಕ್ ಪುಸ್ತಕಕ್ಕೂ, ಒಂದೇ ತರಹಾ ಬೈಂಡ್ ಮಾಡಿಸಿದ್ದೆ. ಟೆಸ್ಟ್ ಮುಗಿಸಿ ಪುಸ್ತಕ ಕೆಳಗಿಟ್ಟು ಸುಮ್ಮನೆ ಕುಳಿತೆ. ನಂತರ ಟೀಚರ್‌ಗೆ ಪುಸ್ತಕ ಕೊಟ್ಟು ಮನೆಗೆ ಬಂದೆ.

ಆ ರಾತ್ರಿ ಹೋಂ ವರ್ಕ್ ಪುಸ್ತಕದಲ್ಲಿ ಯಾವುದು ಸರಿಯಾಗಿ ಬರೆದಿದ್ದೀನಿ, ಗುಡ್, ವೆರಿಗುಡ್ ಕೊಟ್ಟಿದ್ದಾರಾ ಎಂದು ಕುತೂಹಲದಿಂದ ತೆಗೆದು ನೋಡಿದರೆ ಎದೆ ಝುಲ್ ಎಂದಿತು! ಏಕೆಂದರೆ ಅದು ಟೆಸ್ಟ್ ಪುಸ್ತಕ!

ರಾತ್ರಿಯೆಲ್ಲಾ ನಿದ್ದೆ ಇಲ್ಲ. ಏನು ಮಾಡಲಿ ನಾನು ಮಾಡಿರೋ ತಪ್ಪು ಹ್ಯಾಗಾದರೂ ಟೀಚರ್‌ಗೆ ಗೊತ್ತಾಗುತ್ತೆ.

ಮಾರನೆಯ ದಿವಸ ನನ್ನ ಗೆಳತಿಯೊಬ್ಬಳನ್ನು ಕರೆದುಕೊಂಡು, ಟೆಸ್ಟ್ ಬುಕ್ ತೆಗೆದುಕೊಂಡು ಟೀಚರ್ ಹತ್ತಿರ ಹೋದೆ. ಅವರನ್ನು ಕಂಡರೆ ಮೊದಲೇ ನಮಗೆಲ್ಲ ಭಯ. ಈಗ ನಡಗುತ್ತಾ ಎಲ್ಲವನ್ನೂ ಹೇಳಿದೆ. ಅವರು ನನ್ನ ಅಜಾಗರೂಕತೆಗೆ ಬೈಯ್ದರು. ಮನೆಗೆ ಹೋಗಿ ನೀನು ತಿದ್ದಿಲ್ಲ ಅಂತ ಹೇಗೆ ನಂಬೋದು ಅಂತ ಅಲ್ಲೇ ಕೋಪದಿಂದ ೨೫ಕ್ಕೆ ೦ ಅಂತ ಕೆಂಪುಶಾಯಿಯಲ್ಲಿ ಬರೆದುಬಿಟ್ಟು ನಮ್ಮನ್ನು ಕಳಿಸಿಬಿಟ್ಟರು. ನನಗಂತೂ ಅಳೂನೆ ಬಂದುಬಿಡ್ತು. ಈ ಸಲ ೪ ನೇ

ರ್‍ಯಾಂಕ್ ಹೋಯ್ತು ಅಂತ ಮನಸ್ಸು ಗಟ್ಟಿ ಮಾಡಿ ಇದ್ದೆ. ಬಂದೇಬಿಡ್ತು, ಟೆಸ್ಟ್ ಬುಕ್ಸ್ ಕೊಡೋ ದಿನ.

ಒಬ್ಬೊಬ್ಬರ ಹೆಸರು ಕೂಗಿ ಅವರ ಅಂಕಗಳನ್ನು ಜೋರಾಗಿ ಹೇಳಿ ನಂತರ ಆ ಪುಸ್ತಕ ಕೊಡುತ್ತಿದ್ದರು. ನಾನಂತೂ ಮೊದಲೇ ಗೊತ್ತಿದ್ದಿದ್ದರೆ ಶಾಲೆಗೇ ಬರ್‍ತಿರಲಿಲ್ಲ, ಅಂತ ಪರಿತಪಿಸಿದೆ. ಮುಂದೆ ಆಗೋ ಅವಮಾನ ನೆನೆಸಿಕೊಂಡು ರಾಘವೇಂದ್ರಾ ಅಂತ ನೂರು ಬಾರಿ ಸ್ಮರಿಸಿದೆ. ಎಲ್ಲಾ ದೇವರಿಗೂ ಮನಸ್ಸಿನಲ್ಲೇ ನಮಸ್ಕಾರ ಹಾಕಿದೆ.

ಕೊನೆಗೆ ಯಾವ ದೇವರ ದಯೆಯೋ? ಟೀಚರ ಔದಾರ್ಯವೊ? ಅಂತೂ ಟೀಚರ್ ನನ್ನ ಹೆಸರು ಕೂಗಿ "೧೬" ಎಂದರು. ನನಗೆ ನಂಬೋಕೇ ಆಗಲಿಲ್ಲ. ಈ ಸಲ ನನಗೆ ಮೂರನೇ ರ್‍ಯಾಂಕ್ ಸಹ ಬಂತು.

—ಅತ್ತನೂರು ಪದ್ಮಾ ಜಿ.

ನಮ್ಮ ಯೋಗ ತರಬೇತಿ ಕೇಂದ್ರಕ್ಕೆ ನನ್ನ ಆರುವರ್ಷದ ಮಗಳೊಡನೆ ಹೋಗಿದ್ದೆ. ಅಂದು ವೈದ್ಯರೊಬ್ಬರಿಂದ ನಮ್ಮ ಶರೀರ ರಚನೆ ಹಾಗು ಯೋಗದ ಉಪಯೋಗದ ಬಗ್ಗೆ ಭಾಷಣ ಕಾರ್ಯಕ್ರಮ ಇತ್ತು. ಭಾಷಣ ತುಂಬಾ ಚೆನ್ನಾಗಿತ್ತು. ನನ್ನ ಮಗಳು ಗಂಭೀರವಾಗಿಯೇ ಕುಳಿತು ಭಾಷಣ ಕೇಳಿದ್ದು ನನಗೆ ತುಂಬಾ ಆಶ್ಚರ್ಯವಾಗಿತ್ತು.

ಮನೆಗೆ ಬಂದ ಮೇಲೆ ನಮ್ಮ ಯಜಮಾನರು ಮಗಳೊಡನೆ, "ಏನಮ್ಮಾ, ಹೇಗಿತ್ತು ಭಾಷಣ, ಚೆನ್ನಾಗಿತ್ತೆ?" ಎಂದರು. ಆಕೆ, "ಹೌದು ಅಪ್ಪಾಜಿ, ಭಾಷಣ ಮುಗಿದ ಮೇಲೆ, ಅವರು ಯಾರಾದರೂ ಪ್ರಶ್ನೆ ಕೇಳಬಹುದು ಎಂದರಲ್ಲ, ಆಗ ನಾನು ಕೇಳಬೇಕೆಂದು ಮಾಡಿದ್ದೆ. ಆದರೆ ಈ ಅಮ್ಮ ಬಯ್ದಾರೆ ಎಂದು...." ಎಂದಳು.

ನಮ್ಮ ಯಜಮಾನರು ಆಶ್ಚರ್ಯದಿಂದ, "ಏನಮ್ಮಾ ಪ್ರಶ್ನೆ?" ಎಂದರು.

"ಏನಿಲ್ಲಾ, ಆ ಡಾಕ್ಟರ್ ಮಾಮಾ ಯೋಗ ಮಾಡಿರಿ, ಎಂದು ಬಹಳ ಹೇಳಿದರು. ಆದರೆ ಅವರ ಹೊಟ್ಟೆ ನೋಡಿದರೆ ಅವರು ಒಂದು ದಿನವೂ ಯೋಗ ಮಾಡಿದ ಹಾಗೆ ಕಾಣುತ್ತಿರಲಿಲ್ಲ. ಅದಕ್ಕೆ 'ನೀವು ಯೋಗಾ ಮಾಡೋಲ್ವೆ?' ಅಂತ ಪ್ರಶ್ನೆ ಕೇಳೋಣ ಅಂತಿದ್ದೆ," ಎಂದಳು. —ವಿಜಯಾ ಶ್ರೀಧರ

ನಾನು ನನ್ನ ಮೂರು ವರ್ಷದ ಮಗನೊಂದಿಗೆ ಶಿವಮೊಗ್ಗೆಯಿಂದ ತುಮಕೂರಿಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ. ಮೊದಮೊದಲು "ಅಮ್ಮಾ-ಅಮ್ಮಾ" ಎಂದು ಅತ ಹಟ ಮಾಡಿದ. ತಿಂಡಿ ಕೊಡಿಸಿದರೂ ತಿನ್ನದೇ ಬಿಸಾಕಿ ರಚ್ಚೆ ಹಿಡಿದ. ನಂತರ ಮಾತ್ರ ಕಿಟಕಿಯಿಂದ ಹೊರಗೆ ನೋಡುತ್ತ ನೋಡುತ್ತ ಅಮ್ಮನನ್ನು ಮರೆತುಬಿಟ್ಟ.

ಬಸ್ಸು ಜೋರಾಗಿ ಸಾಗಿದ್ದಂತೆಯೇ ಹಿಂದಿನ ಸೀಟನಲ್ಲಿ ಕುಳಿತಿದ್ದ ಇಬ್ಬರು ತೆಲುಗಿನಲ್ಲಿ ಮಾತಾಡಿಕೊಳ್ಳುತ್ತಿರುವುದನ್ನು ಕೇಳಿ ಒಂದು ಕ್ಷಣ ಸಿಟ್ಟು ಬಂದರೂ ಮಜ ಅನಿಸಿತು. ಅವರ ಮಾತಿನ ಸಾರಾಂಶ ಇಷ್ಟು: "ಪಾಪ, ಆ ಮಗು (ನನ್ನ ಮಗ) ತಾಯಿಯನ್ನು ಕಳೆದುಕೊಂಡು ಬಹಳ ದಿನವಾಗಿರಲಿಕ್ಕಿಲ್ಲ. ಹೇಗೆ ದಿನಗಳನ್ನು ಕಳೆಯುತ್ತಿದೆಯೋ ಏನೋ. ಮಲತಾಯಿ ಬಂದರೆ ಎಷ್ಟು ತೊಂದರೆ ಕೊಡುತ್ತಾಳೋ. ಮುದ್ದಾದ ಮಗು ಕಿರುಕುಳ ಹೇಗೆ ಅನುಭವಿಸೀತು?"

ತುಮಕೂರು ಬಂದಾಗ ಮಗನೊಂದಿಗೆ ಇಳಿಯುತ್ತಿದ್ದಂತೆಯೇ ಆ ಇಬ್ಬರತ್ತಲೂ ನಾನು ಕಣ್ಣು ಹಾಯಿಸಿದೆ. ಅವರು ಮಗುವನ್ನು ಕರೆದು ಕರುಣೆಯಿಂದ ತಲೆ ಮೇಲೆ ಕೈಯಾಡಿಸಿ ಕೈಗೊಂದು ಬಿಸ್ಕತ್ ಪೊಟ್ಟಣವನ್ನಿತ್ತು ಮತ್ತೆ "ಪಾಪ" ಎಂದುಕೊಂಡರು. ನನಗೆ ಮತ್ತೆ ನಗು ಬಂತು.

ಅವರ ಮಾತಿಗೆ-ಅನುಕಂಪಕ್ಕೆ ಕಾರಣವೆಂದರೆ ಒಂದು ಪಬ್ಲಿಕ್ ಪರೀಕ್ಷೆಗಾಗಿ ತಯಾರಿ ನಡೆಸುತ್ತಿದ್ದ ನನ್ನಾಕೆಗೆ ತೊಂದರೆಯಾಗದಿರಲೆಂದು ಮಗನನ್ನು ನನ್ನೊಂದಿಗೆ ಕರೆದೊಯ್ಯುತ್ತಿದ್ದುದು.

—ಸಿ. ಎಸ್. ಎನ್.

ಹಾವಾಡಿಗ

ನಿತ್ಯದಂತೆ ಆ ಹುಡುಗ ಅಂದು ಕೂಡ ಮನೆಯಿಂದ ಹೊರಗೆ ತಿರುಗಾಡಲೆಂದು ಹೊರಟ. ಆಗಲೆ ಸೂರ್ಯ ಸಾಕಷ್ಟು ಮೇಲಕ್ಕೇರಿದ್ದ. ಬೀದಿಯ ಬದಿಗೆ ಎಂದಿನಂತೆಯೆ ಜನರ ಗುಂಪು ಸೇರಿತ್ತು. ಆದರೆ ಇಂದು ಸಂಖ್ಯೆ ಮಾತ್ರ ನಿತ್ಯಕ್ಕಿಂತ ಹೆಚ್ಚಿಗೆ ಇದ್ದುದನ್ನು ನೋಡಿ ಆತ ಚಕಿತನಾದ. ಜನಸಂದಣಿಯನ್ನೊಮ್ಮೆ ನೋಡಿ ಮತ್ತೆ ಮುಂದೆ ಹೋಗಲೆತ್ನಿಸಿದ ಆತನಿಗೆ ಗಟ್ಟಿಯಾದ ಧ್ವನಿ ಕೇಳಿಸಿತು; ಯಾವುದೊ ಹೊಸ ಹಾವಾಡಿಗನ ಧ್ವನಿ. ಸ್ಥಳ ಅದೇ ಆದರೂ ಧ್ವನಿ ಮಾತ್ರ ಬೇರೆಯವನದಾಗಿತ್ತು. ಅರಿವು ಮೂಡಿದಾಗಿನಿಂದ ಅದೇ ಸ್ಥಳದಲ್ಲಿ ಮಂಗನಾಟ, ಹಾವಿನಾಟ ನಡೆಯುವುದನ್ನು ಅವನು ನೋಡುತ್ತ ಬಂದಿದ್ದ. ದಿನನಿತ್ಯವೂ ಅದೇ ದೃಶ್ಯ, ಅವೇ ಮಾತುಗಳು, ಅದೇ ಆಟ... ಹೊಸದೇನಿದೆ ಅದರಲ್ಲಿ ನೋಡುವಂಥದು, ಸುಮ್ಮನೆ ಸಮಯ ಹಾಳು ಎಂದುಕೊಂಡು ಅಲ್ಲಿಗೆ ಹೋಗುವುದನ್ನೇ ಬಿಟ್ಟುಬಿಟ್ಟಿದ್ದ. ಉಳಿದವರೂ ಅವನಂತೆಯೇ ಯೋಚಿಸತೊಡಗಿದ್ದರಿಂದ ಅಲ್ಲಿ ಸೇರುವವರ ಸಂಖ್ಯೆಯೂ ಕಡಿಮೆಯಾಗತೊಡಗಿತ್ತು. ಇಂದು ಆ ಸ್ಥಳದಲ್ಲಿ ಹೆಚ್ಚಿನ ಗದ್ದಲವಿದ್ದುದರಿಂದ ಸಹಜವಾಗಿ ಅವನ ಕಾಲುಗಳೂ ಅತ್ತ ಕಡೆಗೆ ತಿರುಗಿದವು. ಆ ಗದ್ದಲದಲ್ಲಿಯೇ ಅವನು ಸ್ಥಳ ಮಾಡಿಕೊಂಡು ಆ ಹೊಸ ಹಾವಾಡಿಗನ ಆಟವನ್ನು ನೋಡತೊಡಗಿದ.

ಈ ಹೊಸ ಹಾವಾಡಿಗನಲ್ಲಿ ತನ್ನದೇ ಆದ ವಿಶಿಷ್ಟ ವೈಖರಿಯಿತ್ತು. ಗಟ್ಟಿ ಮುಟ್ಟಾದ ಶರೀರ, ಮುಖದ ಮೇಲೆ ವಿಶೇಷ ಕಾಂತಿ, ಅಲ್ಲದೇ ಧ್ವನಿಯಲ್ಲಿ, ಮಾತಿನಲ್ಲಿ ಜನರನ್ನು ಮಂತ್ರಮುಗ್ಧರಾಗಿಸುವ ಮೋಡಿಯಿತ್ತು. ಆತ ಹೆಚ್ಚುತ್ತಿರುವ ಗದ್ದಲವನ್ನು ಲಕ್ಷಿಸಿ ತನ್ನ ಸಾಮಗ್ರಿಗಳನ್ನು ಹೊರತೆಗೆದು ಅಂದವಾಗಿ ಜೋಡಿಸುತ್ತಲೇ ಆಕರ್ಷಕವಾಗಿ ಮಾತನಾಡತೊಡಗಿದ್ದ. ತನ್ನ ಹತ್ತಿರವಿದ್ದ ಕರಿ ನಾಗರ ಹಾವನ್ನು ಈ ಮೊದಲೇ ದೊಡ್ಡ ಬುಟ್ಟಿಯ ಮೇಲೆ ಕೂಡಿಸಿದ್ದ. ಅವನ ನಾಯಿ ಅವನ ಸುತ್ತ ಮುತ್ತ ತಿರುಗತೊಡಗಿತ್ತು. ನಾಗರ ಹಾವಿನ ಬುಟ್ಟಿಯ ಹತ್ತಿರವೇ ಅರ್ಧ ನಗ್ನನಾದ ಎಲುವಿನ ಹಂದರದಂತಿದ್ದ ಒಬ್ಬ ವ್ಯಕ್ತಿ ಮೊಣಕಾಲುಗಳ ಮಧ್ಯೆ ತಲೆಮರೆಸಿಕೊಂಡು ಎದೆಯ ಪಕ್ಕೆಲಬುಗಳು ಕಿತ್ತು ಬರುವಂತೆ ದೀರ್ಘವಾದ ಉಸಿರೆಳೆಯುತ್ತ ಕುಳಿತಿದ್ದ. ಎಲ್ಲವನ್ನೂ ಓರಣವಾಗಿಟ್ಟು ಹಾವಾಡಿಗ ಎದೆ ಸೆಟೆಸಿ ನಿಂತ. ನಾಗಪ್ಪನಿಗೆ ವಂದಿಸಿ, ಸುತ್ತುವರಿದು ನಿಂತ ಪ್ರೇಕ್ಷಕರ ಗುಂಪನ್ನು ಸೂಕ್ಷ್ಮವಾಗಿ ಅವಲೋಕಿಸಿದ. ಹಾವಾಡಿಗನ ದೃಷ್ಟಿ ತನ್ನ ದೃಷ್ಟಿಯೊಂದಿಗೆ ಸಂಧಿಸಿದಾಗ ಆ ಹುಡುಗನಿಗೆ ವಿಚಿತ್ರವಾದ ಅನುಭವವಾಯಿತು; ಅವನಿಗೆ ಈ ಹಾವಾಡಿಗನನ್ನು ಮೊದಲೆಲ್ಲಿಯೋ ನೋಡಿದ್ದೇನೆ ಅನ್ನಿಸಿತು. ಆದರೆ ಎಲ್ಲಿ? ಎಷ್ಟು ವಿಚಾರ ಮಾಡಿದರೂ ಎಲ್ಲಿ ಎಂಬುದು ಹೊಳೆಯಲೇ ಇಲ್ಲ. ಈ ಮಧ್ಯೆ ಹಾವಾಡಿಗ ಮುಖದಲ್ಲಿ ನಗೆ ತಂದುಕೊಂಡು ಎತ್ತರದ ಧ್ವನಿಯಲ್ಲಿ ಮಾತನಾಡುತ್ತ ಜನರ ಗಮನವನ್ನು ತನ್ನ ಆಟದತ್ತ ಸೆಳೆಯತೊಡಗಿದ.

"ಸಾಹೇಬ್ರೆ, ಅಪ್ಪಾವ್ರೆ ಹಿಂದು ಅಣ್ಣಾಗೋಳ್ಗೆ ರಾಮ-ರಾಮ, ಮುಸಲ್ಮಾನ ಭಾಯಿಯೋಂಕೋ ಸಲಾಮ್ ! ಹಾಂ, ನಾ ಏನ ಹೇಳಬೇಕಂತ ಇದ್ದೆ ಅಂದರ... ನಾ ಮಂಗ್ಯಾ ಆಡಿಸಾವ ಅಲ್ಲಾ, ಮತ್ತ ಜಾದೂಗಾರನೂ ಅಲ್ಲಾ, ನಾನು ನಿಮ್ಮ ಸೇವಕ ಮಾತ್ರ ಅಣ್ಣಾವ್ರೆ. ಅಂದರ ನಿಮ್ಮ ಒಬ್ಬ ಆಳು. ನನಗೂ ಕರಳಿನ್ಯಾಗ ಒಂದಿಷ್ಟು ದಯಾ ಅನ್ನೂದು... ಮನಸ್ಸಿನ್ಯಾಗ ಮನುಷ್ಯತ್ವ...ಕಣ್ಣಿಗೆ ನಾಚಿಕಿ ಅನ್ನೂದು ಐತಿ... ಎಲ್ಲಾ ನೋಡತೀನಿ ಸಾಹೇಬ್ರು, ಆದರ ಅತ್ಯಾಚಾರ ಮಾತ್ರ ನೋಡಾಕಾಗಾಂಗಿಲ್ಲ...... ಅತ್ಯಾಚಾರಾ... ಹಾಂ; ಅತ್ಯಾಚಾರಾ...... ಯಾರರ ತಾಯಿ ಮ್ಯಾಲೆ, ತಂಗಿ ಮ್ಯಾಲೆ ಗುಂಡಾಗಳದು, ಯಾವದರ ಒಳ್ಳೆಯವನ ಮ್ಯಾಲೆ ಲಘುಗಂದು ನಿರಪರಾಧಿ ಮ್ಯಾಲೆ ಲುಚ್ಚಾಗಳ ಬಡಿಗೇದು..."

ಮೂಲ ಹಿಂದಿ: ಸುರೇಂದ್ರ 'ಸುಕುಮಾರ'
ಅನುವಾದ: ಸುಮಂಗಲಾ ಮುಮ್ಮಿಗಟ್ಟಿ





ಇಷ್ಟು ಹೇಳಿ ಸ್ವಲ್ಪ ತಡೆದು ತನ್ನ ಮಾತಿನ ಪ್ರಭಾವ ಜನರ ಮೇಲೆ ಹೇಗೆ ಆಗುತ್ತಿದೆ ಎಂದು ನೋಡಿದ. ನಿಜವಾಗಿಯೂ ತನ್ನ ಆಕರ್ಷಕ, ನಿರರ್ಗಳ ಮಾತುಗಾರಿಕೆಯಿಂದ ಜನ ಪ್ರಭಾವಿತ ರಾಗಿದ್ದನ್ನು ಕಂಡು . ಅವನಿಗೆ ಸ್ವಲ್ಪ ಧೈರ್ಯ ಬಂದಂತಾಯಿತು. ನಾಯಿ ಪಾತ್ರ ಒಂದೇ ಸಮನೆ ಬಾಲ ಅಲ್ಲಾಡಿಸುತ್ತಿತ್ತು. ಮತ್ತೊಮ್ಮೆ ಆ ನಾಗರ ಹಾವಿಗೆ ಕೈ ಮುಗಿದು, “ಹಾಂ, ಬಾಬಾರ, ಇಲ್ಲೆ ಇಷ್ಟ ದಿವಸಾ ಬ್ಯಾರೆಯಾಂವಾ ಆಟಾ ತೋರಿಸ್ತಿದ್ದಾ. ಈ ಜಗಾ ಬಾಳ ವರಸದಿಂದ ಅವಂದs ಆಗಿತ್ತು. ಅಂಥಾದ್ರಾಗ ಇಂವಾ ಇಲ್ಲೆ ಹೆಂಗ ಬಂದಾ? ಅಂತ ನೀವು ಇಚಾರ ಮಾಡಾ-ಕ್ಹತ್ತಿರಬೋದು.” ಸ್ವಲ್ಪ ಬಿಟ್ಟು ಜನರ ದೃಷ್ಟಿ ಯಲ್ಲಿ ದೃಷ್ಟಿಯಿಟ್ಟು ಹೇಳಿದ – “ಅಗ್ದಿ ಖರೆ ಐತಿ, ನಿಮ್ಮ ಪ್ರಶ್ನೆ; ಸಾಹೇಬ್ರ ಉತ್ತರಾ ನನ್ನ ಹತ್ತರೈತಿ. ಅತ್ಯಾಚಾರಕ್ಕ ಮೂಲ ಅತ್ಯಾಚಾರಾ. ಹಾಂ, ಅತ್ಯಾಚಾರಾ, … ಅಣ್ಣಾವ್ರ, ಮದಲ ಇಲ್ಲೆ ಯಾಂವಾ ಹಾವ ಆಡಸ್ತಿದ್ದನಲ್ಲಾ ಅಂವಾ ಮೋಸಗಾರ ಇದ್ದಾ. ಬದ್ಮಾಶ್, ಗುಂಡಾ, ಲಂಫಗ ಇದ್ದಾ. ಭಾಳ ವರಸದಿಂದ ನಿಮಗ ಮೋಸಾ ಮಾಡ್ತಿದ್ದಾ. ಆದ್ರ ನೀವು ಅವನ ಗುರುತಾ ಹಿಡೀಲಿಲ್ಲಾ.” ತಾವು ನಿಜವಾಗಿಯೇ ಮೋಸ ಹೋಗಿದ್ದೆವೆನ್ನುವಂತೆ ಆ ಜನಸಂದಣಿ ಯಲ್ಲಿ ಈ ಬಗ್ಗೆ ಗುಜುಗುಜು ಪ್ರಾರಂಭವಾಯಿತು.

“ಮತ್ತ ಹುಜೂರ್, ನೀವು ಅವನ ಗುರುತಾ ಹಿಡಿದಿರಬೋದು, ಆದ್ರ ನಿಮ್ಮಂತಾ ಚೊಲೊ ಮಕ್ಕಳ ಮರಿ ಉಳ್ಳವ್ರಿಗೆ ಯಾವ್ಯಾವರ ಗುಂಡಾನ ಕೂಡ ಜಗಳಾಡೂದು ಚೊಲೊ ಕಾಣಾದಿಲ್ಲ.” ಅವನ ಮಾತು ಕೇಳುತ್ತಲೇ ಜನರ ಸದ್ದು ಅಡಗಿತು.

“ಕೇಳ್ರಿ…ಆ ಹಾಂವಗಾರಾ ಕಳ್ಳ, ಅತ್ಯಾಚಾರಿ. ನೀವು ಕೇಳಬೋದು, ಇದಕ್ಕೇನ ಸಾಕ್ಷಿ ಅಂತ. ನೋಡ್ರಿ ಸಾಹೇಬ್ರ, ಇದs ಇಲ್ಲೈತಿ ಸಾಕ್ಷಿ… ಈ ಮನಶ್ಯಾನ್ನ ನೋಡ್ರಿ ಅಪ್ಪಾರ, ಸರಿಯಾಗಿ ನೋಡ್ರಿ ಇವನ್ನ. ಇವನs ಅವನ ಜಾಲದಾಗ ಸಿಕ್ಕಾಂವಾ…” ಅರ್ಧ ಸತ್ತಂತಿದ್ದ ಆ ಮನು ಷ್ಯನತ್ತ ಎಲ್ಲರ ನೋಟ ಹರಿಯಿತು. ಹಾವಾ ಡಿಗ ಮತ್ತೆ ಹಾವಿಗೆ ನಮಸ್ಕರಿಸಿದ. …ನಾಯಿ ತನ್ನ ಕಾರ್ಯ ಮುಂದುವರಿಸಿತ್ತು… “ಇಲ್ಲಿ ಕೇಳ್ರಿ ಸಾಹೇಬ್ರ, ಇವನೂ ಮದಲ ಸಾಕಷ್ಟು ಕನಸುಳ್ಳಾವ ಇದ್ದಾ…… ಇವನ ಕಣ್ಣಾಗ ಬೆಳಕಿತ್ತು, ಮುಖದಾಗ ಗೆಲುವು, ಮನಸ್ನಾಗ ಉತ್ಸಾಹ ಇತ್ತು… ಇಂವ ಕನಸ ಕಂಡಿದ್ದ… ಕನಸು… ಚೆಂದನ್ನ ಕನಸು… ಕಷ್ಟಪಟ್ಟು ದುಡಿಯೋ ಕನಸು… ಮರ್ಯಾದೆಯಿಂದ ಜೀವನಾ ನಡಸೂ ಕನಸು,… ಮಕ್ಕಳ ಕಿಲಿಕಿಲಿ ನಗುವಿಂದು …ಹಚ್ಚ ಹಸರ ತ್ವಾಟದ್ದು… ಬೆಳದ ನಿಂತ ಪೈರಿಂದು… ಘಲು ಘಲು ಗೆಜ್ಜೀ ಸಪ್ಪಳದ್ದು… ಸುಖಾ ಶಾಂತೀದು… ಹಂಗಾದ್ರ ಆ ಎಲ್ಲಾ ಕನಸು ಏನಾದುವು? ಈ ಅವಸ್ಥಾ ಇವಂಗ ಹೆಂಗ ಬಂತು?” ಆತ ಕೆಲಕ್ಷಣ ಸುಮ್ಮ ನಿದ್ದು ಜನರನ್ನೆಲ್ಲ ನೋಡಿದ… ಅವರೆಲ್ಲರ ಮುಖಗಳು ಪ್ರಶ್ನಾರ್ಥಕವಾಗಿದ್ದುವು.

“ಹಾಂ, ಅದನ್ನs ನಾನು ಹೇಳತೀನಿ” ಎಂದ ಹಾವಾಡಿಗ ಮತ್ತೆ ಮಾಮೂಲಿನಂತೆ ನಾಗರ ಹಾವಿಗೆ ತಲೆ ತಗ್ಗಿಸಿ ಒಂದಿಷ್ಟು ಅಭಿಮಾನ ದಿಂದ ನಾಯಿಯ ಕಡೆ ನೋಡಿದ. ನಂತರ ಆ ದುರ್ಬಲ ಮನುಷ್ಯನ ಕಡೆಗೆ ಕೈ ತೋರಿಸಿ, “ಮಾತ ಬಾಳ ಹಳೇದಲ್ಲರಿ… ಆದರೂ ಹಳೆದs ಅನ್ರಿ. ಇಂವಗ ಒಂದು ಮನಿ ಇತ್ತು. ಮನಿ ತುಂಬ ಸಾಮಾನ ಇತ್ತು… ದುಡ್ಡು ತುಸಾ ಇದ್ದರೂ ಮನಸ್ಸು ಭಾಳ ದೊಡ್ಡದಿತ್ತು. ತಿಂತಿದ್ದ, ಉಣತಿದ್ದ, ಮತ್ತು ಚೊಲೊ ಜೀವನ ನಡೆಸಿದ್ದ. ಆದ್ರ ಖೋಟಾ ನಸೀಬರಿ, ಗುಲಾಮ ಆದ್ನರಿ… ಇವನ ಮ್ಯಾಲೆ ಬ್ಯಾರೆಯವರು ಅಧಿಕಾರ ನಡ ಸ್ತಿದ್ದರು. ಇಂವಗ ಏನಾರ ದುಃಖ ಆಗತಿತ್ತು ಅಂದ್ರ ಅದು ಗುಲಾಮ ಆದದ್ದೊಂದs…

“ಸಾಹೇಬ್ರ, ಗುಲಾಮಿ ಅನ್ನೂದು ಮನಸ್ಯಾಗ ಚಿಂತಿ ಹಚ್ಚಿಬಿಡತೈತ್ರಿ. ನೀವು ಒಂದ ಗಿಳಿನ್ನ ಬಂಗಾರದ ಪಂಜರದಾಗ ಇಟ್ಟು ಚೊಲೊ ಚೊಲೊ ಹಣ್ಣ ಕೊಟ್ಟ ನೋಡ್ರಿ…ಸಂತೋ ಸದ್ಲೆ ಇರದೀತs? ಅದಕ್ಕ ಟೊಂಗೀ ಮ್ಯಾಲೆ ಕುಂತು ಹುಳಿ ಮಾವಿನಕಾಯಿ, ಪ್ಯಾರಲಕಾಯಿ ಕಡಿಯೂದರಾಗ ಸಿಗೂ ಮಜಾ ಪಂಜರದಾಗ

ಕುಂತ ಸೇಬು ತಿನ್ನೂದರಾಗ ಎಲ್ಲಿ ಸಿಗಬೇಕ್ರಿ? ಹಂಗ ಇಂವನೂ ಸಾಹೇಬ್ರು ತಾನೂ ಗಿಳಿ ಹಂಗ ಹಾರಾಡೂ ಆ ದಿನ ಎಂದ ಬರತೈತಿ ಅಂತ ಕಣ್ಣ ಬಿಟ್ಟ ಕುಂತಿದ್ದ..." ಒಮ್ಮಿಂದೊಮ್ಮೆಲೆ ಹಾವಾಡಿಗ ಸುಮ್ಮನಾಗಿ ಸೇರಿದ ಜನ ಸಮೂಹವನ್ನು ವೀಕ್ಷಿಸತೊಡಗಿದ... ಜನರ ಸಂಖ್ಯೆ ಜಾಸ್ತಿಯಾಗುತ್ತಲೇ ಇತ್ತು. "ಅಣ್ಣಾವ್ರೆ ಥೋಡೆ ಹಿಂದಕ ಸರದ ನಿಲ್ಲರಿ... ಎಲ್ಲಾರಿಗೂ ಕಾಣಸಲಿ... ಸಾಹೇಬ್ರು, ನಾ ಏನ್ ಹೇಳಾಕತ್ತಿದ್ದೆ ಅಂದ್ರ, ಒಂದ ದಿನಾ ಇಂವಂದು ಆ ಹಳೆ ಹಾಂವಗಾರನ ಜೊತಿ ಭೆಟ್ಟ್ಯಾತು... ಅಂವಾ ಬಾಳ ಚಾಲಾಕ ಇದ್ದ. ಇಂವಾಸರೆ ಭಾಳ ಭೋಳ್ಯಾ... ಆದ್ರ ಅಪ್ಪಾವರ, ಮೈಯಾಗ ಕುವ್ವತ್ ಇತ್ತು. ಆ ಜಮಾನಾದಾಗ ಖರೆ ತುಪ್ಪ ಸಿಗತಿತ್ತರಿ...ಈಗೆಲ್ಲೈತಿ? ಈಗ ಮೂಸ್ ನೋಡಾಕೂ ಸಿಗಂಗಿಲ್ಲ ಆ ತುಪ್ಪಾ. ಈಗ ಇಂವಸೊಳಗ ಜೀಂವ ಇಲ್ಲ, ಮೊದ್ಲ ಈ 'ಆದ್ಮಿ' ಯೊಳಗ ಜೀಂವ ಇತ್ತು. ಕೃಷ್ಣ ಭಗವಾನ್ ಸೋಲಾ ಹಜಾರ್ ರಾಣೇರ್ನ ವಶದಾಗ ಇಟಗೊಂಡಿದ್ದ. ಆದ್ರ ಈಗ ಒಬ್ಬರನ ಸಂಭಾಳಿಸೂದs ಕಷ್ಟ"—ಜನರ ಗುಂಪಿನಲ್ಲಿ ನಗೆಯ ಬುಗ್ಗೆ ಒಮ್ಮೆಲೆ ಚಿಮ್ಮಿತು... "ಶಾಂತ ಆಗ್ರಿ, ಶಾಂತ ಆಗ್ರಿ. ನನ್ನ ಮಾತ್ರ ಆ ಹಳೆ ಹಾಂವಗಾರನ ಹಂಗ ತಿಳೀಬ್ಯಾಡ್ರಿ. ನೀವು ನೋಡ್ತಾ ಇರ್ರಿ. ಇಂವನ ಕಣ್ಣಾಗಿನ ಬೆಳಕ ನಾ ಮತ್ತ ತರಸ್ತೇನಿ," ಅವನು ಮತ್ತೆ ಮಾತು ನಿಲ್ಲಿಸಿ ಅತಿ ಶ್ರದ್ಧೆಯಿಂದ ನಾಗರ ಹಾವಿಗೆ ವಂದಿಸಿದ. ಅಲ್ಲಿಯೇ ಪಕ್ಕದಲ್ಲಿದ್ದ ನಾಯಿ ಜೋರಾಗಿ ಬಾಲ ಆಡಿಸಿತು.

"ಮುಂದೇನಾತು ಕೇಳ್ರಿ ಅಣ್ಣಾವರ, ಹಳೆ ಹಾಂವಗಾರನ್ನ ಇಂವಾ ತನಗ ಸಿಕ್ಕ ದೇವರು ಅಂತ ತಿಳಕೊಂಡ. ಆದ್ರ... ಆ ಹಾಂವಗಾರಾ ಈ ಮನಸ್ಯಾನ ಶಕ್ತಿ ಮತ್ತ ತನ್ನ ಬುದ್ಧೀದು ಉಪಯೋಗ ತೊಗೊಂಡಾ. ಕೆಲಸಾ ಆದ ಮ್ಯಾಲೆ ಜಗಳಾ ಹಚ್ಚಿ ಕೈ ಬಿಟ್ಟ... ಈ ಮನಸ್ಯಾ, ಪಾಪ ಹೊಡಿಸಿಕೊಂಡ, ಜೇಲಿಗೆ ಹೋದ... ಮತ್ತ ಸಾಹೇಬ್ರು, ಇಂವಾ ಹಾರಾಡೂ ಗಿಳಿ ಆಗೋ ದಿನಾನೂ ಬಂತು. ಆದ್ರ ಅಷ್ಟೊತ್ತಿಗೆ ಇಂವಾ ಪೂರಾ ಹೈರಾಣಾಗಿದ್ದಾ. ಈ ಸಲಾ ಆ ಹಾಂವಗಾರಾ ಇಂವಗ ಸ್ವಂತ ಮನಿ ಸಿಗತೈತಿ, ಮನಿಗೆ ಲೈಟು ಬರ್ತೈತಿ, ಹೂವು ಹಣ್ಣಿನ ತ್ವಾಟಾ ಆಗ್ತೈತಿ, ನಿನ್ನದs ಹೊಲ...ಹೊಲದಾಗ ಬಂಗಾರದಂಥಾ ತೆನಿ... ನಿನಗ ಕೆಲಸ ಸಿಗತೈತಿ... ನೀ ಆರಾಮ ಇರ್ತಿ... ಇದೆಲ್ಲಾ ನಾ ಹೇಳಿದಂಗ ಕೇಳಿದ್ರ ಮಾತ್ರ, ಅಂದಾ. ಇವಂಗ ಹ್ಯಾಂಗ ಗೊತ್ತಾಗಬೇಕ್ರಿ ಅಣ್ಣಾವ್ರ......ತಾ ಒಬ್ಬನ ಕೈಯಿಂದ ಇನ್ನೊಬ್ಬನ ಕೈಗೊಂಬಿ ಆಗೀನಂತ," ಹಾವಾಡಿಗ ಮಾತನ್ನು ನಿಲ್ಲಿಸಿ ಎಲ್ಲರ ಕಡೆಗೆ ನೋಡಿದ... ಜನರೆಲ್ಲ ಸಹಾನುಭೂತಿಯಿಂದ ಆ ಬಡಪಾಯಿಯ ಕಡೆ ನೋಡುತ್ತಿದ್ದರು. ಎಲ್ಲರ ಕಣ್ಣಲ್ಲೂ ಆ ಸಹಾನುಭೂತಿ ಪ್ರತಿಬಿಂಬಿಸುತ್ತಿತ್ತು. ಆ ಮನುಷ್ಯ ಮೊಣಕಾಲುಗಳಲ್ಲಿ ಹುದುಗಿಸಿದ್ದ ತನ್ನ ತಲೆಯನ್ನು ಹೊರತೆಗೆದು ಹನಿದುಂಬಿದ ಕಣ್ಣುಗಳಿಂದ ಎಲ್ಲರತ್ತ ದೈನ್ಯ ನೋಟ ಬೀರಿದ. ಅವನ ಕಣ್ಣುಗಳಲ್ಲಿ ಯಾವುದೋ ಅವ್ಯಕ್ತ ಭಯ ಮನೆ ಮಾಡಿಕೊಂಡಂತಿತ್ತು. ಅವನು ಏನೋ ಹೇಳಲು ಬಾಯಿ ತೆರೆದ. ಆದರೆ ಶಬ್ದಗಳು ಹೊರಬೀಳಲೇ ಇಲ್ಲ. ಇದನ್ನು ನೋಡಿ ಹಾವಾಡಿಗನಿಗೂ ದುಃಖ ಉಮ್ಮಳಿಸಿ ಬಂದಂತೆನಿಸಿತು. ಅವನು ತುಂಬಿ ಬಂದ ತನ್ನ ಕಣ್ಣುಗಳನ್ನು ಒರೆಸಿಕೊಳ್ಳುತ್ತ, ಭಾರವಾದ ಧ್ವನಿಯಲ್ಲಿ, "ಸಾಹೇಬ್ರು, ನೀವು ನೋಡಾಕತ್ತಿರಲಾ, ನಿನ್ನೀತನಕ ಇಂವಗ ಬಾಯಿ ಕೂಡ ತೆರೀಲಿಕ್ಕೆ ಬರತಿರಲಿಲ್ಲಾ. ಇವತ್ತ ಬಾಯಾದರೂ ತೆಗ್ಯೂವಷ್ಟು ಶಕ್ತಿ ಬಂದೈತಿ. ನಮ್ಮ ನಾಗಪ್ಪ ಮನಸ್ಸ ಮಾಡಿದರ ಇಂವಾ ಮತ್ತ ಮದಲಿನಂಗ ಆರಾಮ ಆಗ್ತಾನ," ಎಂದು ಹೇಳಿ ರೂಢಿಯಂತೆ ನಾಗರಹಾವಿಗೆ ನಮಸ್ಕರಿಸಿದ. ಸಮೀಪದಲ್ಲಿದ್ದ ನಾಯಿಯೂ ಬಾಲ ಕೊಡವಿತು. ಹುಡುಗರ ಗಲಾಟೆ ಹೆಚ್ಚಾಯಿತು.

"ಹುಡುಗ್ರಾ, ನೀವು ಇಲ್ಲೆ ನಿಲ್ಲಬ್ಯಾಡ್ರಿ, ನಿಮ್ಮ ಸಾಲಿಗೆ ಹೊತ್ತಾಗತೈತಿ. ನೀವು ಹೋಗ್ರಿ. ಅಪ್ಪಾವ್ರು, ನೀವು ಇವರನ್ನ ಇಲ್ಲಿಂದ ಕಳಸ್ರಿ. ಅವರ ಟೈಮು ಸುಮ್ಮನೆ ಹಾಳಾಗತೈತಿ" ಎಂದ ಹಾವಾಡಿಗ. ಅಲ್ಲಿ ನಿಂತವರಲ್ಲಿ ಕೆಲವರು, ಸಣ್ಣ


ನಿಮಗೆ ಗೆಲುವಿನ ಆಹ್ಲಾದ
Liril
ಹೊಸತು ಲಿರಿಲ್. ಹಸಿರಿನ ತರಂಗವಿದೆ. ನಿಂಬೆಯ
ಲವಲವಿಕೆಯ ಆಹ್ಲಾದವಿದೆ. ಪುಲಕಿತಗೊಳಿಸುವ ಲಿರಿಲ್
ನಿಮ್ಮನ್ನು ಆಹ್ಲಾದಕರ ನವಕನ್ಯೆಯನ್ನಾಗಿ ಇರಿಸುತ್ತದೆ.
ಲಿರಿಲ್
ಹಿಂದುಸ್ತಾನ್ ಲೀವರ್ ಅವರ ಉತ್ಕೃಷ್ಟ ತಯಾರಿಕೆ

ಮಕ್ಕಳಿಗೆ ಆಟ ನೋಡುವದನ್ನು ಬಿಟ್ಟು ಶಾಲೆಗೆ ಹೋಗಲು ಒತ್ತಾಯ ಮಾಡತೊಡ ಗಿದನು. ಆದರೆ ಆ ಹುಡುಗ ಮಾತ್ರ ಒಂದು ಮೂಲೆಯೊಳಗೆ ಅಡಗಿಕೊಂಡ. ಉಳಿದ ಹುಡುಗ ರೆಲ್ಲ ಶಾಲೆಗೆ ಹೋದರು. "ನೋಡ್ರಿ, ಸಾಹೇಬ್ರ, ಈ ಮನಸ್ಯಾ ಜೋಲೋ ಬಟ್ಟಿ ನೇಯುತ್ತಿದ್ದ. ಇಂವಾ ನೇದ ಬಟ್ಟಿ ಜೆಣ್ಣೆ ಹಾಂಗ ಇರ್‍ತಿತ್ತು, ಬೆಣ್ಣೆ ಹಾಂಗ... ಆರ ಗಜದ ಸೀರಿ ಉಂಗುರದಾಗಿಂದ ಹಾದು ಹೋಗ ತಿತ್ತು. ಆಸಿರ್ಫೂಲಾ ಅಖ್ರೋಟದ ಚಿಪ್ಪಿನಾಗ ಮುಚ್ಚಿಡಾಕ ಬರ್‍ತಿತ್ತು. ಅದ್ರ ಆ ಹಾಂವ ಗಾರ, ಇದರಾಗ ದುಡದ ಬಾಳ ಆಗತೈತಿ, ದುಡ್ಡು ಕಡಿಮಿ ಸಿಗತೈತಿ. ನಮ್ಮದ್ಯ ಒಂದು ಮಿಲ್ ತಗೊಳ್ಳೋಣು ಅಂದಾ. ಇಂವಾ ಹೂಂ ಅಂದು ಸಾಲಾ ಮಾಡಿದಾ. ಮಿಲ್ ಆತು... ಮತ್ತ ಇಂವಾ ಅದರಾಗ ಗಾಣದ ಎತ್ತಿನ್ಹಂಗ ದುಡ್ಯಾಕ್ಹತ್ತಿದ.

"ಒಂದಿಷ್ಟು ದಿನಾ ಕಳದ ಮ್ಯಾಲೆ ಇವನ ಕಣ್ಣು ಮಂದಾದುವು. ಕೈಕಾಲಾಗಿನ ಶಕ್ತಿಯೆಲ್ಲ ಹೋತು. ಅಷ್ಟಾದರೂ ಇಂವಾ ಕೆಲಸಾ ಮಾಡ್ತಾನ್ಸ ಇದ್ದ. ಇವನ ಮಕ್ಕಳು ಕೆಲಸ ಇಲ್ಲದ ಬೀದಿ ಬೀದಿ ಅಲ್ಯಾಕ ಹತ್ತಿದರು. ಮಿಲ್ಲಿನ್ಯಾಗ ಅರಿಬಿ ತಯಾರಾಗಾಕ ಸುರೂ ಆಗಿತ್ತು. ಅದರ ಅದರ ಫಾಯದೆ ಆ ಹಾಂವಿನವಾ ಹೊಡೀತಿದ್ದದ್ದು ತಿಳೀತು. ಇಂವನ ಮ್ಯಾಲೆ ಅಗ್ಲೇ ಸಾಕಷ್ಟು ಸಾಲದ ಹೊರೀನೂ ಇತ್ತು... ಸಾಲ ಇವನ ಹೆಸರಿನ್ಯಾಗ, ಲಾಭಾ ಹಾಂವಗಾರನ ಮನ್ಯಾಗ. ಅದ್ರ ಸಾಹೇಬ್ರ, ಇಂವಾ ಅಲ್ಲೆ ಆಳಾಗೇ ದುಡದಾ... ಅರಸಾಗಿ ಉಣಲಿಲ್ಲ" ಹಾವಾಡಿಗ ಮತ್ತೆ ಸುಮ್ಮನಾಗಿ ಜನರನ್ನು ನೋಡತೊಡ ಗಿದ. ಅವರಲ್ಲಿ ಆ ಮನುಷ್ಯನ ದುರಂತ ಜೀವನ ದದ ಸಂಪೂರ್ಣ ರಹಸ್ಯವನ್ನರಿಯುವ ತವಕ ಇನ್ನೂ ಹೆಚ್ಚಾಗಿದ್ದುದು ಕಂಡುಬರತೊಡಗಿತು. ಹಾವಾಡಿಗ ಕತೆಯನ್ನು ಮುಂದುವರಿಸಿದ, "ಆಗ ನೋಡ್ರಿ ಸಾಹೇಬ್ರ ಇಂವಾ ಮತ್ತ ಇವನ ಮಕ್ಕಳು ತಮ್ಮ ಹಕ್ಕು ಮತ್ತ ಅಧಿಕಾರ ಕೇಳಲಿಕ್ಕೆ ಹತ್ತಿದರು. ಆಗ ಸಾಹೇಬ್ರ, ಆ ಹಾಂವಿನವ ಇಂವನ ಮೇ... ಮೇಲಗ ... ...

ಜೋಲೊ ಘಳಿಸಿದಾ.

"ಅಲ್ಲಿಗ ಇವನ್ನ ಹಿಡದ ಕಟ್ಟಿ ಹಾಕಿ ಪರರಾ ಮಾಡಲಿಕ್ಕೆ ಕುತ್ರಿ ನಾಯಿ ಕಟ್ಟಿದ! ಕೇಳಿದರ ಇಂವಾ ಅಜಾರಿ ಆದಾನ ಅಂತ ಹೇಳಿದ. ಇವನ ಔಷಧಿ ಸಹಿತ ಸಾಹೇಬ್ರಾನೂ ನಿಮ್ಮ ಕಡಿಂದ ರೊಕ್ಕಾ ಜಗ್ಗತಿದ್ದ... ಅಲ್ಲೇನ್ರೀ ಸಾಹೇಬ್ರ, ನೀವು ಈ ಮನಸ್ಯಾ ದವಾಖಾನ್ಯಾಗ ಇದ್ದು ಆರಾಮಾಗಾಕ್ ಹತ್ಯಾನ ಅಂತ ತಿಳಿದಿದ್ರಿ... ಅದರ ಹಕೀಕತ್ತು ಬ್ಯಾರೇನ್ಸ ಇತ್ತು. ಒಂದ ದಿನಾ ನಾಗಪ್ಪಾ ನನ್ನ ಕನಸಿನ್ಯಾಗ ಕಾಣಿಸಿಕೊಂಡು ಈ ಮನಸ್ಯಾನ್ನ ಮುಕ್ತಿ ಮಾಡಾಕ ಅಪ್ಪಣೆ ಮಾಡಿದ. ಶಕ್ತೀನೂ ಕೊಟ್ಟಾ. ಈ ನಾಗಪ್ಪನ ಆಶೀರ್ವಾದದಿಂದ ಆ ಹಾಂವಿನವನ ಕೈಯಿಂದ ಇವನ್ನ ಪಾರಮಾಡಿ ನಿಮ್ಮಹತ್ತರ ಕರಕೊಂಡ ಬಂದೆ.

"ಸಾಹೇಬ್ರ, ನಾನು ಇವನ್ನ ಜೋಲೋತ್ನಾಗಿ ನೋಡಕೊಬೇಕನ್ನೂದು ನಿಮ್ಮಾಸೆ. ಇಂವಗ ಮತ್ತ ಸರಿಯಾಗಿ ಕಣ್ಣು ಕಾಣಿಸುವಂಗ ಶಕ್ತಿ ಬರೂಹಂಗ, ಬಟ್ಟಿನಾಗ ಇಂವ ಗಟ್ಟಿ ಮುಟ್ಟ ಆಗೂಹಂಗ ಮಾಡಬೇಕು. ನಾ ಎಲ್ಲಾ ಮಾಡತೇನ್ರಿ ಅಣ್ಣಾಪ್ಪ, ಎಲ್ಲಾ ಮಾಡತೀನಿ. ಆದ್ರ ನಾ ಮುದಲ್ಸ ಹೇಳ್ತೀನ್ರಿ. ನಾನು ಜಾದೂ ಗಾರನೂ ಅಲ್ಲಾ, ದೇವ ಮನುಷನೂ ಅಲ್ಲಾ. ಎಲ್ಲಾ ನಿಮ್ಮ ಕೃಪಾ, ಸಹಾಯಾ ಮತ್ತ ನಾಗ ಪ್ಪನ ಆಶೀರ್ವಾದದಿಂದ ಆಗತೈತಿ. ನನ್ನ ಹತ್ತರ ಒಂದ ತರದ್ದ ಗುಳಿಗಿ ಐತಿರಿ. ಅದನ್ನ ನಿಮಗ ಹಂಚತೇನಿ. ಇದ್ಸ ನೋಡ್ರಿ ಇದ ಆ ಗುಳಿಗಿ, ಧೈರ್ಯದ ಗುಳಿಗಿ," ಎನ್ನುತ್ತಾ ತನ್ನ ಚೀಲದಿಂದ ತೆಗೆದ ಗುಳಿಗೆಗಳನ್ನು ಜನರತ್ತ ಎಸೆಯುತೊಡ ಗಿದ. ಸಿಕ್ಕವರೆಲ್ಲಾ ಆ ಗುಳಿಗೆಗಳನ್ನು ತೆಗೆದು ಕೊಂಡರು. "ಕೈ ಮ್ಯಾಲೆ ಸಾಸಿವಿ ನಿಲ್ಲೂದಿಲ್ಲರಿ ಸಾಹೇಬ್ರ. ಎಲ್ಲಾ ಠೀಕ್ ಆಗ್ತೇತಿ ನೋಡ್ತಾ ಇರ್ರಿ. ಮತ್ತ ಈ ಗುಳಿಗಿ ಚೀಪರಿ... ನೀವು ಇಚಾರ ಮಾಡ್ತಾಕತ್ತಿರಬೋದು – ಈ ಗುಳಿಗಿ ಕಿಮ್ಮತ್ತು ಏನು ಅಂತ," ಎಂದು ಎಲ್ಲ ರನ್ನೂ ಒಮ್ಮೆ ದಿಟ್ಟಿಸಿ ನೋಡಿದ. ಜನರಲ್ಲಿ ಗೊಂದಲವೆದ್ದಿತ್ತು. "ಕಿಮ್ಮತ್ತು... ಏನೂ ಇಲ್ಲ, ... ಈ

ಮನಸ್ಯಾನ್ಕ ಸಲುವಾಗಿ ನಿಮ್ಮ ಮನಸಿನ್ಯಾಗ ಎಷ್ಟು ಕೊಡಬೇಕನಸತೈತಿ ಅಷ್ಟು ಕೊಡ್ರಿ. ಒತ್ತಾಯ ಗಿತ್ತಾಯ ಏನೂ ಇಲ್ಲ. ನಾಗಪ್ಪನ ಹೆಸರಿನ್ಯಾಗ ಏನ್ ತಿಳದದ್ದು ಕೊಡ್ರಿ. ನೀವು ಕೊಟ್ಟಿದ್ದನ್ನ ಇಂವನ ಔಷದಕ್ಕ ಖರ್ಚು ಮಾಡ್ತೀನಿ. ನೀವು ಕೊಟ್ಟಿದ್ದರಾಗ ಒಂದs ಒಂದು ಪೈಸಾ ನನ್ನ ಸಲುವಾಗಿ ಖರ್ಚು ಮಾಡೀದ್ರ ನಾ ಹರಾಮದ್ದ ತಿಂದ್ಹಾಂಗ...ಹಾಂ," ಎನ್ನುತ್ತ ಹಾವಾಡಿಗ ಒಂದು ಚಾದರವನ್ನು ಭೂಮಿಯ ಮೇಲೆ ಹಾಸಿದ. ಅಕ್ಕ ಪಕ್ಕದಿಂದ ಚಿಕ್ಕಪುಟ್ಟ ನಾಣ್ಯಗಳು ಅದರ ಮೇಲೆ ಬೀಳತೊಡಗಿದವು. ಸ್ವಲ್ಪ ಸಮಯದಲ್ಲಿಯೇ ಸಾಕಷ್ಟು ಹಣ ಕೂಡಿತು. ಜನರ ಗುಂಪು ಚೆದುರಿಹೋಯಿತು. ಹಾವಾಡಿಗ ನಾಗರ ಹಾವಿಗೆ ನಮಸ್ಕರಿಸಿ ಬಿದಿರಿನ ಬುಟ್ಟಿಯಲ್ಲಿ ಅದನ್ನು ಸೇರಿಸಿದ, ತನ್ನ ಸಾಮಾನನ್ನೆಲ್ಲ ಜೋಡಿಸಿಕೊಂಡು ಬಂದ ದುಡ್ಡನ್ನು ಕಿಸೆಗೆ ಸೇರಿಸಿ ಅಲ್ಲಿಂದ ಕಾಲ್ದೆಗೆದಾಗ ಹಿಂದಿನಿಂದ ಬಾಲ ಅಲ್ಲಾಡಿಸುತ್ತಾ ಆ ನಾಯಿ, ಮತ್ತು ಅದರ ಹಿಂದೆ ಹಿಂದೆ ಸಾವಕಾಶವಾಗಿ ಆ ಮನುಷ್ಯ ತೆವಳುತ್ತ ಹೊರಟಿದ್ದು ಕಂಡಿತು- ಆ ಹಾವಾಡಿಗನನ್ನೇ ಕುತೂಹಲದಿಂದ ಹಿಂಬಾಲಿಸುತ್ತಿದ್ದ ಆ ಹುಡುಗನಿಗೆ.

ಹಾವಾಡಿಗ ಮೊದಲು ಹಾಲಿನ ಡೇರಿಗೆ ಹೋಗಿ ಅಲ್ಲಿ ಒಂದು ಲೀಟರ್ ಹಾಲು ತೆಗೆದುಕೊಂಡ, ನಾಗರ ಹಾವಿಗೆಂದು. ಆಗಷ್ಟೇ ದೊರೆತ ದುಡ್ಡಿನಲ್ಲಿಯೇ ಹಾಲಿನವನಿಗೆ ತೆಗೆದು ಕೊಟ್ಟ. ಅನಂತರ ಒಂದು ಒಳ್ಳೆಯ ಹೋಟೆಲಿಗೆ ಹೋಗಿ ಹೊಟ್ಟೆ ತುಂಬ ಊಟ ಮಾಡಿ ಅರ್ಧ ರೊಟ್ಟಿಯನ್ನು ನಾಯಿಗೆ ಹಾಕಿದ. ನಾಯಿ ರೊಟ್ಟಿಯನ್ನು ತಿಂದು ಮತ್ತೆ ಬಾಲ ಅಲ್ಲಾಡಿಸಿದ್ದಲ್ಲದೆ ಕೃತಜ್ಞತೆಯಿಂದ ಅವನ ಕಾಲನ್ನು ನೆಕ್ಕತೊಡಗಿತು. ಕೊನೆಗೆ ಉಳಿದ ತುಂಡು ರೊಟ್ಟಿಯನ್ನು ಹಾವಾಡಿಗ ಆ ಮನುಷ್ಯನ ಎದುರು ಬಿಸಾಕಿದ. ಆ ದುರ್ದೈವಿ ಬಿಸಾಕಿದ ತುಂಡು ರೊಟ್ಟಿಯನ್ನೆ ಗಬಕ್ಕನೆ ತೆಗೆದುಕೊಂಡ[...] ತನ್ನ ಸುತ್ತ ಮುತ್ತ ಕಣ್ಣು ಬಿಟ್ಟು ನೋಡ[...] ತೊಡಗಿದ. ನಾಯಿ ಆ ತುಂಡಿಗಾಗಿಯೂ ನಾಲಿಗೆ[...]ಯನ್ನು ಹೊರಚಾಚಿ ಗುರ್ರೆನ್ನತೊಡಗಿತ್ತು. ಆಗ ಆ ಬಡಪಾಯಿ ರೊಟ್ಟಿಯ ತುಂಡನ್ನು ಮುಷ್ಟಿಯಲ್ಲಿ ಗಟ್ಟಿಯಾಗಿ ಹಿಡಿದು ಭಯ[...]ದಿಂದ ಅತ್ತಿತ್ತ ನೋಡುತ್ತ ಒಂದೇ ಸಲಕ್ಕೆ ಬಾಯಿಯೊಳಗೆ ತುರುಕಿಕೊಂಡು ಹಾಗೆಯೇ ನುಂಗಿಬಿಟ್ಟ. ಹಾವಾಡಿಗ ಹೋಟೇಲ್ ಮಾಲೀಕನಿಗೆ ಆಗ ಕೂಡಿದ ಹಣದಲ್ಲೇ ಒಂದಿಷ್ಟನ್ನು ಕೊಟ್ಟು ಮುನ್ನಡೆದಂತೆ ನಾಯಿ ಮತ್ತು ಆ ನತದೃಷ್ಟ[...] ಅವನನ್ನು ಅನುಸರಿಸತೊಡಗಿದರು.

ಈಗ ಆ ಬಾಲಕನಿಗೆ ತಡೆಯುವದಾಗದೆ ಓಡಿ ಹೋಗಿ ಆ ಹಾವಾಡಿಗನನ್ನು ನಿಲ್ಲಿಸಿ ಸಿಟ್ಟಿನಿಂದ ಕೇಳಿದ– "ನೀನು ಅವನ್ನ ಸರಿಯಾಗಿ ನೋಡ[...] ಕೊತೇನಿ ಅಂತ ಹೇಳಿದ್ದಿ. ಹಿಂಗ ಏನು ಸರಿಯಾಗಿ ನೋಡಕೊಳ್ಳೋದು?" ಹಾವಾಡಿಗ ಧೈರ್ಯವ[...] ಒಂದು ಗುಳಿಗೆಯನ್ನು ಆ ಹುಡುಗನಿಗೆ ಕೊಡಲ[...] ಹೋದ. ಬಾಲಕ ಕೈ ಮುಂದೆ ಮಾಡಲಿಲ್ಲ. ಆಗ ಹಾವಾಡಿಗ ನಗುತ್ತಾ– "ನೀನು ಇನ್ನೂ ಸ್ಟೂಡೆಂಟ್ ಅದಿ. ನೀನು ಓದೂ ಕಡೆ ಲಕ್ಷ ಕೊಡಬೇಕು, ನೀತೀ ಕಡೆ ಅಲ್ಲ...ಹೋಗಪ್ಪಾ ಸಾಲಿಗೆ ಹೋಗು..." ಎಂದ.

ಆ ಹುಡುಗ ಮೊದಲಿನಂತೆ "ನನ್ನ ಮಾತಿಗೆ ಉತ್ತರ ಕೊಡು" ಎಂದು ರೋಷದಿಂದ ಕೇಳಿದ.

"ಏ. ಹುಚ, ನೀನು ಇನ್ನೂ ಸಣ್ಣವದಿ.. ನನಗ[...] ನಾಳೀನೂ ಆಟ ತೋರಿಸೂದೈತಿ"– ಎಂದು ವಿಕಾರವಾಗಿ ನಗುತ್ತ ಹಾವಾಡಿಗ ತನ್ನ ದಾರಿ ಹಿಡಿದ.

ಹಾವಾಡಿಗನ ಕ್ರೂರ ನಗೆ ಆ ಹುಡುಗನನ್ನು ನೆನಪಿನಾಳಕ್ಕೆ ಸೆಳೆದೊಯ್ದಿತು. "ಅರೆ, ಇ[...] ಅದ್ಕ ಆ ಹಳೀ ಹಾಂವಗಾರಾ, ವೇಷಾ ಬದಲಿ[...] ಬಂದಾನ...!"

ನೀರ ಮೇಲೆ ಸೈಕಲ್ ನಡೆಸಿದಾತ

'ಸವ್ಯಸಾಚಿ'

ಸುಮಾರು ೮೦ ವರ್ಷಗಳ ಹಿಂದಿನ ಘಟನೆ. ೧೮೯೭ರ ಒಂದು ಮುಂಜಾನೆ ಕಲ್ಕತ್ತೆಯ ಗಂಗಾ ತೀರದಲ್ಲಿ ಅಪಾರ ಜನಸಮೂಹ ನೆರೆದಿತ್ತು. ಈ ಸಂದಣಿಯಲ್ಲಿ ದರಭಂಗಾದ ಮಹಾರಾಜ, 'ಅಮೃತ ಬಜಾರ್' ಪತ್ರಿಕೆಯ ಸಂಸ್ಥಾಪಕ ಶ್ರೀ ಶಿಶಿರಕುಮಾರ ಘೋಷ್ ಹಾಗೂ ಇತರ ಪ್ರತಿಷ್ಠಿತ ವ್ಯಕ್ತಿಗಳ ಜೊತೆಗೆ ಜನಸಾಮಾನ್ಯರೂ ಬಹಳಷ್ಟು ಸೇರಿದ್ದರು. ಬಂಗಾಳಿಯೊಬ್ಬ ಗಂಗಾ ನದಿಯ ನೀರಿನ ಮೇಲೆ ಸೈಕಲ್ ಸವಾರಿಮಾಡಲಿದ್ದ.

ಜನ ವಿಧವಿಧವಾಗಿ ಮಾತಾಡುತ್ತಿದ್ದರು. "ಮಹಾಯೋಗಿಗಳು... ಎಷ್ಟೊಂದು ಉದ್ದನೆಯ ಗಡ್ಡ ಧರಿಸಿದ್ದಾರೆ...... ನೂರು ವರ್ಷಗಳಿಂದ ಹಿಮಾಲಯದ ಗುಹೆಯಲ್ಲಿ ತಪಸ್ಸುಮಾಡುತ್ತಿದ್ದರು. ಭಕ್ತರ ಕರುಣ ಕಥೆ ಕೇಳಿ ಈ ಬಿಳಿಯರಿಗೆ ಹಿಂದೂ ಧರ್ಮದ ಮಹತ್ವ ಹಾಗೂ ಯೋಗದ ಶ್ರೇಷ್ಠತೆಯನ್ನು ಮನದಟ್ಟು ಮಾಡಿಸಲು ಕೆಳಗೆ ಬಂದಿದ್ದಾರೆ."

"ಮಹಾ ವಂಚಕನಂತೆ ತೋರುತ್ತಾನೆ...... ಇಲ್ಲಿ ಬಂದರೇ ಹೆಚ್ಚು. ನಮ್ಮನ್ನೆಲ್ಲ ಮೂರ್ಖರನ್ನಾಗಿ ಮಾಡುತ್ತಿದ್ದಾನೆ. ಇಂದು ಏಪ್ರಿಲ್ ಒಂದನೇ ತಾರೀಖು ಅಲ್ಲವಷ್ಟೆ?"

ಇಲ್ಲ, ಅಂದು ಏಪ್ರಿಲ್ ೧ನೇ ತಾರೀಖು ಆಗಿರಲಿಲ್ಲ. ಎಲ್ಲರ ಸಂದೇಹಗಳನ್ನು ನಿವಾರಿಸುತ್ತ ಆತ ಬಂದೇಬಿಟ್ಟ. ಬಹು ಸರಳ ವ್ಯಕ್ತಿ. ವಯಸ್ಸು ೩೫–೩೬ ವರ್ಷ ಇದ್ದೀತು. ಆತ ನೇರವಾಗಿ ಗಂಗಾ ತೀರಕ್ಕೆ ತಲುಪಿ ನೀರ ಮೇಲೆ ಸಲೀಸಾಗಿ ಸೈಕಲ್ ಸವಾರಿ ಮಾಡಿಬಿಟ್ಟ! ಅಸಂಭವವನ್ನು ಸಂಭವಗೊಳಿಸಿದ ಈ ವೀರನ ಹೆಸರು ಜಗದೀಶ್ವರ ಘಟಕ.

ಆತ ಸೈಕಲ್ ಮಾಡಿದ್ದು ? ಎಂಬುದನ್ನು ಹೇಳುವ ಮೊದಲು ಅವನ ಪರಿಚಯ ಮಾಡಿಕೊಳ್ಳೋಣ. ೧೮೬೨ರಲ್ಲಿ ಜನನ. ಹುಟ್ಟೂರು ಜೆಸ್ಸೋರ್ ಜಿಲ್ಲೆಯ ಒಂದು ಹಳ್ಳಿ. ತಂದೆ ಆದೀಶ್ವರ ಘಟಕ. ಅಜ್ಜ ಸಂಸ್ಕೃತದ ಪ್ರಕಾಂಡ ಪಂಡಿತನೂ ಶಿಕ್ಷಕನೂ ಆಗಿದ್ದ. ಮಗ ಮ್ಲೇಚ್ಛ ಭಾಷೆಯಾದ ಪಾರ್ಸಿಯನ್ನು ಕಲಿತುದಕ್ಕಾಗಿ ಮನೆಯಿಂದಲೇ ಹೊರಹಾಕಿದರು. ಆದೀಶ್ವರರು ಕಲಕತ್ತೆಗೆ ಬಂದು ಎಂತೆಂತೋ ಕಾನೂನು ಪರೀಕ್ಷೆ ಪಾಸು ಮಾಡಿದರು. ದೇವರ ದಯೆಯಿಂದ ಅವರ ವಕೀಲಿ ವೃತ್ತಿ ಸರಿಯಾಗಿಯೇ ಸಾಗಿತ್ತು.

ಆದರೆ ಮಗ ಜಗದೀಶ್ವರ ಕಾನೂನಿನ ಹತ್ತಿರವೂ ಸುಳಿಯಲಿಲ್ಲ. ಬಾಲ್ಯದಿಂದಲೇ ಬೇರೊಂದು ಗುಂಗು ಅವನಿಗೆ ಅಂಟಿತ್ತು. ಅವನ ಪ್ರತಿಭೆ ಗುಟ್ಟಾಗಿ ವಿಕಾಸದ ಹಾದಿ ಹಿಡಿಯಿತು. ಪಠ್ಯ ಪುಸ್ತಕಗಳ ಬದಲು ಇರುಳಿಡೀ ಎಚ್ಚತ್ತು ಗುಟ್ಟಾಗಿ ಜೂಲ್ಸ್ ವರ್ನರ ಪುಸ್ತಕ ಓದುತ್ತಿದ್ದ. ಹಕ್ಕಿ ಹಾರುವುದೆಂತು ? ಎಂದು ಆಳವಾಗಿ ಅಭ್ಯಸಿಸುತ್ತ ಜೂಲ್ಸ್ ವರ್ನರಂತೆಯೇ ವಿಚಿತ್ರ ಹಾಗೂ ಹೊಸ ಯಂತ್ರಗಳ ನಿರ್ಮಾಣದ ಬಗ್ಗೆ ಯೋಚಿಸುತ್ತಿದ್ದ. ನೆಲದ ಮೇಲೂ ನೀರಲ್ಲೂ ಆಕಾಶದಲ್ಲೂ ಸಮಾನ ವೇಗದಿಂದ ಸಾಗಬಲ್ಲ ಒಂದು ವಾಹನವನ್ನು ನಿರ್ಮಿಸಬೇಕೆಂಬ ಇಚ್ಛೆ ಅವನಿಗೆ. ದೊಡ್ಡವನಾದ ಬಳಿಕವೂ ಜಗದೀಶ್ವರನ ಈ ಅಮಲು ಇಳಿಯಲಿಲ್ಲ. ನಿದ್ದೆ, ಹಸಿವು, ನೀರಡಿಕೆಗಳ ವಿಚಾರವನ್ನೇ ಮರೆತು, ಒಂದು ದಿನ ಆತ ವಿವಿಧ ಯಂತ್ರಗಳ ಬಿಡಿಭಾಗಗಳ ತಯಾರಿಯಲ್ಲಿ ಮಗ್ನನಾದ.

ಅಮೃತ ಬಜಾರ್ ಪತ್ರಿಕೆಯ ಸಂಸ್ಥಾಪಕ

ಶಿಶಿರಕುಮಾರ ಘೋಷರು ಜಗದೀಶ್ವರನ ಗೆಳೆಯರು. ಮಿತ್ರನ ಆಸಕ್ತಿ ಹಾಗೂ ಚಟುವಟಿಕೆಗಳನ್ನು ಕಂಡು ಈ ವ್ಯರ್ಥದ ಪ್ರಯೋಗಗಳಲ್ಲಿ ವೇಳೆ ಹಾಳು ಮಾಡದೆ ಜನಸಾಮಾನ್ಯರಿಗೆ ಉಪಯೋಗವಾಗುವ ವಸ್ತುವನ್ನು ಆವಿಷ್ಕರಿಸಬಾರದೆ? ಉದಾಹರಣೆಗಾಗಿ ಬತ್ತ ಕುಟ್ಟಲು ಹಳ್ಳಿಯ ಹೆಂಗಸರು ಅದೆಷ್ಟು ಕಷ್ಟ ಪಡುತ್ತಾರೆ? ಅತಿ ಕಡಿಮೆ ಸಮಯ ಹಾಗೂ ಪರಿಶ್ರಮದಿಂದ ಅವರು ಈ ಕೆಲಸ ಸಾಧಿಸುವಂತಹ ಯಂತ್ರವೊಂದನ್ನು ತಯಾರಿಸಲಾರೆಯಾ ಎಂದರು.

ಅವರ ಸಲಹೆಯಂತೆ ಜಗದೀಶ್ವರ ಕಾರ್ಯಪ್ರವೃತ್ತನಾದ. ಕೆಲವೇ ದಿನಗಳಲ್ಲಿ ಅಂತಹದೊಂದು ಯಂತ್ರವನ್ನು ತಯಾರಿಸಿಬಿಟ್ಟ. ಎಲ್ಲರೆದುರು ಅದನ್ನು ಪ್ರದರ್ಶಿಸಲಾಯಿತು. ಎಲ್ಲರೂ ಇದನ್ನು ಮುಕ್ತ ಕಂಠದಿಂದ ಹೊಗಳಿದರು. ಕೊಟ್ಟಣದ ಅಕ್ಕಿಯಲ್ಲಿರುವಂತೆಯೇ ಈ ಯಂತ್ರದಿಂದ ತಯಾರಾದ ಅಕ್ಕಿಯಲ್ಲೂ ವಿಟಾಮಿನ್ನುಗಳಿದ್ದುವು.

ಈ ಸುದ್ದಿಯನ್ನು ಪತ್ರಿಕೆಗಳಲ್ಲೋದಿ ಮಾರ್ಟಿನ್ ಬರ್ನ್ ಎಂಬ ಕಂಪನಿ ಇದರ ಬಗ್ಗೆ ಆಸಕ್ತಿ ತಳೆಯಿತು. ಅದು ಇದರ ನಿರ್ಮಾಣದ ಸರ್ವಾಧಿಕಾರ ಪಡೆದುಕೊಂಡಿತು. ಕಂಪನಿ ತಯಾರಿಸಿದ ಯಂತ್ರ ತುಂಬ ಜನಪ್ರಿಯವಾಯಿತು. ಮುಂದೆ ಯುರೋಪಿನ ಎಗಲ್‌ಬರ್ಗ್ ಕಂಪನಿ ತಯಾರಿಸಿದ ಯಂತ್ರಗಳು ಮಾರುಕಟ್ಟೆಗೆ ಬಂದ ಬಳಿಕ ಈ ಯಂತ್ರದ ಬಳಕೆ ತಗ್ಗಿತು. ಭೋಜನವಿಲಾಸಿ ಬಂಗಾಳಿಗಳು ಪಾಲಿಶ್ ಮಾಡಿದ ಸತ್ವರಹಿತ ಬಿಳಿ ಅಕ್ಕಿಯನ್ನೇ ತಿಂದು ತಿಂದು ತಮ್ಮ ಆರೋಗ್ಯ ಕೆಡಿಸಿಕೊಂಡರು.

ಬತ್ತ ಕುಟ್ಟುವ ಯಂತ್ರ ಮಾಡುವುದಕ್ಕೆ ಮೊದಲು ಜಗದೀಶ್ವರ ಇನ್ನೊಂದು ಯಂತ್ರ ತಯಾರಿಸಿದ್ದ. ಒಮ್ಮೆ ಅವ ತನ್ನೊಬ್ಬ ಜಮೀನ್ದಾರ ಮಿತ್ರನ ಮನೆಗೆ ಹೋಗಿದ್ದ. ಆ ವೇಳೆ ಮಿತ್ರ ದಿಂಬಿಗೊರಗಿ ಕಣ್ಣು ಮುಚ್ಚಿ ಕುಳಿತು ಆರಾಮವಾಗಿ ವೀಳ್ಯ ಜಗಿಯುತ್ತಿದ್ದ. ಬಡ [illegible] ಆಳು ಕೈಯಿಂದ [illegible] ಬೀಸುತ್ತಿದ್ದ. ಅದನ್ನ ನೋಡುತ್ತಿ [illegible]

ತೋರುತ್ತಿತ್ತು.

"ಏನು ಮಾಡಲಿ ? ಅವನ ಕಷ್ಟ ನನಗೆ ಗೊತ್ತಿದೆ. ಆದರೆ ಈ ಭಯಂಕರ ಸೆಕೆಯಲ್ಲಿ ಗಾಳಿಯಿಲ್ಲದೆ ನಾನು ಬದುಕಲಾರೆ"– ಎಂದ ಆ ಜಮೀನುದಾರ ಮಿತ್ರ.

ಜಗದೀಶ್ವರ ಅಂದಿನಿಂದಲೇ ಇದಕ್ಕೆ ಪರಿಹಾರ ಮಾಡಲಾರಂಭಿಸಿದ. ಬಹು ಬೇಗನೆ ಬೀಸಣಿಗೆ ಬೀಸುವ ಯಂತ್ರವೊಂದನ್ನು ಆತ ತಯಾರಿಸಿದ.

ಬತ್ತ ಕುಟ್ಟುವ ಯಂತ್ರದ ಸಫಲವಾದದ್ದನ್ನು ಕಂಡು ಉತ್ಸಾಹಗೊಂಡು ಬತ್ತ ಬೇಯಿಸುವ ಯಂತ್ರವೊಂದನ್ನು ತಯಾರಿಸಿದ. ಆ ಬಳಿಕ ಬಹು ಬೇಗನೆ ಬತ್ತ ಒಣಗಿಸುವ ಯಂತ್ರದ ನಿರ್ಮಾಣದಲ್ಲಿ ಮಗ್ನನಾದ. ಇದೇ ವೇಳೆ, ಅಂದರೆ, ೧೯೦೫ರಲ್ಲಿ ಆತ ಅವಲಕ್ಕಿ ಕುಟ್ಟುವ ಯಂತ್ರ ತಯಾರಿಸುವುದರಲ್ಲಿ ತೊಡಗಿದ್ದಾಗ ಒಂದು ಅಪಘಾತ ಸಂಭವಿಸಿ ಬರೇ ೪೮ ವರ್ಷಗಳ ಚಿಕ್ಕ ವಯಸ್ಸಿನಲ್ಲೇ ಸತ್ತುಹೋದ.

ಆರಂಭದಲ್ಲಿ ಉಲ್ಲೇಖಿಸಿದ ಸೈಕಲ್ ಪ್ರಕರಣವನ್ನು ಈಗ ಪೂರ್ಣಗೊಳಿಸಬಹುದು. ದರಭಂಗಾ ಮಹಾರಾಜರು ಒಂದು ದಿನ ಮಾತಾಡುತ್ತಾ, ಶಿಶಿರಕುಮಾರ ಘೋಷರೊಡನೆ, "ಹೊಳೆಯ ಮೇಲೆ ಸಾಗಬಲ್ಲ ಸೈಕಲ್ಲೊಂದನ್ನು ಯಾರಾದರೂ ತಯಾರಿಸಿಕೊಟ್ಟರೆ ಆವಿಷ್ಕರ್ತನಿಗೆ ಒಳ್ಳೇ ಬಹುಮಾನ ಕೊಡುವೆ," ಎಂದರು. ಶಿಶಿರಕುಮಾರರು ಈ ವಿಷಯವನ್ನು ಜಗದೀಶ್ವರನಿಗೆ ಹೇಳಿದರು. ಆತ ತುಂಬ ಉತ್ಸಾಹದಿಂದ ಕಾರ್ಯಪ್ರವೃತ್ತನಾದ ಮತ್ತು ಬಹು ಬೇಗನೆ ಅಂತಹ ಒಂದು ಸೈಕಲ್ ತಯಾರಿಸಿದ. ದರಭಂಗಾ ಮಹಾರಾಜರ ಹಾಗೂ ವಿಶಾಲ ಜನಸಮೂಹದೆದುರು ಗಂಗಾನದಿಯ ಮೇಲೆ ಯಶಸ್ವಿಯಾಗಿ ಸೈಕಲ್ ಸವಾರಿ ಮಾಡಿ ಆತ ಎಲ್ಲರನ್ನೂ ಬೆರಗುಗೊಳಿಸಿದ. ಮಹಾರಾಜರು ತುಂಬ ಸಂತುಷ್ಟರಾಗಿ ಜಗದೀಶ್ವರನಿಗೆ ದೊಡ್ಡ ಮೊತ್ತದ ಬಹುಮಾನ ಕೊಟ್ಟು ಆ ವಿಚಿತ್ರ ಸೈಕಲ್ ಕೊಂಡುಕೊಂಡರು. ಆದರೆ ಅದರ ಮೇಲೆ ಸವಾರಿ ಮಾಡುವ ಸಾಹಸ ಮಾತ್ರ ಕೊನೆಯವರೆಗೂ ಅವರಿಗಾಗಲಿಲ್ಲ.

ಲಂಡನ್ನಿನ ಪತ್ರಿಕೆಗಳಲ್ಲಿ ಈ ಅದ್ಭುತ ಸೈಕಲ್ಲಿನ ಬಗ್ಗೆ ಸುದ್ದಿ ಪ್ರಕಟವಾಯಿತು. ಎಲ್ಲೆಡೆಗೂ ಜಗದೀಶ್ವರನ ಕೀರ್ತಿ ಹರಡಿತು.

ಈ ಸೈಕಲ್ ಹೊರನೋಟಕ್ಕೆ ಇತರ ಸೈಕಲ್ಲುಗಳಂತೆಯೇ ಇತ್ತು. ನೆಲದ ಮೇಲೂ ಅದನ್ನು ನಡೆಸಬಹುದಿತ್ತು. ಆದರೆ ನೀರಿಗಿಳಿಸುವ ಮೊದಲು ಅದರ ಇಕ್ಕಡೆಗಳಲ್ಲೂ ಉದ್ದಕ್ಕೆ ಎರಡು ಟೊಳ್ಳು ಪೀಪಾಯಿಗಳನ್ನು ಜೋಡಿಸಲಾಗುತ್ತಿತ್ತು. ಆ ಬಳಿಕ ಸೀಟಿನ ಮೇಲೆ ಕುಳಿತು ಪೆಡಲ್ ತುಳಿಯುತ್ತಲೇ ಸೈಕಲ್ ಸಲೀಸಾಗಿ ನೀರ ಮೇಲೆ ಸಾಗುತ್ತಿತ್ತು.

ಲಂಡನ್ನಿನ ಪತ್ರಿಕೆಗಳು ಈ ಸೈಕಲ್ಲಿನ ಬಗ್ಗೆ ಇನ್ನೂ ಹಲವಾರು ಸುದ್ದಿಗಳನ್ನು ಪ್ರಕಟಿಸಿದವು: ಆವಿಷ್ಕರ್ತನು ಸೈಕಲಿನ ವೇಗ ಹೆಚ್ಚಿಸುವ ಪ್ರಯತ್ನದಲ್ಲಿದ್ದಾನೆ; ಇದನ್ನು ಪೇಟೆಂಟ್ ಮಾಡುವ ಪ್ರಯತ್ನವೂ ನಡೆದಿದೆ... ಇತ್ಯಾದಿ... ಇತ್ಯಾದಿ...

ನೆಲ ಹಾಗೂ ನೀರಿನ ಮೇಲೆ ಸಾಗುವ ಈ ಅದ್ಭುತ ಸೈಕಲಿನ ಗತಿಯೇನಾಯಿತೆಂಬುದು ತಿಳಿದುಬಂದಿಲ್ಲ. ಬಹುಶಃ ಇದಕ್ಕೆ ಅಷ್ಟೊಂದು ಪ್ರಚಾರ ದೊರೆಯಲಿಲ್ಲ. ವಿದೇಶೀ ಸರಕಾರದಿಂದ ಗುಲಾಮದೇಶದ ಆವಿಷ್ಕರ್ತನಿಗೆ ನೆರವು ಸಿಕ್ಕೀತೆಂದು ಆಶಿಸುವಂತೆಯೂ ಇರಲಿಲ್ಲ. ಜಗದೀಶ್ವರನಲ್ಲಿ ಪ್ರತಿಭೆಯಿತ್ತು; ಆಸಕ್ತಿಯಿತ್ತು. ಪ್ರೋತ್ಸಾಹ ಹಾಗೂ ನೆರವು ಸಿಗುತ್ತಿದ್ದರೆ ಮಾರ್ಕೋನಿ ಅಥವಾ ಎಡಿಸನ್ನಿನಂತಹ ತಜ್ಞ ಪ್ರಸಿದ್ಧನಾಗುತ್ತಿದ್ದನೇನೋ! ✡

(ಕೃಪೆ: ಹಿಂದೀ 'ಗುಲದಸ್ತಾ')

ಹೆಗ್ಗೌಳಿಗಳು ಅಳಿದುದೇಕೆ?

ಎಸ್. ವಾಸುದೇವ

ಅದೊಂದು ಭಯಂಕರ ಘಟನೆ. ನಡೆದ ಕಾಲ ಇಂದಿಗೆ ಸುಮಾರು ಏಳು ಕೋಟಿ ವರ್ಷಗಳ ಹಿಂದೆ. ಸ್ಥಳ ಇದೇ ಭೂಮಿ. ಪರಿಣಾಮ ಜಗದಾದ್ಯಂತ ಕಿಕ್ಕಿರಿದು ತುಂಬಿಹೋಗಿದ್ದ "ಹೆಗ್ಗೌಳಿಗಳ" ನಿರ್ನಾಮ. ಕಾರಣ? ಅದೇ ಈಗಿನ ಪ್ರಶ್ನೆ.

ಇಂದಿಗೂ ಎದೆ ನಡುಗಿಸುವಷ್ಟು ತೀವ್ರತೆಯ ಆ ದುರಂತ ಘಟನೆಯೊಂದಿಗೆ ಮಧ್ಯಜೀವಿ-ಕಲ್ಪವೂ ಮುಗಿದುಹೋಯಿತು, ಅದರೊಂದಿಗೆ ಹೆಗ್ಗೌಳಿಗಳ ವಂಶ ಸಹ. ಹೆಗ್ಗೌಳಿಗಳೇನು ಸಾಮಾನ್ಯ ಜೀವಿಗಳೇ? ಅಂದಿನ ನೆಲ, ಜಲ, ಆಕಾಶಗಳಲ್ಲೆಲ್ಲಾ ಅವುಗಳದೇ ಚಕ್ರಾಧಿಪತ್ಯ. ಕಲ್ಪನೆಗೂ ಎಟುಕದ ವಿವಿಧ ರೂಪ, ಅಗಾಧ ಕಾಯ, ಭೀಮಬಲ, ಅಗಣಿತ ಸಂಖ್ಯೆ ಅಂದು ಅವುಗಳದು. ಒಂದೆರಡು ಉದಾಹರಣೆಗಳು:

"ಟ್ರೇಕೋಡಾನ್" ಹೆಗ್ಗೌಳಿಯ ಬಾಯಲ್ಲಿದ್ದ ಹಲ್ಲುಗಳ ಸಂಖ್ಯೆ ಎರಡು ಸಾವಿರ! "ಡಿಪ್ಲೋಡೋಕಸ್"ನ ಒಟ್ಟು ಉದ್ದ ತೊಂಬತ್ತೈದು ಅಡಿಗಳಾದರೆ "ಬ್ರಾಂಟೋಸಾರಸ್" ಹೆಗ್ಗೌಳಿಯ ತೂಕ ನಲವತ್ತು ಸಾವಿರ ಕಿಲೋ! ಶುದ್ಧ ಮಾಂಸಾಹಾರಿಯಾಗಿದ್ದ ಭಯಂಕರ ಬೇಟೆಗಾರ "ಟೈರನೋಸಾರಸ್ ರೆಕ್ಸ್"ನ ಎತ್ತರ ಹತ್ತೊಂಬತ್ತು ಅಡಿಗಳು! ಎಂದರೆ ಮಹಡಿ ಮನೆಯೊಂದರಷ್ಟು ಎತ್ತರದ ನಿಲುವು. ಅತಿ ವಿಚಿತ್ರ ದೇಹ ರಚನೆಯ "ಸ್ಟೀಗೋಸಾರಸ್"ಗೆ ಎರಡು ಮಿದುಳು—ತಲೆಯಲ್ಲೊಂದು, ಸೊಂಟದಲ್ಲೊಂದು. ತಲೆಯ ಮಿದುಳಿನ ಗಾತ್ರ ಕೇವಲ ಬಟಾಣಿ ಕಾಳಿನಷ್ಟು; ಸೊಂಟದಲ್ಲಿನದು ಇದಕ್ಕಿಂತ ಇಪ್ಪತ್ತರಷ್ಟು ದೊಡ್ಡದು. ಬಾಯಿ ತುಂಬ ಹಲ್ಲುಗಳನ್ನೂ ಉದ್ದ ಬಾಲವನ್ನೂ ಹೊಂದಿದ್ದ ಕೆಲವು ಹಾರುವ ಹೆಗ್ಗೌಳಿಗಳ ರೆಕ್ಕೆ ವಿಸ್ತಾರಗಳ ಮೂವತ್ತು ಅಡಿಗಳಷ್ಟು!

ಇಂತಹ ಬಲಿಷ್ಠ ಕಾಯಗಳು ಒಂದೇ ಬಾರಿಗೆ ಇದ್ದಕ್ಕಿದ್ದಂತೆ ಇಡಿಯಾಗಿ ಅಳಿಸಿಹೋಗುವುದೆಂದರೆ ಸಾಮಾನ್ಯ ವಿಚಾರವೇ?

ಅಷ್ಟೇ ಅಲ್ಲ, ಹೆಗ್ಗೌಳಿಗಳದು ಕೇವಲ "ಎರಡು ದಿನದ ಬದುಕು" ನಡೆಸಿದ ಚರಿತ್ರೆಯಲ್ಲ. ಅಳಿವ ವೇಳೆಗಾಗಲೇ ೧೦ ಕೋಟಿ ವರ್ಷಗಳನ್ನು ಮೀರಿದ್ದ ಸುದೀರ್ಘ ತುಂಬು ಬದುಕು ಅವುಗಳದು. ಅಂದಿನ ಭೂ ಪರಿಸರಕ್ಕೆ ಅಷ್ಟೆಲ್ಲಾ ಹೊಂದಿಕೊಂಡಿದ್ದು, ಜೀವನ ಕಲೆಯಲ್ಲಿ ಪರಿಣತಿ ಸಾಧಿಸಿ, ಅತ್ಯುಚ್ಛ್ರಾಯ ಸ್ಥಿತಿಯಲ್ಲಿದ್ದ ಆ ಅದ್ಭುತ ಜೀವಿಗಳು ಒಮ್ಮೆಲೇ ನಾಪತ್ತೆಯಾದುದು ಹೇಗೆ? ಇಂದಿಗೂ ಅದೊಂದು ಯಕ್ಷಪ್ರಶ್ನೆ.

ಅದಿರಲಿ, ಹಾಗಾದರೆ ಕೆಲವು ಸರೋವರಗಳ ಒಳಗೆ ಮತ್ತು ಅತಿ ದುರ್ಗಮ ದಟ್ಟಡವಿಗಳಲ್ಲಿ ಆಗಾಗ "ಆಕಸ್ಮಿಕ ದರ್ಶನ" ನೀಡಿರುವ ಲಾಚ್‌ನೆಸ್ ಹಾಗೂ ಚಾಂಪ್ಲೇನ್ 'ರಾಕ್ಷಸರ' ಬಗೆಗೆ ರೋಮಾಂಚಕ ವಿಚಾರಗಳು ಸುಳ್ಳೇ? ಹೌದು. ಅವು ಕೇವಲ ಕಥೆಗಳು. ತಪ್ಪು ಕಲ್ಪನೆಯ,



"ಡಿಪ್ಲೊಡೋಕಸ್"— ೯೦ ಅಡಿಗಳಿಗಿಂತಲೂ ಉದ್ದ ದೇಹ

ಹುಚ್ಚು ಭ್ರಮೆಯು, ರಂಜಕ ಕಥನಗಳು ಅಷ್ಟೆ.

ಏಕೆಂದರೆ, ಇಂದಿರಲಿ, ಏಳು ಕೋಟಿ ವರ್ಷಗಳ ಹಿಂದಿನಿಂದ ಈಚೆಗಿನ ಯಾವ ಶಿಲಾಸ್ತರಗಳಲ್ಲೂ ಯಾವೊಂದು ಹೆಗ್ಗಾಳಿಯ ಪಳೆಯುಳಿಕೆಯೂ ದೊರೆತಿಲ್ಲ. ಇನ್ನು ಇಂದು ಜೀವಂತ ಹೆಗ್ಗಾಳಿಗಳನ್ನೇ ಕಾಣುವುದೆಂದರೆ?– ಅದು ಹೇಗೆ ಸಾಧ್ಯ?

ಆದರೆ ಹೆಗ್ಗಾಳಿಗಳ "ಸಹವಾಸಿ"ಗಳಾಗಿದ್ದ ಮೊಸಳೆ, ಆಮೆ, ಹಾವು, ಹಲ್ಲಿ ಮುಂತಾದ ಚಿಕ್ಕ ಸರೀಸೃಪಗಳ ವಂಶ ಇಂದಿಗೂ ಉಳಿದಿವೆ. ಅವು ನಮಗೂ ಜೊತೆಗಾರರಾಗಿವೆ. ಹೆಗ್ಗಾಳಿಗಳು ಮಾತ್ರ ಅಳಿದು ಅವುಗಳಿಗಿಂತ ತೀರ ದುರ್ಬಲರಾದ ಈ ಜೀವಿಗಳು ಹೇಗೆ ಅಂತಹ ವಿಪತ್ತನ್ನು ದಾಟಿ ಬಂದವು ? ಇದೇ ನಮ್ಮ ಮೂಲ ಪ್ರಶ್ನೆಗೆ ಜಟಿಲತೆ ತಂದೊಡ್ಡಿರುವ ಅಂಶ.

ಜಗತ್ಪ್ರಳಯ

ಭೀಕರ ಜಗತ್ಪ್ರಳಯದಿಂದಾಗಿ ಹೆಗ್ಗಾಳಿಗಳು ನಿರ್ಮೂಲವಾಗಿಹೋದವೆಂಬ ವಾದ ಸರಳ ವಿವರಣೆಯ ಪ್ರಯತ್ನವಷ್ಟೆ. ಮೇಲು ನೋಟಕ್ಕೇ, ಮೊದಲ ಯೋಚನೆಗೇ ಸರಿಕಾಣದ ಲಘು ಪ್ರಕೃತಿಯ ಹಗುರ ಸಿದ್ಧಾಂತ ಇದು. ಜಗತ್ಪ್ರಳಯ ಕಾರಣ ಆಗಿದ್ದಾದರೆ ಕೇವಲ ಹೆಗ್ಗಾಳಿಗಳು ಮಾತ್ರ ಅಳಿದುಹೋದದ್ದೇಕೆ? ಉಳಿದ ಪ್ರಾಣಿಗಳು ಮತ್ತು ಸಸ್ಯರಾಶಿಗಳು ಉಳಿದುದೆಂತು? ಆ ಜಗತ್ಪ್ರಳಯಕ್ಕಷ್ಟೇ ಹೆಗ್ಗಾಳಿಗಳನ್ನು ಮಾತ್ರ ಆಯ್ದು ಕೊಲ್ಲುವ ಛಲ. ಬಲ ಇದ್ದುದು ಹೇಗೆ ?

ಸ್ತನಿಗಳಿಂದೊದಗಿದ ವಿಪತ್ತು

ಸ್ವಲ್ಪ ಮುಂದುವರಿದ ವೈಚಾರಿಕತೆ ಹೊರ ಹೊಮ್ಮಿಸಿದ ಸಿದ್ಧಾಂತ ಸ್ತನಿಗಳನ್ನು ಹೆಗ್ಗಾಳಿಗಳ ವಿನಾಶಕರೆಂದು ವಿವರಿಸುತ್ತದೆ. ಮಧ್ಯ ಜೀವಿಕಲ್ಪದ ಉತ್ತರ ಭಾಗದಲ್ಲಿ ತೀವ್ರ ಬೆಳವಣಿಗೆಯ ಬಹುಮುಖ ವಿಸ್ತರಣೆಯ ಹಂತ ತಲುಪಿದ ಸ್ತನಿಗಳು ಹೆಗ್ಗಾಳಿಗಳೊಂದಿಗೆ ಆಹಾರ ಸ್ಪರ್ಧೆಗೆ ಇಳಿದವು. ದೇಹಗಾತ್ರದಲ್ಲಿ ಚಿಕ್ಕವಾಗಿದ್ದರೂ ಪರಿಸರಕ್ಕೆ ಹೊಂದಿಕೊಳ್ಳುವ ಶಕ್ತಿ ಮತ್ತು ಬುದ್ಧಿವಂತಿಕೆಗಳಲ್ಲಿ ತೀರ ಮುಂದಿದ್ದ ಸ್ತನಿಗಳು ಹೆಗ್ಗಾಳಿಗಳನ್ನು ಕ್ಷಿಪ್ರ ವಿನಾಶದತ್ತ ತಳ್ಳಿದುವು. ಇದು ಆ ಸಿದ್ಧಾಂತದ ಸಾರಾಂಶ.

ಪಳೆಯುಳಿಕೆಗಳ ಅಧ್ಯಯನದಿಂದ ಇವೂ

ಹುರುಳಿಲ್ಲದ, ತಿರುಳಿಲ್ಲದ ಸಪ್ಪೆ ವಿಚಾರ ಎಂಬುದು ಸ್ಪಷ್ಟವಾಗಿಯೇ ಗೋಚರಿಸುತ್ತದೆ. ಹೆಗ್ಗಳಿಗಳು ಆಳಿದ ಕಾಲದಲ್ಲಿ ಭೂಮಿಯಲ್ಲಿದ್ದ ಸ್ತನಿಗಳ ದೇಹಗಾತ್ರ ಮತ್ತು ಸಂಖ್ಯಾಗಾತ್ರ ಅತಿ ಚಿಕ್ಕದು. ಬಲಶಾಲಿ ಹೆಗ್ಗಳಿಗಳ ಮೇಲೆ ದಾಳಿ ನಡೆಸಬಲ್ಲ ಬಲವಾಗಲಿ ಸ್ಪರ್ಧಿಸಬಲ್ಲ ಸಂಖ್ಯೆಯಾಗಲಿ ಸ್ತನಿಗಳದಾಗಿರಲಿಲ್ಲ. ಅತಿ ಹೆಚ್ಚೆಂದರೆ, ಹೆಗ್ಗಳಿಗಳ ಕೆಲವು ಮೊಟ್ಟೆಗಳನ್ನು ಕದ್ದು ಹಾಳಿಸುವ ಶಕ್ತಿಯನ್ನು ಅವು ಪಡೆದಿದ್ದವು. ಸ್ತನಿಗಳ ಹೆಚ್ಚಿನ ಬುದ್ಧಿಬಲ ಹೆಗ್ಗಳಿಗಳ ವಿನಾಶಕ್ಕೆ ಮೂಲವಿದ್ದಿರಬೇಕೆಂಬುದೂ ಭದ್ರ ಬುಡವಿಲ್ಲದ ಚಿಂತನವೇ.

ಚಳಿ ತಂದಿಟ್ಟ ವಿನಾಶ ?

ತೀವ್ರ ಚಳಿಗೊಳಗಾಗಿ ನಡುನಡುಗಿ ಸಾಗಿ ಹೋದ ಜೀವಿಗಳು ಹೆಗ್ಗಳಿಗಳು ಎಂಬ ಮತ್ತೊಂದು ವೈಜ್ಞಾನಿಕ ಚಿಂತನ ಹಿಂದಿನವುಗಳಿಗಿಂತ ಹೆಚ್ಚು ಸಮಾಧಾನ ನೀಡುವ ವಿವರಣೆ. ಸಿಕ್ವೋಯಿಯಾ ಮರಗಳ ಪಳೆಯುಳಿಕೆಯು ಈ ತೀರ್ಮಾನಕ್ಕೆ ಭದ್ರ ಆಧಾರ. ಈ ಮರಗಳು ಬದುಕುವುದು, ಬೆಳೆಯುವುದು ಮತ್ತು ಉಳಿಯುವುದು ಅತಿ ಶೀತದ, ಕೊರೆವ ಚಳಿಯ ಹವೆಯಲ್ಲಿ ಮಾತ್ರ. ಸಿಕ್ವೋಯಿಯಾ ಮರಗಳ ಪಳೆಯುಳಿಕೆಗಳ ಕಾಲ ಹೆಗ್ಗಳಿಗಳು ವಿನಾಶ ಹೊಂದಿದ ಕಾಲಕ್ಕೆ ಸರಿಯಾಗಿ ಹೊಂದಿಕೊಳ್ಳುವುದು ಇಲ್ಲಿ ಗಮನಿಸಬೇಕಾದ ಅಂಶ. ಎಂದರೆ ಹೆಗ್ಗಳಿಗಳು ಅತಿ ಶೀತದ ಹವಾಮಾನ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಸಹಿಸಲಸಾಧ್ಯ ಚಳಿಯ ಹವೆಯಲ್ಲಿ ತಮ್ಮ ದೇಹೋಷ್ಣದ ಸಮಸ್ಥಿತಿಯನ್ನು ಸಹಿಸಲಾಗದೇ ಅವು ಅಳಿವು ಕಂಡಿರಬೇಕು. ತೀವ್ರ ಚಳಿಯಿಂದಾಗಿ ನಡೆದಾಡಲಾಗದೆ, ಸಸ್ಯಾಹಾರ ಜಗಿವ ಬಲ ನಷ್ಟವಾಗಿ ಮಾಂಸಾಹಾರಿಗಳ ದಾಳಿಗೆ ನಿಸ್ಸಹಾಯಕರಾಗಿ ತುತ್ತಾಗಿ ಅವು ನಶಿಸಿಹೋಗಿದ್ದಿರಬೇಕು.

ಈ ವಾದದ ವಿಶೇಷವೆಂದರೆ, ಇದು ಅಂದಿನ ಸ್ತನಿಗಳ, ಸಸ್ಯಗಳ ಉಳಿವನ್ನು ಸಮರ್ಪಕವಾಗಿ ವಿವರಿಸುವುದು. ನೆಲದೊಳಗೆ ಬಿಲ ತೋಡಿ ಬದುಕು ನಡೆಸುವ ಕಲೆ ಕಲಿತಿದ್ದ ಅಂದಿನ ಕುಬ್ಜ ಕಾಯದ ಸ್ತನಿಗಳಿಗೆ ಚಳಿಯಿಂದ ತೊಂದರೆ ಏಕಿದ್ದೀತು? ಹೆಗ್ಗಳಿಗಳ ಜೊತೆಗಾರರೇ ಆಗಿದ್ದರೂ, ಇಂದಿನಂತೆಯೇ ಅಂದೂ ಕೊರೆವ ಚಳಿ ಎದುರಾದೊಡನೆ “ಚಳಿ ನಿದ್ದೆ”ಗೆ ಹೋಗಿಬಿಡುವ ಇಲ್ಲವೇ ಬಿಸಿ ಅಲೆಗಳ, ಉಷ್ಣ ಪ್ರವಾಹಗಳ ಕಡಲ ನೆಲೆಗಳತ್ತ ವಲಸೆ ಹೋಗುವ ಪರಿಪಾಠ



“ಟಿರಿನೋಸಾರಸ್ ರೆಕ್ಸ್”— ೧೯ ಅಡಿ ಎತ್ತರದ ಭಯಂಕರ ಬೇಟೆಗಾರ

ಹೊಂದಿದ್ದ ಚಿಕ್ಕ ಸರೀಸೃಪಗಳ ವಿಶೇಷ ಅವ್ಯಗಳನ್ನು ಉಳಿಸಿದ್ದಿರಬೇಕು.

ಉಷ್ಣತೆಯೇ ಶತ್ರುವಾಯಿತೆ?

"ಶೀತದಿಂದ ಅಳಿದವು ಹೆಗ್ಗಾಳಿಗಳು" ಸಿದ್ಧಾಂತಕ್ಕೆ ತದ್ವಿರುದ್ಧವಾದ ಸಿದ್ಧಾಂತವೂ ಇರುವುದು ಕುತೂಹಲದ ವಿಷಯ. ಹೆಗ್ಗಾಳಿಗಳು ಅಳಿದುದು ವಾತಾವರಣದ ಉಷ್ಣತೆ ಇಳಿದುಹೋದುದರಿಂದಲ್ಲ, ಏರಿದುದರಿಂದ ಎಂಬುದು ಈ ವಾದ.



"ಸ್ಟೀಗೋಸಾರಸ್"—ಎರಡು ಮಿದುಳಿನ ಬಲಿಷ್ಠ ಹೆಗ್ಗಾಳಿ

ಆರೂವರೆ– ಏಳು ಕೋಟಿವರುಷಗಳ ಹಿಂದೆ– ಅದೇ ಹೆಗ್ಗಾಳಿಗಳು ಅಳಿದ ಕಾಲ– ವಿಸ್ತಾರ ಭೂಭಾಗಗಳನ್ನಾವರಿಸಿಕೊಂಡಿದ್ದ ಆಳವಿಲ್ಲದ ಸಮುದ್ರಗಳು ಹಿನ್ನಡೆದವು. ಇದರಿಂದಾಗಿ ಕಡಲ ನೀರಿನ ಒಟ್ಟು ಮೇಲ್ಮೈ ವಿಸ್ತಾರ ಗಮನಾರ್ಹವಾಗಿ ಕುಗ್ಗಿತು. ಅದರ ಫಲವಾಗಿ ಆ ನೀರನ್ನು ಆಶ್ರಯಿಸಿ ಬೆಳೆವ 'ದ್ಯುತಿಸಂಶ್ಲೇಷಕ ಶೈವಲ'ಗಳ ಒಟ್ಟು ಪ್ರಮಾಣ ಬಹಳ ಕಡಿಮೆಗೊಂಡಿತು. ವಾತಾವರಣದಲ್ಲಿ ಬೆರೆತ ಇಂಗಾಲಾಮ್ಲದ ಪ್ರಧಾನ ಅನುಭೋಗಿಗಳು ಈ ಸಸ್ಯ ರಾಶಿಗಳೇ. ಅವುಗಳ ಪ್ರಮಾಣ ಕಡಿಮೆಯಾಯಿತೆಂದರೆ ವಾತಾವರಣದಲ್ಲಿ ಇಂಗಾಲಾಮ್ಲದ ಪ್ರಮಾಣ ಏರುತ್ತದೆ ಸ್ಪಷ್ಟ. ಏರಿದ ಇಂಗಾಲಾಮ್ಲದಿಂದಾಗಿಯೇ ಏರ್ಪಡುವುದು 'ಹಸಿರುಮಂದಿರ ಪರಿಣಾಮ'– (greenhouse effect) ಏರಿದ ಉಷ್ಣತೆ.

ಕಡಲ ನೀರಿನ ಶಾಖಮಟ್ಟ ಸ್ವಲ್ಪ ಏರಿದರೂ ಇಂಗಾಲಾಮ್ಲವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ತಗ್ಗುತ್ತದೆ. ಎಂದರೆ ಹೆಚ್ಚು ಇಂಗಾಲಾಮ್ಲ ವಾತಾವರಣದಲ್ಲೇ ಸಂಚಯಗೊಂಡು ಉಷ್ಣತೆಯನ್ನು ಇನ್ನೂ ಹೆಚ್ಚಿಸುತ್ತದೆ.

ಹೀಗೆ ಏರುತ್ತ ಹೋಗುವ ಉಷ್ಣತೆಯ ಪರಿಣಾಮ ಬಹಳ ಭಯಂಕರ. ಪ್ರಾಣಿಗಳಲ್ಲಿ ವೀರ್ಯೋತ್ಪತ್ತಿ ಶಾಖ ಸಂವೇದಿ. ವಾತಾವರಣದಲ್ಲಿ ಏರಿದ ಕಾವಿನಿಂದ ಪ್ರಾಣಿಗಳಲ್ಲಿ ವೀರ್ಯೋತ್ಪತ್ತಿ ಕುಂಠಿತಗೊಂಡು ಅವು ಸಂತಾನರಹಿತವಾಗುತ್ತವೆ. ಹೆಗ್ಗಾಳಿಗಳು ನಾಶಹೊಂದಲು ಕಾರಣ ಇದೇ.

ಏರಿದ ಶಾಖದ ಪ್ರಭಾವ ಹೆಗ್ಗಾಳಿಗಳೊಡನೆಯೇ ಇದ್ದ ಇತರ ಪ್ರಾಣಿಗಳ ಮೇಲೆ ಏಕೆ ಆಗಲಿಲ್ಲ? ಅವುಗಳ ಸಂತಾನ ಮಾತ್ರ ಬೆಳೆದುದು ಹೇಗೆ? ಈ ಪ್ರಶ್ನೆಗೆ ಉತ್ತರ ಸರಳ.

ದೊಡ್ಡ ದೇಹದ ಪ್ರಾಣಿಗಳು ಚಿಕ್ಕವುಗಳಿಗಿಂತ ದೇಹದ ಶಾಖವನ್ನು ನಷ್ಟಗೊಳಿಸುವಲ್ಲಿ ಕಡಿಮೆ ಸಮರ್ಥ. ಹೆಚ್ಚಿನ ಉಷ್ಣತೆಯನ್ನು ಬೆವರಿನಿಂದ ಹೊರಚೆಲ್ಲಿ ಸಮಸ್ಥಿತಿ ಸಾಧಿಸಿ ಉಳಿಸಿಕೊಳ್ಳುವ ಶಕ್ತಿ ಬಹುದೊಡ್ಡ ಶರೀರದ ಹೆಗ್ಗಾಳಿಗಳಿಗೆ ಇರಲಿಲ್ಲ. ಆದ್ದರಿಂದಲೇ ಆಯಿತು ಅವುಗಳ ಅಂತ್ಯ.

ಸೂಪರ್ ನೋವಾ?

ಖಗೋಳ ವಿಜ್ಞಾನಿಗಳು ಜೀವಶಾಸ್ತ್ರಜ್ಞರೊಂದಿಗೆ ಚರ್ಚೆಗೆ ತೊಡಗಿದಾಗ ಹೊರಹೊಮ್ಮಿದ ಆಕರ್ಷಕ ವಿಚಾರಧಾರೆ ಹೆಗ್ಗಾಳಿಗಳ ಅಳಿವಿನ ಬಗ್ಗೆ ಬಹು ವಿಭಿನ್ನವಾದ ಅಭಿಪ್ರಾಯಗಳನ್ನು ಮೂಡಿಸುತ್ತದೆ.

ಹೆಗ್ಗಾಳಿಗಳ ಅಳಿವು ಭೂಮಿಗೆ ಸಮೀಪವಾಗಿ ಬಾಹ್ಯಾಕಾಶದಲ್ಲಿ ನಡೆದ ಒಂದು ಆಕಸ್ಮಿಕ ಘಟನೆ

ಯೂಂವಾದುದು ಎನ್ನುತ್ತಾರೆ ಈ ವಿಜ್ಞಾನಿಗಳು. ಸುಮಾರು ಏಳು ಕೋಟಿ ವರುಷಗಳ ಹಿಂದೆ ಭೂಮಿಗೆ ಸಮೀಪವಿದ್ದ ನಕ್ಷತ್ರವೊಂದರ "ಸೂಪರ್ ನೋವಾ"ದ ಸಿಡಿತ ಹೆಗ್ಹಲ್ಲಿಗಳ ಅಪಘಾತಕ್ಕೆ ಮೂಲವಂತೆ.

ನಮ್ಮ "ಕ್ಷೀರಪಥ"ದ ಮಹಾ ಆಳತೆಗಳಲ್ಲೇ ಪರಿಗಣಿಸಿದರೂ ಸೂಪರ್ ನೋವಾ ಒಂದು ಭಯಂಕರ ಘಟನೆ. ನಕ್ಷತ್ರವೊಂದು ಇದ್ದಕ್ಕಿದ್ದಂತೆ ಸಿಡಿದುಹೋಗುತ್ತದೆ. ಆಗ ಅದರ ಪ್ರಕಾಶ ಮೂಲದ ಹಲವಾರು ದಶಲಕ್ಷ ಪಟ್ಟು ವರ್ಧಿಸುತ್ತದೆ. ಸಿಡಿದ ಸೂಪರ್‌ನೋವಾ ಎಲ್ಲೆಡೆಗೂ ಹೊರಸೂಸುವ ಬೆಳಕು ಮತ್ತು ಮಾರಣಾಂತಿಕ "ಪರಮಾಣು ವಿಕಿರಣ"ಗಳ ಪ್ರಮಾಣ ಅತಿ ಅಗಾಧ. ವಾತಾವರಣ ಒದಗಿಸುವ ರಕ್ಷಣಾ ಕವಚವನ್ನು ಭೇದಿಸಿ ನುಗ್ಗಿ ಬರುವ ಈ ಬಹುಶಕ್ತಿಯ ಕಿರಣಗಳಿಂದ ನೆಲ. ಜಲಗಳಲ್ಲಿನ ಹಲವಾರು ಜೀವ ವಂಶಗಳು ನಿರ್ವಂಶವಾಗುತ್ತವೆ. ಭೂಮಿಯಿಂದ ಎರಡು ಮೂರು ನೂರು "ಜ್ಯೋತಿರ್ವರ್ಷ"ಗಳಾಚೆ ಸಿಡಿಯುವ ಸೂಪರ್ ನೋವಾ ಸಹ ಇಂತಹ ಮಹತ್ತರ ವಿನಾಶ ಒಡ್ಡಬಲ್ಲದು.

ಹೆಗ್ಹಲ್ಲಿಗಳ ಅಳಿವಿನ ಬಗೆಗೆ ಉದ್ಭವಿಸುವ ಹಲವಾರು ಪ್ರಶ್ನೆಗಳಿಗೆ– ಉದಾ: ಎಲ್ಲ ಜೀವಿಗಳೂ ಏಕೆ ನಾಶಗೊಳ್ಳಲಿಲ್ಲ? ಸಸ್ಯಗಳು ಸಂಪೂರ್ಣವಾಗಿ ಸುರಕ್ಷಿತವಾದುದು ಹೇಗೆ? ಹೆಗ್ಹಲ್ಲಿಗಳು ಕ್ರಮವಾಗಿ ಅಲ್ಲದೇ ಇದ್ದಕ್ಕಿದ್ದಂತೆ ಒಟ್ಟಾರೆ ಅಳಿದುಹೋದುದು ಏಕೆ? ಮುಂತಾದವು– ಉಳಿದೆಲ್ಲ ಸಿದ್ಧಾಂತಗಳಿಗಿಂತ ಹೆಚ್ಚು ಸಮರ್ಪಕ ವಿವರಣೆ ನೀಡುವ ಸಾಮರ್ಥ್ಯ ಸೂಪರ್ ನೋವಾ ಸಿದ್ಧಾಂತಕ್ಕೆ ಇದೆ.

ಸೂಪರ್ ನೋವಾ ಹೊರಚೆಲ್ಲುವ ವಿಕಿರಣ ಅಲೆಗಳು ಸಸ್ಯಗಳಿಗೆ ಮಾರಕವಲ್ಲ. ಅವುಗಳಿಗೆ ಸಸ್ಯಗಳು ಬಲಿಯಾಗುವ ಪ್ರಮೇಯವೇ ಇಲ್ಲ. ನೆಲದೊಳಗೆ ಅಡಗಿ ಬದುಕುವ ಜೀವಿಗಳಿಗೂ ತೊಂದರೆ ಬಾರದು. ನೆಲದ ಮೇಲೆ ಸಂಪೂರ್ಣವಾಗಿ ಈ ಕಿರಣಗಳಿಗೆ ತೆರೆದೊಡ್ಡಿಕೊಂಡಿದ್ದ ಹೆಗ್ಹಲ್ಲಿಗಳು ತೀವ್ರ ಸ್ವರೂಪದ ಜೈವಿಕ ಆಘಾತಗಳಿಗೆ ಒಳಗಾಗಿ ಮೃತ್ಯುವಿನ ಮನೆಗೆ ತೆರಳಿದವು.

ನಮಗೊಂದು ಪಾಠ

ಯಾವ ಸಿದ್ಧಾಂತದ ಸತ್ಯಾಸತ್ಯತೆಗಳು ಅದೇನೇ ಆಗಿರಲಿ, ಒಂದು ವಿಚಾರವಂತೂ ಸ್ಪಷ್ಟ. ಯಾವ ಒಂದು ಸಿದ್ಧಾಂತವೂ ಎಲ್ಲ ಸಂಶಯಗಳಿಗೂ ಸಾಧಾರ ಪರಿಹಾರ ಒದಗಿಸುವ ಶಕ್ತಿ ಹೊಂದಿಲ್ಲ. ಹಲವಾರು ವರ್ಷಗಳಿಂದ ಬಿಸಿ ಚರ್ಚೆಯಲ್ಲೇ ಉಳಿದಿರುವ ಹೆಗ್ಹಲ್ಲಿಗಳ ಅಂತ್ಯದ ವಿಚಾರ ಬರುವ ದಿನಗಳಲ್ಲಿ ಇನ್ನೂ ನವೀನ ವೈಚಾರಿಕತೆಗೆ ದಾರಿ ಮಾಡಿಕೊಡಬಹುದು. ಅದೆಲ್ಲಕ್ಕಿಂತ ಮಿಗಿಲಾಗಿ ಈ ಗಂಭೀರ ಪ್ರಶ್ನೆಯ ಆಳ ಅಧ್ಯಯನದಿಂದಾಗಿ ಜನಕೋಟಿಗೆ ಸುಲಭವಾಗಿ ಅರಿವಾಗಬಲ್ಲ ಸರಳ ಪಾಠವೊಂದಿದೆ: "ಈ ವರೆಗೆ ಈ ಜಗತ್ತಿನಲ್ಲಿ ಸೃಷ್ಟಿಗೊಂಡು, ಬೆಳೆದು, ಅಳಿದು, ಉಳಿದಿರುವ ಯಾವುದೇ ಜೀವಿ



"ಟೆರನೋಡಾನ"—೩೦ ಅಡಿಗಳ ರೆಕ್ಕೆ ವಿಸ್ತಾರದ ಹೆಗ್ಹಲ್ಲಿ

ಗಿಂತಲೂ ತಾನೇ ಅತಿ ಶ್ರೇಷ್ಠ ಅಪರ್ವ ಸೃಷ್ಟಿ ಎಂಬ ಭಾವ ಮಾನವನಿಗ ಇಲ್ಲದು." ಹತ್ತು ಕೋಟಿ ವರ್ಷಗಳ ಕಾಲ ಯಶಸ್ವಿ ಬದುಕು ನಡೆಸಿ ಉತ್ಕೃಷ್ಟ ಸಾಮರ್ಥ್ಯ ಸಾಧಿಸಿದ್ದ ಹೆಗ್ಗಾಳಿಗಳಿಗೆ ಹೋಲಿಸಿದರೆ ಭೂಮಿಯಲ್ಲಿ ಇನ್ನೂ ಕೆಲವೇ ದಶಲಕ್ಷ ವರ್ಷಗಳ ಕಾಲ ನೆಲೆಸಿರುವ ಮಾನವ ಈ ಭೂಮಿಗೆ ಇನ್ನೂ ಹೊಸಬನೇ. ತನ್ನ "ಮನೆ"ಯತ್ತ ಅವನಿನ್ನೂ ಅಚ್ಚರಿಯಿಂದ ಕಣ್ಣು!" ಹೆಗ್ಗಾಳಿಗಳ ಸುದೀರ್ಘ "ಅನುಭವದ ಹದ" ಅವನಿಗೆ ಎಲ್ಲಿದೆ? ಜೊತೆಗೆ, ಆ ಮಹಾ ಕಾಯ ಜೀವಿಗಳು ಅಳಿದುದು ಅಯುಕ್ತ್ಯವಾದ ಹೊಂದಾಣಿಕೆಯಿಂದಲ್ಲ. ಕೈ ಮೀರಿದ, ಹತೋಟಿ ತಪ್ಪಿದ, ಅನ್ಯಗ್ರಹದ ಹೊರತಾದ ಅಸಾಧಾರಣ ಸನ್ನಿವೇಶ, ಘಟನೆಗಳಿಂದ. ಅಷ್ಟೇ ಅಲ್ಲದೆ, ಹೆಗ್ಗಾಳಿಗಳು ಮೆರೆದಾಡಿದಂತಹ ಭೂ ಇತಿಹಾಸದಲ್ಲಿ ಈ ವರೆಗೆ ಒಂದೇ ಬಾರಿ ನಡೆದಿರುವಷ್ಟು ಮುಂದೆ ನಡೆಯಬಹುದಾದ ಸಂಭವವೂ ಇಲ್ಲದಿಲ್ಲ. ಎಂತಹ ಕ್ಲಿಷ್ಟ ಸಂದರ್ಭಗಳನ್ನೆದುರಿಸಿಯೂ ಬದುಕಿ ಉಳಿಯಬಲ್ಲ, ಪರಿಸರವನ್ನೇ ನಿಯಂತ್ರಿಸಬಲ್ಲ ಅತಿ ಅಪರ್ವ ವಿಜಯೀ ಸೃಷ್ಟಿಗಳು ನಾನೆಂದು ಹೂಂಕರಿಸಿ ಬೆನ್ನು ತಟ್ಟಿಕೊಳ್ಳುವ ಮೊದಲು ಈ ವಿಚಾರಗಳ ಬಗೆಗೆ ಒಮ್ಮೆ ಸಾವಧಾನವಾಗಿ ಚಿಂತಿಸುವುದು ಒಳಿತಲ್ಲವೇ?

✡

(ಈ ಲೇಖನದೊಂದಿಗಿನ ನಾಲ್ಕು ಚಿತ್ರಗಳನ್ನು ಲೇಖಕರೇ ಒದಗಿಸಿದ್ದಾರೆ.)



ಅರಬರು ಏನು ಮಾಡಿದರೂ 'ಅಬ್ಬಾ!' ಎನ್ನುವ ಹಾಗೆಯೇ ಮಾಡುವವರು. ಈಗ ಸೌದಿ ಅರೇಬಿಯದ ಶೇಖನೊಬ್ಬ "ಹಾರಾಡುವ ಅರಮನೆ" ಕಟ್ಟಲು ಯೋಜನೆ ರೂಪಿಸಿದ್ದಾನೆ. ಜಗತ್ತಿನ ಎಲ್ಲಾ ಶ್ರೇಷ್ಠ ಹಾಗೂ ಶ್ರೀಮಂತ ಸೌಧಗಳಿಗಿಂತ ಸೌಲಭ್ಯದಲ್ಲಿ ಈ ಅರಮನೆ ಒಂದು ಹೆಜ್ಜೆ ಮುಂದಿರಬೇಕೆಂಬುದೇ ಈ ಶೇಖನ ಬಯಕೆ. ಇದಕ್ಕೆ ಬೇಕಾಗುವ ಬಂಗಾರದ ತಗಡುಗಳನ್ನು ಸ್ವತಃ ತಾನೇ ಒದಗಿಸುವುದಾಗಿ ಅರಮನೆ ಕಟ್ಟುವ ಕಂಪನಿಗೆ ತಿಳಿಸಿರುವ ಈ ಶೇಖ ಉಳಿದ ಕಾಜಿನ ಹಾಗೂ ಪೆದು ವಾಸಿನ ವಸ್ತುಗಳು, ಪರಿಕರಗಳನ್ನು ರೂಪಿಸಿ ಸಿದ್ಧಪಡಿಸಲು ಅಮೇರಿಕದ ವಿಮಾನ ತಯಾರಿಸುವ ಸಂಸ್ಥೆಯೊಂದಕ್ಕೆ ಕೇಳಿಕೊಂಡಿದ್ದಾನೆ.

* * *

ಆಸ್ಟ್ರೇಲಿಯದ ೩೩ ವರ್ಷದ ತರುಣ ಡೇವಿಡ್ ಸ್ಕಾಟ್ ಒಂದೇ ಸಮನೆ ೫೦ ದಿನಗಳ ಕಾಲ ಪಿಯಾನೋ ನುಡಿಸಿ ಹೊಸ ವಿಕ್ರಮವನ್ನು ಸ್ಥಾಪಿಸಿದ್ದಾನೆ. ಈ ವಿಕ್ರಮ ಸ್ಥಾಪಿಸುವಾಗ ಆತ ಪ್ರತಿ ಒಂದು ಗಂಟೆಗೆ ಐದು ನಿಮಿಷ ಮಾತ್ರ ವಿಶ್ರಾಂತಿ ಪಡೆಯುತ್ತಿದ್ದ.

* * *

ಮೆಕ್ಸಿಕೋದ ಹಾಸ್ಯಗಾರ ಜುವಾನ್ ಕಹಾನ್ ಈಗ 'ಜಾಗತಿಕ ಹಾಸ್ಯ ಚಟಾಕಿಗಳ ಸ್ಪರ್ಧೆ'ಯಲ್ಲಿ ಸ್ಥಾಪಿಸಲ್ಪಟ್ಟಿರುವ ವಿಕ್ರಮವನ್ನು ಮುರಿಯಬೇಕೆಂದಿದ್ದಾನೆ. ಆತನೀಗ ೩೦ ಗಂಟೆಗಳ ವರೆಗೆ ಒಂದೇ ಸಮನೆ ಹಾಸ್ಯ ಚಟಾಕಿ ಹಾರಿಸುವ ಪ್ರಯತ್ನ ನಡೆಸುತ್ತಿದ್ದಾನೆ.

ಗರಿಗರಿ ದೋಸೆಯಲ್ಲಿ
ಆತ ಕಂಡದ್ದೇನು?

ದೋಸೆ ಹೊಲ

ಎಸ್. ಬಿ. ಖೋದಾನಪುರ

ಬ್ರಿಟಿಶರಿಗೆ ಭಾರತವೆಂದರೆ ಸಂನ್ಯಾಸಿಗಳ ದೇಶ, ಬೇಟೆಯಾಡುವ ಸ್ಥಳ, ಇಲ್ಲಿಯ ಸ್ತ್ರೀಯರೆಂದರೆ ಸತಿ ಹೋಗುವ ಸ್ತ್ರೀಯರು ಎಂದು ಭಾವಿಸಿಕೊಂಡಿದ್ದರೇನೊ. ಬೇಟೆಯಾಡುವ ಉದ್ದೇಶದಿಂದಲೆ ಅನೇಕರು ಅಧಿಕಾರಿಗಳಾಗಿ ಭಾರತಕ್ಕೆ ಬಂದದ್ದು ಇದೆ. ೧೯೪೦ರ ಆಸುಪಾಸಿನಲ್ಲಿ ಅಂಥ ಒಬ್ಬ ಅಧಿಕಾರಿ ಬೇಟೆಗೆ ಹೋದ. ಬಹಳ ಹೊತ್ತಿನಿಂದ ಅಲ್ಲಿ ಇಲ್ಲಿ ಅಲೆದಾಡಿ ಹಾದಿ ತಪ್ಪಿದ. ನೀರಡಿಕೆಯಾಯಿತು. ನೀರಿಗಾಗಿ ಅಲೆಯುತ್ತಾ ಬೇಟೆಯಾಡುವುದನ್ನೇ ಮರೆತ, ಸುದೈವದಿಂದ ಸಮೀಪದಲ್ಲೊಂದು ಗುಡಿಸಲು ಕಂಡಿತು. ಅಲ್ಲಿಗೆ ಹೋದ. ತರುಣರಾದ ಗಂಡ ಹೆಂಡಿರು ಅವನನ್ನ ಭಯಭಕ್ತಿಯಿಂದ ಸ್ವಾಗತಿಸಿದರು; ಕಂಬಳಿ ಹಾಸಿ 'ಕೂಡಿ' ಎಂದು ವಿನಂತಿಸಿದರು. ಅವನ ಕೈಯಲ್ಲಿಯ ಬಂದೂಕು ಕಂಡು ಆ ಸ್ತ್ರೀಯು ಬಹಳಷ್ಟು ಹೆದರಿದಳು. ಕೆಂಪು ಮೋತಿಯ ಸಾಹೇಬ ತನ್ನ ಹರಕು ಮುರುಕು ಕನ್ನಡದಲ್ಲಿ ನೀರಡಿಕೆಯಾಗಿದೆ ಎಂದು ಹೇಳಿದಾಗ ಅವರಿಬ್ಬರಿಗೂ ಒಂದು ರೀತಿಯ ಆನಂದವಾಯಿತು. ಕೂಡಲೆ ಒಳಗೆ ಹೋಗಿ ಮಜ್ಜಿಗೆ ಕಡೆದು, ತಾಜಾ ಮಜ್ಜಿಗೆಯನ್ನು ತಂದು ಕೊಟ್ಟರು. ಅದನ್ನು ಕುಡಿದು ಸಂತೋಷಪಟ್ಟು ಅವರ ಉಪಕಾರವನ್ನು ಸ್ಮರಿಸಿ ಹೊರಟು ನಿಂತ ಅವನಿಗೆ ಅವರು, "ಊಟ ಮಾಡಿಕೊಂಡು ಹೋಗಿರಿ," ಎಂದು ಒತ್ತಾಯಿಸಿದಾಗ ತಪ್ಪಿಸಿಕೊಳ್ಳಲಾರದೆ ಒಪ್ಪಿಕೊಂಡ. "ಆದರೆ ಬೇಗನೇ ವ್ಯವಸ್ಥೆ ಮಾಡಿರಿ," ಎಂದು ಹೇಳಿದ.

ರೊಟ್ಟಿ, ಅನ್ನ ಮಾಡಲು ಬಹಳ ಸಮಯ ಬೇಕಾದುದರಿಂದ ಅವಳು ದೋಸೆ ಮಾಡಲು ನಿರ್ಧರಿಸಿದಳು. ಜೋಳದ ಹಿಟ್ಟನ್ನು ಕಲಿಸಿ ಗರಿಗರಿಯಾದ ದೋಸೆ ಮಾಡಿ, ಬೆಣ್ಣೆ, ಚಟ್ನಿ ಕೊಟ್ಟಾಗ ಈ ಹೊಸ ಬಗೆಯ ಖಾದ್ಯವನ್ನು ನೋಡಿ ಸಾಹೇಬನಿಗೆ ಆಶ್ಚರ್ಯವಾಯಿತು. ದೋಸೆಯಲ್ಲಿಯ ಚಿಕ್ಕ ಚಿಕ್ಕ ಕಿಂಡಿಗಳನ್ನು ಕಂಡು ಆತ ಅದ್ಭುತವನ್ನು ಕಂಡವನಾದ. "ಒಂದೇ ಆಕಾರದ ಈ ಕಿಂಡಿಗಳನ್ನು ಇಷ್ಟು ಕಲಾತ್ಮಕವಾಗಿ ಹೇಗೆ ಮಾಡಿದಿರಿ!" ಎಂದು ಆ ತರುಣಿಯ ಕಲೆಯ ಬಗ್ಗೆ ಹೊಗಳಿದ. ತನ್ನ ಡೈರಿಯಲ್ಲಿ ಏನೇನೋ ಬರೆದುಕೊಂಡ. ದೋಸೆಯನ್ನು ತಿಂದು ಸಂತೋಷಪಟ್ಟ. ಕೃತಜ್ಞತೆ ಸಲ್ಲಿಸಿ ಹೊರಟುಹೋದ. ಹೋಗುವಾಗ ಅವರಿಬ್ಬರ ಹೆಸರು, ಸ್ಥಳದ ವಿಷಯವಾಗಿ ಟಿಪ್ಪಣಿ ಮಾಡಿಕೊಂಡಿದ್ದ.

ಒಂದು ತಿಂಗಳಿನ ನಂತರ ಆ ತಾಲೂಕಿನ ಮಾಮಲೆದಾರ ಒಂದು ಕಾಗದವನ್ನು ತಂದು ಅವರಿಗೆ ಕೊಟ್ಟ. ಅದನ್ನು ಓದಲು ಬಾರದ ಆ ದಂಪತಿಗಳು ಭಯಭೀತರಾದರು. ಸಿಪಾಯಿಯನ್ನು ವಿಚಾರಿಸಿದಾಗ ತಿಳಿದ ಸಂಗತಿಯಿಂದ ಅವರ ಕಣ್ಣಲ್ಲಿ ಆನಂದಬಾಷ್ಪಗಳು ಮೂಡಿದವು.

ಅತ್ಯಲ್ಪ ಸಮಯದಲ್ಲಿಯೇ ಅಷ್ಟು ಕಲಾತ್ಮಕವಾಗಿ ದೋಸೆ ತಯಾರಿಸಿ ಕೊಟ್ಟಿದ್ದಕ್ಕಾಗಿ ಅಲ್ಲಿದ್ದ ನಾಲ್ಕು ಎಕರೆ ಸರಕಾರಿ ಪಡ ಜಮೀನನ್ನು ಅವರಿಗೆ ಬಕ್ಷೀಸು ಕೊಡುವಂತೆ ಆಜ್ಞೆ ಮಾಡಿದ್ದ ಆ ಸಾಹೇಬ!

ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮಲ್ಲಾಪುರ ಗ್ರಾಮದ ಬಳಿಯಿರುವ ಆ ಹೊಲವನ್ನು ಈಗಲೂ ದೋಸೆ ಹೊಲವೆಂದೇ ಕರೆಯುತ್ತಾರೆ.

ಒಂದು ಮುಳುಗು ಒಂದು ತಿರುವು

ಬಿ. ಎಸ್. ಶೈಲಜಾ

ಭಿಕ್ಷೆ ಬೇಡುವುದು ಸಮಾಜದ ಕಣ್ಣಿನಲ್ಲಿ ಒಂದು ಹೀನಾಯವಾದ ವೃತ್ತಿ. ಆದರೆ ಭಿಕ್ಷೆ ಬೇಡುವವನಿಗೆ ಅದೊಂದು ಕಸಬು. ಆದರೂ ಪರಿಸ್ಥಿತಿಯ ಸಂಕೋಲೆಗಳಿಗೆ ಬದ್ಧರಾಗಿ ಭಿಕ್ಷುಕರಾದವರು ತಮ್ಮ ಆ ಕೆಲಸಕ್ಕಾಗಿ ಪಶ್ಚಾತ್ತಾಪ ಪಡುತ್ತಲೇ ವೃತ್ತಿಯನ್ನು ಮುಂದುವರಿಸುತ್ತಾರೆ.

ಇಪ್ಪತ್ತೈದು ವರ್ಷ ವಯಸ್ಸಿನ ಕೊಂಡಿಬಾ ಮುದೂಬಾ ಗಾಯಕವಾಡ [illegible] ಬರಗಾಲ [illegible] ನ ಊರಿಗೆ ಬಂದ. ಕಸಪೊರಕೆಗಳನ್ನು ಮಾರಿ ಜೀವಿಸಬೇಕೆಂದು ನಿರ್ಧರಿಸಿದ. ಆದರೆ ಮುಂಬಯಿ ಮಹಾನಗರದಲ್ಲಿ ಅದಕ್ಕಿಂತ ಭಿಕ್ಷೆ ಬೇಡುವುದರಿಂದಲೇ ಹೆಚ್ಚು ಗಳಿಸಬಹುದೆಂದು ಅವನಿಗೆ ಅನಿಸಿತು. [illegible] ಕಳೆದುಕೊಂಡಿದ್ದ. ಭಿಕ್ಷುಕನಿಗೆ [illegible] ಯೋಗ್ಯತೆ [illegible]. [illegible] ಪ್ರದೇಶ 'ಗೋಳಿಬಾರ್' [illegible]. ತನ್ನ [illegible] ಮತ್ತು ಅವನ ಪತ್ನಿ [illegible] ಆ ಪ್ರದೇಶದಲ್ಲಿ [illegible].

ಆ ಪ್ರದೇಶದ ನಿವಾಸಿಗಳಿಗೆ ನೀರು ಒಂದು ದೊಡ್ಡ ಸಮಸ್ಯೆ. ಅಲ್ಲಿ ಇದ್ದ ಒಂದೇ ಒಂದು ನಲ್ಲಿ [illegible] ಮನೆಗೂ ನೀರು [illegible]. ಇದರಿಂದ [illegible] ಜನ ಅಲ್ಲಿಯೇ ಒಂದು [illegible] ಮೀಟರ್ ಆಳದ ಬಾವಿಯನ್ನು ತೋಡಿಕೊಂಡರು. ಅದರ ಸುತ್ತ ಗೋಡೆಯನ್ನು ಕಟ್ಟಿ, [illegible] ಹಾಕಲು ಅಧಿಕ ಸಮಯ [illegible]. ಹೀಗಾಗಿ ಬಾವಿ [illegible] ಬಾಯ್ತೆರೆದುಕೊಂಡು [illegible]. ಸುತ್ತಲಿನ [illegible] ಕ್ರಮೇಣ [illegible] ಬಾವಿ [illegible]. ಕೆಳಗೆ [illegible] ಜಲಸಸ್ಯಗಳು ಸಮೃದ್ಧಿಯಾಗಿ ಬೆಳೆದುಕೊಂಡು ನೀರು [illegible]. ಸಾಮಾನ್ಯವಾಗಿ [illegible]. ಮಳೆಗಾಲದಲ್ಲಿ ನೀರು [illegible].

ಆ [illegible] ಬಗ್ಗೆ [illegible]. [illegible] ಆ [illegible]. [illegible] ಅದನ್ನು ಹೊರತೆಗೆದರು.

ಇದು ೧೯೭೩ರ ಸೆಪ್ಟೆಂಬರ ೫ರ ಮುಂಚಿನ ಮಾತು. ಆ ದಿನ ಎಂದಿನಂತೆ ಕೊಂಡಿಬಾ ಊಟಕ್ಕಾಗಿ ಜೋಪಡಿಗೆ ಹಿಂದಿರುಗಿದ್ದ. ತನ್ನ ಗಳಿಕೆ ಐದರಿಂದ ಆರು ರೂಪಾಯಿಗಳಾದೊಡನೆಯೆ ಆತ ತನ್ನ ಗೋಣಿ ಚೀಲವನ್ನೆತ್ತಿಕೊಂಡು ಮನೆಗೆ ಬಂದುಬಿಡುತ್ತಿದ್ದ. ಅಂದು ಬೇಗನೇ ಅಷ್ಟು ಗಳಿಕೆಯಾದ್ದರಿಂದ ಮರಳಿದ ಆತ ಕೈಕಾಲು, ಮುಖ ತೊಳೆದು ಊಟಕ್ಕೆ ಕುಳಿತ.

ಇದ್ದಕ್ಕಿದ್ದಂತೆ ಹೊರಗಡೆ ಚೀರಾಟ ಕೇಳಿ ಬಂತು. ಕೊಂಡಿಬಾ ಮತ್ತು ಎಲ್ಲಾಬಾಯಿ ಚಕಿತರಾದರು. "ಬಾವಿಯಲ್ಲಿ ಯಾರೋ ಹುಡುಗ ಬಿದ್ದುಬಿಟ್ಟಿದ್ದಾನಂತೆ," ಎಂದು ಹೆಂಗಸೊಬ್ಬಳು ಕೂಗುತ್ತಿದ್ದುದು ಕೇಳಿಸಿತು.

ಕೊಂಡಿಬಾ ತನ್ನ ಊಟದ ತಟ್ಟೆಯನ್ನು ಪಕ್ಕಕ್ಕೆ ಸರಿಸಿಟ್ಟು ಎದ್ದು ನಿಂತ. "ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ," ಎಂದು ಎಲ್ಲಾಬಾಯಿಗೆ ಹೇಳಿದ. ಆಕೆ ತಕ್ಷಣವೆ ಆತನನ್ನು ಬಾವಿಯ ಬಳಿಗೆ ಕರೆದೊಯ್ದಳು. ಆ ವೇಳೆಗಾಗಲೇ ಸಾಕಷ್ಟು ಜನ ಸೇರಿದ್ದರು. ಕೊಂಡಿಬಾ ತನ್ನ ಶರಟು ತೆಗೆದು, ಜನ ನೋಡುತ್ತಿದ್ದಂತೆಯೇ ದಿಮ್ಮಿಗಳನ್ನು ಕೈಯಿಂದ ತಡವಿ, ನೀರಿನೊಳಗೇ ಜಾರಿದ. ಆಗಲೇ ಇಬ್ಬರು ಹುಡುಗರು ನೀರಿನಲ್ಲಿಳಿದಿದ್ದರು. ಆದರೆ ಮುಳುಗಿ ತಳಕ್ಕೆ ಹೋಗುವುದು ಆ ಇಬ್ಬರಿಗೂ ಗೊತ್ತಿರಲಿಲ್ಲ.

ಹದಿನಾಲ್ಕು ವರ್ಷದ ಅರವಿಂದ ಸಹದೇವ್ ಪಿಂಪಾಳಕರ ತನ್ನ ಚಿಕ್ಕಮ್ಮನ ಮನೆಗೆ ಬಂದಿದ್ದ. ಮರದ ದಿಮ್ಮಿಯ ಮೇಲೆ ಬಕೆಟ್ಟಿನಿಂದ ನೀರು ಸೇದಿಕೊಳ್ಳುತ್ತಿದ್ದಾಗ ಕಾಲು ಜಾರಿತು. ನೀರಿನೊಳಕ್ಕೆ ಬಿದ್ದ. ಅವನ ಚಿಕ್ಕಮ್ಮನಾದರೋ ಗೋಳೋ ಎಂದು ಒಂದೇ ಸಮನೆ ಅಳುತ್ತಿದ್ದಳು.

ಕೊಂಡಿಬಾ ತನ್ನ ಹಳ್ಳಿಯಲ್ಲಿ ಚಿಕ್ಕವಯಸ್ಸಿನಲ್ಲೇ ಈಜುವುದು ಮುಳುಗು ಹಾಕುವುದನ್ನು ಕಲಿತಿದ್ದ. ನಾಣ್ಯಗಳನ್ನೂ ಕಲ್ಲುಗಳನ್ನೂ ಬಾವಿಗೆ ಎಸೆಯುವುದು ಮತ್ತು ಮುಳುಗಿ ಅವುಗಳನ್ನು ಮೇಲಕ್ಕೆ ತರುವುದು ಅವನಿಗೆ ಮತ್ತು ಅವನ ಗೆಳೆಯರಿಗೆ ಒಂದು ಮೋಜಿನ ಆಟವಾಗಿತ್ತು. ಆದರೆ ದೃಷ್ಟಿ ಕಳೆದುಕೊಂಡ ಮೇಲೆ ಕೊಂಡಿಬಾ ಅಂಥ ಸಾಹಸಗಳಿಂದ ದೂರವಾಗಿದ್ದ. ನಗರ ಜೀವನದ ಸತ್ವಹೀನ ಆಹಾರ ಅವನನ್ನು ಸಾಕಷ್ಟು ಬಳಲಿಸಿತ್ತು. ಹೀಗಾಗಿ ಅವನಿಗೆ ತಾನು ನಿಜವಾಗಿ ಉಸಿರು ಬಿಗಿ ಹಿಡಿದು ಮುಳುಗಬಲ್ಲೆನೇ? ಎಂದು ಅನ್ನಿಸುತ್ತಿತ್ತು.

ಅರವಿಂದ ಬಾವಿಯಲ್ಲಿ ಬಿದ್ದು ಇಷ್ಟು ಹೊತ್ತಿಗಾಗಲೇ ಎರಡು ಮೂರು ನಿಮಿಷಗಳಾಗಿದ್ದವು. ಕೊಂಡಿಬಾಗೆ ಹೆಚ್ಚು ಯೋಚಿಸಲು ವೇಳೆ ಇರಲಿಲ್ಲ. ಒಮ್ಮೆ ದೀರ್ಘವಾಗಿ ಉಸಿರೆಳೆದು ಮುಳುಗಿ ತಳಕ್ಕೆ ಇಳಿದ. ಅವನಿಗೆ ತನ್ನ ಕಾಲುಗಳು ಮಣ್ಣಿನಲ್ಲಿ ಕುಸಿಯುತ್ತಿರುವ ಅನುಭವವಾಯಿತು. ಕೈಯನ್ನು ಅತ್ತಿತ್ತ ತಡಕಿದಾಗ ಮಣ್ಣು ಮತ್ತು ಕೆಲವು ಗಿಡಗಳಲ್ಲದೆ ಮತ್ತೇನೂ ದೊರೆಯಲಿಲ್ಲ. ಕೊಂಡಿಬಾಗೆ ಅಷ್ಟರಲ್ಲಿ ಆಯಾಸವಾಯಿತು. ಮತ್ತೆ ಮೇಲೇರಿದ.

ತನ್ನ ಪ್ರಯತ್ನವನ್ನು ಬಿಡಲು ಅವನು ಸಿದ್ಧನಾಗಿರಲಿಲ್ಲ. ಮತ್ತೊಮ್ಮೆ ದೀರ್ಘವಾಗಿ ಉಸಿರೆಳೆದು ಅವನು ನೀರಿನೊಳಗೆ ಮುಳುಗಿದ. ಮೊದಲನೆಯಬಾರಿ ಮುಳುಗಿದಾಗ ಅವನಿಗೆ ಬಾವಿಯ ಆಕಾರದ ಅನುಭವವಾದ್ದರಿಂದ ಎರಡನೆಯ ಬಾರಿಗೆ ನೇರವಾಗಿ ತಳಕ್ಕೆ ಇಳಿದ. ಕೈಗಳಿಂದ ಸುತ್ತಲಿನ ಮಣ್ಣನ್ನು ಕೆರೆಯುತ್ತಾ ಮೇಲೇರತೊಡಗಿದ. ಈ ಬಾರಿಯೂ ಗಿಡಗಳೇ ಸಿಕ್ಕವು. ಅವನ ಎದೆ ನೋಯುತೊಡಗಿತು. ಮತ್ತೆ ಸುಸ್ತಾಗಿ ಮೇಲೇರಿದ.

ಮೇಲೆ ಸೇರಿದ್ದ ಜನ ಕಾತರರಾಗಿ ನೋಡುತ್ತಿದ್ದರು. ಅವನು ಮೇಲೆ ಬಂದೊಡನೆ 'ಏನಾಯಿತು' 'ಅಯ್ಯೋ, ಸಿಗಲಿಲ್ಲ' ಎಂಬ ಉದ್ಗಾರಗಳು ನಿರಾಶೆಯಿಂದ ತಂತಾನೇ ಹೊರ ಬರುತ್ತಿದ್ದವು. ಅರವಿಂದನ ಚಿಕ್ಕಮ್ಮ, "ನಮ್ಮ ಮಗು ಸಿಗಲಿಲ್ಲವೇ?" ಎಂದು ಕೂಗುತ್ತ ಕೇಳುತ್ತಿದ್ದಳು.

ಕೊಂಡಿಬಾ ತಕ್ಷಣವೇ ಮತ್ತೆ ಮುಳುಗಿದ. ಅವನ ಕಿವಿಗಳಲ್ಲಿ ಅರವಿಂದನ ಚಿಕ್ಕಮ್ಮನ ಕಾತರದ ಪ್ರಶ್ನೆ ಮೊಳಗುತ್ತಿತ್ತು.

ಅಂದಿನವರೆಗೆ ಎಂದೂ ಕೊಂಡಿಬಾ ತನ್ನ ದೃಷ್ಟಿ ಕಳೆದುಕೊಂಡದ್ದಕ್ಕೆ ವ್ಯಥೆಪಟ್ಟಿರಲಿಲ್ಲ. ತನ್ನ ದುರದೃಷ್ಟವನ್ನು ಹಳಿದುಕೊಂಡ

ಸಾವು ಬಾರದ್ದನ್ನೇ. ಆದರೆ ಈಗ ಅದಕ್ಕಾಗಿ ಅವನು ಬಹಳ ವ್ಯಥೆಪಟ್ಟಿದ್ದ. ಕೈಗಳಿಂದಲೇ ಬದುಕಿನ್ನೂ ಸುಡುಕ ವಸ್ತ್ರದಲ್ಲಿ ಹುಡುಗನ ಗತಿ ಏನಾದೀತು ಎಂದು ಯೋಚಿಸಿದಾಗ ಭಯ ಅವನನ್ನು ಆವರಿಸಿತು. ಆದರೆ ಕಂದು ಬಣ್ಣದ ನೀರಿನಲ್ಲಿ ದೃಷ್ಟಿ ಚೆನ್ನಾಗಿದ್ದ ಮನುಷ್ಯನಿಗೂ ಏನೂ ಕಾಣುತ್ತಿರಲಿಲ್ಲ. ಎಂದಮೇಲೆ ಕುರುಡನಾಗಿದ್ದ ಅವನಿಗೆ ತಿಳಿಯುವ ಬಗೆ ಹೇಗೆ?

ಕೊಂಡಿಬಾ ಈ ಬಾರಿ ತಳದಲ್ಲಿ ನಿಂತ, ಅರವಿಂದ ಇಲ್ಲಿ ಇರಲೇಬೇಕು; ಬೇರೆಲ್ಲಿಯೂ ಹೋಗಲು ಸಾಧ್ಯವಿಲ್ಲ ಎಂದುಕೊಂಡು ಅವನು ಕೈಗೆ ಸಿಕ್ಕ ಗಿಡಗಳನ್ನೆಲ್ಲಾ ಕಿತ್ತುಹಾಕಿದ. ಸತತವಾಗಿ ಉಸಿರು ಬಿಗಿ ಹಿಡಿದು ಎದೆ ನೋಯುತೊಡಗಿತ್ತು. ಮತ್ತೆ ಮೇಲಕ್ಕೆ ಹೋಗಲೇ ಎಂದು ಅವನು ಮೇಲಕ್ಕೆ ಕೈ ಚಾಚಿದಾಗ ಕೈಗೆ ಮೆತ್ತಗಿನ ಬಟ್ಟೆ ಸಿಕ್ಕಿತು. ತಕ್ಷಣವೇ ಕೊಂಡಿಬಾ ಅದೇ ದಿಕ್ಕಿನಲ್ಲಿ ಕೈ ಚಾಚಿದಾಗ ಅರವಿಂದನ ಕಾಲುಗಳು ಸಿಕ್ಕಿದವು. ಕೆಸರು ಮತ್ತು ಗಿಡಗಳ ನಡುವೆ ಅರವಿಂದ ಸಿಕ್ಕಿ ಹಾಕಿಕೊಂಡುಬಿಟ್ಟಿದ್ದ.

ಕೊಂಡಿಬಾನಿಗೆ ಎದೆ ನೋಯತೊಡಗಿತು. ಇನ್ನು ಹೆಚ್ಚು ಹೊತ್ತು ಉಸಿರು ಕಟ್ಟಲಾರೆ ಎನಿಸಿತು. ಆದರೆ ಹುಡುಗನನ್ನು ಪೊದೆಯಿಂದ ಈಚೆಗೆ ಎಳೆಯಲು ಅವನಿಗೆ ಒಂದು ಹಿಡಿತ ಒಂದು ಬಿಗಿಯಾದ ವಸ್ತು ಬೇಕಾಗಿತ್ತು. ಅವನ ಕೈಗಳು ಅತ್ತಿತ್ತ ಬೇಗನೇ ಚಲಿಸಿದವು. ಅವನಿಗೆ ಹುಡುಗನ ಸೊಂಟದ ಬೆಲ್ಟ್ ಸಿಕ್ಕಿತು. ಮರು ಗಳಿಗೆಯೇ ಕೊಂಡಿಬಾ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಅದನ್ನು ಎಳೆದಾಗ ಹುಡುಗ ಈಚೆಗೆ ಬಂದ. ಅವನ ವೃದ್ಧ ಮನಸ್ಸು, ದೇಹಕ್ಕೆ ನೀಡಿದ ಆ ಉತ್ತೇಜನೆಯಿಂದ ಅವನ ಶಕ್ತಿಯೆಲ್ಲಾ ವ್ಯಯವಾಗಿ ಈಗ ಚಳಿ

ಸಲೂ ಸಾಧ್ಯವಾಗದಂತಾಯಿತು. ಆ ಹುಡುಗನನ್ನು ಎಳೆದುಕೊಂಡು ಆರು ಮೀಟರುಗಳಷ್ಟು ಮೇಲೆ ಏರಬೇಕೆಂದು ನೆನೆಸಿಕೊಂಡು ಅವನು ಹತಾಶನಾದ. ಅಂತೂ ಇಂತೂ ಕಷ್ಟಪಟ್ಟು ಒಂದು ಕೈಯಲ್ಲಿ ಹುಡುಗನನ್ನು ಹಿಡಿದುಕೊಂಡು ಒಂದೇ ಕೈಯಲ್ಲಿ ಈಜಿಕೊಂಡು ಅವನು ಮೇಲಕ್ಕೆ ಬಂದಾಗ ಜನ ಹರ್ಷೋದ್ಗಾರ ಮಾಡಿದರು.

ಆಗ ಮಧ್ಯಾಹ್ನವಾದ್ದರಿಂದ ಗಂಡಸರೆಲ್ಲ ಕೆಲಸಗಳಿಗೆ ಹೊರಟುಹೋಗಿದ್ದರು. ಆದರೂ ಸಮೀಪದಲ್ಲಿದ್ದ ಬಾಲ್ಕರು ಮಂದಿ ಓಡಿ ಬಂದು ಈಜು ಬಾರದೆ ಪೇಚಾಡುತ್ತ ನಿಂತಿದ್ದರು. ಅರವಿಂದನ ಬಟ್ಟೆ ನೀರಿನ ಮೇಲೆ ಗೋಚರಿಸಿದೊಡನೆಯೇ ಅವರು ಧಾವಿಸಿ ಬಂದು ಕೋಂಡಿಬಾನ ಕೈಯಿಂದ ಅವನನ್ನು ಬಿಡಿಸಿಕೊಂಡರು. ಕೋಂಡಿಬಾ ಆಯಾಸದಿಂದ ಕಣ್ಣುಮುಚ್ಚಿ ಬಾವಿಯ ಗೋಡೆಗೆ ಒರಗಿ ನಿಂತ. ಅಲ್ಲಿ ಸೇರಿದ್ದ ಜನರು ಆಡುತ್ತಿದ್ದ ಮಾತು ಅವನಿಗೆ ಕೇಳುತ್ತಿತ್ತು. ಅರವಿಂದನಿಗೆ ಕೃತಕ ಉಸಿರಾಟ ಪ್ರಯೋಗಿಸಲು ಅವರು ಪ್ರಯತ್ನಪಡುತ್ತಿದ್ದರೂ ಕೋಂಡಿಬಾನಿಗೆ ಅರಿವಾಯಿತು. "ಹುಡುಗ ಮಿಸುಕಾಡುತ್ತಿದ್ದಾನೆ." ಎಂದು ಜನ ಹರ್ಷದಿಂದ ಕೂಗಿದಾಗ ಕೋಂಡಿಬಾ ಸಮಾಧಾನದ ನಿಟ್ಟುಸಿರನ್ನು ಹೊರ ಚೆಲ್ಲಿದ. ಆದರೂ ಆಯಾಸದಿಂದ ಮೇಲಕ್ಕೆ ಬರಲಾರದೆ ನೀರಿನಲ್ಲೇ ಇದ್ದ.

ಅರವಿಂದನನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದರು. ಸ್ವಲ್ಪ ಹೊತ್ತಿನ ನಂತರ ಕೋಂಡಿಬಾ ಮೇಲಕ್ಕೆ ಬಂದಾಗ. ನೆರೆಯ ಹೆಂಗಸೊಬ್ಬಳು ಆತ್ಮೀಯತೆಯಿಂದ ಅವನ ಬೆನ್ನು ತಟ್ಟಿದಳು. ಎಲ್ಲೂಬಾಯಿ ಅವನನ್ನು ಗುಡಿಸಲಿಗೆ ಕರೆದುಕೊಂಡು ಹೋದಳು ಕೋಂಡಿಬಾ ಮತ್ತೆ ಬಟ್ಟೆ ಧರಿಸಿ, ಅರ್ಧಕ್ಕೆ ನಿಲ್ಲಿಸಿದ ಊಟವನ್ನು ಪೂರ್ತಿಗೊಳಿಸಿದ. ಆಯಾಸದಿಂದ ಕಾಲು ಚಾಚಿದ. ಕೂಡಲೇ ನಿದ್ದೆ ಆವರಿಸಿತು.

ಅಂದು ಸಂಜೆ ಪೋಲೀಸ್ ಅಧಿಕಾರಿಯೊಬ್ಬ ಬಂದ. "ಹುಡುಗ ಆಸ್ಪತ್ರೆಯಲ್ಲಿ ಸುಧಾರಿಸಿಕೊಳ್ಳುತ್ತಿದ್ದಾನೆ." ಎಂದು ಹೇಳಿದ, "ಅವನನ್ನು ಬಾವಿಯಿಂದ ಮೇಲಕ್ಕೆ ತರುವುದರಲ್ಲಿ ಏನು ನಿಮಿಷ ತಡವಾಗಿದ್ದರೂ ಆಮ್ಲಜನಕದ ಕೊರತೆಯಿಂದ ಅವನ ಮಿದುಳು ತೀವ್ರವಾದ ಆಘಾತಕ್ಕೆ ಒಳಗಾಗುತ್ತಿತ್ತಂತೆ," ಎಂದೂ ಹೇಳಿದ.

ಮರುದಿನ ಅರವಿಂದ ಗೋಳಿಬಾರಿಗೆ ಹಿಂದಿರುಗಿದ. ಅವನ ಚಿಕ್ಕಮ್ಮ ಹನಿಗೂಡಿದ ಕಣ್ಣುಗಳಿಂದ ನೋಡುತ್ತಿದ್ದಂತೆಯೇ ಅವನು ಕೋಂಡಿಬಾನ ಬಳಿಗೆ ಹೋಗಿ ಕೃತಜ್ಞತೆಯಿಂದ ಅವನ ಕಾಲು ಮುಟ್ಟಿ ನಮಸ್ಕರಿಸಿದ.

ಕೋಂಡಿಬಾ ಅರವಿಂದನ ಜೀವವನ್ನು ಉಳಿಸಿದ. ಆದರೇನು? ತನ್ನ ಜೀವವನ್ನುಳಿಸಲು ಅವನು ಭಿಕ್ಷೆ ಬೇಡಲೇಬೇಕಾಗಿತ್ತು. ಮತ್ತೆ ಅವನು ತನ್ನ ಹಳೆಯ ಗೋಣಿ ಚೀಲದೊಂದಿಗೆ ಹೊರಟ.

ಅವನ ಅದ್ಭುತ ಸಾಹಸದ ಕತೆ ಎಲ್ಲೆಡೆಯಲ್ಲೂ ಹರಡಿತು. ಎಲ್ಲ ಪತ್ರಿಕೆಗಳೂ ಈ ಸುದ್ದಿಯನ್ನು ಪ್ರಕಟಿಸಿದವು. ಮಹಾರಾಷ್ಟ್ರದ ರಾಜ್ಯಪಾಲರು, ಮುಖ್ಯ ಮಂತ್ರಿಗಳು ಮತ್ತು ನಗರಸಭೆಯ ಅಧ್ಯಕ್ಷರು ಅವನಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಸುಮಾರು ಹನ್ನೆರಡು ಸಾವಿರದ ಒಂಬೈನೂರು ರೂಪಾಯಿಗಳಷ್ಟು ನಗದು ಬಹುಮಾನವನ್ನೂ ಕೊಟ್ಟರು. ಕುರುಡರಿಗಾಗಿ ಇರುವ ಎಂ. ಎನ್. ಬ್ಯಾನರ್ಜಿಯವರ ಇಂಡಸ್ಟ್ರಿಯಲ್ ಹೋಮಿನಲ್ಲಿ ಅವನಿಗೆ ತರಬೇತಿಯ ಅವಕಾಶ ದೊರೆಯಿತು. ಅಲ್ಲಿ ಬಾಟಲಿಗಳನ್ನು ಸೀಲ್ ಮಾಡುವುದು. ಕುರ್ಚಿಗಳ ಆಸನ ಮತ್ತು ಬೆನ್ನುಗಳನ್ನು ಹೆಣೆಯುವುದು ಇವುಗಳಲ್ಲಿ ತರಬೇತಿ ಪಡೆದನು.

ಕೋಂಡಿಬಾ ಇಂದು ಔರಂಗಾಬಾದಿನ ಬಳಿಯಲ್ಲಿರುವ ಜಾಲ್ನಾದಲ್ಲಿದ್ದಾನೆ. ಅಲ್ಲಿಯ ಒಂದು ಹುಡುಗಿಯನ್ನು ವಿವಾಹವಾಗಿ ಸ್ವಂತ ಉದ್ಯೋಗವನ್ನು ಪ್ರಾರಂಭಿಸಿದ್ದಾನೆ ಉದ್ಯೋಗದಲ್ಲಿ ಅವನು ತೃಪ್ತಿಯನ್ನೂ ಕಂಡಿದ್ದಾನೆ.

ಅವನ ದೃಷ್ಟಿಹೀನ ಹಾಗೂ ಅದೃಷ್ಟಹೀನ ಬದುಕಿನಲ್ಲಿ ಬಾವಿಯಲ್ಲಿ ನಡೆದಿದ್ದ ಆ ಒಂದೇ ಒಂದು ಘಟನೆಯು, ಅವನ ಜೀವನಕ್ಕೆ ಒಂದು ಹೊಸ ತಿರುವು ಆಯಿತು. (ಸಂಗ್ರಹ) ★

ಆನಂದಕಂದರ

ಅಶಾಂತಿಪರ್ವ



ಸಂಗ್ರಹ: ವಿ. ಬಿ. ಜೋಶಿ

ಅಶಾಂತಿಪರ್ವ

'ಅಶಾಂತಿಪರ್ವ' ಕಾದಂಬರಿಯು 'ರಾಜಯೋಗಿ' ಕಾದಂಬರಿಯ ಉತ್ತರಾರ್ಧವಾಗಿದ್ದು, 'ರಾಜಯೋಗಿ'ಯ ಸಾರಾಂಶ ಇಲ್ಲಿದೆ—ವಿಜಯನಗರದ ದೊರೆ ಮಲ್ಲಿಕಾರ್ಜುನ ಗತಿಸಿಹೋದಾಗ ಹಿರಿಯ ಮಗ ರಾಜಶೇಖರನಿಗೆ ಹದಿನೈದು ವರ್ಷ—ಕಿರಿಯ ಮಗ ಪೆದ್ದರಾಯ(ಮುಮ್ಮಡಿ ವಿರೂಪಾಕ್ಷ)ನಿಗೆ ಹನ್ನೆರಡು ವರ್ಷ. ಮಲ್ಲಿಕಾರ್ಜುನನ ಮಲತಮ್ಮನಾದ ಇಮ್ಮಡಿ ವಿರೂಪಾಕ್ಷನು ಸ್ವಶಕ್ತಿಯಿಂದ ಸಿಂಹಾಸನ ಆಕ್ರಮಿಸಿದ. ರಾಜಶೇಖರ, ಪೆದ್ದರಾಯ ಸಾಮಾನ್ಯರಂತೆ ಜೀವನ ಸಾಗಿಸತೊಡಗಿದರು. ವಿಜಯನಗರದ ಕೋಶಾಧಿಕಾರಿ ವೆಂಕಟನಾಯಕನ ಮಗಳು ಹೇಮಾಂಬಿಕೆಯು, ರಾಜಶೇಖರನ ಬಾಲ್ಯದ ಗೆಳತಿ. ವಯಸ್ಸಿನೊಂದಿಗೆ ಅವರ ಸ್ನೇಹ ಪ್ರಣಯದಲ್ಲಿ ಪರ್ಯವಸಾನ. ಇಮ್ಮಡಿ ವಿರೂಪಾಕ್ಷರಾಯನದು ವಿಲಾಸದ ಬದುಕು, ಸ್ವಚ್ಛಂದ ಜೀವನ. ದೊರೆಯ ಕಾಕದೃಷ್ಟಿ ಹೇಮಾಂಬಿಕೆಯ ಮೇಲೆ. ಅವಳ ತಂದೆಗೆ ದಂಡನಾಯಕ ಪದವಿಯ ಆಮಿಷ, ಸಾಮ್ರಾಜ್ಯ ಕಲ್ಯಾಣಕ್ಕಾಗಿ ಹೇಮಾಳ ಪ್ರೇಮಾಹುತಿ, ಅರಸನೊಡನೆ ವಿವಾಹ. ದೊರೆಯು ನಾಷೀರ್ ಮುಹಮ್ಮದ್ ಎಂಬ ವಿದ್ರೋಹಿಯ ಕೈಗೊಂಬೆ. ನಾಷೀರ್ ಬಹಮನಿ ಅರಸರ ಪರವಾಗಿದ್ದ. ವಿಷಯ ಲಂಪಟ ವಿರೂಪಾಕ್ಷರಾಯ ನಾಷೀರ್‌ನ ಮಗಳು ರೋಷನಾರಾಳ ಕೈ ಹಿಡಿಯಬಯಸಿದ. ಬಹಮನಿ ಅರಸರ ದಾಳಿಯ ಭೀತಿ. ರಾಜಶೇಖರ ಸೆರೆಯಲ್ಲಿ. ಸಾಮ್ರಾಜ್ಯಾಭಿಮಾನಿಗಳಾದ ದಂಡನಾಯಕ ಸಾಳುವ ನರಸಿಂಹನಾಯಕ, ದುರ್ಗಾಧಿಪತಿ ಕುಮಾರ ನಾಯಕ, ಪೆದ್ದರಾಯ, ದಿಲಾವರ್‌ಖಾನ್ ಇವರು ಬಹಮನಿ ಅರಸರ ಕುತಂತ್ರ ಫಲಿಸದಂತೆ ಯತ್ನಿಸಿದರು.

ವಿರೂಪಾಕ್ಷರಾಯ ರೋಷನಾರಾಳ ಕೈ ಹಿಡಿಯಲಿದ್ದ ದಿನವೇ ಸೆರೆಯಿಂದ ಬಿಡುಗಡೆ ಪಡೆದ ರಾಜಶೇಖರ ದೊರೆಯ ಕೊಲೆಗೈದ. 'ವಿಜಯನಗರವು ಇನ್ನು ಮಂಗಲ ಸಮಯವನ್ನು ಕಾಣಬೇಕಿದ್ದರೆ, ನಿಮ್ಮ ಪಾತಕದ ಕಾರ್ ನೆತ್ತರನ್ನು ಹರಿಸದೆ ಗತ್ಯಂತರವಿಲ್ಲ. ಭುವನೇಶ್ವರಿಯು ನಿಮ್ಮನ್ನು ಬಲಿಯಾಗಿ ಅಪೇಕ್ಷಿಸಿದ್ದಾಳೆ'-ದೊರೆಯ ಶವಸಂಸ್ಕಾರವಾದೊಡನೆ, ಹೇಮಾಂಬಿಕೆಯನ್ನೊಡಗೊಂಡು ಆರು ಜನ ರಾಣಿಯರು ಸತಿ ಹೋದರು. 'ವಿಜಯನಗರದ ವಿಷಯದಲ್ಲಿ ಇನ್ನು ಯಾವ ಹೆದರಿಕೆಯೂ ಇಲ್ಲ' ಎಂದು ಹೇಮಾಳ ನಂಬಿಕೆ.

ಕರ್ನಾಟಕ ರಾಜ್ಯಲಕ್ಷ್ಮಿಗೆ ಆರೋಗ್ಯ ವರನಾಗಿದ್ದ ವಿರೂಪಾಕ್ಷರಾಯನ ಆಳಿಕೆಯಾದುದರಿಂದ, ಸಾಮ್ರಾಜ್ಯ ಸಿಂಹಾಸನವು ಶೂನ್ಯ ಸಿಂಹಾಸನವಾಗಿ ಉಳಿದುಕೊಂಡಿತು. ರಾಜಶೇಖರ ವಯಸ್ಸಿನಿಂದ ಹಿರಿಯವನಾದುದರಿಂದ ಸಿಂಹಾಸನಾಧಿಕಾರ ಅವನಿಗೆ ಸಹಜವಾಗಿ ಬಂದು ಬಿಡುತ್ತಿದ್ದಿತು. ವಿಜಯನಗರದ ಜನತೆಗೂ ಇವನ ಆಳಿಕೆ ಬೇಕಾಗಿದ್ದಿತು. ಆದರೆ ತನ್ನದೊಂದು ಗುರಿಯನ್ನು ಸಾಧಿಸುತ್ತಿರುವಾಗ, ಬೇರೆ ವಿಷಯಗಳ ಜಂಜಡವು ಬೇಡವೆಂದೊ, ಇನ್ನಾವ ಕಾರಣಗಳ ಮೂಲಕವೊ ರಾಜಶೇಖರನು ಆ ಅಧಿಕಾರವನ್ನು ಖಂಡಿತವಾಗಿ ನಿರಾಕರಿಸುತ್ತಿದ್ದನು. ಎಂತಲೆ ಆ ಸಿಂಹಾಸನಾಧಿಕಾರ ಪದ್ದರಾಯ(ಮುಮ್ಮಡಿ ವಿರೂಪಾಕ್ಷ)ನ ಕಡೆಗೆ ತನ್ನ ಆಸೆಯ ನೋಟಗಳನ್ನು ಹೊರಳಿಸಿ ನಿಂತಿದ್ದಿತು.

ಶಾಂತಿ ಕುಟೀರವೆಂದರೆ ಅದೊಂದು ವನ ಮಂದಿರಕ್ಕೆ ಹೆಸರು. ಮಲ್ಲಿಕಾರ್ಜುನ ರಾಯ ವಿಜಯನಗರದ ಮೂಡಣ ದೆಸೆಗೆ ರಮಣೀಯ ಸ್ಥಳವನ್ನು ಆರಿಸಿ, ಚಿಕ್ಕ ಅರಮನೆಯೊಂದನ್ನು ಕಟ್ಟಿಸಿರುವನು. ಏಕಾಂತ ಜೀವನದ ಅಪೇಕ್ಷೆಯಾದಾಗ ಆ ದೊರೆಯು ಇದೇ ಶಾಂತಿ ಕುಟೀರದಲ್ಲಿ ಬಂದು ವಸತಿ ಮಾಡಿಕೊಂಡಿರುತ್ತಿದ್ದನು. ರಾಜಶೇಖರನು ತನ್ನ ನಿವಾಸಕ್ಕಾಗಿ ಈ ವನ ಮಂದಿರವನ್ನೇ ಆರಿಸಿಕೊಂಡಿರುವನು. ತಂದೆ ಯಾವಾಗಲಾದರೊಮ್ಮೆ ಏಕಾಂತ ಜೀವನವನ್ನು ಅಪೇಕ್ಷಿಸುತ್ತಿದ್ದರೆ, ಮಗನು ನಿರಂತರವೂ ಏಕಾಂತ ಜೀವನಕ್ಕಾಗಿ ಆಶೆ ಪಡುವವನು. ಈಗ ಸಾಮ್ರಾಜ್ಯದ ಬಗ್ಗೆ ಆತನು ಕೃತಕೃತ್ಯ, ನಿಶ್ಚಿಂತ.

ರಾಜಶೇಖರನು ಬೆಳಗಿನ ವಿಧಿಗಳೆಲ್ಲವನ್ನೂ ತೀರಿಸಿಕೊಂಡು ಶಾಂತಿ ಕುಟೀರದ ಓಲಗಸಾಲೆಯೊಳಕ್ಕೆ ಬಂದಾಗ, ಹೊತ್ತು ನಾಲ್ಕು ಗಳಿಗೆ ಏರಿದ್ದಿತು. ಅವನು ಉಟ್ಟಿದ್ದು ಬೆಳ್ಳನೆಯದೊಂದು ದುಕೂಲ, ಹೊತ್ತದ್ದೂ ಅದೇ ಬಣ್ಣದ ಒಂದು ಸೆಲ್ಲೆಯು. ಹಣೆಗೆ ಭಸ್ಮದ ಮೂರು ಬೆರಳಿನ ಗುರುತುಗಳಿವೆ. ಕಪ್ಪು ಬಣ್ಣದ ನಿಡು ಜಡೆಗಳು ಓರಣಗೊಂಡು ಬೆನ್ನು ಭುಜಗಳ ಮೇಲೆ ಬಿದ್ದುಕೊಂಡಿವೆ, 'ಇವನೇನು ರಾಜಪುತ್ರನೋ? ಋಷಿಪುತ್ರನೊ ?' ಎಂದು ನೋಡಿದವರೆಲ್ಲರಲ್ಲಿ ಸಂದೇಹವನ್ನು ಹುಟ್ಟಿಸುವಂತಹದು ರಾಜಶೇಖರನ ರೂಪ.

ಅಂದಿನ ಬೆಳಗು ಆತ ಕಠೋಪನಿಷತ್ತಿನ ಮಂತ್ರವೊಂದನ್ನು ಓದುತ್ತಿದ್ದಾಗ ಪದ್ದರಾಯ ಅಲ್ಲಿಗೆ ಬಂದ. ತಮ್ಮ ತನ್ನ ಅಭಿಮತವನ್ನು ಅಣ್ಣನೆದುರು ತೋಡಿಕೊಂಡ. "ಅಣ್ಣಾಜೀ, ಮಲ್ಲಿಕಾರ್ಜುನ ದೊರೆಯ ಮಕ್ಕಳಲ್ಲಿ ಹಿರಿಯರು ನೀವು, ಸಿಂಹಾಸನವನ್ನು ಏರಬೇಕಾದ ಅಧಿಕಾರ ನಿಮಗೆ ಮೊದಲು ಸಲ್ಲುತ್ತದೆ. ನೀವು ದೊರೆಗಳಾಗಿರಿ."


"ನನಗದು ಬೇಡ ಪದ್ದಣ್ಣಾ, ಪಿತೃವಧೆಯ ಪಾತಕವು ನನಗಿದ್ದ ಸಿಂಹಾಸನಾಧಿಕಾರವನ್ನು ಹೊಡೆದು ಹಾಕಿದೆ. ನಾನೀಗ ದೊರೆಯಾಗಲಿಕ್ಕೆ ಒಪ್ಪಿಕೊಂಡರೆ, 'ರಾಜ್ಯಲೋಭದಿಂದ ಚಿಕ್ಕಪ್ಪನನ್ನು ಕೊಂದು ಸಿಂಹಾಸನವನ್ನೇರಿದವನೀತ' ಎಂದು ಜನರ ಬಾಯಲ್ಲಿ ನನ್ನ ಹೆಸರು ಮೆರೆಯಬಹುದು. ಹಾಗೆ ಮೆರೆಯಿಸಿಕೊಳ್ಳಲಿಕ್ಕೆ ನನಗೆ ಇಷ್ಟವಿಲ್ಲ..."

"ಇದೇ ಚಿಂತೆ ದಂಡನಾಯಕ ಸಾಳುವ ನರಸಿಂಹನಾಯಕನನ್ನು ಕಾಡುತ್ತಿದೆ. ಸದ್ಯಕ್ಕೆ ಸಾಮ್ರಾಜ್ಯ ದೇವರಿಲ್ಲದ ಗುಡಿಯಂತಾಗಿದೆ. ಸಾಮ್ರಾಜ್ಯದ ಪಟ್ಟಾಭಿಷೇಕ ಸಮಾರಂಭವನ್ನು ಕೂಡಲೆ ನೆರವೇರಿಸಬಯಸಿದರೆ ಈ ಪುಷ್ಯ ಮಾಸವೊಂದು ಕಾಲಿಗೆ ತೊಡಕಾಗಿ ನಿಂತಿದೆ. ಪಂಪಾಪತಿಯು ಮಾಘದ ಮೊದಲನೆಯ ಬೆಳಗನ್ನಷ್ಟು ಸುಸೂತ್ರವಾಗಿ ಒದಗಿಸಬೇಕು. ಅಂದೇ ಪಟ್ಟಾಭಿಷೇಕದ ಸಮಾರಂಭವನ್ನು ನಡೆಯಿಸಬಹುದು..."

ದಳಪತಿ ದೇವಣ್ಣನಾಯಕ ಪರಂಪರೆಯಿಂದ ಬಂದ ಯುದ್ಧ ವಿದ್ಯೆಯಲ್ಲಿ ತುಂಬ ಗಟ್ಟಿಗ. ಪದ್ದರಾಯನು ಎಳೆತನದಿಂದ ಯುದ್ಧ ಪ್ರಿಯನು. ಕತ್ತಿಯ ವರಸೆಯಾಟದಲ್ಲಿ ಇನ್ನೇತರಲ್ಲಿಯೂ ಇಲ್ಲದಷ್ಟು ಆತನಿಗೆ ಪ್ರೀತಿ. ಎಂತಲೆ ಅವನು ಖಡ್ಗಯುದ್ಧದ ಶಿಕ್ಷಣಕ್ಕಾಗಿ ದೇವಣ್ಣನಾಯಕನನ್ನು ತನ್ನ ಗುರುವನ್ನಾಗಿ ಮಾಡಿಕೊಂಡಿದ್ದನು.

ಒಂದು ಸಲ ದೇವಣ್ಣನಾಯಕನು ಸೈನ್ಯದಲ್ಲಿದ್ದ ಬಿಲ್ಲಾಳುಗಳಿಗೆ ಹೆಚ್ಚಿನ ಸಂಬಳ ಸಲ್ಲಬೇಕೆಂದು ದಂಡನಾಯಕ ನರಸಿಂಹನಾಯಕನಿಗೆ ಸೂಚನೆ ಮಾಡಿದನು. ಆದರ ಕಡೆಗೆ ಆತ ಅಲಕ್ಷ್ಯ ಮಾಡಿ

313-15



'ಆನಂದಕಂದ' ಎಂಬ ಕಾವ್ಯನಾಮದಿಂದ ಸುಪರಿಚಿತರಾಗಿರುವ ಕವಿಭೂಷಣ ಡಾ. ಬೆಟಗೇರಿ ಕೃಷ್ಣಶರ್ಮ ಅವರ ಐತಿಹಾಸಿಕ ಕಾದಂಬರಿ 'ಅಶಾಂತಿಪರ್ವ' ವಿಜಯನಗರ ಸಾಮ್ರಾಜ್ಯದ ಸಂಧಿಕಾಲದ ಒಂದು ಜೀವಂತ ಚಿತ್ರವಾಗಿದೆ. ೧೯೩೭ರಲ್ಲಿ ಪ್ರಥಮ ಆವೃತ್ತಿಯಾಗಿ ಹೊರಬಂದ ಈ ಕಾದಂಬರಿ, ಮತ್ತೆ ಮೂರು ಮುದ್ರಣಗಳನ್ನು ಕಂಡಿದೆ.

ಕವಿ, ಕಥೆಗಾರ, ಕಾದಂಬರಿಕಾರ, ನಾಟಕಕಾರ, ಸಂಶೋಧಕರಾಗಿ ಆನಂದಕಂದರು ಕನ್ನಡನಾಡಿನಲ್ಲಿ ಮನೆಮಾತಾಗಿರುವರು. 'ಒಡನಾಡಿ', 'ಕಾರಹುಣ್ಣಿವೆ' (ಕವನ); 'ಮಾತನಾಡುವ ಕಲ್ಲು', 'ರಾಜಯೋಗಿ', 'ಅಶಾಂತಿಪರ್ವ', 'ಮಗಳ ಮದುವೆ' (ಕಥೆ-ಕಾದಂಬರಿ); 'ನಮ್ಮ ಸಂಸ್ಕೃತಿ ಪರಂಪರೆ', 'ಕನ್ನಡ ಜಾನಪದ ಸಾಹಿತ್ಯ', 'ಹರಿದಾಸ ಭಕ್ತಿ ಸಾಧನೆ'. ಇವರ ಮುಖ್ಯ ಕೃತಿಗಳು. ಇವರು ೨೩ ವರ್ಷ 'ಜಯಂತಿ' ಸಾಹಿತ್ಯಕ ಪತ್ರಿಕೆ ಸಂಪಾದಿಸಿದರು. 'ಬೆಳುವಲ' ಆನಂದಕಂದರಿಗೆ ಸಂದ ಅಭಿನಂದನ ಗ್ರಂಥ. ರಾಜ್ಯಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಮೂರನೆಯ ಅಖಿಲಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಇವರು ಪಡೆದಿರುವ ಮನ್ನಣೆಗಳಲ್ಲಿ ಕೆಲವು.

ಇಂದು ೮೨ರಲ್ಲಿ 'ಆನಂದಕಂದ'ರ ಜೀವನ ಹೋರಾಟ ಮುನ್ನಡೆದಿದೆ.

ಬಿಟ್ಟ. ಇದರಿಂದ ದೇವಣ್ಣನಾಯಕನ ಮನಸ್ಸಿನ ಮೂಲೆಯಲ್ಲಿ ನರಸಿಂಹನಾಯಕನ ವಿಷಯವಾಗಿ ಅಸೂಯೆಯ ಕಿಡಿ ಅಂಟಿಕೊಂಡಿತು. ಮೊದಲಿನ ದೊರೆ ವಿರೂಪಾಕ್ಷರಾಯನ ಆಡಳಿತವು ದೇವಣ್ಣನಾಯಕನಿಗೆ ಬೇಕಾಗಿಯೆ ಇದ್ದಿತೆಂದೇನೂ ಇಲ್ಲ. ಆದರೆ ನರಸಿಂಹನಾಯಕ ದೊರೆಗೆ ವಿರೋಧಿಯಾಗಿ ನಿಂತುದರಿಂದ, ಅವನ ಪಕ್ಷದಲ್ಲಿ ಸೇರಲಿಕ್ಕೆ ದೇವಣ್ಣನ ಮನಸ್ಸು ಒಪ್ಪಿಕೊಳ್ಳಲಿಲ್ಲ. ಅಂತೆಯೆ ಕೊನೆಯವರೆಗೆ ವಿರೂಪಾಕ್ಷರಾಯನ ಕಡೆಯವನಾಗಿಯೆ ಉಳಿದ. ಈಗ ರಾಜಶೇಖರನು ಸಿಂಹಾಸನವನ್ನೇರಲಿಕ್ಕೆ ಅಸಮ್ಮತಿಸಿದ್ದಾನೆಂಬುದನ್ನು ಕೇಳಿದಾಗಿನಿಂದ ದಳವಾಯಿಗಳ ದೇಹದಲ್ಲಿ ಮತ್ತೆ ಉತ್ಸಾಹದ ಸಂಚಾರವಾಗಲು ತೊಡಗಿದ್ದಿತು. ಪದ್ಮರಾಯ, ತನ್ನ ಶಿಷ್ಯನಾದ ಪದ್ಮರಾಯ, ದೊರೆಯಾಗಲಿದ್ದಾನೆಂಬ ವರ್ತಮಾನವನ್ನು ಕೇಳಿದಂತೂ ಹುರುಪಿನಿಂದ ಅವನ ನರನರಗಳೂ ಹಿಗ್ಗಿ ಕುಣಿದಾಡಿದವು.

ದೇವಣ್ಣನಾಯಕನ ಮನೆಗೆ ಹೋಗಲಾರಂಭಿಸಿದಂದಿನಿಂದಲೂ ಪದ್ಮರಾಯನು ರತ್ನಾಂಬಿಕೆಗೆ ಪರಿಚಯದವನಾಗಿದ್ದನು. ಇಬ್ಬರೂ ಜೊತೆಯಾಗಿ ಇದ್ದುಕೊಂಡು, ನಾಯಕನಿಂದ ಕತ್ತಿಗಾಳಗದ ಬೇರೆ ಬೇರೆ ಕೈತಿರುವುಗಳನ್ನು ಹೇಳಿಕೊಂಡ ದಿನಗಳು ಎಷ್ಟೋ ಇದ್ದವು. ಒಂದೊಂದು ದಿನ ದೇವಣ್ಣನಾಯಕ, ಮಗಳನ್ನು ಪದ್ಮರಾಯನೊಡನೆ ಮುಷ್ಟಿಗಾಳಗಕ್ಕೆ ನಿಲ್ಲಿಸಿ, ಇಬ್ಬರ ಕೈಚಳಕವನ್ನು ಕೌತುಕದಿಂದ ನೋಡುತ್ತ ನಿಂತುಕೊಂಡಿರುವನು. ಏನೆಂದರೂ ರತ್ನಾಂಬಿಕೆಯದು ಹೆಣ್ಣಿನ ಕೈ, ಬೇಗನೆ ಸೋತು ಹೋಗುವುದು. ಆಗ ಅವರಿಬ್ಬರು ನಗೆಗಣ್ಣುಗಳಿಂದ ಒಬ್ಬರನ್ನೊಬ್ಬರು ದಿಟ್ಟಿಸುತ್ತ ನಿಲ್ಲುವರು. ಅವರು ಹಾಗೆ ನಿಂತುಕೊಂಡಾಗಲೆಲ್ಲ ದೇವಣ್ಣನಾಯಕ ಮನೋರಥಗಳನ್ನು ಏನೇನೋ ಕಂಡು, ಹಿಗ್ಗಿ [illegible] ಸಮಾಧಾನದ ಉಸಿರುಗಳನ್ನು ಹೊರಕ್ಕೆ ಕಳುಹುವನು.

■

ಶಾಂತಿ ಕುಟೀರಕ್ಕೆ ಸಮೀಪದಲ್ಲಿ ಅನಾಥ ನಿಲಯವಿದೆ. ರಾಜಶೇಖರನು ತನಗೆ ಅರಮನೆಯಿಂದ ಸಿಕ್ಕುತ್ತಿದ್ದ ಭತ್ಯವನ್ನು ವೆಚ್ಚ ಮಾಡಿ ಈ ಅನಾಥ ನಿಲಯವನ್ನು ನಡೆಯಿಸಿದ.

ನಾರಾಯಣ ಪಂಡಿತರು ನಿಲಯದ ವ್ಯವಸ್ಥಾಪಕರು. ನಿಲಯದಲ್ಲಿ ಯಾವ ಜಾತಿ ಪಂಥಗಳ ಭೇದವನ್ನೂ ಎಣಿಸದೆ ಎಲ್ಲರಿಗೂ ಆಶ್ರಯ ದೊರೆಯುತ್ತಿರಬೇಕೆಂದು ರಾಜಶೇಖರನ ಆಶಯ.

ಅತ್ತ ಪದ್ಮರಾಯನ ಮನಸ್ಸಿನಲ್ಲಿ ವಿಚಿತ್ರ ಕೋಲಾಹಲ ನಡೆದಿದೆ. ಮೂರು ಪ್ರಹರಗಳು ಮುಗಿದುಹೋದವು. ಆದರೂ ಪದ್ಮರಾಯನು ಪರ್ಯಂಕದಲ್ಲಿ ಬಿದ್ದುಕೊಂಡಿದ್ದವನು ಬಿದ್ದುಕೊಂಡಿದ್ದಂತೆಯೇ ಇರುವನು. ನರಸಿಂಹನಾಯಕನ ಮನೆಯಲ್ಲಿ ಅವನ ಮಗಳು ಕಮಲಾಂಬಿಕೆಯನ್ನು ನೋಡಿದಾಗಿನಿಂದ ಮನಸ್ಸು ಸ್ವಾಧೀನದಲ್ಲಿಲ್ಲ. ಅವಳು ತಂಬೂರಿಯ ಶ್ರುತಿಯಲ್ಲಿ ಹಿಂದೋಳ ರಾಗಾಲಾಪನೆಗೆ ತೊಡಗಿದಾಗ ಪದ್ಮರಾಯ ಅವಳನ್ನು ಕಂಡಿದ್ದನಷ್ಟೆ. ಆ ಗಂಧರ್ವ ಕನ್ಯೆ ಮೊದಲ ನೋಟದಲ್ಲಿಯೆ ಅವನ ಮನಸೂರೆಗೊಂಡಿದ್ದಳು. ಸಂಕ್ರಾಂತಿಯ ಉಡುಗೊರೆಯೆಂದು ದಂತದ ಸಂಪುಟವೊಂದನ್ನು ಆತ ಈಗಾಗಲೆ ಅವಳಿಗೆ ಕಳುಹಿದ್ದ.

ಪದ್ಮರಾಯ ಯೋಚಿಸಿದ: 'ಇದು ವರೆಗೆ ನನ್ನ ಹೃದಯಮಂಟಪದಲ್ಲಿ ಎಡೆಬಿಡದೆ ನಾಟಿ ನಿಂತಿದ್ದ ರತ್ನಾಂಬಿಕೆಯ ಮೂರ್ತಿಯನ್ನು ಪೂರ್ತಿಯಾಗಿ ಮರೆಮಾಡಿ, ಅಲ್ಲಿ ಕಮಲಾಂಬಿಕೆಯ ಮೂರ್ತಿ ನಿಂತುಬಿಟ್ಟಿದೆ...ರತ್ನಾಂಬಿಕೆಯ ರೂಪವನ್ನು ಮನಸಿನಲ್ಲಿ ತಂದುಕೊಳ್ಳಬೇಕೆಂದು ಪ್ರಯತ್ನಿಸಿದರೆ ಅಲ್ಲಿ ಬಂದ ನಿಂತಿರುವವಳೂ ಕಮಲಾಂಬಿಕೆಯೇ ಆಗಿರುವಳು... ಒಂದು ಕ್ಷಣದ ನೆನಹು ಇದು ವರೆಗಿನ ನನ್ನ ಜೀವನದ ನೆನಹನ್ನೆಲ್ಲ ನುಂಗಿ ಕುಳಿತಿದೆ...'

ಈಶ್ವರನಾಯಕನ ಆಗಮನ ಕೂಡ ಕಮಲಾಂಬಿಕೆಯ ನೆನಪನ್ನು ಹಿಂದಕ್ಕೆ ಅಟ್ಟಲಿಲ್ಲ. ಈಶ್ವರ ವಿಜಯನಗರದ ಸೈನ್ಯದಲ್ಲಿ ಐನೂರು ಜನ ರಾವುತರ ದಳಕ್ಕೆ ಮೇಲಾಳಾಗಿದ್ದ. ಇವನು ದಳವಾಯಿ ದೇವಣ್ಣನಾಯಕರಿಗೆ ದೂರದ ಸಂಬಂಧಿ, ರತ್ನಾಂಬಿಕೆಯಿಂದ ಸಹೋದರ ಪ್ರೀತಿಯನ್ನು ಪಡೆಯುತ್ತಿರುವವನು. ಇವನು ಪದ್ಮರಾಯನಿಗೆ ಮೊದಲಿನಿಂದಲೂ ಅಂತರಂಗದ ಸ್ನೇಹಿತನು. ವಿಜಯನಗರ ಸಾಮ್ರಾಜ್ಯದ ದಂಡನಾಯಕನಾಗಬೇಕೆಂಬ ಮಹತ್ವಾಕಾಂಕ್ಷೆ ಈತನದು. ಈತ ರಾಜಶೇಖರನನ್ನು ಹೇಡಿಯೆಂದು ಹೀಗಳೆದು ನುಡಿಯುತ್ತಿದ್ದ.

ಈಶ್ವರನಾಯಕ ಹೇಳಿದ: "ಏನೇ ಆಗಲಿ ಪದ್ಮಣ್ಣಾ, ಸಾಮ್ರಾಜ್ಯಾಧಿಕಾರ ನಿಮ್ಮಂತಹ ವೀರಾಗ್ರಣಿಗಳ ಕಡೆಗೆ ಬಂದರದು ಕರ್ನಾಟಕಬ ಸುದೈವವೆ ಸರಿ. ನಮ್ಮ ದೇಶದ ಯಾವ ಭಾಗದಲ್ಲಿಯೂ ವಿಧರ್ಮೀಯರ ಒಂದು ಮನೆ ಕೂಡ ಕಾಣದಂತೆ ಮಾಡುವುದೇ ನಮ್ಮ ಆಡಳಿತದ ಗುರಿಯಾಗಿರಬೇಕು. ಆದರೆ, ನೀವು ನರಸಿಂಹನಾಯಕರನ್ನು ದಂಡನಾಯಕನಾಗಿ ಮಾಡಿಕೊಂಡರೆ ಮಾತ್ರ ಈ ಗುರಿಯನ್ನು ನಾವು ಎಂದೂ ಮುಟ್ಟಲಾರೆವೆಂದು ನನ್ನ ಖಂಡಿತವಾದ ಭಾವನೆ."

ನರಸಿಂಹನಾಯಕರೆಂಬ ಮಾತು ಕಿವಿಗೆ ಬಿದ್ದೊಡನೆ ಪದ್ಮಣ್ಣನ ಮನಸ್ಸು ಪ್ರಕ್ಷುಬ್ಧವಾದ ಕಡಲಿನಂತೆ ಕಲಕುವಂತಾಯಿತು, ಮೈ ಜುಮ್ಮೆಂದಿತು. ನೋಟ ಎದುರಿಗಿದ್ದ ಈಶ್ವರನಾಯಕನನ್ನು ಬಿಟ್ಟು ಇನ್ನೆಲ್ಲಿಯೋ ತೊಡಕಿಕೊಂಡಿತು. ಅರಗಳಿಗೆಯ ನಂತರ ಆತ ಮೆಲ್ಲಲಿ ಈಶ್ವರನನ್ನು ಕೇಳಿದ, "ನೀನು ಹಿಂದೋಳ ರಾಗವನ್ನು ಕೇಳಿದ್ದೀಯಾ, ಈಶ್ವರಾ?"

"ಬೇಕಾದಷ್ಟು ಸಲ ಕೇಳಿದ್ದೇನೆ. ವಿರೂಪಾಕ್ಷರಾಯರ ಆಶ್ರಯದಲ್ಲಿದ್ದ ಮೇಲೆ ಸಂಗೀತ–ನರ್ತನಗಳಿಗೇನು ಬರಗಾಲ?"

"ಮೊನ್ನೆ ಮೊನ್ನೆ ನರಸಿಂಹನಾಯಕರ ಮಗಳು ಹಿಂದೋಳ ರಾಗವನ್ನು ಆಲಾಪಿಸುತ್ತಿದ್ದುದನ್ನು ಕೇಳಿದೆ. ಎಷ್ಟು ಚೆನ್ನಾಗಿತ್ತೆನ್ನುತ್ತೀಯೆ!"

"ಅಷ್ಟು ಚೆನ್ನಾಗಿ ಹೇಳುತ್ತಾಳೇನು ನರಸಿಂಹನಾಯಕರ ಮಗಳು? ಕಮಲಾಂಬಿಕೆಯೆಂದಲ್ಲವೆ ಅವಳಿಗೆ ಹೆಸರು?"

"ಕಮಲಾಂಬಿಕೆ...! ಹೂಂ, ಕಮಲಾಂಬಿಕೆ!"

ಪದ್ಮರಾಯನ ಅಸ್ಥಿರ ಚಿತ್ತದ ಅರ್ಥ ಈಶ್ವರನಾಯಕನಿಗೆ ಸ್ವಲ್ಪ ಸ್ವಲ್ಪವೆ ಆಗಲು ತೊಡಗಿತು. ಪೂರ್ತಿಯಾಗಿ ಕಂಡುಹಿಡಿಯಬೇಕೆಂದೊ ಏನೋ ಒಮ್ಮೆಲೆ ಪ್ರಶ್ನೆ ಮಾಡಿ

ದನು: "ಮದುವೆಯಾಗಿದೆಯೆ ಪದ್ದಣ್ಣ ಅವಳಿಗೆ?"

ದಡದಡಿಸುವ ಎದೆಯಿಂದ ಪದ್ದರಾಯನು ಹೇಳಿದ: "ಮದುವೆಯೆ? ಇನ್ನೂ ಆದಂತೆ ಕಾಣೆ."

"ಹಾಗಿದ್ದರೇನು? ಕೆಲಸವೇ ಆದಂತಾಯಿತು..."

ಈಶ್ವರನಾಯಕನ ಕರುಳು ಅದೇತಕ್ಕೊ ಇರುವೆಗಳಿಂದ ಕಚ್ಚಿಸಿಕೊಳ್ಳಲು ತೊಡಗಿತು. ಕಮಲಾಂಬಿಕೆಯು ರಾಣಿಯಾಗಿ ದೊರೆತರೆ, ನರಸಿಂಹನಾಯಕನೆ ದಂಡನಾಯಕನಾಗಿ ಬರುವನು' ಎಂಬ ವಿಚಾರ ಆತನ ಕರುಳುರಿಗೆ ಕಾರಣವಾಗಿರಬಹುದು.

"ಏನು ಪದ್ದಣ್ಣಾ, ನನ್ನ ಮಾತಿಗೆ ನಿಮ್ಮಿಂದ ಉತ್ತರವೆ ದೊರೆಯಲಿಲ್ಲವಲ? ನಾನು ಹೇಳಿ ತಂದ ಆಗಬಹುದಲ್ಲವೆ?"

"ಚಂದ್ರಗಿರಿಯಲ್ಲಿ ಇದ್ದಾನಲ್ಲ ತುಳುವ ನರಸಿಂಹ, ಕಮಲಾಂಬಿಕೆಯನ್ನು ಆತನಿಗೆ ಕೊಡುವುದಾಗಿ ನಿರ್ಣಯವಾಗಿದೆಯಂತೆ!"

"ಸಮ್ರಾಟನೊಂದಿಗೆ ಸಂಬಂಧವನ್ನು ಬೆಳೆಯಿಸುವ ಸಂದರ್ಭವಿರುವಾಗ, ಗೊತ್ತಾದುದುದನ್ನು ಮುರಿಯಲಿಕ್ಕೇನೂ ತಡೆಯಾಗದಲ್ಲ," ನೀರಸವಾದ ಕಿರು ನಗೆಯೊಂದಿಗೆ ಈಶ್ವರನಾಯಕನು ಮಾತನಾಡಿದ.

ಅವನು ಹೋದನಂತರ ಪದ್ದರಾಯ ವಿಶ್ರಾಂತಿ ಭವನದಲ್ಲಿಯೆ ಅತ್ತಿತ್ತ ಎಡೆಯಾಡಲು ತೊಡಗಿದ. ಆಗ ಆತನು ಗುಂಯ್ ಗುಡುತ್ತಲಿದ್ದ ಸಂಗೀತದ ರಾಗ ಹಿಂದೋಳವಾಗಿದ್ದಿತು.

ವಿರೂಪಾಕ್ಷರಾಯನ ಕೊಲೆ ಮಾಡಿದವ ಪದ್ದರಾಯನೆಂದು ರತ್ನಾಂಬಿಕೆಯ ಕಲ್ಪನೆಯಾಗಿತ್ತು. ಪದ್ದರಾಯನೊಡನೆ ಮಾತನಾಡಿದಾಗ ಅವಳಿಗೆ ವಸ್ತುಸ್ಥಿತಿ ತಿಳಿಯಿತು. ಗೆಳತಿ ಕಮಲಾಂಬಿಕೆಯೊಡನೆ ಅವಳು ರಾಜಶೇಖರನನ್ನು ಕಾಣಲು ಶಾಂತಿ ಕುಟೀರಕ್ಕೆ ನಡೆ ತಂದಳು. ಕಮಲಾಂಬಿಕೆ ತನ್ನ ಗೆಳತಿಯನ್ನು ಅಣ್ಣಾಜಿಗೆ ಪರಿಚಯಿಸಿದಳು.

ರಾಜಶೇಖರ ಕುತೂಹಲದಿಂದ ಕೇಳಿದ. "ನನ್ನನ್ನು ಕಾಣಬೇಕಾದ ಅವಶ್ಯಕತೆಯೇನು ನಿಮಗೆ?"

"ಹೌದು. ಕೃತಜ್ಞತೆಗಳನ್ನು ಸಲ್ಲಿಸಬೇಕಾಗಿದೆ."

"ಕೃತಜ್ಞತೆಗಳನ್ನು ಸಲ್ಲಿಸುವುದು ಏತಕ್ಕಾಗಿ?"

"ನನ್ನ ಪ್ರತಿಜ್ಞೆಯೊಂದನ್ನು ನೀವು ಪೂರಯಿಸಿದ್ದೀರಿ."

"ಅದಾವುದು ನಿಮ್ಮ ಪ್ರತಿಜ್ಞೆ? ನಾನೇನು ಪೂರಯಿಸಿದ್ದೇನೆ?"

"ವಿರೂಪಾಕ್ಷರಾಯನನ್ನು ಈ ಲೋಕದಿಂದ ಇಲ್ಲದಂತಾಗಿಸಿದ್ದೀರಿ."

ದೊರೆಯ ದುರಾಚಾರ ಬೆಂಕಿಯ ಬಲೆಯಿಂದ ತನ್ನ ಕರುಳು ಸುಟ್ಟುದನ್ನು ರತ್ನಾಂಬಿಕೆ ನಿರೂಪಿಸಿದಳು: ಅಕ್ಕ ಅಕ್ಕಮ್ಮ ವಿಧವೆ...... ವಿರೂಪಾಕ್ಷರಾಯನ ಕಿವಿಗೆ ಅಕ್ಕನ ಚೆಲುವಿಕೆಯ ಸುದ್ದಿ... ಅಪ್ಪಾಜಿಯವರಿಗೆ ದಳಪತಿಯ ಸ್ಥಾನದ ಆಮಿಷ... ನೈವೇದ್ಯ ಪಾತ್ರದಂತಹ ಅಕ್ಕಮ್ಮನ ಶುದ್ಧ ಶರೀರಕ್ಕೆ ಒಂದೇ ಒಂದು ಸಲ ಆ ನಾಯಿಯ ವೈಲಿಗೆ, ಮರು ದಿನ ಅವಳ ಆತ್ಮಹತ್ಯೆ...... ಮುಯ್ಯ ತೀರಿಸಲು ಪ್ರತಿಜ್ಞೆ ಮಾಡಿಸಿದಳು....

ರಾಜಶೇಖರ ಕರುಣಾಸ್ವರದಲ್ಲಿ ಉಸುರಿದ: "ಅಮ್ಮಾಜೀ. ನಿಜವಾಗಿಯೂ ನಿಮ್ಮ ಅಕ್ಕಮ್ಮನ ಕತೆಯು ಕರುಳು ಸುಡುವಂತಹದು!"

ಹೊತ್ತು ಎರಡು ಪ್ರಹರಕ್ಕೆ ಬಂದಾಗ ಗೆಳತಿಯರಿಬ್ಬರು ಶಾಂತಿ ಕುಟೀರದಿಂದ ಹೊರ ಬಂದರು. ರಾಜಶೇಖರನ ಮೂರ್ತಿ ರತ್ನಾಂಬಿಕೆಯ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿತ್ತು.

ರತ್ನಾಂಬಿಕೆಯ ಜಾತಕದಲ್ಲಿ ಅವಳು ಮಹಾರಾಣಿಯಾಗುವ ಯೋಗವಿದೆ–ಎಂದು ಜೋಯಿಸರು ಹೇಳುತ್ತಿದ್ದರು. ಅವಳು ಮಹಾರಾಣಿಯಾದರೆ, ತನ್ನ ಮಹತ್ವಾಕಾಂಕ್ಷೆ ಪೂರ್ಣವಾದೀತೆಂದು ಈಶ್ವರನಾಯಕನ ಕಲ್ಪನೆ. ಅಂತಲೇ ಅವನು ರತ್ನಾಂಬಿಕೆಯಲ್ಲಿ ಸ್ವಂತದ ತಂಗಿಯಲ್ಲಿಯ ವಿಶ್ವಾಸವನ್ನು ನಟಿಸುತ್ತ, ಆಗಾಗ ಅವಳ ಅಂತಃಪುರಕ್ಕೆ ಬರುವನು.

ಬೆಳಗಾಗ ಎರಡು ಗಳಿಗೆಯಾಗಿರಬಹುದು, ಈಶ್ವರ ರತ್ನಾಂಬಿಕೆಯನ್ನು ಕಾಣಲು ಬಂದ.


"ಅಮ್ಮಾ, ತುಂಬಾ ಉರೀತಾಯಿದೆ,
ತುರಿಸ್ತಾಯಿದೆ, ನೋಡಬಾರಮ್ಮಾ."
ನೈಸಿಲ್
ಬಳಸಿರಿ.
ಶೀಘ್ರ ಉಪಶಮನಕ್ಕಾಗಿ
ತ್ವಚೆ ಉರಿತದ ಪಾಡರ್.
2 ಬಗೆಯ
ಡಬ್ಬಿಗಳಲ್ಲಿ ಲಭ್ಯ
'ನೀಲಿ' ಮತ್ತು
'ಚಂದನ್'.
Glaxo
mycil
PRICKLY HEAT POWDER
ನೈಸಿಲ್ ತನ್ನಿರಿ
ತ್ವಚೆ ಉರಿತವನ್ನು
ಮರೆಯಿರಿ.
ಔಷಧಿಯುಕ್ತ ನೈಸಿಲ್:
1. ಹೆಚ್ಚಿನ ಬೆವರನ್ನು ತಡೆಯುತ್ತದೆ.
2. ಬೆವರನ್ನು ಹೀರಿಕೊಳ್ಳುತ್ತದೆ.
3. ದುರ್ವಾಸನೆ ಕೊಡುವ ಕ್ರಿಮಿಗಳನ್ನು ನಾಶಮಾಡುತ್ತದೆ.
4. ತ್ವಚೆಯನ್ನು ಸಂತವಿಸುತ್ತದೆ.
CASGLN-4 152 KAN

"ದೊರೆಗಳ ಬುದ್ಧಿ, ಹರಿಯುವ ನೀರು ಒಂದೇ ಎಂದು ಹೇಳುತ್ತಾರೆ. ಅದೇನು ಸುಳ್ಳಲ್ಲ ನೋಡು. ಇನ್ನೂ ದೊರೆಯಾಗದಿದ್ದರೂ ಬೇಗನೆ ಆಗಲಿರುವ ಪದ್ಮಣ್ಣನ ಮನಸ್ಸು ಹರಿಯುವ ನೀರೇ ಆಗಿದೆ."

"ಮಹಾರಾಜರೀಗ ಈಶ್ವರಾ ?"

"ಆಗುವುದೇನು ? ನಿನ್ನ ಮಹಾರಾಣಿಯ ಪದವಿಯನ್ನು ಇನ್ನಾರೋ ಕಸಿದುಕೊಳ್ಳಲಿಕ್ಕೆ ನಿಂತಿದ್ದಾರೆ."

ಪದ್ಮರಾಜ ಕಮಲಾಂಬಿಕೆಯ ಕುರಿತು ತನ್ನಲ್ಲಿ ಕೇಳಿದ್ದು, ಆತ ಅವಳಿಗೆ [illegible] ಉಡುಗೊರೆ ಕಳುಹಿದ್ದು – ರತ್ನಾಂಬಿಕೆಯು ಕಣ್ಣೆದುರು [illegible]. ಅವಳ ಮುಖವನ್ನು ಜಿಗುಪ್ಸೆ, ಭಾವ [illegible] ಮಾತ್ರ. ಅವಳು ಹೇಳಿದಳು: "ಕಮಲಾಂಬಿಕೆಯು ಪದ್ಮರಾಜನಿಗೆ ಸಿಕ್ಕದಂತೆ ನೀನು ಪ್ರಯತ್ನ ಮಾಡಬೇಕಾಗಿಲ್ಲ. ಆಕೆ ಈ ಮಾತನ್ನು ಕನಸಿನಲ್ಲಿ ಕೂಡ ಒಪ್ಪಲಾರಳು. ಆಕೆಯ ಒಪ್ಪಿಗೆಯಿಲ್ಲದೆ ನರಸಿಂಹನಾಯಕರು ಇದಕ್ಕೆ ಎಂದೂ ಸಿದ್ಧರಾಗಲಾರರು."

ಈಶ್ವರ ಹೋದ ನಂತರ ಬಹಳ ಕಾಲದ ವರೆಗೆ ರತ್ನಾ ಶೂನ್ಯ ಮನಸ್ಕಳಾಗಿದ್ದಳು. ಅವಳು ತನ್ನಲ್ಲೇ ಅಂದುಕೊಂಡಳು, 'ರಾಜಶೇಖರನೇ ಸಿಂಹಾಸನವನ್ನೇರಲಿಕ್ಕೆ ಸಮ್ಮತಿಸಿದರೆ.........! ಅಯ್ಯೋ, ಆತ ಸಮ್ಮತಿಸಿಬಿಟ್ಟರೆ ಎಷ್ಟೊಂದು ಸೊಗಸಾದೀತು ?'

*

ರತ್ನಾಂಬಿಕೆಯ ಕಡೆಗೆ ಪದ್ಮರಾಜ ಕೂಡಲೆ ಹೊರಟ. ಅಂತಃಪುರದ ಒಳಗೆ ಬರುತ್ತಿದ್ದ ರಾಜನ ಹೆಜ್ಜೆಗಳನ್ನು ಅವಳ [illegible] ಗುರುತಿಸಿಕೊಂಡಿತು.

"ರತ್ನಾ, ನೀನು ಹೆಣ್ಣು [illegible] ಇದ್ದೀಯೋ ಎಂಬುದನ್ನು ಈಗ ಸ್ವತಃ ನೋಡುತ್ತಿದ್ದೇನೆ, ನೋಡು!"

"ರಾಜಾಜೀ, ಹಾಗಾದರೆ ಇದುವರೆಗೆ ನನ್ನನ್ನು ಗಂಡೆಂದು ತಿಳಿದಿದ್ದಿರೇನು ?"

"ಇದುವರೆಗೆ ನಾನು ತಿಳಿದಿದ್ದೆನೆಂದರೆ, ನೀನು ಬರಿಯ ರತ್ನಾಂಬಿಕೆಯೆಂದು."

"ಈಗ ? ನಾನು ತರುಣಿ ರತ್ನಾಂಬಿಕೆಯಾಗಿದ್ದೇನೆಯೇ ?"

ಪದ್ಮರಾಜ ಅವಳ ಕೈಯಲ್ಲಿಯ ಮುತ್ತಿನ ಸರವನ್ನು ಅವಳ ಕೊರಳಿಗೆ ಇರಿಸಿ, ಕುಣಿಕೆಯನ್ನು ತೊಡಿಸಿದ. ಅವರು ಮಾತನಾಡುತ್ತ ಕುಳಿತಾಗ, ಕಮಲಾಂಬಿಕೆಯ ಊಳಿಗದ ಆಳು ಬಂದು ಹೇಳಿದಳು: "ಇಂದಿನ ಇಳಿ ಹೊತ್ತಿನಲ್ಲಿ ಕಮಲಮ್ಮಾಜಿಯವರು ಶಾಂತಿ ಕುಟೀರಕ್ಕೆ ಹೋಗಲಿದ್ದಾರೆ, ಜೊತೆಗೆ ನೀವೂ ಬರುತ್ತೀರಾ ಅಂತ ಕೇಳಿಕೊಂಡು ಬರುವಂತೆ ನನ್ನ ಕಳುಹಿದ್ದಾರೆ."

"ಇಂದು ನನಗೆ ಬರಲಿಕ್ಕೆ ಆಗುವುದಿಲ್ಲವೆಂದು ನಿಮ್ಮ ಅಮ್ಮಾಜಿಯವರಿಗೆ ಹೇಳು."

ಸ್ವಲ್ಪ ಕಾಲ ಓಲಗದಾಕೆಯು ಮೌನಿಯಾಗಿ ಇದ್ದಿತು. ಪದ್ಮರಾಜ ಕುಗ್ಗಿದ ಧ್ವನಿಯಲ್ಲಿ ಕೇಳಿದ: "ಕಮಲಾಂಬಿಕೆ ಶಾಂತಿ ಕುಟೀರಕ್ಕೆ ಹೋಗುವಳೆ?"

ರತ್ನಾಂಬಿಕೆಯು ಒಂದು ಬಗೆಯ ಕೆಣಕು ನೋಟದಿಂದ ನೋಡುತ್ತ ಹೇಳಿದಳು, "ಏಕೆ, ಹೋಗಬಾರದೇನು ? ರಾಜಶೇಖರನೊಂದಿಗೆ ಕಮಲಾಂಬಿಕೆಯದು ತುಂಬ ಸಲುಗೆ. ಎಂತಲೆ ಅವಳು ಆಗಾಗ ಅವರಲ್ಲಿಗೆ ಹೋಗಿ ಬರುತ್ತಿರುತ್ತಾಳೆ."

ತಟ್ಟನೆ ಪದ್ಮರಾಜನ ಮುಖದಲ್ಲಿ ನೆತ್ತರು ಉಕ್ಕಿದಂತಾಯಿತು. ತೆರೆದಿದ್ದ ಕಣ್ಣುಗಳು ಕೆಂಡವನ್ನು ಕಾರುತ್ತಿರುವಂತೆ ತೋರಿದವು.

"ರತ್ನಾ, ನಾನೀಗ ಹೊರಡಲೇಬೇಕು. ತುಂಬ ಅವಶ್ಯಕ ಕಾರ್ಯಗಳಿವೆ."

ಒಪ್ಪಿಗೆಯ ಹಾದಿಯನ್ನು ಕೂಡ ಕಾಯದೆ ಪದ್ಮರಾಜನು ದಡದಡನೆ ಅಡಿಯಿಡುತ್ತ ಅಲ್ಲಿಂದ ಹೊರಟುಬಿಟ್ಟ. ರತ್ನಾಂಬಿಕೆಯು ಉತ್ಸಾಹಭಾವದಿಂದ ಅವನು ಹೋಗುವುದನ್ನು ನೋಡುತ್ತ ಕುಳಿತಲ್ಲಿಯೇ ಕುಳಿತಿದ್ದಳು.

*

ಸಾಳುವ ನರಸಿಂಹನಾಯಕನಿಗೆ ನಿತ್ಯದಂತೆ ನಿದ್ದೆ ಬರಲಿಲ್ಲ. ಹಾಸಿಗೆಯಲ್ಲಿ [illegible] ಬೇಸರ, ಮೈಮೇಲೆ [illegible] ಸಮಾರಂಭ [illegible]. [illegible] ಮೇಲೆ ಹೊತ್ತುಕೊಂಡು [illegible]

ಯಿ ದೆಯೆಂದು ಅವನ ಸಂಪೂರ್ಣವಾದ ತಿಳುವಳಿಕೆಯಿದ್ದಿತು.

ಹಗಲು ಇನ್ನು ಮೂರು ಗಳಿಗೆಯಷ್ಟು ಮಾತ್ರ ಉಳಿದಿದ್ದಿತು. ಆಗ ಈಶ್ವರನಾಯಕನು ನರಸಿಂಹನಾಯಕನ ಮನೆಗೆ ಬಂದ, ಸಂತೋಷದ ಸಂಗತಿಯೊಂದನ್ನು ಹೇಳುವುದಿದೆ ಎಂದ.

"ಅದೇನು? ಮತ್ತೆಂತಹ ಸಂತೋಷದ ಸಂಗತಿ?"

"ಅದೆಂದರೆ... ಹೀಗೆ... ಅಂ... ಪದ್ಮರಾಯರು ತಮ್ಮನ್ನು... ಮಾವಂದಿರನ್ನಾಗಿ ಮಾಡಿಕೊಳ್ಳಬೇಕೆಂದು ಅಪೇಕ್ಷಿಸುತ್ತಾರೆ."

"ಪದ್ಮರಾಯರ ಮನಸ್ಸಿನ ಸ್ಥಿತಿಯು ಪಾಸವೆ ನನಗೂ ಸ್ವಲ್ಪ ತಗುಲಿದೆ. ಆದರೆ ನಿರುಪಾಯ, ಪದ್ಮರಾಯರು ಈ ಅಪೇಕ್ಷೆಯನ್ನು ಪೂರ್ಣ ಮಾಡುವುದು ನನ್ನ ಕಡೆಯಿಂದ ಸಾಧ್ಯವಾಗುವಂತೆ ಇಲ್ಲ."

"ಹೀಗೆ ತಾವು ಹೇಳಿದರೆ, ಪದ್ಮರಾಯರು ಕೇಳಲಿಕ್ಕಿಲ್ಲವೆಂದು ನನಗೆ ಎನಿಸುತ್ತಿದೆ."

"ಪದ್ಮರಾಯರು ತಮ್ಮ ಚಿಕ್ಕಪ್ಪ ವಿರೂಪಾಕ್ಷರಾಯನ ಅಡಿಯನ್ನು ತುಳಿಯಲಾರರೆಂದು ನನ್ನ ನಂಬುಗೆ."

"ಸಿಂಹಾಸನಾರೋಹಣದ ಮರುದಿನವೇ ಈ ಮದುವೆಯ ಸಮಾರಂಭವನ್ನು ನೆರವೇರಿಸಿಬಿಡಬೇಕೆಂದು ಪದ್ಮರಾಯರ ಮನದ ಆಶೆ."

"ಸರಿ, ಅವರ ಮನದ ಆಶೆ ಹಾಗೆ ಇರಬಹುದು. ಆದರೆ ಎಲ್ಲರ ಎಲ್ಲ ಮನದಾಸೆಗಳೂ ಯಾವಾಗಲೂ ಪೂರ್ಣವಾಗಲಾರವೆಂಬುದನ್ನು ಪದ್ಮರಾಯರೇನೂ ಅರಿಯದವರಲ್ಲ. ಈಶ್ವರ ನಾಯಕರೆ, ದಯೆಯಿಟ್ಟು ನೀವು ಪದ್ಮರಾಯರಿಗೆ ಹೇಳಿ, 'ಕಮಲಾಂಬಿಕೆಯನ್ನು ತುಳುವ ನರಸಿಂಹನಿಗೆ ಕೊಡಬೇಕೆಂದು ನಿರ್ಣಯವಾಗಿ ಬಿಟ್ಟಿದೆ ಎಂದು."

"ಈ ವಿಷಯವನ್ನು ಅವರು ಅರಿಯದೆ ಇಲ್ಲವೆಂದು ತೋರುತ್ತದೆ."

"ಅರಿತೂ ಅರಿತೂ ಆಶೆಪಡುತ್ತಿರುವರೆ?"

"ಅಹುದು, ಅಹುದು."

ನರಸಿಂಹನಾಯಕ ತನ್ನ [illegible] ಹತ್ತಿಕ್ಕಿ ಹೇಳಿದ: "ಇರಲಿ. ಈ ವಿಷಯವನ್ನು ಆ ಮೇಲೆ ಪದ್ಮರಾಯನೊಂದಿಗೆ ನಾನು ಮಾತನಾಡಿ ನಿರ್ಣಯಿಸಿಕೊಳ್ಳುತ್ತೇನೆ."

ಈಶ್ವರನಾಯಕ ಬೀಳ್ಕೊಂಡು ನಡೆದ. ನರಸಿಂಹನಾಯಕ ಬಾಡಿ ಬತ್ತಿದ ಮೊಗದಿಂದ ಬಿಸಿಯಾದ ನಿಟ್ಟುಸಿರೊಂದನ್ನು ಸುಯ್ದು ತನ್ನೊಳಗೆ ತಾನೆ ಅಂದುಕೊಂಡನು, 'ತಾಯಿ ಭುವನೇಶ್ವರೀ, ಪದ್ಮರಾಯನಿಗೆ ಒಳ್ಳೆಯ ಮನಸ್ಸನ್ನು ಕೊಡು. ನಿನ್ನ ಕನ್ನಡ ಸಾಮ್ರಾಜ್ಯಕ್ಕೆ ಒಳ್ಳೆಯ ಕಾಲವು ಸಮೀಪಿಸುವಂತೆ ಮಾಡು."

*

ಕೃಷ್ಣಪಕ್ಷದ ದಶಮಿಯ ರಾತ್ರಿಯು ಒಂದೂವರೆ ಪ್ರಹರ ಕಳೆದುಹೋಗಿದೆ. ರಾಜಶೇಖರನು ವಿಶ್ರಾಂತಿ ಭವನದಲ್ಲಿ ಓಲೆಗರಿಯ ಹೊತ್ತಿಗೆಯನ್ನು ಓದುವುದರಲ್ಲಿ ಮೈಮರೆತಿರುವನು. ಇದ್ದಕ್ಕಿದ್ದ ಹಾಗೆಯೆ ಹೊರಗಿನ ಕತ್ತಲೆಯ ಹಾಳೆಯನ್ನೆ ಕತ್ತರಿಸಿ ಮಾಡಿದಂತಹ ಕಪ್ಪುಬಣ್ಣದ ತೆರೆಯನ್ನು ಮುಸುಕು ಹಾಕಿಕೊಂಡಿದ್ದ ವ್ಯಕ್ತಿಯೊಂದು ನಿಧಾನವಾಗಿ ಹೆಜ್ಜೆಯಿಕ್ಕುತ್ತ ರಾಜಶೇಖರನು ಕುಳಿತಲ್ಲಿಗೆ ಬಂದಿತು. ಕದಲದ ಧೈರ್ಯದೊಂದಿಗೆ ಅವನು ಕೇಳಿದನು: "ಯಾರು ನೀವು?"

ಹೊತ್ತಿದ್ದ ತೆರೆಯನ್ನು ತೆಗೆದೊಗೆದು ಸಾಹಸ, ಸಂದೇಹಭಾವಗಳ ಬೆರಕೆಯ ಮುಗುಳುನಗೆಯೊಂದಿಗೆ ರತ್ನಾಂಬಿಕೆ ನಿಂತುಕೊಂಡಳು.

"ನೀನು ಅಮ್ಮಾಜೀ, ಇಂತಹ ವೇಳೆಯಲ್ಲಿ ಬರುವುದೇ?"

"ಕಾರ್ಯಕ್ಕೆ ತಕ್ಕುದಾದ ವೇಳೆಯಲ್ಲಿ ಬರಬೇಕಲ್ಲವೇ?"

"ಅದೇನು ನಿಮ್ಮ ಕಾರ್ಯ?"

"ನನಗೆ ವಿಜಯನಗರದ ಮಹಾರಾಣಿಯಾಗುವುದು ಬೇಕಾಗಿದೆ."

"ಇದರಲ್ಲಿ ನಾನು ಮಾಡಬೇಕಾದುದೇನು? ನಿಮ್ಮ ವಿಷಯವಾಗಿ ನಾನು ಪದ್ಮರಾಯನಿಗೆ ಏನಾದರೂ ಹೇಳಬೇಕೆನ್ನುತ್ತೀರೇನು?"

"ಪದ್ಮರಾಯನಿಂದ ನನಗೆ ಆಗಬೇಕಾದುದು [illegible]."

"ಹೀಗೆಂದರೆ ಏನು? ವಿಜಯನಗರಕ್ಕೆ ಮಹಾರಾಜನಾಗುವವನು ಪದ್ಮರಾಯನು. ಮಹಾರಾಣಿಯಾಗಬೇಕೆನ್ನುವವರಿಗೆ ಮಹಾರಾಜನಿಂದ ಏನೂ ಆಗಬೇಕಾದುದು ಇಲ್ಲವೆಂದರೆ, ಇದರ ಅರ್ಥವೇನು?"

ಒಂದೆರಡು ನಿಮಿಷ ತಡೆದು ರತ್ನಾಂಬಿಕೆ ಹೇಳಿದಳು, "ನನ್ನದೊಂದು ಸಂಕಲ್ಪವಿದೆ. ವಿರೂಪಾಕ್ಷರಾಯನ ಕೊಲೆಯನ್ನು ಯಾರು ಮಾಡಿದ್ದಾರೋ, ಅವರದೇ ಕೈಯನ್ನು ಹಿಡಿಯಬೇಕೆಂಬುದು."

"ನನ್ನ ಸಂಕಲ್ಪದಿಂದ ನಾನು ಎಂದೂ ಚ್ಯುತನಾಗುವಂತೆ ಇಲ್ಲ. ಎರಡೂ ಅಸಂಭವನೀಯವಾದ ಸಂಗತಿಗಳು. ನಾನು ಸಿಂಹಾಸನವನ್ನು ಏರಲಿಕ್ಕೂ ಒಲ್ಲೆ, ಸಂಸಾರಿಯಾಗಲಿಕ್ಕೂ ಒಲ್ಲೆ."

ರತ್ನಾಂಬಿಕೆಯ ಬಣ್ಣದ ಮಾತುಗಳಾಗಲಿ ಬೆಡಗಿನ ಹಾವಭಾವಗಳಾಗಲಿ ರಾಜಶೇಖರನ ಮನ ಸೋಲಿಸಲಿಲ್ಲ: ಅವನ ನಿಶ್ಚಲತೆ ಅವಳನ್ನು ಕಂಗೆಡಿಸಿತು. ಶಾಂತಿ ಕುಟೀರದಿಂದ ಹೊರಡುತ್ತ ಅವಳು ಗುಡುಗಿದಳು. "ನನ್ನ ಪ್ರತಿಜ್ಞೆಯ ಪೂರ್ಣತೆಯನ್ನು ನಿಮ್ಮಿಂದಲೆ ಮಾಡಿಕೊಳ್ಳದಿದ್ದರೆ, ನಾನು ದೇವಣ್ಣನಾಯಕರ ಮಗಳೇ ಅಲ್ಲ!"

■

ಮರುದಿನ ಬೆಳಗು ದೇವ ದರ್ಶನದಿಂದ ಅರಮನೆಗೆ ಹಿಂತಿರುಗಿದ ಪದ್ಮರಾಯನ ಮನಸ್ಸು ಮತ್ತೆ ಕೋಲಾಹಲದ ಕಣವಾಯಿತು. 'ಕಮಲಾಂಬಿಕೆಯನ್ನು ಮರೆತುಬಿಡಲೆ? ಮರೆಯುವುದಕ್ಕೆ ನನ್ನಿಂದ ಆಗಬಹುದೆ?... ರತ್ನಾಂಬಿಕೆ ನನ್ನಲ್ಲಿ ಎಷ್ಟೋ ಮಮತೆಯನ್ನು ಇಟ್ಟುಕೊಂಡು ಬಂದಿದ್ದಾಳೆ. ಆಕೆಯ ಮಮತೆಯ ಅವಜ್ಞೆಯನ್ನು ಮಾಡಿ ನಾನಾದರೂ ಅವಳನ್ನು ಏತಕ್ಕಾಗಿ ಮರುಗುತ್ತಿರುವಂತೆ ಮಾಡಬೇಕು?" ...ಕಮಲಾಂಬಿಕೆ ಶಾಂತಿ ಕುಟೀರಕ್ಕೆ ಆಗಾಗ ಹೋಗುತ್ತಿರುವಳಂತಲ್ಲ. ಅಣ್ಣಾಜಿಯವರ ಶುಭ್ರ ಚರಿತ್ರದಲ್ಲಿಯೂ ಕೊಳೆಯ ಸಂದೇಹವೆ ನನಗೆ?'

ಆಗ ಈಶ್ವರನಾಯಕನು ಬಂದು ಮೆಲ್ಲಗೆ ಹೇಳಿದ: "ನಿನ್ನೆಯ ಇಳಿ ಹೊತ್ತಿನಲ್ಲಿ ನಾನು ನರಸಿಂಹನಾಯಕನಲ್ಲಿಗೆ ಹೋಗಿದ್ದೆ. ತುಳುವ ನರಸಿಂಹನಿಗೆ ಕಮಲಾಂಬಿಕೆಯನ್ನು ಕೊಡಬೇಕೆಂದು ಗೊತ್ತಾಗಿದ್ದ ಮಾತು ಸಂಪೂರ್ಣ ಸುಳ್ಳು!"

ಆಶೆ – ಆತುರ – ಆನಂದದ ಭರದಲ್ಲಿ ಪದ್ಮರಾಯನು ಕೇಳಿದನು: "ಏನು? ಸುಳ್ಳೇನು ಆ ಮಾತು? ಹಾಗಾದರೆ ಕಮಲಾಂಬಿಕೆ ನನಗೆ ಸಿಕ್ಕುವಳೆ? ನನ್ನ ಕಮಲಾಂಬಿಕೆ ನಿಜವಾಗಿಯೂ ನನ್ನವಳಾಗುವಳೆ?"

"ನರಸಿಂಹನಾಯಕನು ಎಂತಹ ಪಾತಾಳಯಂತ್ರಿಯಿದ್ದಾನೆಂಬುದು ನಿಮಗೆ ಅರಿಯದ ವಿಷಯವಲ್ಲ. ನೀವು ಸಿಂಹಾಸನವನ್ನು ಏರಲಿರುವುದು ಆತನಿಗೆ ಇಷ್ಟವೇ ಇಲ್ಲ."

"ಹಾಗಾದರೆ......! ಯಾರು ಏರಬೇಕೆಂದಿದೆ ಇತನ ಇಷ್ಟ?"

"ಇನ್ನು ಯಾರು? ಆತನ ಪೂರ್ಣ ಪಕ್ಷಪಾತವು ರಾಜಶೇಖರನಲ್ಲಿ. ಆ ಸೋಗಿನ ಸಾಧುವೇ ಸಿಂಹಾಸನವನ್ನೇರಬೇಕೆಂಬುದು ಅವನ ಅಪೇಕ್ಷೆ. ರಾಜಶೇಖರನು ದೊರೆಯಾಗಲಿಕ್ಕೆ ಸಮ್ಮತಿಸದಿದ್ದಲ್ಲಿ ನರಸಿಂಹನಾಯಕನು ಆತನಿಗೆ ಕಮಲಾಂಬಿಕೆಯನ್ನು ಕೊಡುವುದಿಲ್ಲವಂತೆ."

ಪದ್ಮರಾಯನ ಆಗಿನ ರೋಷದ ಪರಿಣಾಮ ಆತನ ಕಚ್ಚಿಕೊಂಡ ಕೆಳದುಟಿಯ ಮೇಲೆ ಆಯಿತು. ಮುಷ್ಟಿಯಿಂದ ಚಚ್ಚಿಕೊಂಡ ಮುಂದಲೆಯ ಮೇಲೆ ಆಯಿತು. ಅವನ ಮುಖದಿಂದ ಉರಿಯ ನುಡಿಯೊಂದು ಹೊರಟಿತು: "ಆಗಲಿ, ನರಸಿಂಹನಾಯಕನನ್ನು ಒಂದು ಸಲ ಕೊನೆಯವರೆಗೆ ಪರೀಕ್ಷಿಸಿ ಬರುತ್ತೇನೆ. ಕಮಲಾಂಬಿಕೆಯನ್ನು ನನಗೆ ಕೊಟ್ಟೇತೀರಬೇಕೆಂದು ಈಗಲೆ ಆತನ ಕಡೆಗೆ ಓಲೆಯೊಂದನ್ನು ಬರೆದು ಕಳುಹುತ್ತೇನೆ."

ಅಂದಿನ ಸಂಜೆ ಪದ್ಮರಾಯ ಅಣ್ಣಾಜಿಯ ಕರೆಯ ಮೇರೆಗೆ ಶಾಂತಿ ಕುಟೀರಕ್ಕೆ ಬಂದ. ರಾಜಶೇಖರ ನೇರವಾಗಿ ವಿಷಯಕ್ಕೆ ಧುಮುಕಿದ. "ನರಸಿಂಹನಾಯಕರು, ನಾರಾಯಣ ಪಂಡಿತರ ಮುಖಾಂತರವಾಗಿ ಒಂದು ಮಾತನ್ನು ಹೇಳಿಕಳುಹಿದ್ದಾರೆ. ನೀನೇನೊ ಅವರ ಮಗಳನ್ನು ಮದುವೆಯಾಗಲಿಕ್ಕೆ ಅಪೇಕ್ಷಿಸುತ್ತೀಯಂತೆ.



M. K. Publicity

ಅಹುದೇನು?"

"ಅಪೇಕ್ಷಿಸುತ್ತಿರಬಹುದು, ಅದರಲ್ಲಿ ತಪ್ಪೇನಿದೆ ?"

"ಇನ್ನೇನೂ ಇಲ್ಲ, ಕಮಲಾಂಬಿಕೆಯ ಮದುವೆ ಅರ್ಧಮರ್ಧ ಆಗಿಬಿಟ್ಟಂತಿದೆ."

"ಇರಬಹುದು, ಸರಿ. ಅರ್ಧ ಮರ್ಧ ಮದುವೆಯೆಂದರೆ ಸಂಪೂರ್ಣವೇನೂ ಆದಂತಾಗಲಿಲ್ಲವಲ್ಲ?"

"ಹಾಗಲ್ಲ ಪೆದ್ದಣ್ಣಾ, ಕಮಲಾಂಬಿಕೆ ತುಳುವ ನರಸಿಂಹರು ಒಂದೇ ಮನೆಯಲ್ಲಿ ಬೆಳೆದವರು, ಎಳೆಯತನದಿಂದಲೂ ಅವರಲ್ಲಿ ಪ್ರೀತಿ ಬೆಳೆದು ಬಂದಿದೆ."

"ಬಂದಿದ್ದೀತು, ಅದನ್ನು ತೆಗೆದುಕೊಂಡು ನನ್ನಗೆ ಏನು ಮಾಡಬೇಕಾಗಿದೆ?"

ಪೆದ್ದರಾಯನ ಮಾತಿನ ಹೊಸ ಹೊಲಬನ್ನು ಕಂಡು ರಾಜಶೇಖರನಿಗೆ ಆಶ್ಚರ್ಯವಾಯಿತು, ತಮ್ಮನ ಮುಖವನ್ನು ನಿಟ್ಟಿಸಿ ನೋಡಿದ, ಅಹಂಕಾರ–ಔದ್ಧತ್ಯಗಳು ಅಲ್ಲಿ ನೆಲೆ ನಿಂತಿದ್ದವು. ನೋಡಿ ಅವನ ಎದೆ ದಡದಡಿಸಿತು. ಕಣ್ಣೆದುರು ಅದೇತಕ್ಕೊ ತಾನು ಕೊಲೆ ಮಾಡಿದ್ದ ವಿರೂಪಾಕ್ಷರಾಯನ ಮೂರ್ತಿಯು ಒಮ್ಮೆಲೆ ಬಂದು ಹೋಯಿತು, ರಾಜಶೇಖರನ ಧ್ವನಿಯಲ್ಲಿ ನಡುವೆ ಬಿರುಸಿದ್ದಿತು, "ನೀನು ಕಮಲಾಂಬಿಕೆಯ ಆಶೆಯನ್ನು ಬಿಟ್ಟುಬಿಡಬೇಕು."

"ಅದೇತಕ್ಕಾಗಿ ಬಿಟ್ಟು ಕೊಡಬೇಕು ?"

"ಆಕೆ ನಿನ್ನವಳಲ್ಲವೆಂದು ! ಇನ್ನೊಬ್ಬರ ಒಡವೆಯನ್ನು ಬಯಸುವುದು ಅಧರ್ಮವೆಂದು, ಇಷ್ಟೇ ಅಲ್ಲದೆ ನರಸಿಂಹನಾಯಕರ ಮನಸ್ಸನ್ನು ನೋಯಿಸಿ, ಸಾಮ್ರಾಜ್ಯದ ನಿಜವಾದ ಹಿತೈಷಿಯೊಬ್ಬನನ್ನು ಅಸಂತುಷ್ಟನನ್ನಾಗಿ ಮಾಡಬಾರದೆಂದು."

"ನನಗೆ ಗೊತ್ತಿದೆ ಅಣ್ಣಾಜಿ, ಕಮಲಾಂಬಿಕೆ ಇನ್ನೊಬ್ಬರ ಒಡವೆಯಲ್ಲ. ಆಕೆ ನನಗಾಗಿಯೆ, ವಿಜಯನಗರದ ಮಹಾರಾಣಿಯ ಪದಕ್ಕಾಗಿಯೆ ಹುಟ್ಟಿ ಬಂದವಳು. ಇನ್ನು, ಸಾಮ್ರಾಜ್ಯದ ಹಿತಾಹಿತಗಳ ಹೊಣೆಗಾರಿಕೆಯು ನನಗೂ ಗೊತ್ತಿದೆಯಲ್ಲವೆ ?"

ಪೆದ್ದರಾಯ ಅಣ್ಣಾಜಿಯ ಅಪ್ಪಣೆಯನ್ನು ಮರೆದೆಯೂ ತಡಮಾಡದೆ ಹೊರನಡೆದು ಬಿಟ್ಟ. ರಾಜಶೇಖರನು ನಿಟ್ಟುಸಿರುಗಳೊಂದಿಗೆ ತನ್ನ ಕಳವಳವನ್ನು ಹೊರಕ್ಕೆ ಹಾಕುತ್ತ ಎಷ್ಟೋ ಹೊತ್ತಿನ ವರೆಗೆ ಕುಳಿತಲ್ಲಿಯೆ ಕುಳಿತು ಬಿಟ್ಟಿದ್ದ. ಆಗ ಆತನ ಕರುಳನ್ನು ತುಳಿಯುತ್ತಿದ್ದ ವ್ಯಕ್ತಿಗಳೆಂದರೆ ಇಬ್ಬರು; ರತ್ನಾಂಬಿಕೆ, ಪೆದ್ದರಾಯ. ಕೊನೆಗೆ ಬಳಲಿದ ಮನಸ್ಸಿನವನಾಗಿ ಅವನು ಮೆಲ್ಲಗಿನ ಧ್ವನಿಯಲ್ಲಿ ಉಪನಿಷತ್ತಿನ ಶಾಂತಿ ಮಂತ್ರವೊಂದನ್ನು ಹೇಳಲು ತೊಡಗಲು ಮಾಡಿದ.

*

ಪೆದ್ದರಾಯನ ಒತ್ತಾಯದ ಓಲೆ ಬಂದಾಗಿನಿಂದಲೂ ನರಸಿಂಹ ನಾಯಕನ ಯೋಚನೆಯು ಘನಕ್ಕಿಟ್ಟಿತು. ಎಂತೆಂತಹ ತೊಡಕು ತೊಡಕಿನ ರಾಜಕಾರ್ಯದಲ್ಲೂ ಕೂಡಲೆ ದಾರಿಯನ್ನು ಕಂಡುಹಿಡಿಯುತ್ತಿದ್ದ ಆತನಿಗೆ, ಈಗ ತಾನು ಸಾಗಬೇಕಾದ ದಾರಿಯೆ ಕಾಣಲೊಲ್ಲದಾಯಿತು. ನರಸಿಂಹನಾಯಕನ ಕಣ್ಣೆದುರು, ಒಮ್ಮೆ ಕಮಲಾಂಬಿಕೆಯ ನಿಸ್ಸೀಮವಾದ ಪ್ರೇಮಮಯ ಹೃದಯವು ಬಂದು ನಿಲ್ಲುವುದು, ಇನ್ನೊಮ್ಮೆ ವಿಜಯನಗರದ ಭವ್ಯವಾದ ಸಾಮ್ರಾಜ್ಯವು ಬಂದು ನಿಲ್ಲುವುದು. ಎರಡೂ ಬಂದು ಬಂದು, 'ನಮ್ಮನ್ನು ಏನು ಮಾಡುತ್ತೀಯೆ ?' ಎಂದು ದೈನ್ಯದಿಂದ ಕೇಳುತ್ತಿದ್ದವು.

ಈ ಹಂತದಲ್ಲಿ ನಾರಾಯಣ ಪಂಡಿತರು ನರಸಿಂಹನಾಯಕನಿಗೆ ಹಾದಿ ತೋರಿಸಿದರು. ಚಂದ್ರಗಿರಿ ಪರಿಸರದ ಅಶಾಂತ ಪರಿಸ್ಥಿತಿಯು ನೆಪ ಮಾಡಿಕೊಂಡು ಸಿಂಹಾಸನಾರೋಹಣದ ದಾರಿಯನ್ನು ನೋಡದೆ ಕೂಡಲೆ ಆತ ರಾಜಧಾನಿಯಿಂದ ಹೊರಹೋಗಬೇಕೆಂದು ಅವರ ಸೂಚನೆಯಾಗಿತ್ತು. ಅದನ್ನು ಭಾರವಾದ ಮನಸ್ಸಿನಿಂದ ಒಪ್ಪಿದ ಆತ ನುಡಿದ: "ಪಂಡಿತರೆ, ನೀವು ಹೊಣೆಯನ್ನು ಹೊತ್ತು ನಿಂತರೆ ನನಗೆ ಯಾವ ಚಿಂತೆಯೂ ಇಲ್ಲ. ಕೂಡಲೆ ಹೊರಟುಬಿಡುವೆನು. ನಾನು ಮರಳಿ ಬರುವವರೆಗೆ ಅಣ್ಣಾಜಿಯವರ ದಕ್ಷತೆ ರಾಜಕಾರ್ಯದ ಕಡೆಗೆ ತೊಡಗಿಕೊಳ್ಳುವಂತೆ ಮಾಡಬೇಕು ನೀವು. ಏತಕ್ಕೆಂದರೆ ಪೆದ್ದರಾಯನ

ಮನಸ್ಸಿನ ತೂಕವನ್ನು ಸರಿಯಾಗಿಸಲಿಕ್ಕೆ ಅಣ್ಣಾಜಿಯವರ ಆವಶ್ಯಕತೆಯು ಇಲ್ಲವೆ?"

"ಅದನ್ನು ನಾನು ಮಾಡುತ್ತೇನೆ."

ನರಸಿಂಹನಾಯಕನು ಇಂದಿನ ಬೆಳಗಿನಲ್ಲಿಯೆ ಚಂದ್ರಗಿರಿಗೆ ಕಮಲಾಂಬಿಕೆಯೊಂದಿಗೆ ಹೊರಟು ಹೋದುದನ್ನು ಕೇಳಿದಾಗಿನಿಂದ ಪೆದ್ದರಾಯನ ಮನಸ್ಸಿಗೆ ವಿಜಯನಗರವೆಲ್ಲವೂ ಬರಿದು ಬರಿದಾದಂತೆ ಕಂಡಿತು, ಬೆಳಕು–ಗಾಳಿಗಳು ಕೂಡ ಔದಾಸೀನ್ಯವನ್ನೆ ಹೊತ್ತುಕೊಂಡು ಬರುತ್ತಿರುವಂತೆ ಆತನಿಗೆನಿಸಿತು.

ಈಶ್ವರನಾಯಕ ಮತ್ತೆ ಪೆದ್ದರಾಯನ ತಲೆಯಲ್ಲಿ ವಿಷಬೀಜ ಬಿತ್ತಿದ. ನರಸಿಂಹನಾಯಕ ಚಂದ್ರಗಿರಿಗೆ ಬಂಡುಗಾರರನ್ನು ಅಡಗಿಸಲಿಕ್ಕಷ್ಟೆ ಹೋಗಬೇಕಾಗಿದ್ದರೆ, ಜೊತೆಗೆ ಕಮಲಾಂಬಿಕೆಯನ್ನು ಏತಕ್ಕಾಗಿ ಕರೆದುಕೊಂಡು ಹೋಗಬೇಕು? ರಾಜಶೇಖರನೇ ನರಸಿಂಹನಾಯಕನಿಗೆ ಹೀಗೆ ಹೋಗಲು ಸೂಚಿಸಿರುವನೆಂದು ಈಶ್ವರನು ಪ್ರತಿಪಾದಿಸಿದನು, ಕಮಲಾಂಬಿಕೆಯ ಮದುವೆ ರಾಜಶೇಖರನೊಡನೆ ನಡೆಯುವುದೆಂದೂ ಅವನು ಊಹಿಸಿದನು.

ಪೆದ್ದರಾಯನು ಅವಡುಗಚ್ಚಿ ಕೇಳಿದನು, "ರಾಜ್ಯವು ತನಗೆ ಬೇಡವೆಂದು, ವೈರಾಗ್ಯದ ಮಾತುಗಳ ಮಳೆಯನ್ನೇ ಕರೆದ ಅಣ್ಣಾಜಿಗೆ ಮತ್ತೆ ಸಿಂಹಾಸನದ ಲೋಭವುಂಟಾಯಿತೆ?"

"ಸಂಗಾತ್ ಸಂಜಾಯತೇ ಕಾಮಃ! ಹೆಣ್ಣಿನ ಬೆನ್ನನ್ನು ಹತ್ತಿದವನು ಹೊನ್ನು–ಮಣ್ಣುಗಳಿಗೆ ಆಸೆಪಡುವುದರಲ್ಲಿ ಆಶ್ಚರ್ಯವೇನು?"

"ಈಶ್ವರಾ, ನೋಡೋಣ, ಈ ಪೆದ್ದರಾಯನ ಕೈಯ ಹಿಡುಗತ್ತಿಯನ್ನು ವಿರೋಧಿಸಿ, ಯಾರು ಯಾರು ಹೇಗೆ ಬದುಕಿಕೊಂಡಿರುತ್ತಾರೊ, ಪಟ್ಟಾಭಿಷೇಕದ ಗಲಾಟೆ ಒಂದು ಸಲ ಮುಗಿದುಹೋಗಲಿ, ಆ ಮೇಲೆ ನನ್ನ ಕೈಯ ಗುಣವನ್ನು ಒಬ್ಬೊಬ್ಬರಿಗೆ ತೋರಿಸುತ್ತೇನೆ!"

ಮಾತುಗಳು ಸಿಡಿಲಿನ ತುಣುಕುಗಳಾಗಿದ್ದವಾದರೂ, ಪೆದ್ದರಾಯನ ದೇಹದ ಶಕ್ತಿಯನ್ನು ಒಳಗೊಳಗೆಯೆ ಯಾರೋ ಹೀರಿಕೊಂಡಂತೆ ಆಯಿತು.

•

ಇಂದು ಸಿಂಹಾಸನಾರೋಹಣದ ದಿವಸ. ವಿಜಯನಗರದ ವೈಭವ ಲಕ್ಷ್ಮಿಯು ನವವಧು ವಿನಂತೆ ಶೃಂಗರಿಸಿಕೊಂಡು ನಿಂತಿದ್ದಾಳೆ. ರಾಜ ಬೀದಿಗಳಲ್ಲಿ ಎಲ್ಲೆಲ್ಲಿಯೂ ಕನಕ ತೋರಣಗಳೂ ತಳಿರು ತೋರಣಗಳೂ ತೊನೆದು ತೂಗುತ್ತಿವೆ. ಮುಗಿಲಿಗೆ ಮುತ್ತು ಕೊಡಲು ಹೊರಟಂತೆ, ನಿಡಿದಾಗಿ ನಿಂತುಕೊಂಡಿದ್ದ ಧ್ವಜ ಕೇತನ ದಂಡ ಗಳ ಮೇಲಿನ ವಿವಿಧ ವರ್ಣದ ಪಟಗಳು ಗಾಳಿಗೆ ಪಟಪಟಿಸುತ್ತಿವೆ. ಬೀದಿಗಳ ಇಕ್ಕಡಿಯ ಸೌಧಾ ಗ್ರಹವಲ್ಲಿಯೂ ಕಲಶ ಕನ್ನಡಿಗಳಿಂದ ಕೂಡಿದ್ದ ಕಿರುಗುಡಿಗಳು ನಗೆ ಮೊಗದಿಂದ ನಿಂತುಕೊಂಡಿವೆ. ಅರಮನೆಯ ಹೆಬ್ಬಾಗಿಲ ಮುಂದಣ ಬಯಲಲ್ಲಿ ವಿಜಯನಗರ ಸಾಮ್ರಾಜ್ಯಾಂಕಿತವಾದ ವರಾಹ ಧ್ವಜವು, ಎಲ್ಲಕ್ಕೂ ಎತ್ತರವಾಗಿ ನೀಡಿಕೊಂಡು ನಿಂತಿದೆ. ಧ್ವಜದ ಎಡಕ್ಕೆ ಬಲಕ್ಕೆ ಪಟ್ಟದ ಆನೆ-ಕುದುರೆಗಳು, ಸಾಮ್ರಾಜ್ಯದ ಸಂಪತ್ತಿಯನ್ನು ಪ್ರದರ್ಶಿಸುತ್ತಿರುವ ಅಲಂಕಾರಗಳಿಂದ ಕೂಡಿ, ರಾಜಗಾಂಭೀರ್ಯದಿಂದ ನಿಂತುಕೊಂಡಿವೆ. ಅವು ಗಳನ್ನು ಬಳಸಿಕೊಂಡು, ಕಾಲಾಳುಗಳು ಶಸ್ತ್ರ ಧಾರಿಗಳಾಗಿ ಪದ್ಮವ್ಯೂಹದಲ್ಲಿ ನಿಂತುಕೊಂಡಿದ್ದಾರೆ.

ಮೂರ್ಧಾಭಿಷೇಕಕ್ಕೆ ಇನ್ನು ಒಂದೇ ಒಂದು ಗಳಿಗೆಯ ಅವಕಾಶವಿರುವಾಗ ಈಶ್ವರನಾಯ-ಕನು ಓಲಗ ಶಾಲೆಯೊಳಕ್ಕೆ ಬಂದು, ಎಲ್ಲ ವ್ಯವಸ್ಥೆಯನ್ನು ಕಣ್ಣಿಟ್ಟು ನೋಡುತ್ತ ತಿರುಗಾಡಲು ತೊಡಗಿದನು. ಆಗಲೆ ರಾಜಶೇಖರನು ಓಲಗಸಾಲೆಯೊಳಗೆ ಪ್ರವೇಶಿಸಿದನು. ಕೂಡಲೆ ಸಭೆಗೆ ಸಭೆಯೆ ಒಮ್ಮೆಲೆ ಕೂಗಿತು: "ಜಯ ರಾಜಶೇಖರ ಮಹಾರಾಯ, 'ಜಯ ಕರ್ನಾಟಕ ರಾಜ್ಯಲಕ್ಷ್ಮಿ' 'ಜಯ ಭುವನೇಶ್ವರಿ' ಇದನ್ನು ಕೇಳಿ ಈಶ್ವರನಾಯಕನ ಎದೆಯು ತತ್ತರಗೊಂಡಿತು. ಆದರೂ ಓಲಗಕ್ಕೆ ಉಚಿತ ಆದರವನ್ನು ತೋರಿಸುತ್ತ ರಾಜಶೇಖರನನ್ನು ಬರಮಾಡಿಕೊಂಡು, ಸಿಂಹಾಸನದ ಬಲಗಡೆಗಿರುವ ಮೊದಲನೆಯ ಆಸನದಲ್ಲಿ ಕುಳ್ಳಿರಿಸಿದನು.

ಸ್ತುತಿ ಪಾಠಕರ ಉಗ್ಗಡೆಯ ಮಧ್ಯೆ ಪೆದ್ದರಾಯ ಗಂಭೀರವಾಗಿ ಅಡಿಯಿಡುತ್ತ ಒಳ ಬಂದು ಮಂಗಲಸ್ನಾನ ಪೀತ ಅಲಂಕರಿಸಿದ, ಅಭಿಷೇಕದ ವಿಧಿ ಮುಗಿದಾಗ ಪೆದ್ದರಾಯ ಸಿಂಹಾಸನಕ್ಕೆ ಸಾಷ್ಟಾಂಗ ಪ್ರಣಾಮ ಮಾಡಿ ಅದರ ಮೇಲೇರಿ ಕುಳಿತ. ಮುಕುಟ ಸಮರ್ಪಣೆಯ ವಿಧಿಯು ಅರಮನೆಗೆ ಸೇರಿದ್ದ ಹಿರಿಯರೊಬ್ಬರ ಕಡೆಯಿಂದ ನಡೆಯಬೇಕಾದುದು ಪರಂಪರೆ. ರಾಜ ಪುರೋಹಿತರ ಸೂಚನೆಯಂತೆ ರಾಜಶೇಖರನು ಮುಕುಟವನ್ನು ಕೈಗಳಿಂದ ಎತ್ತಿಕೊಂಡು ಸಭೆಯನ್ನು ಉದ್ದೇಶಿಸಿ ನುಡಿದ:

"ನನ್ನ ಕನ್ನಡ ನಾಡಿನ ಪ್ರಜಾಪ್ರಮುಖರೆ, ನಮ್ಮ ಕನ್ನಡ ಸಮ್ರಾಟನು ಪಂಪಾಪತಿಯ ಪ್ರತಿನಿಧಿಯು, ಆತ ಎಲ್ಲರಲ್ಲಿಯೂ ದಯೆಯ, ನ್ಯಾಯದ, ಸತ್ಯದ ನೋಟಗಳನ್ನು ಹರಿಸಬೇಕಾಗುವುದು. ದುಷ್ಟರ ದಂಡನೆಯ ಕಾರ್ಯ, ಶಿಷ್ಟರ ಸಂರಕ್ಷಣೆಯ ಕಾರ್ಯ ಎರಡೂ ಸತ್ಯ, ನ್ಯಾಯ, ದಯೆಗಳನ್ನು ಅವಲಂಬಿಸಿರಬೇಕು... ಇಂದಿನ ಓಲಗದಲ್ಲಿ ನರಸಿಂಹನಾಯಕರಂತಹ ಸ್ವಾರ್ಥ ತ್ಯಾಗಿಗಳಾದ ಸಾಮ್ರಾಜ್ಯಾಭಿಮಾನಿಗಳು ಇಲ್ಲದುದು ನಮಗೆಲ್ಲರಿಗೂ ಒಂದು ದೊಡ್ಡ ಕೊರತೆಯೆಂದು ಕಾಣದಿರದು..."

ಮಲ್ಲಿಕಾರ್ಜುನ ಮಹಾರಾಯರ ಸದ್ಗುಣಗಳು ಪೆದ್ದರಾಯನ ಹೃದಯದಲ್ಲಿ ಮೂಡಲಿ ಎಂದು ಹಾರೈಸಿ ರಾಜಶೇಖರನು ಸಾಮ್ರಾಜ್ಯ ಮುಕುಟವನ್ನು ಪೆದ್ದರಾಯನ ತಲೆಯ ಮೇಲೆ ಇರಿಸಿದ.

ದೊರೆಯು ಮಾತಿಗೆ ಮೊದಲು ಮಾಡಿದ: "ಸಾಮ್ರಾಜ್ಯದ ಪ್ರೇಮಿಗಳಾದ ನನ್ನ ಕನ್ನಡ ವೀರ ಬಂಧುಗಳೆ, ಸಿಂಹಾಸನವನ್ನು ಹಿಡಿದಿರುವಾತನು ಅನುಸರಿಸಬೇಕಾದ ಕರ್ತವ್ಯಗಳ ಜಾಗ್ರತಿಯು ನನ್ನಲ್ಲಿಯೂ ಇದೆಯೆಂದು ನಾನು ಭಾವಿಸುತ್ತೇನೆ. ಕನ್ನಡ ಜನರೆಲ್ಲರೂ ಸೌಖ್ಯವಾಗಿ ಇರಬೇಕೆಂದು ನನ್ನ ಮನಃಪೂರ್ವಕವಾದ ಆಶೆಯಿದೆ... ಈಗ ಒಂದು ವಿಷಯ, ದಂಡನಾಯಕರ ಆಸನವು ಬರಿದಾಗಿದೆ... ಇಂದಿನ ಈ ವಿಷಮ ಸಂದರ್ಭದಲ್ಲಿ, ನರಸಿಂಹ ನಾಯಕರಂತಹ ಬಲಶಾಲಿಯ ನೇತೃತ್ವದ ಅವಶ್ಯಕತೆಯಿದೆ ಅಷ್ಟೊಂದು ಕೆಲಸವಾಗಲಾರದೆಂದು ನನ್ನ

ಭಾವನೆಯಾಗಿದೆ. ಅದಕ್ಕಾಗಿ, ಹೊಸ ದೊರೆಯಾಗಿ ನಾನು ಈ ಸಿಂಹಾಸನದಲ್ಲಿ ಕುಳಿತಿದ್ದಂತೆಯೇ, ಹೊಸ ದಂಡನಾಯಕರೊಬ್ಬರನ್ನು ಇಂದೆಯೆ ಪ್ರಧಾನಾಸನದಲ್ಲಿ ಕುಳ್ಳಿರಿಸಿಬಿಡಬೇಕೆಂದಿದ್ದೇನೆ ಈಶ್ವರನಾಯಕರೇ, ಏಳಿ ಎದ್ದು ಬಂದು ಬರಿಯದಾಗಿದ್ದ ದಂಡನಾಯಕರ ಆಸನವನ್ನು ತುಂಬಿದುದನ್ನಾಗಿ ಮಾಡಿ.

ಈಶ್ವರ ನಾಯಕನು ಕುಳಿತಲ್ಲಿಂದ ಎದ್ದು, ಮೆಲ್ಲಗೆ ಮುಂದಡಿಯಿಡಲು ತೊಡಗಿದ. ರಾಜಶೇಖರನು ಥಟ್ಟನೆ ಎದ್ದು ನಿಂತು ಕೂಗಿದ. "ಹುಂ, ಅಲ್ಲಿಯೆ ಇರಿ ನಾಯಕರೇ, ಈ ಪ್ರಧಾನಾಸನವು ನರಸಿಂಹನಾಯಕರು ಬರುವವರೆಗೆ ಬರಿದಾಗಿಯೇ ಬಿದ್ದಿರಬೇಕೆಂದು ನನಗೆನಿಸುತ್ತದೆ. ದೊರೆಗಳೇ, ಸೂರ್ಯನ ಸ್ಥಳವನ್ನು ನಾನು ತುಂಬಿ ತೋರಿಸುವೆನೆಂದು ಇನ್ನಾವ ಗ್ರಹಗಳು ಮುಂದುವರಿದು ಬಂದರೂ, ಇರುಳನ್ನು ಹಗಲನ್ನಾಗಿ ಮಾಡಲಾರವು!"

ಸಭೆಯಲ್ಲಿಯ ಬಹು ಜನರ ಸಮ್ಮತಿಯ ದೃಷ್ಟಿಗಳು ಆಶ್ಚರ್ಯದಿಂದ ರಾಜಶೇಖರನ ಕಡೆಗೆ ಹೊರಳಿದವು. ಪೆಚ್ಚು ಮೊಗದ ಈಶ್ವರನಾಯಕನು ಮುಂದೆ ಅಡಿಯಿಡಲಾರದೆ, ದೊರೆಯ ಕಡೆಗೆ ನೋಡುತ್ತ ನಿಂತಲ್ಲಿಯೆ ನಿಂತುಬಿಟ್ಟನು. ದೊರೆಯು ಕೆಂಗಣ್ಣಿನವನಾಗಿ ಗುಡುಗಿದ, "ಬನ್ನಿ ಈಶ್ವರನಾಯಕರೆ, ತಡೆದು ನಿಂತಿರೇಕೆ? ಸಮ್ರಾಟನು ನಾನು. ದಂಡನಾಯಕರನ್ನು ನಿಯಮಿಸಿಕೊಳ್ಳಬೇಕಾದ ಅಧಿಕಾರವು ನನ್ನದ. ಅಣ್ಣಾಜಿಯವರ ಸಂಬಂಧವೇನೂ ಇದರಲ್ಲಿ ಇಲ್ಲ."

ರಾಜಶೇಖರನು ಮತ್ತೊಮ್ಮೆ ಹೇಳಿದ: "ನಾನು ಓಲಗದಲ್ಲಿ ಇದ್ದುಕೊಂಡು, ನೋಡಲಾಗದ, ಈ ನೋಟವನ್ನು ನೋಡಲಾರೆ."

"ನೋಡಲಾಗದವರು ಎದ್ದು ಹೊರಕ್ಕೆ ಹೋದರಾಯಿತು!" ದೊರೆಯು ಬಿರುದನಿಯಲ್ಲಿ ನುಡಿದ.

"ಸರಿ, ನಾನೀಗ ಹೊರಟುಹೋಗುತ್ತೇನೆ. ಹೋಗುವುದಕ್ಕೆ ಮೊದಲು ಮತ್ತೊಮ್ಮೆ ಎಚ್ಚರ ಕೊಡುತ್ತೇನೆ. ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ದಾರಿಯನ್ನೆಂದೂ ತೋರಿಸಲಾರ. ಇಬ್ಬರೂ ಸೇರಿ ದಾರಿ ತಪ್ಪಿ ಹಳ್ಳದಲ್ಲಿಯೋ ಕೊಳ್ಳದಲ್ಲಿಯೋ ಬೀಳಬಹುದು. ಜಾಗ್ರತೆ...ಪದ್ದಣ್ಣಾ... ಜಾಗ್ರತೆ."

ರಾಜಶೇಖರನು ಹೊರಟುಹೋದ ಮೇಲೆ ದೊರೆಯ ಆದೇಶದಂತೆ ಈಶ್ವರನಾಯಕನು ದಂಡನಾಯಕನ ಆಸನದಲ್ಲಿ ಕುಳಿತ. ಓಲಗದ ಮುಂದಿನ ಕಾರ್ಯ-ಕಲಾಪಗಳು ನಡೆದಾಗ, ಸಭಾಸದರ ಮನಸ್ಸನ್ನು ಬೇಸರ ಮುಸುಕಿತ್ತು.

*

ಓಲಗದಿಂದ ಎದ್ದು ಬಂದಾಗಿನಿಂದಲೂ ರಾಜಶೇಖರನ ಮನಸ್ಸಿಗೆ ಸಮಾಧಾನವಿರಲಿಲ್ಲ. ಬೇಡವೆಂದು ಬಿಟ್ಟಿದ್ದ ಸಿಂಹಾಸನ-ಸಾಮ್ರಾಜ್ಯಗಳ ತೊಡಕು ತನಗೇಕೆ? ಎಂದು ಒಮ್ಮೆ ಅಂದುಕೊಳ್ಳುವನು. ರಾಜಕಾರ್ಯದ ಕಡೆಗೆ ತನ್ನ ಮನಸ್ಸು ಹೃದಯಗಳನ್ನು ಈಗಲೂ ಹಂಚಿಕೊಡಲೇಬೇಕಾಗಿದೆ ಎಂದು ಅವನಿಗೆ ಮರುಗಳಿಗೆ ಅನಿಸುವುದು. ಆತ ಯೋಚನೆಗಳ ಉಯ್ಯಾಲೆಯ ಮೇಲೆ ಕುಳಿತುಕೊಂಡಿದ್ದಾಗ ನಾರಾಯಣ ಪಂಡಿತರು ಬಂದರು. ನರಸಿಂಹನಾಯಕರು ಬರುವವರೆಗೆ ಜನರಲ್ಲಿ ಹೆಚ್ಚಿನ ಗುಲ್ಲು ಗಲಭೆಗಳು ಏಳದಂತೆ ನೋಡಿಕೊಳ್ಳುವುದು ತಮ್ಮ ಕರ್ತವ್ಯವಾಗಿದೆಯೆಂದು ಅವರಿಬ್ಬರೂ ಮಾತನಾಡಿಕೊಂಡರು. ನರಸಿಂಹನಾಯಕರಲ್ಲಿ ಅಭಿಮಾನವಿದ್ದ ಮಾಂಡಲಿಕ, ಸಾಮಂತ ಪಾಳೆಯಗಾರರೆಲ್ಲರೂ ಸಮಾಧಾನದಿಂದಿರುವಂತೆ ಮಾಡಲು ಪಂಡಿತರು ಮಾರ್ಗ ಸೂಚಿಸಿದರು, 'ನರಸಿಂಹನಾಯಕರ ಒಪ್ಪಿಗೆಯಿಂದಲೇ ಆದ ವಿಷಯವು ನನಗೆ ಗೊತ್ತಿದಿರದ್ದರಿಂದ, ಅಂದು ಸಭೆಯಲ್ಲಿ ಹಾಗೆಲ್ಲ ಮಾತನಾಡಬೇಕಾಯಿತು' ಎಂದು ರಾಜಶೇಖರನು ಅವರಿಗೆಲ್ಲ ಓಲೆ ಬರೆಯಬೇಕು.

ವಿಷಾದದ ಮುಗುಳನಗೆಯೊಂದಿಗೆ ರಾಜಶೇಖರನು ಹೇಳಿದ: "ಸರಿ, ವಿಜಯನಗರದ ಸಾಮ್ರಾಜ್ಯಾಭಿಮಾನವು ಚಿಕ್ಕಪ್ಪನ ಕೊಲೆಯ ಪಾತಕವನ್ನೆ ನನ್ನೆಡೆಯಿಂದ ಮಾಡಿಸಿದೆ; ಅದರ ಜೊತೆಗೆ ಇದೊಂದು ಸುಳ್ಳಿನ ಪಾತಕವೂ ಬಂದರೆ ಬರಲಿ. ನಾಡಿನಲ್ಲಿ ಅಶಾಂತಿಯು ತಲೆದೋರದಿದ್ದರೆ ಸಾಕು."

ಅಂದಿನ ಇರುಳು ಬಗೆ ಬಗೆಯ ಅಂತರ್ವಿಚಾರಗಳಿಂದ ರಾಜಶೇಖರನಿಗೆ ನಿದ್ರೆ ಹತ್ತಲಿಲ್ಲ. ವ್ಯಾಘ್ರಾಸನದಲ್ಲಿ ದಿಂಬಿಗೊರಗಿ ಕುಳಿತಿದ್ದ. ಇದ್ದಿದ್ದ ಹಾಗೆಯೆ ಕೈಯಲ್ಲಿ ಕರಿಯ ತೆರೆಯೊಂದನ್ನು ಹಿಡಿದುಕೊಂಡು, ರತ್ನಾಂಬಿಕೆ ಅಲ್ಲಿಗೆ ಬಂದಳು, ಬೆಚ್ಚಿ ಬಿದ್ದ ರಾಜಶೇಖರ ಕೇಳಿದ: "ಏನು, ಅಮ್ಮಾಜಿ, ಮತ್ತೆ ಏತಕ್ಕೆ ಬಂದಿರಿ?"

"ಇಂದಿನ ಓಲಗದಲ್ಲಿಯ ನಿಮ್ಮ ನಡವಳಿಕೆ ನನ್ನನ್ನು ಇಲ್ಲಿಗೆ ಎಳೆದು ತಂದಿತು, ಎಂತಲೇ ಮತ್ತೆ ಬಂದಿದ್ದೇನೆ."

"ಹಿಂದೆಯೇ ನಿಮಗೆ ನಾನು ಖಂಡಿತವಾಗಿ ಹೇಳಿದ್ದೇನೆ. ನನ್ನ ಕಡೆಗೆ ಬರುತ್ತಿರಬೇಡಿರೆಂದು. ಮಹಾರಾಣಿಯಾಗಬೇಕೆಂಬ ನಿಮ್ಮ ಆಕಾಂಕ್ಷೆಗೆ ನನ್ನಿಂದ ಏನಾದರೂ ನೆರವನ್ನು ಹಾರಯಿಸಿ ಬಂದಿದ್ದೀರಾ ಈಗ?"

"ಇಲ್ಲ, ನಾನು ಆ ಆಶೆ ಆಕಾಂಕ್ಷೆಗಳಿಗೆಲ್ಲ ನೀರೆರೆದೇ ನಿಮ್ಮ ಬಳಿಗೆ ಬಂದಿದ್ದೇನೆ. ನಿಮ್ಮ ಜೊತೆಯಲ್ಲಿ ನಾನೂ ಸೇವೆಯನ್ನಾಚರಬೇಕೆಂದು ಬಯಸುತ್ತಿದ್ದೇನೆ."

ಅರಗಳಿಗೆ ಮೌನ ಕವಿಯಿತು. ಕರುಣಾಧ್ವನಿಯಲ್ಲಿ ರತ್ನಾಂಬಿಕೆ ಅಂದಳು: "ರಾಜಶೇಖರಾ, ನಿನ್ನ ಹೃದಯಕ್ಕೆ ಕಣ್ಣುಗಳೇ ಇಲ್ಲವೆ?"

"ಅಮ್ಮಾಜೀ, ಕಣ್ಣುಗಳೇನೊ ಇವೆ. ಆದರೆ ಇನ್ನಾವುದನ್ನೂ ನೋಡಲಿಕ್ಕೆ ಅವುಗಳಿಗೆ ಆಶೆಯಿಲ್ಲವಾಗಿದೆ."

ರತ್ನಾಂಬಿಕೆ ಕಿಡಿಯನ್ನುಗುಳುತ್ತ ಗುಡುಗಿದಳು. "ಎಚ್ಚರಿಕೆ ರಾಜಶೇಖರಾ, ನೀನು ಕ್ಷತ್ರಿಯ ಕುಮಾರಿಯೊಬ್ಬಳ ಹೃದಯವನ್ನು ಅಲುಕಿಸುತ್ತಿದ್ದೀಯೆ, ತಿಳಿಯಿತೇನು...? ನನ್ನ ಪ್ರೀತಿ, ಅಭಿಮಾನಗಳನ್ನು ನೀನು ತುಳಿದಿದ್ದೀಯೆ, ನಿನ್ನ ಪ್ರೀತಿ ಅಭಿಮಾನಗಳನ್ನು ನಾನು ತುಳಿದು ಮೆಟ್ಟುತ್ತೇನೆ. ನನ್ನ ಹೆಸರೇನು ಗೊತ್ತೆ, ರತ್ನಾಂಬಿಕೆ! ಮೆಚ್ಚಿ ಮುಡಿದವರಿಗೆ ರತ್ನವು ಅಲಂಕಾರ, ಅರೆದು ಕುಡಿಯುವವೆನ್ನವರಿಗೆ ವಿಷ. ಜಾಗ್ರತೆಯಾಗಿರು ಇನ್ನು."

ರತ್ನಾಂಬಿಕೆ ಹೋದೊಡನೆ ರಾಜಶೇಖರನು ನಿಟ್ಟುಸಿರಿನೊಂದಿಗೆ ಕುಗ್ಗಿದ ಧ್ವನಿಯಲ್ಲಿ ಉಸುರಿದ, "ಸರ್ವಾರಿಷ್ಟ ಶಾಂತಿರಸ್ತು!"

*

ಪಟ್ಟಾಭಿಷೇಕ ಸಮಾರಂಭವು ಮುಗಿದು ಐದು ದಿನಗಳಾಗಿವೆ. ರತ್ನಾಂಬಿಕೆ ತನ್ನ ದಾಸಿಯ ಮೂಲಕ ಪೆದ್ದರಾಯನಿಗೆ ಓಲೆಯೊಂದನ್ನು ಕಳುಹಿಸಿದಳು.

"ರಾಯಾಜೀ,

ನಿಮ್ಮ ಪ್ರತಿಜ್ಞೆ ಪೂರ್ಣವಾದಂತಾಯಿತು, ಅದಕ್ಕಾಗಿ ನನಗೆ ಒಂದು ಬಗೆಯಿಂದ ಸಮಾಧಾನವಾಗಿದೆ. ನಿನ್ನೆಯ ದಿನವೆಲ್ಲವು ಮತ್ತೆ ಮತ್ತೆ ನಿಮ್ಮ ಜ್ಞಾಪಕ ಆಗುತ್ತಿದ್ದಿತು... ನಿಮ್ಮಿಂದ ಪ್ರತಿಜ್ಞಾಪೂರ್ತಿಯಾಗಬೇಕೆಂಬ ಹಂಬಲದಿಂದ ನಾನು ಹಗಲೆಲ್ಲ ಹೀಗಳೆದು ನುಡಿಯುತ್ತಿದ್ದೆ... ನೀವು ಆ ದಿನ ಓಲಗದಲ್ಲಿ ತೋರಿಸಿದ್ದ ಛಲಗಾರಿಕೆ ಕಣ್ಣು ಕಟ್ಟಿದೆ. ದಯವಿಟ್ಟು ಒಂದೇ ಒಂದು ಸಲವಾದರೂ ಬಂದು ಹೋಗಬೇಕೆಂದು ನನ್ನ ಆಶೆ.

—ರತ್ನಾಂಬಿಕೆ."

ಓಲೆ ಓದುತ್ತಿದ್ದಂತೆ ಪೆದ್ದರಾಯನ ಮನಸ್ಸು ತಾನು ರತ್ನಾಂಬಿಕೆಯ ಜೊತೆಗೂಡಿ ಆಡಿದ್ದ ಕೆಳೆಯಾಟಗಳ ನೆನಪಿನ ಬೆನ್ನು ಹತ್ತಿ ಹೊರಟಿತು. ಆತ ರತ್ನಾಂಬಿಕೆ, ಕಮಲಾಂಬಿಕೆಯರನ್ನು ತೂಗಿ ನೋಡಿದ. 'ರತ್ನಾಂಬಿಕೆ ರಾಜಕಾರ್ಯದಲ್ಲಿ ಸಹಕಾರಿಯಾಗಿ ನನ್ನ ಸಾಮ್ರಾಜ್ಯದ ಹಾದಿಗೆ ಹೊಸ ಬಗೆಯ ಬೆಳಕನ್ನು ನೀಡಬಲ್ಲಳು. ಸಿಂಹದ ಜೊತೆಯಾಗಲಿಕ್ಕೆ ಸಿಂಹಿಣಿಯೇ ತಕ್ಕವಳಲ್ಲವೆ?'

ಇತ್ತ, ರತ್ನಾಂಬಿಕೆಯ ಮನಸ್ಸು ಗೊಂದಲಗಳ ಗೂಡಾಗಿತ್ತು. ಅನಾಯಾಸವಾಗಿ, ಅರಮನೆಯ ಚಿಟ್ಟೆಯಲ್ಲಿ ರಾಜಶೇಖರನು ಹೋಗುತ್ತಿದ್ದುದನ್ನು ನೋಡಬೇಕೆಂದ. ಅವಳು ಅಂದುಕೊಂಡಳು. 'ಅಹುದು, ನಾನು ಮಹಾರಾಣಿಯಾಗಲೇಬೇಕು! ಕಮಲಾಂಬಿಕೆ ರಾಯಾಜಿಯ ಬುದ್ಧಿಯನ್ನೆ ಕುರುಡುಗೊಳಿಸಿಬಿಟ್ಟಿದ್ದಾಳೆ. ಆಕೆ ಬದುಕಿರುವತನಕ ನೆಮ್ಮದಿ ಇಲ್ಲವೋ'— ಎಂದು ರತ್ನಾಂಬಿಕೆ ಯೋಚಿಸುತ್ತಿದ್ದಂತೆ ಪೆದ್ದರಾಯ ಅವಳ ಅಂತಃಪುರವನ್ನು ಪ್ರವೇಶಿಸಿದ.

"ರಾಯಾಜೀ, ನಿಮಗೆ ನೂರು ವರ್ಷದ

ಆಯುಸ್ಸು."

"ಅದೇನು?"

"ನಿಮ್ಮ ನೆನಹಿನಲ್ಲಿಯೆ ನಾನು ಕುಳಿತಿದ್ದೆ; ಅಷ್ಟರಲ್ಲಿಯೆ ನೀವೂ ಬಂದಿರಿ."

"ನೋಡು ರತ್ನಾ, ರಾಜಕಾರ್ಯದ ತೊಡಕು ನನ್ನ ಕಾಲನ್ನು ತಿನ್ನುತ್ತಲಿದೆ. ಮೊದಲು ಬೇಡ ಎಂದಿದ್ದ ಅಣ್ಣಾಜಿಯವರಿಗೆ ಈಗ ಸಿಂಹಾಸನದ ಅಧಿಕಾರ ಬೇಕೆನಿಸಲುತೊಡಗಿದೆ!"

ರತ್ನಾಂಬಿಕೆಗೆ ಇದನ್ನು ಕೇಳಿ ಜುಗುಪ್ಸೆಯೆನಿಸಿತು. 'ಇದು ತೀರ ಅಸತ್ಯವಾದ ಅಪವಾದ' ಎಂದು ಹೇಳಬೇಕೆಂದವಳು ಸುಮ್ಮನಾದಳು.

"ಇಷ್ಟೇ ಅಲ್ಲ ರತ್ನಾ, ಈಗಾಗಲೆ ಅವರು ಸಾಮ್ರಾಜ್ಯದಲ್ಲಿಯ ಬೇರೆ ಬೇರೆ ಮಾಂಡಲಿಕರಿಗೆ ನನ್ನ ವಿಷಯದಲ್ಲಿ ವಿಪರೀತವಾದ ಅಭಿಪ್ರಾಯಗಳುಂಟಾಗುವಂತೆ ಓಲೆಗಳನ್ನು ಬರೆದಿದ್ದಾರಂತೆ."

"ಸರಿಯೆ. ಒಳ್ಳೆಯ ಸಾಧುಗಳಲ್ಲವೆ ಅವರು!"

"ಹೋಗಲಿ, ರತ್ನಾ, ರಾಜಕಾರ್ಯದ ಗೊಂದಲದಿಂದೊಮ್ಮೆ ಪಾರಾಗಿ ಹೊರಕ್ಕೆ ಬೀಳೋಣ. ಆ ಮೇಲೆ ನಾನು–ನೀನು ಕೈಹಿಡಿದುಕೊಂಡವರು ಎಂದೆಂದೂ ಅಗಲದೆ ಇರೋಣ."

"ರಾಯಾಜೀ, ಈ ಮನಸ್ಸು ಸ್ಥಿರವಾಗಿ ಉಳಿಯುವುದೆಂದು ನಂಬಲೇ ನಾನು?"

"ರತ್ನಾ, ಇಂದಿನ ಈ ನನ್ನ ಮನಃಸ್ಥಿತಿಯನ್ನು ಸ್ಥಿರವಾಗಿ ಇರಿಸಿಕೊಳ್ಳುತ್ತೇನೆಂದು ಆಣೆಯಿಟ್ಟು ಹೇಳುತ್ತೇನೆ ಬೇಕಿದ್ದರೆ."

"ಆಣೆ–ಪಾಣೆ ನನಗೊಂದೂ ಬೇಕಿಲ್ಲ. ನಿಮ್ಮ ಮನಸ್ಸನ್ನು ಅಸ್ಥಿರಗೊಳಿಸದಂತೆ ನಾನೇ ಪಂಪಾಪತಿಯನ್ನು ಪ್ರಾರ್ಥಿಸುತ್ತಿರುತ್ತೇನೆ."

■

ರಾಜಾಜ್ಞೆಯೊಂದು ನಗರದ ಪ್ರಜಾವರ್ಗದಲ್ಲಿ ಕಳವಳ ಕವಿಸಿತು. 'ಇನ್ನೊಂದು ವಾರದೊಳಗಾಗಿ ರಾಜಧಾನಿಯಲ್ಲಿದ್ದ ಎಲ್ಲ ಮಹಮ್ಮದೀಯರೂ


ಭಲೆ ವಿಜಯ, ಮ್ಯಾಚಿಗೆ ಜಯ, ಬಟ್ಟೆ ಕೊಳೆಯಾದ್ರೆ ಎಲ್ಲಿದೆ ಭಯ?
"ವಿಜಯಶಾಲಿ ಶರ್ಟ್ ಅಮ್ಮಾ, —ಮತ್ತೆ ಅದೇ ಬಿಳುಪು!"
High power Surf
washes whitest ...and it shows!
ಹೈ ಪವರ್ ಸರ್ಫ್
ಅಪರಿಮಿತ ಬೆಳ್ಳಗೆ ಒಗೆಯುತ್ತದೆ...
ಅದು ಪ್ರತ್ಯಕ್ಷ ಕಾಣುತ್ತದೆ.
ಬಿಳಿಯ ಬಟ್ಟೆಗಳಿಗೆ ಉತ್ತಮ, ಬಣ್ಣದ ಬಟ್ಟೆಗಳಿಗೂ ಅನುಪಮ

ಪಟ್ಟಣವನ್ನು ಬಿಟ್ಟು ಬೇರೆ ಕಡೆಗೆ ಹೊರಟು ಹೋಗಬೇಕು' ಎಂಬ ರಾಜಾಜ್ಞೆ ಈಶ್ವರನಾಯಕನ ಪ್ರಚೋದನೆಯಿಂದ ಹೊರಟಿತ್ತು. ಈ ಕುರಿತು ಮಾತನಾಡಲೆಂದು ಅಣ್ಣಾಜಿ ಶಾಂತಿ ಕುಟೀರಕ್ಕೆ ಕಳುಹಿಸಿದ್ದರೂ ಪೆದ್ದರಾಯ ಹೋಗಿರಲಿಲ್ಲ.

ರಾಜಶೇಖರ ತಾನೆ ಪೆದ್ದರಾಯನ ಆಲೋಚನಾಗಾರಕ್ಕೆ ನಡೆತಂದ. ಅವನನ್ನು ನೋಡಿದೊಡನೆ ದೊರೆಯ ಜೊತೆಯಲ್ಲಿದ್ದ ಈಶ್ವರನಾಯಕನ ಮುಖ ಪೆಚ್ಚಾಯಿತು. ರಾಜಶೇಖರ ಮೆಲುದನಿಯಲ್ಲಿ ಹೇಳಿದ: "ನೋಡು ಪೆದ್ದಣ್ಣಾ, ನಿನ್ನೆಯ ಸಾಯಂಕಾಲ ರಾಜಧಾನಿಯ ಹಲವು ಜನ ಮಹಮ್ಮದೀಯ ಪ್ರಮುಖರು ನನ್ನ ಕಡೆಗೆ ಬಂದಿದ್ದರು. ನೀನು ಹೊರಡಿಸಿದ ರಾಜಾಜ್ಞೆಯ ವಿಷಯವನ್ನು ನನ್ನೆದುರು ಬಿನ್ನವಿಸಿಕೊಂಡರು."

ಅವನ ಮಾತುಗಳನ್ನು ನಡುವೆಯೆ ತಡೆದು ಪೆದ್ದದೊರೆ ನುಡಿದ: "ಇನ್ನು ಮೇಲೆ ನಿಮ್ಮ ಸೋಗಿನ ಸರಳತನದ ಮಾತುಗಳಿಗೆ ಎಂದೂ ನಾನು ಮಂಕು ಬೀಳುವವನಲ್ಲ. ಆ ರಾಜಾಜ್ಞೆಯನ್ನು ಯಾರು ಹೇಳಿದರೂ ನಾನು ಹಿಂದಕ್ಕೆ ತೆಗೆದುಕೊಳ್ಳುವಂತೆ ಇಲ್ಲ."

ಸಾಮ್ರಾಜ್ಯಕ್ಕೆ ಮಹಮ್ಮದೀಯರ ಆವಶ್ಯಕತೆಯನ್ನು ಬಿಂಬಿಸಲು ರಾಜಶೇಖರ ಯತ್ನಿಸಿದ್ದೂ ಫಲಕಾರಿಯಾಗಲಿಲ್ಲ. ಮನುಷ್ಯತ್ವದ ವಿವೇಕ ದೃಷ್ಟಿಯಿಂದ ವಿಚಾರ ಮಾಡಲು ಕೂಡ ದೊರೆ ಸಿದ್ಧನಾಗಲಿಲ್ಲ. ಉತ್ತರ ಭಾರತದಲ್ಲಿ ಮುಸ್ಲಿಂ ಅರಸರು ನಡೆಸಿದ ದೌರ್ಜನ್ಯಕ್ಕೆ ಪ್ರತಿಯಾಗಿ ಮುಯ್ಯಿಗೆ ಮುಯ್ಯಿ ತೀರಲೇಬೇಕೆಂದು ಆತ ಹಟ ಹಿಡಿದ.

"ಪೆದ್ದಾ, ಅದ್ದೇತಕ್ಕೊ ನಿನ್ನ ಬುದ್ಧಿ ಕೆಡುತ್ತ ನಡೆದಿದೆ. ನಿನಗೆ ಕಾಲವು ಒಳ್ಳೆಯದಿದ್ದಂತೆ ಕಾಣುವುದಿಲ್ಲ."

"ಅದೇನೋ ಸರಿ, ಒಳ್ಳೆಯ ಕಾಲವನ್ನು ತಂದುಕೊಳ್ಳಬೇಕಾಗಿದೆ. ಅಂತಲೇ ಇವೆಲ್ಲ ಯತ್ನ ಪ್ರಯತ್ನಗಳನ್ನು ನಡೆಯಿಸಿದ್ದೇನೆ."

"ಹಾಗಿದ್ದರೆ ಇದೋ ಪ್ರತಿಜ್ಞೆ ಮಾಡಿ ಹೇಳುತ್ತೇನೆ ಕೇಳು, ನಾನು ಆ ದೀನರಾದ ಮಹಮ್ಮದೀಯರ ಪಕ್ಷಕ್ಕೆ ಸೇರಿಕೊಳ್ಳುತ್ತೇನೆ. ನಿನ್ನ ರಾಜಾಜ್ಞೆ 'ಅವರನ್ನು ಹೇಗೆ ಹೊರಕ್ಕೆ ಹಾಕುತ್ತದೆಯೊ ನೋಡುತ್ತೇನೆ."

ಪೆದ್ದರಾಯನ ಕೋಪ ಎಲ್ಲೆಯನ್ನು ಮೀರಿತು. ಕಿಡಿಕಿಗಳನ್ನು ಕಾರಿದನು: "ನಿನ್ನ ಬೆದರಿಕೆಗೆ ಸೊಪ್ಪು ಹಾಕಲಿಕ್ಕೆ ನಾನೇನೂ ಆ ಕುರುಡ ಇಮ್ಮಡಿ ವಿರೂಪಾಕ್ಷನಲ್ಲ!"

"ಇಮ್ಮಡಿ ವಿರೂಪಾಕ್ಷನು ನೀನೇತಕ್ಕಾದೀಯೆ, ಮುಮ್ಮಡಿ ವಿರೂಪಾಕ್ಷನಲ್ಲವೆ ನೀನು ? ಪೆದ್ದರಾಯಾ, ನಮ್ಮ ನಮ್ಮಲ್ಲಿಯೆ ಮಥನ ವುಂಟಾಗಿ ಸಾಮ್ರಾಜ್ಯಕ್ಕೆ ಏನಾದರೂ ಅಳಿಗಾಲವನ್ನು ತಂದಿಟ್ಟೀಯೆ. ಯಾವುದನ್ನು ಮಾಡಬೇಕಾಗಿದ್ದರೂ ವಿವೇಕವನ್ನು ಸ್ವಲ್ಪ ವಿಚಾರಿಸುತ್ತಿರು."

ರಾಜಶೇಖರ ಮಿಂಚಿನಂತೆ ಹೋದ ಬಳಿಕ ಅರೆಗಳಿಗೆ ಇಬ್ಬರಲ್ಲಿ ಯಾರೂ ಮಾತನಾಡಲಿಲ್ಲ. 'ರಾಜಕಾರ್ಯದಲ್ಲಿ ಅಡಿಗಡಿಗೆ ಹೀಗೆ ಮುಳ್ಳಾಗಿ ಒತ್ತುತ್ತಿರುವ ಕುಳಿತರೆ ಮುರಿದು ಚೆಲ್ಲುವುದೇ ಮುಳ್ಳಿಗೆ ತಕ್ಕ ಶಿಕ್ಷೆ' ಎಂದು ಅವರು ಬಗೆದರು. ಬಳಿಕ ಇಬ್ಬರೂ ಅರ್ಧ ಪ್ರಹರದವರೆಗೆ ಬೇರೆ ಮಾತುಗಳಲ್ಲಿ ಕುಳಿತಿದ್ದರು.

*

ರಾಜಧಾನಿಯ ನೈಋತ್ಯ ದಿಶೆಗಿರುವ ಪುಷ್ಕರಣಿಯ ದಂಡೆಯ ಮೇಲೆ ದೊಡ್ಡದಾದ ಮಸೀದೆಯೊಂದು ಇದೆ. ಇಂದು ಅನೇಕ ಜನ ಮಹಮ್ಮದೀಯರು ಈ ಮಸೀದೆಯ ಮುಂದಣ ಬಯಲಲ್ಲಿ ಒಟ್ಟುಗೂಡಿದ್ದರು. ಮನೆ–ಮಠಗಳನ್ನು ತೊರೆದುಹೋಗುವುದು ಅವರ ಪಾಲಿಗೆ ದುರ್ಭರವಾಗಿತ್ತು. ರಾಜಶೇಖರನನ್ನು ಕಂಡು ಬಂದ ಮೌಲವೀ ಸಾಹೇಬರು ಅವನ ಸಂದೇಶವನ್ನು ತಮ್ಮ ಜನರಿಗೆ ನೀಡಿದರು– "ಏನಾದುದನ್ನೂ ಸುಮ್ಮನೆ ಸಹಿಸಿಕೊಳ್ಳಿ. ವಿಜಯನಗರವನ್ನು ಬಿಟ್ಟು ಯಾರೂ ಹೊರಕ್ಕೆ ಹೋಗದೆ ಇರಿ!" ತಮ್ಮ ಜನರಲ್ಲಿ ಯಾರೂ ರಾಜಧಾನಿಯನ್ನು ಬಿಟ್ಟು ಹೊರಡುವುದು ಬೇಡ; ಸಮಾಧಾನ–ಸಹನೆಗಳಿಂದ ನಗರದಲ್ಲಿಯೆ ಉಳಿಯಬೇಕು–ಎಂದು ಅವರು ನಿರ್ಣಯಿಸಿದರು.

ಇತ್ತ ರತ್ನಾಂಬಿಕೆಯ ಮನಸ್ಸಿನ ದ್ವಂದ್ವ ಮೊದಲಿನಂತೆ ಮುಂದುವರಿಯಿತು. ಪೆದ್ದರಾಯ

ತನ್ನ ಅಂತಃಪುರದಿಂದ ಹೊರಟಾಗ ಆಡಿದ ಮಾತೊಂದು, ಅವಳನ್ನು ನೂರಾರು ಮುಳ್ಳಿನ ಮೊನೆಗಳಾಗಿ ಚುಚ್ಚಿತು: 'ಅಣ್ಣಾಜಿಯ ಅವತಾರ ಸಮಾಪ್ತಿಯ ವರ್ತಮಾನವನ್ನು ಇಷ್ಟರಲ್ಲಿಯೆ ಕೇಳುತ್ತೀಯೆ ರತ್ನಾ!' ಈಶ್ವರನಾಯಕನು ಹೂಡಿದ ಆಟಗಳಿಂದಾಗಿ ರಾಜಶೇಖರನ ವಿಷಯದಲ್ಲಿ ರಾಯಾಜಿಯ ಮನಸ್ಸು ಕೆಟ್ಟುಹೋಗಿದೆಯೆಂದು ಅವಳಿಗೆ ಅನಿಸಿತು. ಅವಳು ಯೋಚಿಸಿದಳು. ಪದ್ಧರಾಯನು ಆಡಿದ ಮಾತಿನ ವಿಚಾರವನ್ನೆಲ್ಲ ಇಂದೆಯೆ ಹೋಗಿ ರಾಜಶೇಖರನಿಗೆ ಹೇಳಿ ಬರಲೆ...? ಹೋಗಿ ಹೇಳಿದರೂ ಆತನಿಗೆ ನನ್ನ ಮಾತಿನಲ್ಲಿ ಭರವಸೆ ಹುಟ್ಟಬಹುದೆ?... ನಾಳೆಯ ದಿನ ನಾರಾಯಣ ಪಂಡಿತರನ್ನು ಇಲ್ಲಿಗೆ ಬರಮಾಡಿಕೊಳ್ಳಬೇಕು, ಅವರೆದುರು ಎಲ್ಲವನ್ನೂ ಹೇಳಿ, ರಾಜಶೇಖರನಿಗೆ ಇದೆಲ್ಲ ತಿಳಿಯುವಂತೆ ಮಾಡಬೇಕು..."

'ಮುಹಮ್ಮದೀಯರ ತೊಡಕನ್ನು ಹೇಗೆ ಬಿಡಿಸಬೇಕು?' ಎಂದು ರಾಜಶೇಖರ ಅಂದಿನ ಇರುಳು ಯೋಚಿಸುತ್ತ ಕುಳಿತ. ರಾತ್ರಿ, ಹನ್ನೊಂದು ಗಳಿಗೆಗಳು ಕಳೆದುಹೋಗಿರಬಹುದು.

ನಾಲ್ಕು ಜನ ಮುಹಮ್ಮದೀಯರು ಧಾವಿಸಿ ಬಂದು ರಾಜಶೇಖರನಿಗೆ 'ಸಲಾಂ' ಮಾಡಿದರು. ಎಲ್ಲರ ಮುಖದ ಮೇಲೆಯೂ ಗಾಬರಿಯ ಚಿಹ್ನೆ ಮೂಡಿತ್ತು. ಅವರಲ್ಲೊಬ್ಬ ಬಿಗಿದು ಬರುತ್ತಿರುವ ಕಂಠದಲ್ಲಿ ಹೇಳಿದ: "ಅಣ್ಣಾಜಿ ಸಾಹೇಬ್, ನಿನ್ನೆಯ ದಿನ ಮಸೀದೆಯಲ್ಲಿ ಸೇರಿದ್ದ ನಮ್ಮವರ ಸಭೆಯು ಇಸ್ಮಾಯಿಲ್ ಸೇಠರ ಪ್ರೋತ್ಸಾಹದಿಂದ ನಡೆದಿದೆಯೆಂದು ಮಹಾರಾಜ ಸಾಹೇಬ್ ಅವರಿಗೆ ಯಾರೋ ಹೋಗಿ ಹೇಳಿದ್ದಾರೆ. ಈಗ ಸರಕಾರದ ಸಿಪಾಯಿಗಳು ಬಂದು, ಸೇಠಜಿಯ ಮನೆಗೆ ಮುತ್ತಿಗೆ ಹಾಕಿದ್ದಾರೆ, ದಯವಿಟ್ಟು ನಮ್ಮ ಸೇಠಜಿಯವರ ಮಾನ, ಪ್ರಾಣ ಉಳಿಸಿ ಕೊಡಬೇಕು, ತಾವು."

ಥಟ್ಟನೆ ಮೇಲಕ್ಕೆದ್ದ ರಾಜಶೇಖರನು, ಹೊರಕ್ಕೆ ಹೋಗುವಾಗಿನ ಉಡುಪು–ತೊಡುಪುಗಳನ್ನು ಹಾಕಿಕೊಂಡನು. ಚಿಕ್ಕಣ್ಣನು ಒರೆಗೂಡಿದ ಕತ್ತಿಯೊಂದನ್ನು ಅವನ ಕೈಯೊಳಗೆ ಸಲ್ಲಿಸುತ್ತ ಕೇಳಿದ, "ರಾತ್ರಿಯ ವೇಳೆ, ಜೊತೆಗೆ ನಾನೂ ಬಂದುಬಿಡುತ್ತೇನೆ"

"ಏತಕ್ಕಾಗಿ ಬರಬೇಕು ನೀನು? ಏನೂ ಬೇಡ."

*

ಪೆನ್ತ್ಯವಂತನ ಉತ್ತರದ ಕೊಳ್ಳದ ಘಾತಗಳ ಕೊಳ್ಳವೆಂದು ಎಲ್ಲರಿಯೂ ಪ್ರಸಿದ್ಧಿ. ಹಗಲು ಹೊತ್ತಿನಲ್ಲಿ ಕೂಡ ಜನರು ಅಲ್ಲಿಗೆ ಹೋಗಲಿಕ್ಕೆ ಹೆದರುವರು. ಕೊಳ್ಳದ ಮಧ್ಯದಲ್ಲಿ ಘಟ್ಟವಾಗಿ ಬೆಳೆದಿದ್ದ ಆಲದ ಮರದ ಬುಡದಲ್ಲಿ ಅಂದಿನ ರಾತ್ರಿ ಒಂದೆರಡು ಸಣ್ಣ ದೀವಟಿಗೆಗಳು ಉರಿಯುತ್ತಿದ್ದವು. ಅಲ್ಲಿ ಹತ್ತು ಹನ್ನೆರಡು ಜನ ಸೇರಿದ್ದರು. ದೀವಟಿಗೆಯ ಬಳಿ ಕುಳಿತು ಇಬ್ಬರು ಮಾತನಾಡಿಕೊಳ್ಳುತ್ತಿದ್ದರು:

"ವಿರೂಪಾಕ್ಷರಾಯನ ಕೊಲೆಯಾದಾಗಿನಿಂದಲೂ ರಾಜಶೇಖರನಲ್ಲಿ ಜಕ್ಕನಾಯಕನಿಗೆ ದ್ವೇಷ. ತನ್ನ ಯಜಮಾನನನ್ನು ಕೊಂದವನನ್ನು ತಾನು ಕೊಂದೇ ತೀರಬೇಕೆಂದು ಆತನ ಪ್ರತಿಜ್ಞೆಯಿದ್ದಿತು. ಅಂತೆಯೆ ಸಂತೋಷದಿಂದ ನಮಗೆ ಸಹಾಯ ಮಾಡಲಿಕ್ಕೆ ಸಮ್ಮತಿಸಿದನು."

"ಜಕ್ಕಣ್ಣನಾಯಕ ಎಷ್ಟು ಚೆನ್ನಾಗಿ ವೇಷವನ್ನು ಮಾರ್ಪಡಿಸುತ್ತಾನಪ್ಪ. ಅವನು ಇಂದು ಮುಹಮ್ಮದೀಯನ ವೇಷ ಹಾಕಿದ್ದಾಗ ನನಗೆ ಆತನ ಗುರುತೇ ಸಿಕ್ಕಲಿಲ್ಲ. ಹಿಂದೆ ಆತ ಒಂದು ಸಲ ಮಲೆಯಾಳು ನಾಡಿನ ಹೆಣ್ಣಿನ ವೇಷವನ್ನು ಹಾಕಿ, ವಿರೂಪಾಕ್ಷ ಮಹಾರಾಯನನ್ನು ಮರುಳುಗೊಳಿಸಿಬಿಟ್ಟನಂತೆ..."

ದೂರದಲ್ಲಿ ಯಾರದೋ ಮಾತಿನ ಸಪ್ಪಳ ಕೇಳಿ ಬಂದುದರಿಂದ ಇಬ್ಬರೂ ಆ ಕಡೆಗೆ ಕಣ್ಣುಗಳನ್ನು ಕೊಟ್ಟು ಕುಳಿತರು. ಸ್ವಲ್ಪ ವೇಳೆಯಲ್ಲಿಯೆ ತಲೆಯ ಮೇಲೆ ಮುಸುಕು ಹಾಕಿದ್ದ ಮನುಷ್ಯನೊಬ್ಬನನ್ನು ಹೊತ್ತುಕೊಂಡು ನಾಲ್ಕು ಜನ ಮುಹಮ್ಮದೀಯರು ಅಲ್ಲಿಗೆ ಬಂದರು.

ಈಶ್ವರನಾಯಕನು ಕೃತಜ್ಞತೆಯ ಧ್ವನಿಯಲ್ಲಿ ನುಡಿದ; "ಆಯಿತೇನು? ಕೆಲಸವನ್ನು ಮಾಡಿಕೊಂಡೇ ಬಂದುಬಿಟ್ಟಿರಾ? ಭಲೆ ಭಲೆ!!"

ಬಂದವರು ಹೊತ್ತು ತಂದಿದ್ದವನನ್ನು ಕೆಳಗಿಳಿಸಿದರು. ಈಶ್ವರನಾಯಕನು ಮುಂದೆ ಬಂದು



ಹಲ್ಲು ನೋವೇ? ಅದು ದಂತಕ್ಷಯದ ಚಿಹ್ನೆಯಾಗಿದೆ. ಬಾಯಿಯಲ್ಲಿ ಉಂಟಾಗುವ ಕೀಟಾಣುಗಳು ಆಹಾರದ ಕಣಗಳನ್ನು ಹಾನಿಕರ ಆಮ್ಲಗಳನ್ನಾಗಿ ಪರಿವರ್ತಿಸುತ್ತವೆ. ಈ ಆಮ್ಲಗಳು ನಿಮ್ಮ ಹಲ್ಲುಗಳನ್ನು ಆಕ್ರಮಿಸುತ್ತವೆ. ಮತ್ತು ಅದರಿಂದಾಗಿ ಕೊಳೆತ, ನೋಯುವ ಜಾಗಗಳು ಉಂಟಾಗುತ್ತವೆ.


"10 ಶಾಲಾ ಮಕ್ಕಳಲ್ಲಿ 7 ಮಂದಿಗೆ ಹಲ್ಲುಗಳಲ್ಲಿ ಕುಳಿಗಳಿರುತ್ತವೆ"

—ಸ್ಕೂಲ್ ಸರ್ವೇ, ಮಾರ್ಚ್ 1978.
ಇಂಡಿಯನ್ ಡೆಂಟಲ್ ಅಸೋಸಿಯೇಶನ್.

ಅಸಾಧಾರಣ ಫ್ಲೋರೈಡ್‌ಯುಕ್ತ ಸಿಗ್ನಲ್ 2
ದಂತ ಕುಳಿ-ರೋಗ ನಿವಾರಕ ಟೂಥ್‌ಪೇಸ್ಟ್

ಫ್ಲೋರೈಡ್‌ಯುಕ್ತ ಸಿಗ್ನಲ್ 2 ದಂತಕ್ಷಯವನ್ನು ಎರಡು ರೀತಿಗಳಲ್ಲಿ ಪ್ರತಿಭಟಿಸುತ್ತದೆ. ಕುಳಿ ಅಗೆಯುವ ಆಮ್ಲಗಳು ಬಾಯಿಯಲ್ಲಿ ಹುಟ್ಟುವಂತೆ ಮಾಡುವ ಕೀಟಗಳನ್ನು ಹೊಡೆದಟ್ಟುತ್ತದೆ. ಮಾತ್ರವಲ್ಲದೆ ಹಲ್ಲಿನ ಎನಾಮಲ್‌ನೊಂದಿಗೆ ಇದು ಹೊಂದಿಕೊಳ್ಳುತ್ತದೆ. ಮತ್ತು, ಆ ಮೂಲಕ ಹಲ್ಲುಗಳು ಅಧಿಕ ಗಟ್ಟಿಯಾಗುವಂತೆ, ಕುಳಿಗಳಿಗೆ ಅಧಿಕ ವಿರೋಧಕವಾಗುವಂತೆ ಮಾಡುತ್ತದೆ. ಇದಕ್ಕೆ ಕಾರಣವೆಂದರೆ ಕುಳಿಗಳ ನಿವಾರಕ ವಿಶೇಷ ಘಟಕ ಫ್ಲೋರೈಡ್ ಸಿಗ್ನಲ್‌ನ ಅಪೂರ್ವ ಸೂತ್ರದಲ್ಲಿ ಹೆಚ್ಚು ಚೆನ್ನಾಗಿ ಕೆಲಸ ಮಾಡುತ್ತದೆ.

ಪರಿಸ್ಥಿತಿ ಕೈಮೀರುವ ಮೊದಲೇ, ಈಗಲೇ ದಂತ ಕುಳಿ-ರೋಗ ನಿವಾರಕ ಸಿಗ್ನಲ್ 2 ಉಪಯೋಗಿಸಿರಿ.



ಬೇರೆ ಯಾವುದೇ ಟೂಥ್‌ಪೇಸ್ಟ್ ಕುಳಿಗಳನ್ನು ಇದರಷ್ಟು ಚೆನ್ನಾಗಿ ಎದುರಿಸಲಾರದು.

ಹೋಗಿ, ಕೂಗಿ ಹೇಳಿದನು: "ಏನು ರಾಜಶೇಖರ ರಾಯರೇ, ಎಲ್ಲವೂ ಸೌಖ್ಯವೆ? ಈಗೇನು ಹೇಳುತ್ತೀರಿ ನೀವು. ನಾನು ದಂಡನಾಯಕನಾಗುವುದು ಬೇಡವಾಗಿದ್ದಿತಲ್ಲವೇ ನಿಮಗೆ?"

ರಾಜಶೇಖರನನ್ನು ಆಲದ ಮರದ ಬಿಳಿಲಿಗೆ ಕಟ್ಟಿ, ಅವನ ಬಾಯೊಳಗಿನ ಚೆಂಡನ್ನು ತೆಗೆದನು. ಈಶ್ವರನಾಯಕ ಒರೆಗಳಚಿದ ಕತ್ತಿಯನ್ನು ಹಿಡಿದುಕೊಂಡು ಮುಂದೆ ನಿಂತು ಹೇಳಿದ, "ಇಲ್ಲಿ ನೋಡು, ನಿನ್ನನ್ನು ತೀರಿಸಿಬಿಡಬೇಕೆಂದು ದೊರೆಗಳ ಅಜ್ಞೆಯಾಗಿದೆ."

ರಾಜಶೇಖರನು ಅರೆಗಳಿಗೆ ಜುಗುಪ್ಸಾ ಭಾವದಿಂದ ನೋಡುತ್ತಿದ್ದು ನುಡಿದನು: "ನಿನಗೆ ಬೇಕಾದ್ದರೆ ನೂರು ಸಲ ನನ್ನನ್ನು ಕೊಲ್ಲು. ನೀನು ಹುಚ್ಚು ನಾಯಿ, ನಿನ್ನೊಡನೆ ಮಾತನಾಡಲಿಕ್ಕೂ ನನಗೆ ಹೇಸಿಕೆ... ನಿನ್ನ ಮೋಸಕ್ಕೆ ಸಿಕ್ಕಿಬಿದ್ದು ನಾನೀಗ ಅಸಹಾಯಕನಾಗಿ ನಿಂತುಕೊಂಡಿದ್ದೇನೆ. ಈಗ ಬಿಟ್ಟು ನೋಡು; ನಿನ್ನ, ನಿನ್ನವರೆಲ್ಲರ ಪ್ರಾಣಗಳನ್ನೂ ಒಂದೇ ಒಂದು ಕ್ಷಣದಲ್ಲಿ ವಿಜಯನಗರವನ್ನು ಕಾಡುತ್ತಿದ್ದ ದುರ್ವಿಧಿಗೆ ಆಹುತಿಯನ್ನಾಗಿ ಅರ್ಪಿಸುತ್ತೇನೆ."

"ನೀನಿನ್ನು ಒಂದೇ ಕ್ಷಣದ ಆಯುಷ್ಯದವನು. ಇನ್ನೇತಕ್ಕೆ ನಿನಗೆ ವಿಜಯನಗರದ ಹಂಬಲ?"

"ಈಶ್ವರಾ, ಈಗ ನಿನ್ನಿಂದ ನಾನು ಸತ್ತು ಹೋದರೆ, ನನ್ನ ವಿಜಯನಗರದ ಹಂಬಲ ಒಂದಕ್ಕೆ ನೂರಾಗಿ ಹೆಚ್ಚುವುದು. ನನ್ನ ಈ ದೇಹದಿಂದ ಹೊರ ಹೊರಟ ಜೀವವು ಅನಂತವಾಯುವಾಗಿ ಸಾಗಿ, ಕನ್ನಡ ನಾಡಿನ ಪ್ರತಿಯೊಂದು ಪ್ರಾಣಿಯ ಉಸಿರಿನಲ್ಲಿ ಸಾಮ್ರಾಜ್ಯಪ್ರೀತಿಯ ಗಾಳಿಯನ್ನು ಊದುವುದು..."

ಈಶ್ವರನಾಯಕ ತಿರಸ್ಕಾರದ ನಗೆಯೊಂದಿಗೆ ಕೇಳಿದ, "ಈಗ ಬಿಚ್ಚಿಬಿಟ್ಟರೆ ನೀನು ಏನು ಮಾಡುವಂತಿದ್ದೀಯೆ?"

"ಎಲ್ಲಕ್ಕೂ ಮೊದಲು ನಿನ್ನ ಕುತ್ತಿಗೆಯನ್ನು ಹಿಸುಕಿ, ನಿನ್ನ ಪ್ರಾಣವನ್ನು ತೆಗೆದುಬಿಡುತ್ತೇನೆ. ಆ ಮೇಲೆ ನಾನು ನಿಶ್ಚಿಂತ. ನಿನ್ನವರೆಲ್ಲರೂ ಸೇರಿ ಆ ಮೇಲೆ ನನ್ನನ್ನು ಕೊಂದು ಹಾಕಿದರೂ ಸರಿಯೆ!"

"ನೀನು ನನ್ನ ಪಾಲಿನ ಶನಿ! ಹಾಗೆಯೆ ಬದುಕಗೊಡುತ್ತೇನೆಯೆ ನಿನ್ನನ್ನು?" ಎನ್ನುತ್ತಲೆ ಈಶ್ವರನಾಯಕನು ಕೈಯಲ್ಲಿಯ ಕಿರುಗತ್ತಿಯನ್ನು ಕಸುವಿನಿಂದ ಹಿಂದಕ್ಕೆ ಎತ್ತಿದನು, 'ಜಯ ಕರ್ನಾಟಕ ರಾಜ್ಯಲಕ್ಷ್ಮಿ' ಎಂದು ರಾಜಶೇಖರನು ಕೂಗುತ್ತಿರುವಾಗಲೆ, ಕಿರುಗತ್ತಿಯನ್ನು ಆತನ ನಟ್ಟೆದೆಯಲ್ಲಿ ಖಸ್ಸೆಂದು ಚುಚ್ಚಿದನು. ಕೆನ್ನೀರು ಕಾರಂಜಿಯಂತೆ ಪುಟಿದು, ಈಶ್ವರನಾಯಕನ ದೇಹವನ್ನೆಲ್ಲ ನೆನೆಯಿಸಿಬಿಟ್ಟಿತು. ಚುಚ್ಚಿದ ಕತ್ತಿಯನ್ನು ಜಗ್ಗಿ ಹಿರಿದು ಆವೇಶಗೊಂಡವನಂತಾಗಿ ಅತ ಒಂದರ ಹಿಂದೆ ಒಂದರಂತೆ, ಐದಾರರು ಏಟುಗಳನ್ನು ಅಲ್ಲಿಯೆ ಮತ್ತೆ ಮತ್ತೆ ಹಾಕಿದನು. ರಾಜಶೇಖರನ ಮುಖವು ಬಲಿಕ್ಕೆ ಒಲಿಯಿತು, ಆದರೆ ಗಾಂಭೀರ್ಯ ಇದ್ದಂತೆಯೇ ಇದ್ದಿತು. ಕಸುವಿನ ಚಳಿ ಗಾಳಿ ಬೀಸಿ ಆಲದ ಮರದ ಕೊಂಬೆಗಳು ಅಲ್ಲಾಡಲು, ಮೊದಲೆ ಮಿಣುಕು ಮಿಣುಕೆನ್ನುತ್ತಿದ್ದ ದೀವಟಿಗೆಗಳು ನಂದಿಹೋದವು. ಎಲ್ಲೆಲ್ಲಿಯೂ ಭೀಷಣವಾದ ಅಂಧಃಕಾರವು ಹಬ್ಬಿ ಹರಿದಾಡಿತು.

*

ಬೆಳಗಾಗಿ ಎರಡು ಮೂರು ಗಳಿಗೆ ಹೊತ್ತೇರುವುದರಲ್ಲಿದೆ. ನಗರದ ಜನರ ಬಾಯಲ್ಲೆಲ್ಲ ರಾಜಶೇಖರನ ಮರಣದ ವಿಷಯವನ್ನು ಒಳಗೊಂಡ ಮಾತುಗಳೆ. ದುಃಖ ಎಲ್ಲೆಡೆ ಹಪ್ಪುಗಟ್ಟಿತ್ತು. "ಅಯ್ಯೋ, ನರಸಿಂಹನಾಯಕರು ಇಲ್ಲಿಯೆ ಇದ್ದುಬಿಟ್ಟಿದ್ದರೆ, ಇಷ್ಟೆಲ್ಲ ಅನರ್ಥ ನಡೆಯುತ್ತಿದ್ದಿತೆ?" ಎಂದು ಜನ ನಿಟ್ಟುಸಿರಿಟ್ಟರು. ಅಣ್ಣಾಜಿಯವರ ಅಂತ್ಯದರ್ಶನಕ್ಕೆ ಜನಸಾಗರದ ತೆರೆಗಳಂತೆ ಶಾಂತಿ ಕುಟೀರದತ್ತ ಸಾಗಿದರು.

ಹಠಾತ್ತಾಗಿ ನೆರವಿನಲ್ಲಿ ನುಗ್ಗಿ, ದಾರಿ ಮಾಡಿಕೊಳ್ಳುತ್ತ ಕೆಂಪು ಬಣ್ಣದ ಕಂಬಳಿ ಮುಸುಕಿನಲ್ಲಿ ಮರೆಗೊಂಡಿದ್ದ ವ್ಯಕ್ತಿಯೊಂದು ಶವವನ್ನು ಬಳಸಾರಿ ಬಂದಿತು. ಎಲ್ಲರ ಕಣ್ಣುಗಳೂ ಆ ವ್ಯಕ್ತಿಯ ಕಡೆಗೆ ನೆಲೆ ನಿಂತುವು. ಘಟಕ್ಕನೆ ಮೈಮೇಲಿನ ಕೆಂಪು ಮುಸುಕನ್ನು ಆ ವ್ಯಕ್ತಿ ತೆಗೆದಾಗ, 'ಯಾರು, ರತ್ನಾಂಬಿಕೆ!' ಎಂದು ನೆರೆದ ಜನರೆಲ್ಲ ಆಶ್ಚರ್ಯಚಕಿತರಾದರು.

ಆಕೆ ತನ್ನ [illegible] ಕೈಗಳಿಂದ [illegible]

ಯನ್ನೆತ್ತಿ, ಶವದ ಎದುರಿಗೆ ಹಿಡಿದು, ತನ್ನ–ಷ್ಟಕ್ಕೆ ತಾನೆ ಅಂದುಕೊಂಡಳು, 'ರಾಜಶೇಖರ, ಇಂದು ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿ ಕೊಳ್ಳುತ್ತಿದ್ದೇನೆ. ಈಗ ನನಗೆ ಹೇಗೆ ಅಡ್ಡಿ ಮಾಡು ತ್ತೀಯೊ ಮಾಡು, ನೋಡುತ್ತೇನೆ.'

ಅವಳು ಹೂಮಾಲೆಯನ್ನು ಶವದ ಕೊರಳಿಗೆ ಹಾಕಿ, ಕುಂಕುಮವನ್ನು ಶವದ ಬಲಗೈ ಬೆರಳಿಗೆ ಹಚ್ಚಿ, ಅದನ್ನು ತನ್ನ ಹಣೆಗೆ ಒತ್ತಿಕೊಂಡಳು. 'ಬುದ್ಧಿ ಭ್ರಂಶವಾಗಿದೆಯೇನೋ ಪಾಪ, ಇವಳಿಗೆ'– ಎಂದು ಜನ ಮಾತನಾಡಿಕೊಳ್ಳುತ್ತಿದ್ದಂತೆಯೆ, ಅವಳು ಮೊದಲಿನಂತೆ ಮುಸುಕು ಹಾಕಿ ಜನರ ಗುಂಪಿನಲ್ಲಿ ನುಗ್ಗಿ ಮರೆಯಾದಳು.

ರಾಜಶೇಖರನ ಸ್ಮಶಾನ ಯಾತ್ರೆಯು ಹೊರ ಟಾಗ ಸೂರ್ಯ ನಡುನೆತ್ತಿಗೇರಿ ಬಂದಿದ್ದ.

ಪದ್ಮರಾಯನಿಗೆ ಬೆಳಗಿನಿಂದಲೂ ರಾಜಧಾ–ನಿಯ ಜನರ ಅಸಂತುಷ್ಟಿ– ಅಸಮಾಧಾನಗಳ ಸುದ್ದಿಗಳು ಬಂದೇ ಬರುತ್ತಿದ್ದವು. ಒಂದೊಂದು ಸುದ್ದಿಯೂ ರಾಯನ ಹೃದಯದ ತಂತಿಗಳನ್ನು ಕೆಣಕಿ ಕೆರಳಿಸುತ್ತಿದ್ದಿತು. ಆತನ ಮನಸ್ಸನ್ನು ಔದಾಸೀನ್ಯವು ಹಣೆದುಕೊಂಡಿತು, 'ಅಣ್ಣಾಜಿಯ ಸಾಧುತ್ವವು ಸೋಗಿನದೆಂದು ಜನರಿಗೆ ತಿಳಿದರೆ, ಅವರು ಅಸಂತುಷ್ಟರಾಗುವುದಕ್ಕೆ ಕಾರಣವೇ ಇರುವುದಿಲ್ಲ. ಈಗ ಅದೆಲ್ಲವೂ ಲೋಕಕ್ಕೆ ಗೊತ್ತಾಗುವಂತೆ ಮಾಡಬೇಕು'– ಎಂದು ಆತನು ಅಂದುಕೊಂಡನು.

ರತ್ನಾಂಬಿಕೆಯನ್ನು ಕಾಣಲೆಂದು ಅವಳ ಅಂತಃಪುರಕ್ಕೆ ಕಾಲಿಟ್ಟಾಗ ಪದ್ಮರಾಯನಿಗೆ ಇನ್ನೊಂದು ಆಘಾತ ಕಾದಿತ್ತು. ದೊರೆಯು ಆಕೆಯ ಕಣ್ಣಿಗೆ ಬಿದ್ದೊಡನೆ, ಎರಡೂ ಕೈಗಳಿಂದ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು, ಕಟ್ಟನೆ ಕಿರಿಚಿ ನುಡಿದಳು: "ಏನೇ ಇದು ಹೊನ್ನೀ, ಕಂಡ ಕಂಡ ಜನರನ್ನು ಹೀಗೆ ಕರೆದುಕೊಂಡು

ಬರುವುದೇನೆ ಒಳಕ್ಕೆ, ಹುಚ್ಚು!"

ಸೇವಕಿ ಹೊನ್ನಮ್ಮ ಗಡಗಡನೆ ನಡುಗಿದಳು. ಭದ್ರರಾಯ ಬೆರಗಿನ ಧ್ವನಿಯಲ್ಲಿ ಕೇಳಿದ: "ಕಂಡ ಕಂಡವರು ಏತಕ್ಕಾಗಿ ಬರುತ್ತಾರೆ, ರತ್ನಾ? ಇದೇನು, ಹೀಗೇತಕ್ಕೆ ಮಾತಾಡುತ್ತಿದ್ದೀಯೆ?"

ಕಣ್ಣ ಮೇಲಿನ ಕೈಗಳನ್ನು ತೆಗೆದು, ಗರಗರನೆ ತಿರುಗುವ ಕಣ್ಣ ಗುಡ್ಡೆಗಳಿಂದ ಭದ್ರರಾಯನ ಕಡೆಗೆ ನೋಡುತ್ತ, ರತ್ನಾಂಬಿಕೆ ಕೇಳಿದಳು, "ನೀವು ಯಾರು ಹಾಗಿದ್ದರೆ?"

"ಏಕೆ ರತ್ನಾ, ನನ್ನ ಗುರುತು ಸಿಕ್ಕಲೊಲ್ಲದೇನು ನಿನಗೆ? ನಾನು, ನಿನ್ನ ರಾಯರಾಜಿಯಲ್ಲವೆ?"

"ನನಗೆ ಯಾವ ರಾಯರಾಜಿಯೂ ಬೇಕಾಗಿಲ್ಲ, ಪಾಯಾಜಿಯೂ ಬೇಕಾಗಿಲ್ಲ. ಇನ್ನೊಬ್ಬ ಗಂಡು ನಿನೊಡನೆ ಇನ್ನು ನನಗೆ ಏತಕ್ಕೆ ಬೇಕು ಮಾತು! ನನಗೆ ನನ್ನ ರಾಜಶೇಖರನು ಇದ್ದಾನೆ. ನಿನಗೆ ಗೊತ್ತಿಲ್ಲವೇನೆ ಹೊನ್ನಿ, ಇಂದು ಬೆಳಗಿನಲ್ಲಿ ರಾಜಶೇಖರನೊಂದಿಗೆ ನನ್ನ ಮದುವೆಯಾಗಿ ಬಿಟ್ಟಿದೆ..."

ಮಾತು ಮುಗಿದರೂ ನಗೆಯು ಮುಗಿಯಲಿಲ್ಲ. ಬಿಟ್ಟೂ ಬಿಡದೆ ನಡೆಯಿತು: 'ಹಾಹಾಹಾ'

ರತ್ನಾಂಬಿಕೆಯ ತಾಯಿ ತಂದೆಯರನ್ನು ಕರೆತರಲು ಭದ್ರರಾಯ ಹೊರಟಾಗ, ಅವಳು ಒಮ್ಮೆಂದೊಮ್ಮೆ ಕೂಗಿದಳು, "ರಾಯರಾಜೀ, ಈಶ್ವರನಾಯಕನು ಬಹಳ ಕೆಟ್ಟವ. ಅವನು ನನ್ನ ರಾಜಶೇಖರನನ್ನು ಕೊಲ್ಲಿಸಿದ, ನೀವು ಎಚ್ಚರದಿಂದ ಇರಬೇಕು... ಅಯ್ಯೋ, ರಾಜಶೇಖರಾ..."

ಮಾತಿನ ಕೊನೆಯೊಡನೆ ರತ್ನಾಂಬಿಕೆ ಗಟ್ಟಿಯಾಗಿ ಅಳಲು ತೊಡಗಿದಳು. ಭದ್ರರಾಯ ಅಲ್ಲಿಂದ ಹೊರಬಂದು, ಬೀದಿಯಲ್ಲಿ ನಿಂತಿದ್ದ ತನ್ನ ಅಂದಣದಲ್ಲಿ ಕುಸಿದು ಕುಳಿತ.

*

ತೆಲುಗು ನಾಡಿನಲ್ಲಿ ದೊಂಬೆಯೆಬ್ಬಿಸಿದ ಪಾಳೆಯಗಾರರನ್ನೆಲ್ಲ ಸಾಮೋಪಾಯದಿಂದ ತಣ್ಣಗೆ ಮಾಡಿ, ಸಾಳುವ ನರಸಿಂಹನಾಯಕನು ನಿನ್ನೆಯ ಸಾಯಂಕಾಲಕ್ಕೆ ಚಂದ್ರಗಿರಿಗೆ ಹಿಂತಿರುಗಿ ಬಂದಿದ್ದ. ತುಳುವ ನರಸಿಂಹ ಮಾವನ ಬಲಗೈಯಾಗಿ ದುಡಿದಿದ್ದ, ನೆರಳಾಗಿ ಅನುಸರಿಸಿದ್ದ, ಚಂದ್ರಗಿರಿಯ ಜನರು ಇಂದು ಹಬ್ಬವನ್ನು ಮಾಡಿದ್ದರು. ಕಮಲಾಂಬಿಕೆ ವಿಜಯ ಆರತಿಯ ಸಿದ್ಧತೆಯಲ್ಲಿದ್ದಳು. ಅಂದಿನ ಬೆಳಗು ತುಳುವ ನರಸಿಂಹನು ಅವಳ ಕಿವಿಯಲ್ಲಿ ಪಿಸುಗುಟ್ಟಿದ, "ಕಮಲಾ! ಪ್ರೀತಿಯ ಗಟ್ಟಿಗೊಂಡು ನೀನು ಅಗಲುತ್ತೀಯೆ ನೋಡು!" ನಗರದ ಪರಿಸರದಲ್ಲೆಲ್ಲ ಸಡಗರವಾಗಿತ್ತು. ಈ ಗಳಿಗೆಯಲ್ಲಿ ದುರ್ಗಾಧಿಪತಿ ಕುಮಾರ ನಾಯಕ ತಂದ ಅಣ್ಣಾಜಿಯ ಕೊಲೆಯ ಸುದ್ದಿ ನರಸಿಂಹನಾಯಕರಲ್ಲಿ ಮಂಕು ಕವಿಸಿತು. ಸಾವರಿಸಿಕೊಂಡ ಅತ ತನ್ನ ಪರಿವಾರದೊಡನೆ ಕೂಡಲೆ ವಿಜಯನಗರಕ್ಕೆ ಹೊರಟ. ವಿಷಾದದ ಕಪ್ಪು ಮೋಡಗಳು ಚಂದ್ರಗಿರಿ ಮಂಡಲವನ್ನು ಮುಸುಕಿದವು.

ಆ ದಿನ ರತ್ನಾಂಬಿಕೆಯ ಮನೆಯಿಂದ ಮರಳಿ ಬಂದಾಗಿನಿಂದ ಇದುವರೆಗೂ, ಭದ್ರರಾಯನ ಮುಖವನ್ನು ರಾಜಧಾನಿಯ ಜನರಾರೂ ನೋಡಿಯೇ ಇರಲಿಲ್ಲ. 'ಹೊಸ ದೊರೆಗಳು ಅರಮನೆಯಲ್ಲಿ ಇಲ್ಲವೆ ಇಲ್ಲವಂತೆ' ಎಂಬ ವಿಚಿತ್ರವಾದ ಸುದ್ದಿ ಹರಡಿತು. ಈ ವೃತ್ತದ ಸತ್ಯ ಸ್ವರೂಪವನ್ನು ಪರೀಕ್ಷಿಸಬೇಕೆಂಬರೆ ಯಾರಿಗೂ ಸಾಧ್ಯವಿರಲಿಲ್ಲ. ಈಶ್ವರನಾಯಕನು ಅರಮನೆಯಲ್ಲಿ ಕೃಷ್ಣ ಸರ್ಪದಂತೆ ಯಾವಾಗಲೂ ಕದಲದೆ ಕುಳಿತಿರುವನು.

ನರಸಿಂಹನಾಯಕನ ಆದೇಶದಂತೆ ಕುಮಾರ ನಾಯಕನು ಸೈನ್ಯ ಸಮೂಹದೊಡನೆ ಅರಮನೆಯ ಮೇಲೆ ದಾಳಿ ಮಾಡಿದನು. ಈಶ್ವರ ನಾಯಕನ ಪರಿವಾರದಲ್ಲಿ ಹಾಹಾಕಾರ ಎದ್ದಿತು. ಈಶ್ವರನ ಕೈಕಾಲುಗಳಲ್ಲಿಯ ಶಕ್ತಿ ಉಡುಗಿ ಅತ ನಿಂತಲ್ಲಿಯೆ ಕುಸಿದು ಬಿದ್ದ. ತುಳುವ ನರಸಿಂಹ ಅವನನ್ನು ರಭಸದಿಂದ ಎತ್ತಿ ಕೇಳಿದ. "ಹೇಳಯ್ಯಾ, ಭದ್ರರಾಯ ಎಲ್ಲಿ ಮಲಗಿಕೊಂಡಿದ್ದಾರೆ. ಹೇಳುತ್ತೀಯೊ ಇಲ್ಲವೊ?"

ಈಶ್ವರ ತೊದಲುತ್ತ ಬಾಯಿ ಬಿಟ್ಟ "ಭದ್ರರಾಯರು ಇಲ್ಲ... ಇಲ್ಲ...ಇಲ್ಲ!"

ಕುಮಾರ ನಾಯಕ ಗದ್ದರಿಸಿದ, "ಇಲ್ಲಿ ಇಲ್ಲ-ದಿದ್ದರೆ ಇನ್ನೆಲ್ಲಿ ಇದ್ದಾರೆ?"

"ಅಣ್ಣಾಜಿಯವರಂತೆ ಅವರನ್ನೂ ಈ ನೀಚ

ಕೊಲೆ ಮಾಡಿ ಬಿಟ್ಟಿರಬಹುದು!" ತುಳುವ ನರಸಿಂಹ ಗುಡುಗಿದ.

"ಇಲ್ಲ, ನಾನು... ಕೊಲೆ ಮಾಡಿಲ್ಲ...ಅವರೇ ಎಲ್ಲಿಗೋ ... ಹೋಗಿದ್ದಾರೆ..."

ಯಾವ ಅಡೆತಡೆಯೂ ಇಲ್ಲದೆ, ಅರಮನೆಯಿಂದ ಸೆರೆಮನೆಯ ವರೆಗೆ ಈಶ್ವರನಾಯಕನ ಮೆರವಣಿಗೆ ಹೊರಟಿತು. ರಣವಾದ್ಯ, ಗೆಲುವಿನ ಕೋಲಾಹಲಗಳಿಂದ ನಗರದ ಜನರ ಕಿವಿಗಳು ಕಿವುಡಾದವು.

*

ನಾರಾಯಣ ಪಂಡಿತರು, ನರಸಿಂಹನಾಯಕ, ದೇವಣ್ಣನಾಯಕ, ಕುಮಾರನಾಯಕ, ತುಳುವ ನರಸಿಂಹ ಹಾಗೂ ಸಾಮ್ರಾಜ್ಯದ ಹತ್ತು ಹನ್ನೆರಡು ಜನ ಹೊಣೆಗಾರರಾದ ಅಧಿಕಾರಿಗಳು, ಮುಂದೇನು ಮಾಡುವುದೆಂಬ ಸಮಾಲೋಚನೆಗೆ ತೊಡಗಿದರು.

ನರಸಿಂಹನಾಯಕ ಮಾತನಾಡಿದ: "ಪೆದ್ದರಾಯ ಬದುಕಿ ಇದ್ದರೂ ಸರಿಯೆ, ಇರದಿದ್ದರೂ ಸರಿಯೆ, ಅವರ ವಿಚಾರವನ್ನೇ ಬಿಟ್ಟುಕೊಟ್ಟು ಇನ್ನಾರನ್ನಾದರೂ ಸಿಂಹಾಸನದ ಮೇಲೆ ಕುಳ್ಳಿರಿಸಿ ಸಾಮ್ರಾಜ್ಯ ವ್ಯವಸ್ಥೆಯನ್ನು ಸಾಗಿಸಬೇಕು. ಸಂಗಮ ರಾಯರ ವಂಶದ ದೂರದ ಸಂಬಂಧಿಕರು ಕೂಡ ಯಾರೂ ಇದ್ದಂತೆ ಕಾಣೆ... ವಿಜಯನಗರದ ಸಾಮ್ರಾಜ್ಯ ಚರಿತ್ರೆಯ ಅಶಾಂತಿಪರ್ವವು ಇನ್ನೂ ಮುಗಿದಿಲ್ಲವೇನೊ, ಎಂದೆನಿಸುತ್ತಿದೆ..."


ದೇವಣ್ಣನಾಯಕರು ನಿಶ್ಚಿಂತ ಭಾವದ ಧ್ವನಿಯಲ್ಲಿ ಹೇಳಿದರು; "ಈಗ ಪೆದ್ದರಾಯನಿಗಾಗಿ ಚಿಂತೆ ಮಾಡಿ ನಾವೇತಕ್ಕೆ ಸೊರಗುತ್ತ ಕುಳಿತುಕೊಳ್ಳಬೇಕು...? ನೋಡಿ, ನರಸಿಂಹನಾಯಕರೆ, ಸಾಮ್ರಾಜ್ಯದ ಪ್ರಜೆಗಳೆಲ್ಲರದೂ ನಿಮ್ಮಲ್ಲಿ ತುಂಬ ಶ್ರದ್ಧೆ–ವಿಶ್ವಾಸಗಳಿವೆ. ನೀವೆ ಸಿಂಹಾಸನವನ್ನೇರಿ ಸಾಮ್ರಾಜ್ಯ ಸೂತ್ರಗಳನ್ನು ಕೈಕೊಂಡು ಬಿಡಿ, ಆಯಿತು."

ಅಲ್ಲಿ ಕುಳಿತಿದ್ದವರೆಲ್ಲರೂ ದೇವಣ್ಣನಾಯಕರ ಮಾತಿಗೆ ಸಮ್ಮತಿ ಸೂಚಿಸಿದರು.

ನಡುವೆ ತಡೆದೆದ್ದು ನರಸಿಂಹನಾಯಕ ನುಡಿದ: "ಛೇ, ಈ ಮಾತು ಎಂದಿಗೂ ಸಾಧ್ಯವಿಲ್ಲ. ನಾನು ಸಾಮ್ರಾಜ್ಯ ಸಿಂಹಾಸನದ ಸೇವಕನಾಗಿರಲು ಬಯಸುವವನು. ಅದನ್ನು ಏರುವ ಅಧಿಕಾರವು ನನಗೆ ಇಲ್ಲವೇ ಇಲ್ಲ."

ನಾರಾಯಣ ಪಂಡಿತರು ಅಧಿಕಾರವಾಣಿಯಲ್ಲಿ ಗುಡುಗಿದರು: "ಹಾಗಾದರೆ, ಆ ಅಧಿಕಾರವು ಈಗ ಯಾರಿಗಿದೆ ನರಸಿಂಹನಾಯಕರೆ? ಅಣ್ಣಾಜಿಯವರಂತೆ ನೀವೂ ಈಗ ಸಿಂಹಾಸನವನ್ನು ಒಲ್ಲೆನೆಂದು ಹಟ ಹಿಡಿದು ಕುಳಿತರೆ, ನಿಮ್ಮಿಂದ ಸಾಮ್ರಾಜ್ಯಕ್ಕೆ ಹಿತವೇನೂ ಆದಂತಾಗದು. ಇಷ್ಟೇ ಅಲ್ಲ, ಅದರ ಹಾನಿಗೆ ಮಾತ್ರ ನೀವು ಕಾರಣರಾಗಿ ನಿಲ್ಲಬಹುದು. ನೋಡಿ ವಿಚಾರ ಮಾಡಿ, ನೋಡಿ."

ನರಸಿಂಹನಾಯಕ ಉಭಯ ಸಂಕಟದಲ್ಲಿ ಸಿಕ್ಕಿದ. ಮಿಕ್ಕವರು ಆತುರದ ದೃಷ್ಟಿಗಳಿಂದ ಅವನ ಕಡೆಗೆ ನೋಡುತ್ತ ಕುಳಿತುಕೊಂಡಿದ್ದರು. ಇದ್ದುದಿದ್ದ ಹಾಗೆಯೆ ಬಾಗಿಲಾಳು ಪೆದ್ದರಾಯನ ಊಳಿಗದವರನ್ನು ಕರೆತಂದ. ಆತ, ಹೇಳಿದ, "ಅಣ್ಣಾಜಿಯವರ ಕೊಲೆಯಾದ ನಂತರ ದೊರೆಗಳು ಮಂಕು ಬಡಿದಂತೆ ಇದ್ದರು... ರತ್ನಾಂಬಿಕೆಯನ್ನು ಕಂಡುಬಂದ ರಾತ್ರಿ ಒಂದೂವರೆ ಪ್ರಹರದಲ್ಲಿ, ನಾರಾಯಣ ಪಂಡಿತರಿಗೆ ತಲುಪಿಸಲು ಓಲೆ ಕೊಟ್ಟು, ದೊರೆಗಳು ಅರ



"ಕಾಫಿ ಕುಡಿಸ್ತೇನೆ ಅಂದಿದ್ದಿಯಲ್ಲ...! ಎಲ್ಲಿ ಕುಡಿಸು...!!"

ಮನೆಯಿಂದ ಹೊರಕ್ಕೆ ಹೊರಟರು… ಅನಂತರ ಅವರು ಹಿಂತಿರುಗಿ ಬರಲಿಲ್ಲ…"

ಪಂಡಿತರು ಓಲೆಯನ್ನು ಗಟ್ಟಿಯಾಗಿ ಓದಿದರು:

"ನಾರಾಯಣ ಪಂಡಿತರಲ್ಲಿ ವಿಜ್ಞಾಪನೆಗಳು.

ಅಣ್ಣಾಜಿಯವರನ್ನು ಕೊಲೆ ಮಾಡಿಸಿದುದರ ಹೊಣೆಗಾರಿಕೆಯೆಲ್ಲ ನನ್ನ ತಲೆಯ ಮೇಲೆಯೇ ಇದೆ. ನಾನು ಹಾಗೆ ಮಾಡಿಸಿದುದು ಒಪ್ಪೋ ತಪ್ಪೋ ಎಂಬುದನ್ನೇನೂ ತಿಳುಹಲಿಕ್ಕೆ, ಸದ್ಯ ನನ್ನ ಮನಸ್ಸು ಸಿದ್ಧವಿಲ್ಲ. ಆದರೆ, ಅದರ ಮೂಲಕವಾಗಿ ನನ್ನನ್ನು ಕವಿದುಬಿಟ್ಟಿದ್ದ ಔದಾಸೀನ್ಯವು ಯಾವುದ ಬೇಡವೆನ್ನುವಂತಹ ನಿರಾಶೆಯನ್ನು ತಂದು ನಿಲ್ಲಿಸಿ ಬಿಟ್ಟಿದೆ. ಎಂತಲೇ ನಾನೀಗ ವಿಜಯನಗರವನ್ನು ಬಿಟ್ಟು ಎಲ್ಲಿಗೋ ಹೊರಟು ನಿಂತಿದ್ದೇನೆ. ಮರಳಿ ಬರಬೇಕೆಂದೆನಿಸಿದರೆ ಮತ್ತೆ ಬರುತ್ತೇನೆ, ಇಲ್ಲದಿದ್ದರೆ ಇಲ್ಲ.

"ಚಂದ್ರಗಿರಿಯಿಂದ ನರಸಿಂಹನಾಯಕರು ಬೇಗನೆ ಇಲ್ಲಿಗೆ ಬರಬಹುದು. ಅವರಿಗೆ ನೀವು ನನ್ನ ಅಂತರ್ಯದ ಆಶೆಯೊಂದನ್ನು ಮರೆಯದೆ ತಿಳುಹಿರಿ. ಅದಾವುದೆಂದರೆ ನಾನು ಮರಳಿಬರುವುದಾದಲ್ಲಿ, ಬರುವವರೆಗೆ, ನರಸಿಂಹನಾಯಕರು ಸಮ್ರಾಟನ ಪ್ರತಿನಿಧಿಗಳೆಂದಿದ್ದುಕೊಂಡು, ಸಾಮ್ರಾಜ್ಯದ ಎಲ್ಲ ಆಡಳಿತವನ್ನೂ ನೋಡಿಕೊಳ್ಳುತ್ತಿರಬೇಕು. ಒಂದು ವೇಳೆ ನಾನು ಎಂದೆಂದೂ ಬಾರದೆ ಹೋದರೆ, ಅವರೇ ಸಿಂಹಾಸನಾಧಿಕಾರವನ್ನು ಹೊಂದಿ, ಕರ್ಣಾಟ ಸಾಮ್ರಾಜ್ಯದ ಎಲ್ಲ ಬಗೆಯ ಸೂತ್ರಗಳನ್ನೂ ವಹಿಸಬೇಕು.

ಇತಿ ಜೀವನವೇ ಬೇಡವಾಗಿದ್ದ
ಮುಮ್ಮಡಿ ವಿರೂಪಾಕ್ಷರಾಯ."

ಇಷ್ಟರಲ್ಲಿ ರತ್ನಾಂಬಿಕೆಯು ಥಟ್ಟನೆ ಓಲಗಸಾಲೆಯೊಳಗೆ ಬಂದಳು. ಮಾಸಿ ಮುದುಡಿ ಹೋಗಿದ್ದ ಉಡುಗೆ ತೊಡುಗೆ, ಬೆದರಿ ಚೆಲ್ಲಾಪಿಲ್ಲಿಯಾಗಿದ್ದ ತಲೆಗೂದಲು ಆಕೆಯ ಗುರುತನ್ನು ಮರೆಯಿಸಿಬಿಟ್ಟಿದ್ದವು. ಮುಖದ ಮೇಲೆಲ್ಲ ಉನ್ಮಾದದ ಆವೇಶ ಆಟವಾಡುತ್ತಲಿದ್ದಿತು.

ಆಕೆ ಕೂಗಿ ಕೂಗಿ ಹೇಳಿದಳು, "ಏತಕ್ಕಾಗಿ ಕುಳಿತಿದ್ದೀರಿ ನೀವೆಲ್ಲರೂ ಇಲ್ಲಿ? ನಡೆಯಿರಿ ಶಾಂತಿ ಕುಟೀರಕ್ಕೆ. ಅಲ್ಲಿ ರಾಜಶೇಖರನು ಎಲ್ಲರನ್ನೂ ಕರೆಯುತ್ತಿದ್ದಾನೆ !"

ದೇವಣ್ಣನಾಯಕರು ಉಸಿರೊಂದನ್ನು ಚೆಲ್ಲಿ ತಗ್ಗಿದ ಸ್ವರದಲ್ಲಿ ಅಂದರು: "ನರಸಿಂಹನಾಯಕರೇ ನೋಡಿ, ನನ್ನ ರತ್ನಾಂಬಿಕೆಯ ಅವಸ್ಥೆಯನ್ನು. ರಾಜಶೇಖರನ ಕೊಲೆಯಾದಂದಿಂದಲೂ ಹೇಗೆ ಆಗಿಬಿಟ್ಟಿದೆ ಇವಳಿಗೆ."

ರತ್ನಾಂಬಿಕೆ ದೇವಣ್ಣನಾಯಕರ ಕಡೆಗೆ ತಿರುಗಿ ಹೇಳಿದಳು: "ಅಪ್ಪಾಜೀ, ಪಂಪಾಪತಿಯ ದೇವಾಲಯದಲ್ಲಿ ರಾಜಶೇಖರನು ಕುಳಿತಿದ್ದಾನೆ. ನನ್ನನ್ನು ಅಲ್ಲಿಗೆ ಕರೆದುಕೊಂಡು ನಡೆಯಿರಿ. ರಾಜಶೇಖರನು ಪಂಪಾಪತಿಯ ದೇವಾಲಯದ ಶಿಖರದ ಮೇಲೆ ಇರಲಿ, ತುಂಗಭದ್ರೆಯ ಚಕ್ರತೀರ್ಥದ ತಳದಲ್ಲಿ ಇರಲಿ, ಅಲ್ಲಿಗೆ ನನ್ನನ್ನು ಕಳುಹಿಸಿ ಕೊಡಲೇಬೇಕು…ರಾಜಶೇಖರನು ನನ್ನವನು…ಅಯ್ಯೋ… "

ರತ್ನಾಂಬಿಕೆ ಒಮ್ಮೆಲೆ ನಗುವುದಕ್ಕೆ ತೊಡಗಿದಳು. ಕುಳಿತಿದ್ದವರ ಕಣ್ಣುಗಳಲ್ಲೆಲ್ಲ ಕಂಬನಿ ಮೊಗದೋರಿದುವು. ಹೊನ್ನಮ್ಮ ಅವಳನ್ನು ಒತ್ತಾಯದಿಂದ ಎಳೆದೊಯ್ದಳು. 'ಜಯ ಭುವನೇಶ್ವರಿ ! ಜಯ ರಾಜಶೇಖರ ಎಂದು ಕೂಗುತ್ತಾ ರತ್ನಾಂಬಿಕೆ ಅಲ್ಲಿಂದ ಸರಿದಳು.

*

ಮುಂದೆ ಇತಿಹಾಸ ಹೇಳುವುದು ಹೀಗೆ: ಹೊರಟು ಹೋಗಿದ್ದ ಪೆದ್ದರಾಯ ಮರಳಿ ಬರಲೇ ಇಲ್ಲ. ಸಾಳುವ ನರಸಿಂಹನಾಯಕನು ಕೆಲವು ವರ್ಷಗಳ ವರೆಗೆ ಸಮ್ರಾಟನ ಪ್ರತಿನಿಧಿಯಾಗಿದ್ದು, ಬಳಿಕ ಸಮ್ರಾಟನೇ ಆದನು. ಶಾಲಿವಾಹನ ಶಕದ ೧೪೧೫ನೆಯ ವರ್ಷದ ವರೆಗೆ ವೈಭವದಿಂದ ರಾಜ್ಯವಾಳಿದನು. ✿

Printed & published by M. N. Mahishi on behalf of the Administrator, Loka Shikshna Trust, at Samyukta Karnatak Press, Koppikar Road, Hubli-580 020. Rept : Bombay; V. Satyamurthy Phone: 522412 Calcutta: H. Majumdar Phone: 46-4233 Madras: K. A. Subramanian Phone: 842201; New Delhi: P. R. Chopra Phone: 714130.

KASTURI PRICE: 2-50 Regd. No. KRNG 43
Registered with the Registrar of Newspapers for India under No. 3533/57

